ಬುಧವಾರ, ನವೆಂಬರ್ 26, 2025| ₹ 7.00
prajavani.net prajavani
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ದುರ್ಗಾದೇವಿ

ಚಂಡಿಕಾ ಮಹಾಯಾಗ ಮತ್ತು ಅತಿರುದ್ರ ಮಹಾಯಾಗದ ಅಂಗವಾಗಿ ಕಲಬುರಗಿಯಲ್ಲಿ ನಡೆದ ಮೆರಣಿಗೆಯಲ್ಲಿ ಮಹಿಳೆಯೊಬ್ಬರು ದುರ್ಗಾದೇವಿ ವೇಷ ಧರಿಸಿ ಗಮನ ಸೆಳೆದರು

ನಗಾಲ್ ಶುಭಾರಂಭ

ಭಾರತದ ಸುಮಿತ್ ನಗಾಲ್ ಅವರು ಆಸ್ಟ್ರೇಲಿಯಾ ಓಪನ್ ವೈಲ್ಡ್‌ಕಾರ್ಡ್ ಪ್ಲೇ–ಆಫ್ ಟೆನಿಸ್ ಟೂರ್ನಿಯ ಪಂದ್ಯದಲ್ಲಿ ಮಂಗಳವಾರ ಕ್ವಾರ್ಟರ್‌ಫೈನಲ್ ತಲುಪಿದರು

Supported by

GOVERNMENT OF KARNATAKA

Curated by

DH DECCAN HERALD | ಪ್ರಜಾವಾಣಿ

ಸಂವಿಧಾನವೇ ಬೆಳಕು



ಭಾರತದ ಸಂವಿಧಾನ

ಪೀಠಿಕೆ

ಭಾರತದ ಜನರಾದ ನಾವು ಭಾರತವನ್ನು
ಸಾರ್ವಭೌಮ ಸಮಾಜವಾದಿ ಸರ್ವಧರ್ಮ ಸಮಭಾವದ
ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ
ರೂಪಿಸುವುದಕ್ಕಾಗಿ ಹಾಗೂ ಅದರ ಎಲ್ಲಾ ಪ್ರಜೆಗಳಿಗೆ:
ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯ;
ವಿಚಾರ, ಅಭಿವ್ಯಕ್ತಿ, ನಂಬಿಕೆ, ಶ್ರದ್ಧೆ ಮತ್ತು ಉಪಾಸನೆಯ ಸ್ವಾತಂತ್ರ್ಯ;
ಸ್ಥಾನಮಾನ ಹಾಗೂ ಅವಕಾಶಗಳ ಸಮತೆ
ದೊರಕುವಂತೆ ಮಾಡಲು;
ವ್ಯಕ್ತಿ ಗೌರವ, ದೇಶದ ಏಕತೆ ಮತ್ತು ಸಮಗ್ರತೆಗಾಗಿ ಎಲ್ಲರಲ್ಲಿ
ಬಂಧುತ್ವ ಭಾವನೆಯನ್ನು ಮೂಡಿಸುವುದಕ್ಕೆ ದೃಢಸಂಕಲ್ಪ ಮಾಡಿ;
ನಮ್ಮ ಸಂವಿಧಾನ ಸಭೆಯಲ್ಲಿ 1949 ನೆ ಇಸವಿಯ
ನವೆಂಬರ್ ತಿಂಗಳ ಇಪ್ಪತ್ತಾರನೆ ದಿನದಂದು
ಈ ಸಂವಿಧಾನವನ್ನು ನಮಗೆ ನಾವೇ ಅರ್ಪಿಸಿಕೊಂಡು,
ಅಂಗೀಕರಿಸಿ, ಶಾಸನವಾಗಿ ವಿಧಿಸಿಕೊಂಡಿದ್ದೇವೆ.

ಭಾರತೀಯ ಪ್ರಜಾಪ್ರಭುತ್ವದ ಹೃದಯವನ್ನು ಶೋಧಿಸಿ

ನಮ್ಮ ಸಂವಿಧಾನವು ಪ್ರಜಾಪ್ರಭುತ್ವದ ಬೆನ್ನೆಲುಬು ಅಷ್ಟೇ ಅಲ್ಲ, ಅದು ನಮ್ಮ ದೇಶದ ಹೃದಯ ಮಿಡಿತವೂ ಹೌದು. ಅದು ನಮ್ಮ ಸ್ವಾತಂತ್ರ್ಯದ ರಕ್ಷಕನಾಗಿದೆ; ಹೊಣೆಗಾರಿಕೆಯ ಅರಿವು ಮೂಡಿಸುತ್ತದೆ; ನ್ಯಾಯ ಮತ್ತು ಸಮಾನತೆಯತ್ತ ನಮ್ಮನ್ನು ಕರೆದೊಯ್ಯುತ್ತದೆ.

ಕರ್ನಾಟಕದ ಜನರು ಸಂವಿಧಾನದ ಮೌಲ್ಯಗಳನ್ನು ಎತ್ತಿಹಿಡಿಯಲು ನಾವು ಉತ್ತೇಜಿಸುತ್ತೇವೆ; ನ್ಯಾಯ, ಸಮಾನತೆ ಮತ್ತು ಹೊಣೆಗಾರಿಕೆಯ ಪೌರತ್ವದ ಸ್ಫೂರ್ತಿಯನ್ನು ಬಲಪಡಿಸುವುದೇ ನಮ್ಮ ಗುರಿಯಾಗಿದೆ.

ನಮ್ಮ ಕಾರ್ಯಕ್ರಮವು ಏನೆಲ್ಲವನ್ನು ಒಳಗೊಂಡಿದೆ

- ಭಾರತದ ಪ್ರಜಾಪ್ರಭುತ್ವದ ಕುರಿತು ಪರಿಣತರ ಅಭಿಮತ
- ಸಾಂವಿಧಾನಿಕ ಮೌಲ್ಯಗಳ ಕುರಿತು ಕಾಲೇಜುಗಳಲ್ಲಿ ಸಂವಾದ
- ಹಕ್ಕು ಮತ್ತು ಹೊಣೆಗಾರಿಕೆಯ ಅರಿವು ಮೂಡಿಸಿ ಸಶಕ್ತೀಕರಣ
- ರಾಜ್ಯದಾದ್ಯಂತ ಜಿಲ್ಲಾ ಮಟ್ಟದಲ್ಲಿ ಸಂವಿಧಾನ ಜಾಗೃತಿ ಕಾರ್ಯಕ್ರಮ

ತಿಳಿಯಿರಿ, ಗೌರವಿಸಿರಿ, ಜೀವನದಲ್ಲಿ ಅಳವಡಿಸಿಕೊಳ್ಳಿ

COLLATERAL

An Initiative by:

SOCIAL WELFARE DEPARTMENT
For the Educational, Social & Economic Upliftment of Scheduled Castes

In Association with:

Karnataka Residential Education Institutions Society | DR. B.R. AMBEDKAR DEVELOPMENT CORPORATION | KSSKDC | LIDKAR | ಕರ್ನಾಟಕ ತಾಂಡಾ | KARNATAKA BHOVI DEVELOPMENT CORPORATION | ಕರ್ನಾಟಕ ಆದಿಜಾಂಬವ ಅಭಿವೃದ್ಧಿ ನಿಗಮ

SYNDICATE FINANCE

www.syndicatefinance.in

LICENSED
LICENSED
ENTITY

Estd. 1977

BUSINESS LOAN

Against mortgage of immovable property

Long Term & Easy Instalment Facilities.

Pioneering a New Era of
Smart Lending for Corporates & MSMEs

Scan For Details

(022) 3565 7754 / 3565 7941 / 6581 0001

E-mail : info@syndicatefinance.in

428, Rawal Bldg. No. 1,
1st Floor Lamington Road,
Mumbai-400 004

Contact : 11 am to 5 pm

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

‘ನಗರ ಕೀರ್ತನ್’ ಮೆರವಣಿಗೆ

ಸಿಖ್ಖರ ಒಂಬತ್ತನೇ ಗುರು ತೇಗ್ ಬಹದ್ದೂರ್ ಅವರ 350ನೇ ಹುತಾತ್ಮ ದಿನದ ಅಂಗವಾಗಿ ದೆಹಲಿಯಲ್ಲಿ ಮಂಗಳವಾರ ನಡೆದ ‘ನಗರ ಕೀರ್ತನ್’ ಮೆರವಣಿಗೆಯಲ್ಲಿ ಭಾಗವಹಿಸಿದ್ದ ಬಾಲಕ

ಅಗಲಿದ ನಟನಿಗೆ ಗೌರವ

ಕಲಾವಿದೆ ಮಿಥು ಮೆಹ್ರಾ ಅವರು ಬಾಲಿವುಡ್ ನಟ ಧರ್ಮೇಂದ್ರ ಅವರ ಚಿತ್ರವನ್ನು ಅರಳಿ ಎಲೆಯೊಳಗೆ ರಚಿಸಿ, ಗೌರವ ಸಲ್ಲಿಸಿದರು

ಸೆನ್ಸೆಕ್ಸ್	ನಿಫ್ಟಿ	$/₹	ಚಿನ್ನ (Std. 10g)	ಶುದ್ಧ ಬೆಳ್ಳಿ (kg)
84,587	25,884	89.22	₹1,30,850 (ಬೆಂಗಳೂರು)	₹1,68,400 (ಬೆಂಗಳೂರು)

ಸಿ.ಎಂ–ಡಿಸಿಎಂ ವರಸೆ ಬದಲು

ಆಡಳಿತಾರೂಢ ಕಾಂಗ್ರೆಸ್‌ನಲ್ಲಿ ‘ಅಧಿಕಾರ ಹಸ್ತಾಂತರ’ದ ಗುದ್ದಾಟ ಮತ್ತಷ್ಟು ಬಿಗಡಾಯಿಸುತ್ತಲೇ ಇದೆ. ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ಅವರು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಪ್ರತ್ಯೇಕವಾಗಿ ಭೇಟಿಯಾದ ಬಳಿಕ ತಮ್ಮ ನಡೆ–ನುಡಿಗಳನ್ನು ಬದಲಾಯಿಸಿದ್ದಾರೆ. ‘ನಾನೇ ಐದು ವರ್ಷ ಮುಖ್ಯಮಂತ್ರಿ’ ಎನ್ನುತ್ತಿದ್ದ ಸಿದ್ದರಾಮಯ್ಯ, ‘ಗೊಂದಲಗಳಿಗೆ ಹೈಕಮಾಂಡ್ ಕೊನೆ ಹಾಡಬೇಕು’ ಎನ್ನುವ ಮೂಲಕ ನಾಯಕತ್ವದ ಗೊಂದಲ ಇದೆ ಎಂದು ಒಪ್ಪಿಕೊಂಡಿದ್ದಾರೆ. ‘ಐದಾರು ಜನರ ನಡುವಿನ ಗುಟ್ಟಿನ ವಿಚಾರ ಬಹಿರಂಗಪಡಿಸುವುದಿಲ್ಲ’ ಎಂದಿರುವ ಶಿವಕುಮಾರ್, ಮುಖ್ಯಮಂತ್ರಿ ಆಪ್ತ ಬಣದ ಸಚಿವರನ್ನು ಒಲಿಸಿಕೊಳ್ಳುವ ಯತ್ನ ನಡೆಸಿದ್ದಾರೆ.

ಗೊಂದಲಕ್ಕೆ ಹೈಕಮಾಂಡ್ ಕೊನೆ ಹಾಡಲಿ: ಸಿದ್ದರಾಮಯ್ಯ

‘ಎಲ್ಲ ಗೊಂದಲಗಳಿಗೆ ಮುಕ್ತಾಯ ಹಾಡಲು ಹೈಕಮಾಂಡ್ ತೀರ್ಮಾನಿಸಬೇಕು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿಪಾದಿಸಿದರು.

ಸುದ್ದಿಗಾರರ ಪ್ರಶ್ನೆಗಳಿಗೆ ಮಂಗಳವಾರ ಪ್ರತಿಕ್ರಿಯಿಸಿದ ಅವರು, ‘ಸಚಿವ ಸಂಪುಟ ವಿಸ್ತರಣೆಯನ್ನು ಪಕ್ಷದ ವರಿಷ್ಠರು ಸೂಚನೆ ನೀಡಿದಾಗ ಕೈಗೊಳ್ಳಲಾಗುವುದು’ ಎಂದರು. ‘ರಾಹುಲ್ ಗಾಂಧಿ ಅವರನ್ನು ಭೇಟಿ ಮಾಡುವ ಇರಾದೆ ಸದ್ಯಕ್ಕೆ ಇಲ್ಲ’ ಎಂದೂ ತಿಳಿಸಿದರು.

ಶಾಸಕರ ಮತ್ತೊಂದು ತಂಡ ದೆಹಲಿಗೆ ತೆರಳಿ ಹೈಕಮಾಂಡ್ ನಾಯಕರನ್ನು ಭೇಟಿ ಮಾಡಿರುವ ಬಗ್ಗೆ ಕೇಳಿದ ಪ್ರಶ್ನೆಗೆ, ‘ಶಾಸಕರಿಗೆ ಅವರ ಅಭಿಪ್ರಾಯ ತಿಳಿಸುವ ಸ್ವಾತಂತ್ರ್ಯ ಇದೆ. ಪಕ್ಷದ ವರಿಷ್ಠರು ಏನು ಹೇಳುತ್ತಾರೆ ಎಂದು ನೋಡೋಣ’ ಎಂದರು.

ಯಾವ ದಿನ: ಸಿ.ಎಂ ಹೇಳಿದ್ದೇನು?

- **ಅ.27, ಮಂಗಳೂರು:** ಹೈಕಮಾಂಡ್ ತೀರ್ಮಾನ ಮಾಡಿದರೆ ಐದು ವರ್ಷ ನಾನೇ ಮುಖ್ಯಮಂತ್ರಿ
- **ನ.21, ಮೈಸೂರು:** ‘ಮುಖ್ಯಮಂತ್ರಿಯಾಗಿ ನಾನೇ ಮುಂದುವರಿಯುತ್ತೇನೆ. ಮುಂದಿನ ಬಜೆಟ್‌ಗಳನ್ನು ನಾನೇ ಮಂಡಿಸುತ್ತೇನೆ.
- **ನ.22, ಬೆಂಗಳೂರು:** ‘ಹೈಕಮಾಂಡ್ ಏನೇ ತೀರ್ಮಾನ ಮಾಡಿದರೂ ನಾನು, ಡಿ.ಕೆ. ಶಿವಕುಮಾರ್ ಇಬ್ಬರೂ ಒಪ್ಪಬೇಕು
- **ನ.24, ಶಿಡ್ಲಘಟ್ಟ:** ‘ಹೈಕಮಾಂಡ್ ಮುಂದುವರಿಯಿರಿ ಎಂದರೆ ಮುಂದುವರಿಯುವೆ. ಹೈಕಮಾಂಡ್ ಕೈಗೊಳ್ಳುವ ನಿರ್ಧಾರಕ್ಕೆ ನಾನು ಮತ್ತು ಡಿ.ಕೆ. ಶಿವಕುಮಾರ್ ಬದ್ಧವಾಗಿರಬೇಕು

ಖರ್ಗೆ ಕಾರಿನಲ್ಲಿ ಡಿಸಿಎಂ ಪ್ರಯಾಣ

ದೆಹಲಿಗೆ ತೆರಳಲು ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದವರೆಗೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮಂಗಳವಾರ ಬೆಳಿಗ್ಗೆ ಪ್ರಯಾಣಿಸಿದ ಕಾರಿನಲ್ಲೇ ಶಿವಕುಮಾರ್ ಕೂಡಾ ಹೋಗಿದ್ದು ಕುತೂಹಲಕ್ಕೆ ಕಾರಣವಾಗಿದೆ.

ಕಳೆದ ನಾಲ್ಕು ದಿನಗಳಿಂದ ಸದಾಶಿವನಗರದ ತಮ್ಮ ನಿವಾಸದಲ್ಲಿದ್ದ ಖರ್ಗೆ ಅವರು ವಿಮಾನ ನಿಲ್ದಾಣಕ್ಕೆ ಹೋಗಲು ಕಾರು ಹತ್ತುತ್ತಿದ್ದಂತೆ, ಅಲ್ಲಿಗೆ ಬಂದ ಶಿವಕುಮಾರ್ ಅದೇ ಕಾರು ಹತ್ತಿದ್ದಾರೆ. ವಿಮಾನ ನಿಲ್ದಾಣದವರೆಗೆ ಜೊತೆಯಲ್ಲೇ ತೆರಳಿ ಖರ್ಗೆ ಜೊತೆ ಚರ್ಚೆ ನಡೆಸಿರುವ ಅವರು ಅಲ್ಲಿಂದ ವಾಪಸಾಗಿದ್ದಾರೆ.

ಸಿದ್ದರಾಮಯ್ಯ, ಕೆಲವು ಸಚಿವರು ಮತ್ತು ಶಾಸಕರ ಜೊತೆ ಮಾತುಕತೆ ನಡೆಸಿರುವ ಖರ್ಗೆ ಅವರು, ರಾಜ್ಯ ಕಾಂಗ್ರೆಸ್‌ನಲ್ಲಿ ನಡೆಯುತ್ತಿರುವ ಸದ್ಯದ ಬೆಳವಣಿಗೆಗಳ ಬಗ್ಗೆ ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಜೊತೆ ಸಮಾಲೋಚನೆ ನಡೆಸುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

ಇದೇ ವೇಳೆ ಮಾತನಾಡಿದ ಖರ್ಗೆ, ‘ಸಂವಿಧಾನ ದಿನ ಇದೆ. ಹೀಗಾಗಿ ದೆಹಲಿಗೆ ಹೋಗುತ್ತಿದ್ದೇನೆ’ ಎಂದಷ್ಟೇ ಹೇಳಿದರು.

ಸಿ.ಎಂ ಸ್ಥಾನ ನಾನು ಕೇಳಿಲ್ಲ: ಡಿಕೆಶಿ

ಕನಕಪುರ (ರಾಮನಗರ): ‘ಅಧಿಕಾರ ಹಸ್ತಾಂತರ ನಮ್ಮ ಐದಾರು ಜನರ ನಡುವಿನ ಗುಟ್ಟಿನ ವಿಚಾರ. ಅದನ್ನು ನಾನು ಬಹಿರಂಗ ಮಾಡುವುದಿಲ್ಲ. ಇಷ್ಟಕ್ಕೂ ನನ್ನನ್ನು ಮುಖ್ಯಮಂತ್ರಿ ಮಾಡಿ ಎಂದು ಪಕ್ಷದ ನಾಯಕರನ್ನು ನಾನೇನೂ ಕೇಳಿಲ್ಲ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ರಾಜ್ಯದಲ್ಲಿನ ಅಧಿಕಾರ ಹಸ್ತಾಂತರದ ಬಗ್ಗೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ರಾಹುಲ್ ಗಾಂಧಿ ಜತೆ ಚರ್ಚಿಸಲಿದ್ದಾರೆ ಎಂಬ ಕುರಿತ ಮಾಧ್ಯಮದವರ ಪ್ರಶ್ನೆಗೆ, ‘ಆ ವಿಷಯ ನನಗೆ ಗೊತ್ತಿಲ್ಲ. ನಾವು ಆತ್ಮಸಾಕ್ಷಿ ನಂಬಿ ಅದಕ್ಕೆ ತಕ್ಕಂತೆ ಕೆಲಸ ಮಾಡಬೇಕು. ಪಕ್ಷವನ್ನು ಮುಜುಗರಕ್ಕೀಡು ಮಾಡಲು ಅಥವಾ ದುರ್ಬಲಗೊಳಿಸಲು ಇಷ್ಟವಿಲ್ಲ’ ಎಂದರು.

▶6

ಮನವೊಲಿಕೆಗೆ ಕಸರತ್ತು

‘ಮುಖ್ಯಮಂತ್ರಿ ಮಾಡಿ ಎಂದು ಯಾರನ್ನೂ ಕೇಳಿಲ್ಲ’ ಎಂಬ ಹೊಸ ಮಾತು ಆಡಿರುವ ಡಿ.ಕೆ. ಶಿವಕುಮಾರ್, ಸಿದ್ದರಾಮಯ್ಯ ಆಪ್ತ ಬಣದಲ್ಲಿ ಗುರುತಿಸಿಕೊಂಡಿರುವ ಸಚಿವರ ಮನವೊಲಿಕೆಗೆ ಇಳಿದಿದ್ದಾರೆ. ಇಂಧನ ಸಚಿವ ಕೆ.ಜೆ. ಜಾರ್ಜ್ ಅವರ ಸರ್ಕಾರಿ ನಿವಾಸಕ್ಕೆ ತೆರಳಿ ಅವರ ಜೊತೆ ಮಾತುಕತೆ ನಡೆಸಿದ್ದ ಶಿವಕುಮಾರ್ ತಮ್ಮ ಮನದಾಳವನ್ನು ವ್ಯಕ್ತಪಡಿಸಿದ್ದರು. ವಸತಿ ಸಚಿವ ಜಮೀರ್ ಅಹಮದ್ ಖಾನ್ ಅವರಿಗೆ ಕರೆ ಮಾಡಿ ಮಂಗಳವಾರ ತಮ್ಮ ಮನೆಗೆ ಕರೆಯಿಸಿಕೊಂಡ ಶಿವಕುಮಾರ್ ಅವರು, ಮನದಿಂಗಿತವನ್ನು ಅವರ ಬಳಿ ಹೇಳಿಕೊಂಡಿದ್ದಾರೆ ಎನ್ನಲಾಗಿದೆ.

ಆರೋಪ ಅಲ್ಲಗಳೆದ ಚೀನಾ

ಬೀಜಿಂಗ್ (ಪಿಟಿಐ): ಭಾರತದ ಪಾಸ್‌ಪೋರ್ಟ್ ಹೊಂದಿದ್ದ ಅರುಣಾಚಲ ಪ್ರದೇಶದ ಮಹಿಳೆಯೊಬ್ಬರಿಗೆ ಶಾಂಘೈ ವಿಮಾನ ನಿಲ್ದಾಣದ ಅಧಿಕಾರಿಗಳು ಕಿರುಕುಳ ನೀಡಿದ್ದಾರೆ ಎಂಬ ಆರೋಪವನ್ನು ಚೀನಾ ಮಂಗಳವಾರ ಅಲ್ಲಗಳೆದಿದೆ.

▶10

ಮಾರುಕಟ್ಟೆ: ಹಿಗ್ಗಲಿದೆ ಬೇಡಿಕೆ

ಮುಂಬೈ (ಪಿಟಿಐ): ಹೊಸ ಕಾರ್ಮಿಕ ಸಂಹಿತೆಗಳು ದೇಶದ ಮಾರುಕಟ್ಟೆಯಲ್ಲಿ ಬೇಡಿಕೆಯನ್ನು ₹75 ಸಾವಿರ ಕೋಟಿಯಷ್ಟು ಹೆಚ್ಚು ಮಾಡಲಿವೆ ಎಂದು ಎಸ್‌ಬಿಐ ರಿಸರ್ಚ್‌ನ ಸಂಶೋಧನಾ ವರದಿಯೊಂದು ಅಂದಾಜು ಮಾಡಿದೆ. ಸಂಘಟಿತ ವಲಯದ ಕಾರ್ಮಿಕರ ಪ್ರಮಾಣವನ್ನು ಕನಿಷ್ಠ ಶೇ 15ರಷ್ಟು ಹೆಚ್ಚು ಮಾಡಲಿವೆ ಎಂದು ಹೇಳಲಾಗಿದೆ.

▶10

‘ಅತಿಥಿ’ಗಳಿಗೆ ನಿರುದ್ಯೋಗ

ಯುಜಿಸಿ ನಿಗದಿಪಡಿಸಿದ ವಿದ್ಯಾರ್ಹತೆ ಪಡೆದವರಿಗಷ್ಟೇ ಮನ್ನಣೆ

10,303	6,904	49,702	20,504	29,198
2025–26ನೇ ಸಾಲಿನ ಮೊದಲ ಆರು ತಿಂಗಳಲ್ಲಿ ನೇಮಕವಾಗಿದ್ದ ಅತಿಥಿ ಉಪನ್ಯಾಸಕರು	2025–26ನೇ ಸಾಲಿನ ದ್ವಿತೀಯ ಭಾಗದಲ್ಲಿ ಕೆಲಸ ಕಳೆದುಕೊಂಡವರು	2025–26ನೇ ಸಾಲಿಗೆ ಅರ್ಜಿ ಸಲ್ಲಿಸಿದವರು	ಯುಜಿಸಿ ಅರ್ಹತೆ ಪಡೆದವರು	ಯುಜಿಸಿ ಅರ್ಹತೆ ಇಲ್ಲದವರು

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಎರಡು ದಶಕಗಳಿಂದ ಕೆಲಸ ಮಾಡುತ್ತಾ ಬಂದಿದ್ದ ಯುಜಿಸಿ ಅರ್ಹತೆ ಪಡೆಯದ 6,000ಕ್ಕೂ ಹೆಚ್ಚು ಅತಿಥಿ ಉಪನ್ಯಾಸಕರು ಕೆಲಸ ಕಳೆದುಕೊಂಡಿದ್ದಾರೆ.

ಹೈಕೋರ್ಟ್ ಆದೇಶದಂತೆ ಕಾಲೇಜು ಶಿಕ್ಷಣ ಇಲಾಖೆಯು ವಿಶ್ವವಿದ್ಯಾಲಯ ಅನುದಾನ ಆಯೋಗದ (ಯುಜಿಸಿ) ಅರ್ಹತೆ ಆಧಾರದಲ್ಲಿ 2025-26ನೇ ಸಾಲಿನ ಎರಡು, ನಾಲ್ಕು ಮತ್ತು ಆರನೇ ಸೆಮಿಸ್ಟರ್‌ಗಳ ಬೋಧನೆಗೆ ಅತಿಥಿ ಉಪನ್ಯಾಸಕರ ನೇಮಕಾತಿ ಪ್ರಕ್ರಿಯೆ ಆರಂಭಿಸಿದೆ. ಇದು ಡಿ.4ಕ್ಕೆ ಮುಕ್ತಾಯ-ಗೊಳ್ಳಲಿದೆ.

> **ಸರ್ಕಾರ ಅತಿಥಿ ಉಪನ್ಯಾಸಕರ ಅನ್ನವನ್ನೇ ಕಿತ್ತುಕೊಂಡಿದೆ. ನೇಮಕಾತಿ ಪ್ರಕ್ರಿಯೆ ತಡೆಹಿಡಿಯಬೇಕು. ಇಲ್ಲದಿದ್ದರೆ ಆಮರಣಾಂತ ಉಪವಾಸ ಆರಂಭಿಸುತ್ತೇವೆ**
> **ಹನುಮಂತಗೌಡ ಕಲ್ಮನಿ**
> ಅಧ್ಯಕ್ಷ, ರಾಜ್ಯ ಅತಿಥಿ ಉಪನ್ಯಾಸಕರ ಸಂಘ

ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ 1995-96ರವರೆಗೆ ಕೆಲಸ ಮಾಡಿದ್ದ ಅರೆಕಾಲಿಕ ಉಪನ್ಯಾಸಕರನ್ನು ಸುಪ್ರೀಂ ಕೋರ್ಟ್ ಆದೇಶದಂತೆ ಕಾಯಂ ಮಾಡಲು ಅಂದಿನ ಸರ್ಕಾರ ನಿರ್ಧಾರ ತೆಗೆದುಕೊಂಡಿತ್ತು. ‘ಅರೆಕಾಲಿಕ’ ಪದನಾಮದ ಮೇಲೆ ಸೇವಾ ಭದ್ರತೆಗೆ ಒತ್ತಾಯಿಸಿ, ಮತ್ತೆ ಕೋರ್ಟ್ ಮೊರೆಹೋಗಬಹುದು ಎಂಬ ದೂರದೃಷ್ಟಿಯಿಂದ 2003ರಲ್ಲಿ ‘ಅರೆಕಾಲಿಕ’ ಪದನಾಮ ಬದಲಾಯಿಸಿ ‘ಅತಿಥಿ’ ಎಂದು ತಿದ್ದುಪಡಿ ಮಾಡಲಾಗಿತ್ತು.

ಅಂದು ತಿಂಗಳಿಗೆ ₹1,200 ಗೌರವಧನ ಪಡೆಯುತ್ತಿದ್ದ ಅತಿಥಿ ಉಪನ್ಯಾಸಕರು ಸೇವಾ ಭದ್ರತೆಗೆ ಆಗ್ರಹಿಸಿ ಮತ್ತೆ ಹೋರಾಟ ಆರಂಭಿಸಿದ್ದರು.

▶6

‘ಕಸ್ಟಡಿ ಸಾವು ಸಮಾಜಕ್ಕೆ ಕಳಂಕ’

ನವದೆಹಲಿ (ಪಿಟಿಐ): ‘ಪೊಲೀಸ್ ಕಸ್ಟಡಿಯಲ್ಲಿ ಸಂಭವಿಸುವ ಸಾವು ಮತ್ತು ಹಿಂಸಾಚಾರ ಪ್ರಕರಣವು ಸಮಾಜಕ್ಕೆ ಕಳಂಕ. ಇದನ್ನು ಸಹಿಸಲು ಸಾಧ್ಯವಿಲ್ಲ’ ಎಂದು ಸುಪ್ರೀಂ ಕೋರ್ಟ್ ಮಂಗಳವಾರ ಅಭಿಪ್ರಾಯ ಪಟ್ಟಿದೆ. ‘ರಾಜಸ್ಥಾನದಲ್ಲಿ ಕಳೆದ 8 ತಿಂಗಳಲ್ಲಿ 11 ಕಸ್ಟಡಿ ಸಾವು ಸಂಭವಿಸಿವೆ. ಇದು ಸಮಾಜಕ್ಕೆ ಕಪ್ಪು ಚುಕ್ಕೆ, ಇದನ್ನು ದೇಶ ಒಪ್ಪುವುದಿಲ್ಲ’ ಎಂದು ನ್ಯಾಯಾಲಯ ಹೇಳಿತು.

▶11

₹7 ಕೋಟಿಗೂ ಅಧಿಕ ನಗದು ವಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿಎಂಎಸ್ ಏಜೆನ್ಸಿ ವಾಹನ ಅಡ್ಡಗಟ್ಟಿ ನಗದು ದರೋಡೆ ಮಾಡಿದ ಪ್ರಕರಣ ಸಂಬಂಧ 9 ಆರೋಪಿಗಳನ್ನು ಬಂಧಿಸಿ, ₹7,01,24,000 ನಗದು (ಶೇಕಡ 98.6 ರಷ್ಟು) ವಶಪಡಿಸಿಕೊಂಡಿದ್ದು, ಉಳಿದ ಹಣವನ್ನು ಪತ್ತೆ ಹಚ್ಚಿ ಜಪ್ತಿ ಮಾಡಲಾಗುವುದು ಎಂದು ಬೆಂಗಳೂರು ನಗರ ಪೊಲೀಸ್ ಕಮಿಷನರ್ ಸೀಮಾಂತ್ ಕುಮಾರ್ ಸಿಂಗ್ ಹೇಳಿದರು.

ಆರೋಪಿಗಳಿಂದ ದ್ವಿಚಕ್ರ ವಾಹನ, ಎರಡು ಮೊಬೈಲ್ ವಶಪಡಿಸಿಕೊಂಡಿದ್ದು, ತನಿಖೆ ಮುಂದುವರಿದಿದೆ. ಇಲಾಖೆಗೆ ಸವಾಲಾಗಿದ್ದ ಪ್ರಕರಣವನ್ನು ಭೇದಿಸಿದ ಪೊಲೀಸರ ಕಾರ್ಯಕ್ಕೆ ಪ್ರಶಂಸೆ ವ್ಯಕ್ತವಾಗಿದೆ.

ಕಾರ್ಯಾಚರಣೆಯ ವೇಳೆ ಚೆನ್ನೈ, ಆಂಧ್ರಪ್ರದೇಶ, ತೆಲಂಗಾಣ, ಮಹಾರಾಷ್ಟ್ರ, ಕೇರಳ ಪೊಲೀಸರು ಮತ್ತು ರೈಲ್ವೆ ರಕ್ಷಣಾ ದಳದವರು ಸಹಾಯ ಮಾಡಿದ್ದಾರೆ. ಈಗಾಗಲೇ ತಂಡಕ್ಕೆ ₹5 ಲಕ್ಷ ಬಹುಮಾನ ಘೋಷಿಸಿದ್ದು, ಹೆಚ್ಚುವರಿಯಾಗಿ ₹2 ಲಕ್ಷ ನಗದು ಬಹುಮಾನ ನೀಡಲಾಗುವುದು. 9 ಆರೋಪಿಗಳನ್ನು ವಿಚಾರಣೆಗೆ ಒಳಪಡಿಸಲಾಗಿದೆ ಎಂದರು.

▶3D

ಚಿನಕುರುಳಿ

ಪ್ರಕಾಶ್ ಶೆಟ್ಟಿ

ಹವಾಮಾನ ಮುನ್ಸೂಚನೆ: ನಗರದಲ್ಲಿ ಬಿಸಿಲು ಹಾಗೂ ಮೋಡ ಕವಿದ ವಾತಾವರಣ ಇರಲಿದೆ.

ಒಂದೇ ದಿನ 13 ಶಸ್ತ್ರಚಿಕಿತ್ಸೆ

ಬೆಂಗಳೂರು: ಎಲೆಕ್ಟ್ರಾನಿಕ್ ಸಿಟಿಯಲ್ಲಿರುವ ಕಾವೇರಿ ಆಸ್ಪತ್ರೆಯ ಸರ್ಜಿಕಲ್ ಗ್ಯಾಸ್ಟ್ರೊಎಂಟರಾಲಜಿ ಮತ್ತು ರೋಬೋಟಿಕ್ ಸರ್ಜರಿ ವಿಭಾಗದ ನಿರ್ದೇಶಕ ಡಾ. ಗಣೇಶ್ ಶೆಣೈ ಅವರು ಒಂದೇ ದಿನ 13 ರೋಬೋಟಿಕ್ ಹರ್ನಿಯಾ ಶಸ್ತ್ರಚಿಕಿತ್ಸೆಯನ್ನು ಯಶಸ್ವಿಯಾಗಿ ನಡೆಸಿದ್ದಾರೆ.

'ಡಾ ವಿನ್ಸಿ' ರೋಬೋಟಿಕ್ ಶಸ್ತ್ರಚಿಕಿತ್ಸಾ ವ್ಯವಸ್ಥೆಯನ್ನು ಬಳಸಿಕೊಂಡು ಶಸ್ತ್ರಚಿಕಿತ್ಸೆ ನಡೆಸಿರುವ ಅವರು, 'ತಂತ್ರಜ್ಞಾನ, ಕೌಶಲದ ಸಮಾಗಮದಿಂದ ಈ ಸಾಧನೆ ಸಾಧ್ಯವಾಗಿದೆ. ರೋಗಿಗಳಿಗೆ ಸಂಪೂರ್ಣ ಸುರಕ್ಷತೆಯೊಂದಿಗೆ ಶಸ್ತ್ರಚಿಕಿತ್ಸೆ ನಡೆಸಲಾಗಿದೆ. ಎಲ್ಲ ಶಸ್ತ್ರಚಿಕಿತ್ಸೆಗಳು ಯಶಸ್ವಿಯಾಗಿವೆ' ಎಂದು ಹೇಳಿದ್ದಾರೆ

ಹರ್ನಿಯಾ ಸೊಸೈಟಿ ಆಫ್ ಇಂಡಿಯಾದ ಮಾಜಿ ಅಧ್ಯಕ್ಷ ಡಾ. ದೀಪರಾಜ್ ಭಂಡಾರಕರ್, 'ಡಾ. ಶೆಣೈ ಅವರ ಸಾಧನೆ ಸ್ಫೂರ್ತಿದಾಯಕ' ಎಂದು ತಿಳಿಸಿದ್ದಾರೆ.

ಮೂತ್ರಪಿಂಡ ಕಸಿಗೆ ರೋಬೊಟ್ ನೆರವು

ಬೆಂಗಳೂರು: ರೋಬೊಟ್ ತಂತ್ರಜ್ಞಾನದ ನೆರವಿನಿಂದ 68 ವರ್ಷದ ರೋಗಿಗೆ ಬನ್ನೇರುಘಟ್ಟ ರಸ್ತೆಯಲ್ಲಿರುವ ಫೋರ್ಟಿಸ್ ಆಸ್ಪತ್ರೆಯಲ್ಲಿ ಮೂತ್ರಪಿಂಡ ಕಸಿ ನಡೆಸಲಾಗಿದೆ.

ಆಸ್ಪತ್ರೆಯಲ್ಲಿ ಮೃತಪಟ್ಟ ವ್ಯಕ್ತಿಯ ಮೂತ್ರಪಿಂಡವನ್ನು ದಾನವಾಗಿ ಪಡೆದು ಈ ಕಸಿ ಮಾಡಲಾಗಿದೆ. ಮಧುಮೇಹ ಮತ್ತು ಅಧಿಕ ರಕ್ತದೊತ್ತಡದಿಂದ ಬಳಲುತ್ತಿದ್ದ ರೋಗಿ, ಅಂಗಾಂಗ ಕಸಿಗೆ ಹಲವು ದಿನಗಳಿಂದ ಕಾಯುತ್ತಿದ್ದರು. ಆಸ್ಪತ್ರೆಯ ರೋಬೊಟಿಕ್ ಶಸ್ತ್ರಚಿಕಿತ್ಸೆ ವಿಭಾಗದ ನಿರ್ದೇಶಕ ಡಾ. ಮೋಹನ್ ಕೇಶವಮೂರ್ತಿ ನೇತೃತ್ವದಲ್ಲಿ ವೈದ್ಯರ ತಂಡ ಮೂತ್ರಪಿಂಡ ಕಸಿ ನಡೆಸಿದೆ.

'ರೋಬೊಟಿಕ್ ಶಸ್ತ್ರಚಿಕಿತ್ಸಾ ಕೊಠಡಿಯಿಂದಾಗಿ ಈ ಸಂಕೀರ್ಣ ಶಸ್ತ್ರಚಿಕಿತ್ಸೆ ಸುಲಭ ಸಾಧ್ಯವಾಯಿತು. ಇದರಿಂದ ಗಾಯದ ಪ್ರಮಾಣವೂ ಕಡಿಮೆಯಾಗಿದ್ದು, ರೋಗಿ ಬೇಗ ಚೇತರಿಸಿಕೊಳ್ಳಲಿದ್ದಾರೆ' ಎಂದು ಡಾ. ಮೋಹನ್ ಕೇಶವಮೂರ್ತಿ ತಿಳಿಸಿದರು.

'ಕಡಿಮೆ ವೆಚ್ಚದಲ್ಲಿ ಚಿಕಿತ್ಸೆ ನೀಡಿ'

ಬಿಎಂಸಿಆರ್‌ಐ ಘಟಿಕೋತ್ಸವದಲ್ಲಿ ಶರಣಪ್ರಕಾಶ ಪಾಟೀಲ ಸಲಹೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಕೈಗೆಟುಕುವ ದರದಲ್ಲಿ ಶಿಕ್ಷಣ ಪಡೆದು ವೈದ್ಯರಾಗಿರುವವರು ಕಡಿಮೆ ವೆಚ್ಚದಲ್ಲಿ ಚಿಕಿತ್ಸೆ ನೀಡಿ ಸಮಾಜಮುಖಿಯಾಗಿ ಕೆಲಸ ಮಾಡಬೇಕು' ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣ ಪ್ರಕಾಶ ಪಾಟೀಲ ಸಲಹೆ ನೀಡಿದರು.

ಬೆಂಗಳೂರು ವೈದ್ಯಕೀಯ ಕಾಲೇಜು ಹಾಗೂ ಸಂಶೋಧನಾ ಸಂಸ್ಥೆ (ಬಿಎಂಸಿಆರ್‌ಐ) ಸಭಾಂಗಣದಲ್ಲಿ ಮಂಗಳವಾರ ಆಯೋಜಿಸಿದ್ದ ಘಟಿಕೋತ್ಸವ ಸಮಾರಂಭದಲ್ಲಿ ಮಾತನಾಡಿದ ಅವರು, 'ಸಮಾಜದ ಆರೋಗ್ಯ ಕಾಪಾಡುವಲ್ಲಿ ವೈದ್ಯರ ಪಾತ್ರ ಹಿರಿದು. ಅದರಲ್ಲೂ ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಶಿಕ್ಷಣ ಪಡೆದವರಿಗೆ ಇದರ ಮಹತ್ವ ಹೆಚ್ಚೇ ತಿಳಿದಿರುತ್ತದೆ. ಸಮಾಜಮುಖಿಯಾಗಿ ಕೆಲಸ ಮಾಡುವುದರ ಜೊತೆಗೆ ವೃತ್ತಿಪರತೆ, ಬದ್ಧತೆ, ನೈತಿಕತೆ ಬೆಳೆಸಿಕೊಳ್ಳಬೇಕು' ಎಂದು ತಿಳಿಸಿದರು.

'ವೈದ್ಯಕೀಯ ಕ್ಷೇತ್ರದಲ್ಲಿ ಸಾಕಷ್ಟು ಬದಲಾವಣೆಗಳು ಆಗುತ್ತಿವೆ.

> **ವೈದ್ಯರು ಸಮಾಜಮುಖಿಯಾಗಿ ಕೆಲಸ ಮಾಡಿದರೆ ಹಣ, ಕೀರ್ತಿ ಹುಡುಕಿಕೊಂಡು ಬರಲಿದೆ**
> **ಡಾ.ಸಿ.ಎನ್.ಮಂಜುನಾಥ್,** ಸಂಸದ

ಇದರಿಂದಾಗಿ ವೃತ್ತಿಯಲ್ಲಿ ಜ್ಞಾನ, ಕೌಶಲ ಹೆಚ್ಚಿಸಿಕೊಳ್ಳುವುದು ಅನಿವಾರ್ಯ. ಭಾರತ ಮಾತ್ರವಲ್ಲದೇ ಹೊರ ದೇಶಗಳ ವೈದ್ಯಕೀಯ ಕ್ಷೇತ್ರದಲ್ಲಿ ಏನೇನು ಆಗುತ್ತಿದೆ ಎನ್ನುವುದನ್ನೂ ತಿಳಿದುಕೊಂಡರೆ ವೃತ್ತಿಯಲ್ಲಿ ಸಾಧನೆ ಮಾಡಲು ಸಹಕಾರಿಯಾಗಲಿದೆ' ಎಂದು ಹೇಳಿದರು.

ಕೃಪಾಂಕಕ್ಕೆ ಶಿಫಾರಸು: ಬೆಂಗಳೂರು ಗ್ರಾಮಾಂತರ ಸಂಸದ ಡಾ.ಸಿ. ಎನ್.ಮಂಜುನಾಥ್ ಮಾತನಾಡಿ, 'ಗ್ರಾಮೀಣ ಭಾಗದಲ್ಲಿ ಕೆಲಸ ಮಾಡುವ ವೈದ್ಯರಿಗೆ ಹೆಚ್ಚುವರಿಯಾಗಿ ಮಾಸಿಕ ₹50 ಸಾವಿರ ವೇತನ ನೀಡಬೇಕು. ನೀಟ್ ಪ್ರವೇಶ ಪರೀಕ್ಷೆಯಲ್ಲಿ ಕೃಪಾಂಕ ನೀಡಬೇಕು. ಜಿಲ್ಲಾ ಆಸ್ಪತ್ರೆಗಳಲ್ಲಿ ಸ್ನಾತಕೋತ್ತರ ವೈದ್ಯಕೀಯ ಶಿಕ್ಷಣ ಆರಂಭಿಸಬೇಕು. ಇದನ್ನು ಸಂಸತ್ತಿನ ಆರೋಗ್ಯ ಸ್ಥಾಯಿ ಸಮಿತಿ ಮೂಲಕ



ಬಿಎಂಸಿಆರ್‌ಐನಲ್ಲಿ ಮಂಗಳವಾರ ಆಯೋಜಿಸಿದ್ದ 'ಸಂಕಲ್ಪ' ಪದವಿ ಪ್ರದಾನ ಸಮಾರಂಭದಲ್ಲಿ ವಿವಿಧ ವಿಭಾಗಗಳಲ್ಲಿ ಹೆಚ್ಚು ಅಂಕ ಪಡೆದ (ಎಡದಿಂದ) ಡಾ. ನೀತು ಟಿ.ಜೆ. (ಬಯೊ ಕೆಮಿಸ್ಟ್ರಿ), ಹರ್ಷಿತಾ ಎಸ್. (ಜನರಲ್ ಸರ್ಜರಿ), ಶ್ರೇಯಾ ಭಟ್ (ಔಷಧಶಾಸ್ತ್ರ), ಡಾ. ಕಾರ್ತಿಕ್ (ಜನರಲ್ ಮೆಡಿಸಿನ್), ಡಾ. ಬಸವಲಿಂಗಯ್ಯ (ಸಮುದಾಯ ವೈದ್ಯಕೀಯ), ಡಾ. ಪ್ರತಾಪ್ ಹೆಗ್ಡೆ (ಜನರಲ್ ಸರ್ಜರಿ) ಪರಸ್ಪರ ಅಭಿನಂದಿಸಿ ಸಂಭ್ರಮಿಸಿದರು —ಪ್ರಜಾವಾಣಿ ಚಿತ್ರ: ರಂಜು ಪಿ.

ಸರ್ಕಾರಕ್ಕೆ ಶಿಫಾರಸು ಮಾಡಿದ್ದೇವೆ' ಎಂದು ಹೇಳಿದರು.

'ವೈದ್ಯಕೀಯ ಕ್ಷೇತ್ರದಲ್ಲೂ ಎಐ ಪ್ರವೇಶಿಸಿದೆ. ತಂತ್ರಜ್ಞಾನದ ಉಪಯೋಗವನ್ನು ವೈದ್ಯರು ಪಡೆದರೂ ಸ್ವಂತ ಜ್ಞಾನಕ್ಕೆ ಆದ್ಯತೆ ನೀಡಿ. ನಿಮ್ಮ ಮಿದುಳಿಗೆ ಕೆಲಸವೇ ಇಲ್ಲದ ಹಾಗೆ ಮಾಡಿಕೊಳ್ಳಬೇಡಿ. ಹಣದ ಹಿಂದೆ ಬೀಳದೇ ವೃತ್ತಿಯ ಹಿರಿಮೆ ಉಳಿಸಿ' ಎಂದು ಕಿವಿಮಾತು ಹೇಳಿದರು.

ಕಾರ್ಯಕ್ರಮದಲ್ಲಿ ಶಾಸಕ ಉದಯ್ ಗರುಡಾಚಾರ್, ವೈದ್ಯಕೀಯ ಶಿಕ್ಷಣ ಇಲಾಖೆ ನಿರ್ದೇಶಕಿ ಡಾ.ಸುಜಾತಾ ರಾಥೋಡ್, ಕಾಲೇಜಿನ ಡೀನ್ ಡಾ.ಕಾವ್ಯ, ಪ್ರಾಂಶುಪಾಲರಾದ ಡಾ.ಅಸೀಮಾಬಾನು ಉಪಸ್ಥಿತರಿದ್ದರು.

ಜನಗಣತಿ: ಮೊಬೈಲ್ ಆ್ಯಪ್ ಪರೀಕ್ಷಾರ್ಥ ಬಳಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜನಗಣತಿ ಪ್ರಕ್ರಿಯೆಗೆ ಸಿದ್ಧಪಡಿಸಲಾಗಿರುವ ಮೊಬೈಲ್ ಆ್ಯಪ್ ಅನ್ನು ಜೆ.ಪಿ. ಪಾರ್ಕ್ ವಾರ್ಡ್‌ನಲ್ಲಿ ಪರೀಕ್ಷಾರ್ಥವಾಗಿ ಬಳಸಲಾಗುತ್ತಿದೆ.

'ಜೆ.ಪಿ. ಪಾರ್ಕ್ ವಾರ್ಡ್‌ನಲ್ಲಿ ಮನೆಪಟ್ಟಿ ಮೊಬೈಲ್ ಆ್ಯಪ್ ಪರೀಕ್ಷಾರ್ಥ ಕಾರ್ಯಾಚರಣೆಗೆ 83 ಗಣತಿದಾರರು, 16 ಮೇಲ್ವಿಚಾರಕರು, ವಾರ್ಡ್ ಮಟ್ಟದಲ್ಲಿ ಸಮಗ್ರ ಮೇಲ್ವಿಚಾರಣೆಗೆ ಒಬ್ಬ ಉಸ್ತುವಾರಿ ಅಧಿಕಾರಿಯನ್ನು ನಿಯೋಜಿಸಲಾಗಿದೆ. ನ.30ರವರೆಗೆ ಪ್ರಕ್ರಿಯೆ ನಡೆಯಲಿದೆ' ಎಂದು ಉತ್ತರ ನಗರ ಪಾಲಿಕೆ ಆಯುಕ್ತ ಪೊಮ್ಮಲ ಸುನೀಲ್ ಕುಮಾರ್ ತಿಳಿಸಿದರು.

'ಗಣತಿದಾರರು ತಮಗೆ ಹಂಚಿಕೆಯಾದ 'ಗಣತಿ ಬ್ಲಾಕ್'ಗಳಲ್ಲಿ ಮನೆ ಮನೆಗೆ ಭೇಟಿ ನೀಡಿ ಜನರಿಂದ ಅಗತ್ಯ ಮಾಹಿತಿ ಪಡೆದುಕೊಳ್ಳುತ್ತಿದ್ದಾರೆ. ಕೇಂದ್ರ ಜನಗಣತಿ ಪ್ರಧಾನ ನೋಂದಣಿ ಕಚೇರಿಯ ಸಹಾಯಕ ನಿರ್ದೇಶಕರಾದ ಜಿತೇಂದ್ರ ಶರ್ಮಾ, ಆಕಾಶ್ ದೇವ್ರಾ ಅವರು ಜೆ.ಪಿ. ಪಾರ್ಕ್ ವಾರ್ಡ್‌ನಲ್ಲಿ ನಡೆಯುತ್ತಿರುವ ಪ್ರಕ್ರಿಯೆಯನ್ನು ಮಂಗಳವಾರ ಪರಿಶೀಲಿಸಿದರು' ಎಂದರು.

ಕೇಂದ್ರ ಸರ್ಕಾರವು 2027ರಲ್ಲಿ ದೇಶವ್ಯಾಪಿ ಜನಗಣತಿ ಕಾರ್ಯಾಚರಣೆ ನಡೆಸಲಿದೆ. ಇದರ ಪೂರ್ವ ತಯಾರಿಗಾಗಿ 2026ರಲ್ಲಿ ಮನೆಪಟ್ಟಿ ಸಿದ್ಧಪಡಿಸುವ ಕಾರ್ಯವನ್ನು ತಂತ್ರಜ್ಞಾನಾಧಾರಿತವಾಗಿ ಪೂರ್ಣಗೊಳಿಸಲು ನಿರ್ಧರಿಸಿದೆ. ಇದಕ್ಕಾಗಿ ಅಭಿವೃದ್ಧಿಪಡಿಸಲಾಗಿರುವ ಮೊಬೈಲ್ ಆ್ಯಪ್‌ನ ಕಾರ್ಯಕ್ಷಮತೆ ಮತ್ತು ಬಳಕೆಯನ್ನು ಪರಿಶೀಲಿಸಲು, 'ಪರೀಕ್ಷಾರ್ಥ ಮನೆಪಟ್ಟಿ ತಯಾರಿ ಕಾರ್ಯ'ವನ್ನು ನಡೆಸಲಾಗುತ್ತಿದೆ.

ಬೆಂಗಳೂರು ಉತ್ತರ ನಗರ ಪಾಲಿಕೆಯ ಜೆ.ಪಿ. ಪಾರ್ಕ್ ವಾರ್ಡ್, ಉತ್ತರ ಕನ್ನಡ ಜಿಲ್ಲೆಯ ಜೊಯಿಡಾ ತಾಲ್ಲೂಕಿನ 46 ಹಳ್ಳಿಗಳು, ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲ್ಲೂಕಿನ 27 ಹಳ್ಳಿಗಳಲ್ಲಿ ಜನಗಣತಿ ಪ್ರಕ್ರಿಯೆಗೆ ಮನೆಪಟ್ಟಿ ಸಿದ್ಧಪಡಿಸುವ ಕಾರ್ಯ ಆ್ಯಪ್‌ನಲ್ಲಿ ನಡೆಯುತ್ತಿದೆ.

ಪ್ರಬಂಧ ಸ್ಪರ್ಧೆ ಫಲಿತಾಂಶ ಪ್ರಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂವಿಧಾನ ಓದು ಅಭಿಯಾನ–ಕರ್ನಾಟಕದ ಸಹಯೋಗದಲ್ಲಿ ಸರ್ಕಾರಿ ಕಲಾ ಕಾಲೇಜು ಸಂವಿಧಾನದ ಬಗ್ಗೆ ಹಮ್ಮಿಕೊಂಡಿದ್ದ ಪ್ರಬಂಧ ಸ್ಪರ್ಧೆಯ ಫಲಿತಾಂಶ ಪ್ರಕಟವಾಗಿದ್ದು, ಬೆಂಗಳೂರು ನಗರ ವಿಶ್ವವಿದ್ಯಾಲಯದ ವಿದ್ಯಾರ್ಥಿನಿ ಮಾನ್ಯ ಟಿ.ಜಿ. ಪ್ರಥಮ ಸ್ಥಾನ ಪಡೆದಿದ್ದಾರೆ.

ರಾಜ್ಯದ ವಿವಿಧ ಕಾಲೇಜುಗಳ 550ಕ್ಕೂ ಅಧಿಕ ವಿದ್ಯಾರ್ಥಿಗಳು ಸ್ಪರ್ಧೆಯಲ್ಲಿ ಭಾಗವಹಿಸಿದ್ದರು. ಪ್ರಥಮ ಬಹುಮಾನ ₹15 ಸಾವಿರ ನಗದು ಒಳಗೊಂಡಿದೆ. ಕೋಲಾರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಹರ್ಷಿತ ಎಂ. ದ್ವಿತೀಯ ಬಹುಮಾನ (₹10 ಸಾವಿರ) ಹಾಗೂ ಕಾಡುಗೋಡಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ವಿಭಾ ಎಸ್. ಬಿ. ತೃತೀಯ ಬಹುಮಾನ (₹5 ಸಾವಿರ) ಪಡೆದಿದ್ದಾರೆ.

50 ವಿದ್ಯಾರ್ಥಿಗಳು ಸಮಾಧಾನಕರ ಬಹುಮಾನಕ್ಕೆ ಭಾಜನರಾಗಿದ್ದು, ಬಹುಮಾನವು ತಲಾ ₹1 ಸಾವಿರ ನಗದು ಒಳಗೊಂಡಿದೆ. ಇದೇ 27ರಂದು ಮಧ್ಯಾಹ್ನ 3 ಗಂಟೆಗೆ ಬೆಂಗಳೂರಿನ ಕೆ.ಆರ್. ವೃತ್ತದಲ್ಲಿರುವ ಎಂಜಿನಿಯರ್ ಭವನದಲ್ಲಿ ಬಹುಮಾನ ವಿತರಣೆ ಸಮಾರಂಭ ಹಮ್ಮಿಕೊಳ್ಳಲಾಗಿದೆ. ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್ ಅವರು ಅಧ್ಯಕ್ಷತೆ ವಹಿಸುತ್ತಾರೆ ಎಂದು ಪ್ರಕಟಣೆ ತಿಳಿಸಿದೆ.

01 **ಅಸ್ಸಾಂ - ಅರುಣಾಚಲ - ಮೇಘಾಲಯ** — 13 ದಿನಗಳು
ಗುವಾಹಟಿ, ನಗಾಂವ್, ತೇಜ್ ಪುರ್, ಮಹಾ ಮೃತ್ಯಂಜಯ (ಅಸ್ಸಾಂ), ಬಾಂಡಿಲ್ಲಾ, ತವಾಂಗ್, ಸೆಲಾ ಪಾಸ್ (ಅರುಣಾಚಲ), ಕಾಜೀರಂಗ ನ್ಯಾಷನಲ್ ಪಾರ್ಕ್ (ಅಸ್ಸಾಂ), ಚಿರಾಪುಂಜಿ, ಮಾವ್ಲಿನಾಂಗ್, ದಾವ್ಕಿ, ಶಿಲ್ಲಾಂಗ್ (ಮೇಘಾಲಯ).
ದಿನಾಂಕ: MAR 21. APR 2, 15. OCT 26. NOV 8.
70222 59002


02 **ಕಾಮಾಕ್ಯ - ಅರುಣಾಚಲ – ಮೇಘಾಲಯ** — 11 ದಿನಗಳು
ಗುವಾಹಟಿ, ನಗಾಂವ್, ತೇಜ್ ಪುರ್, ಮಹಾ ಮೃತ್ಯಂಜಯ (ಅಸ್ಸಾಂ), ಬಾಂಡಿಲ್ಲಾ, ತವಾಂಗ್, ಸೆಲಾ ಪಾಸ್ (ಅರುಣಾಚಲ), ಚಿರಾಪುಂಜಿ, ಮಾವ್ಲಿನಾಂಗ್, ದಾವ್ಕಿ, ಶಿಲ್ಲಾಂಗ್ (ಮೇಘಾಲಯ).
ದಿನಾಂಕ: APR 27. MAY 8. AUG 1, 12. 23. SEP 3, 14, 25. OCT 4, 15.
70222 59002

03 **ಕಾಜೀರಂಗ – ಕಾಮಾಕ್ಯ - ಮೇಘಾಲಯ** — 8 ದಿನಗಳು
ಗುವಾಹಟಿ, ನಗಾಂವ್, ಮಹಾ ಮೃತ್ಯಂಜಯ (ಅಸ್ಸಾಂ), ಕಾಜೀರಂಗ ನ್ಯಾಷನಲ್ ಪಾರ್ಕ್ (ಅಸ್ಸಾಂ), ಚಿರಾಪುಂಜಿ, ಮಾವ್ಲಿನಾಂಗ್, ದಾವ್ಕಿ, ಶಿಲ್ಲಾಂಗ್ (ಮೇಘಾಲಯ).
ದಿನಾಂಕ: JAN 10, 17, 24. FEB 14, 21, 28. MAR 7, 14. NOV 21, 28. DEC 5, 12, 19.
70222 59002


04 **ಪೂರ್ವ ಭಾರತ ಪ್ರವಾಸ** — 13 ದಿನಗಳು
ಭುವನೇಶ್ವರ, ಧವಳಗಿರಿ, ಸಾಕ್ಷಿಗೋಪಾಲ, ಜಗನ್ನಾಥ ಪುರಿ, ಕೊನಾರ್ಕ್, ಚಿಲಿಕ ಲೇಕ್, ದಕ್ಷಿಣೇಶ್ವರ, ಕಲ್ಕತ್ತಾ, ಗಂಗಾ ಸಾಗರ, ಹೌರಾ, ಸಿಲಿಗುರಿ, ಮಿರಿಕ್, ಡಾರ್ಜಿಲಿಂಗ್, ತ್ಸಾಂಗೋ ಸರೋವರ, ಗ್ಯಾಂಗ್ ಟಕ್, ನವಜಲಪೈಗುರಿ
ದಿನಾಂಕ: JAN 19. FEB 16. MAR 16. APR 13. MAY 11. JUN 15.
70222 59008

05 **ಪುರಿ – ಕೊನಾರ್ಕ್ - ಕಲ್ಕತ್ತಾ** — 6 ದಿನಗಳು
ಭುವನೇಶ್ವರ, ಧವಳಗಿರಿ, ಸಾಕ್ಷಿಗೋಪಾಲ, ಜಗನ್ನಾಥ ಪುರಿ, ಕೊನಾರ್ಕ್, ಚಿಲಿಕ ಲೇಕ್, ದಕ್ಷಿಣೇಶ್ವರ, ಕಲ್ಕತ್ತಾ, ಗಂಗಾ ಸಾಗರ, ಹೌರಾ.
ದಿನಾಂಕ: JAN 8, 14. FEB 5, 11. MAR 5, 11. APR 2, 8, 30. MAY 6. JUN 4, 10.
93641 04365

06 **ಪೂರ್ವ ಹಿಮಾಲಯ ಪ್ರವಾಸ** — 10 ದಿನಗಳು
ನವಜಲಪೈಗುರಿ, ಡಾರ್ಜಿಲಿಂಗ್, ಗ್ಯಾಂಗ್ ಟಕ್, ತ್ಸಾಂಗೋ ಸರೋವರ, ನಮ್ಚಿ ಚಾರ್ ಧಾಮ್, ಪೆಲ್ಲಿಂಗ್, ಪೆಮಾಯಾಂಗ್ಟ್ಸೆ, ಕಾಲಿಮ್ ಪಾಂಗ್
ದಿನಾಂಕ: JAN 25. FEB 22. MAR 22. APR 19. MAY 17. JUN 21.
70222 59008

07 **ಕಲ್ಕತ್ತಾ - ಡಾರ್ಜಿಲಿಂಗ್ – ಗ್ಯಾಂಗ್ ಟಕ್** — 9 ದಿನಗಳು
ಹೌರಾ, ದಕ್ಷಿಣೇಶ್ವರ, ಕಲ್ಕತ್ತಾ, ಸಿಲಿಗುರಿ, ಡಾರ್ಜಿಲಿಂಗ್, ತ್ಸಾಂಗೋ ಸರೋವರ, ಗ್ಯಾಂಗ್ ಟಕ್, ನವಜಲಪೈಗುರಿ.
ದಿನಾಂಕ: JAN 22. FEB 19. MAR 19. APR 16. MAY 14. JUN 18.
70222 59008

08 **ಭುವನೇಶ್ವರ - ಪುರಿ – ಕೊನಾರ್ಕ್** — 4 ದಿನಗಳು
ಭುವನೇಶ್ವರ, ಧವಳಗಿರಿ, ಸಾಕ್ಷಿಗೋಪಾಲ, ಜಗನ್ನಾಥ ಪುರಿ, ಕೊನಾರ್ಕ್, ಚಿಲಿಕ ಲೇಕ್
ದಿನಾಂಕ: JAN 5. FEB 2. MAR 2, 30. APR 27. MAY 2. JUN 1, 29. AUG 3, 31.
93641 04365


09 **ಗುಜರಾತ್ ವಿಶೇಷ ಪ್ರವಾಸ** — 9 ದಿನಗಳು
ಅಹಮದಾಬಾದ್, ಕೆವಡಿಯಾ, ಸರ್ದಾರ್ ವಲ್ಲಭಬಾಯ್ ಸ್ಮಾರಕ, ಭಾವನಗರ, ನಿಷ್ಕಳಂಕ ಮಹಾದೇವ್, ಸೋಮನಾಥ, ವೀರಾವಲ್, ಪೋರಬಂದರ್, ಬೆಟ್ ದ್ವಾರಕ, ನಾಗೇಶ್ವರ್, ದ್ವಾರಕ, ಮಾತೃಗಯಾ (ಸಿದ್ಧಪುರ), ಮೊಧೆರಾ, ಪಟಾನ್.
ದಿನಾಂಕ: JAN 6, 14, 22, 30. FEB 7, 17, 25. MAR 5,13, 21, 31. APR 8, 16, 24.
70222 59001

10 **ರಾಜಸ್ಥಾನ್ ವಿಶೇಷ ಪ್ರವಾಸ** — 10 ದಿನಗಳು
ಜೋಧಪುರ, ಜೈಸಲ್ಮೇರ್, ಸ್ಯಾಮ್ ಸ್ಯಾಂಡ್ ಡ್ಯೂನ್ಸ್, ಬಿಕಾನೇರ್, ಕರಣೀ ಮಾತಾ, ಪುಷ್ಕರ್, ಚಿತ್ತೋರಗಢ, ಉದಯಪುರ, ಜೈಪುರ, ಕುಂಬಾಲ್ ಘರ್.
ದಿನಾಂಕ: JAN 3, 12. 21. FEB 7, 16, 25. MAR 7, 16, 25. APR 4, 13, 22. SEP 5, 14, 23.
80886 35878

11 **ಕಛ್ ಸೌರಾಷ್ಟ್ರ ಗಿರ್** — 13 ದಿನಗಳು
ಅಹಮದಾಬಾದ್, ಕೆವಡಿಯಾ, ಸರ್ದಾರ್ ವಲ್ಲಭಬಾಯ್ ಸ್ಮಾರಕ, ಭಾವನಗರ, ನಿಷ್ಕಳಂಕ ಮಹಾದೇವ್, ಸಾಸಂಗಿರ್, ಸೋಮನಾಥ, ವೀರಾವಲ್, ಪೋರಬಂದರ್, ಬೆಟ್ ದ್ವಾರಕ, ನಾಗೇಶ್ವರ್, ದ್ವಾರಕ, ನಾರಾಯಣ ಸರೋವರ, ಕೋಟೇಶ್ವರ್, ಮಾಂಡ್ವಿ, ಭುಜ್, ರಣ್ ಆಫ್ ಕಛ್, ದೋಡೋರ್, ದಸಾಡ, ಮಾತೃಗಯಾ (ಸಿದ್ಧಪುರ), ಮೊಧೆರಾ, ಪಟಾನ್.
ದಿನಾಂಕ: JAN 8, 20. FEB 5, 17. NOV 4, 16, 30. DEC 2, 14.
70222 59001


12 **ಪಂಚ ದ್ವಾರಕ ಯಾತ್ರಾ** — 10 ದಿನಗಳು
ಅಹಮದಾಬಾದ್, ಸೋಮನಾಥ, ವೀರಾವಲ್, ಪೋರಬಂದರ್, ಬೆಟ್ ದ್ವಾರಕ, ನಾಗೇಶ್ವರ್, ದ್ವಾರಕ, ಮಾತೃಗಯಾ (ಸಿದ್ಧಪುರ), ಮೊಧೆರಾ, ಕಂಕ್ರೋಲಿ, ನಾಥದ್ವಾರ್, ಉದಯಪುರ್, ಡಾಕೋರ್.
ದಿನಾಂಕ: JAN 12, 21. FEB 9, 18. MAR 9, 18. APR 6, 15. AUG 10, 19.
94480 83008


13 **ಮಧ್ಯ ಪ್ರದೇಶ ಪ್ರವಾಸ** — 11 ದಿನಗಳು
ಗ್ವಾಲಿಯರ್, ಭೋಪಾಲ್, ಸಾಂಚಿ, ಇಂದೋರ್, ಉಜ್ಜಯಿನಿ, ಮಾಹೇಶ್ವರ, ಓಂಕಾರೇಶ್ವರ, ಖಜುರಾಹೋ, ಜಬಲ್ ಪುರ್, ಬೇಡಾಘಾಟ್, ಪಾಚ್ ಮಾರಿ
ದಿನಾಂಕ: JAN 8, 18, 29. FEB 8, 19. MAR 1, 12, 22. APR 2, 12, 23. JUL 22.
80886 35878


14 **ಉಜ್ಜಯಿನಿ – ಓಂಕಾರೇಶ್ವರ – ಭೋಪಾಲ್** — 6 ದಿನಗಳು
ಭೋಪಾಲ್, ಸಾಂಚಿ, ಇಂದೋರ್, ಉಜ್ಜಯಿನಿ, ಮಾಹೇಶ್ವರ, ಓಂಕಾರೇಶ್ವರ.
ದಿನಾಂಕ: JAN 8, 13, 18. FEB 5, 10, 15. MAR 5, 10, 15. APR 9, 14, 19. MAY 7, 12. JUN 4, 9.
94480 83008

15 **ಸಪ್ತ ಜ್ಯೋತಿರ್ಲಿಂಗ ದರ್ಶನ** — 11 ದಿನಗಳು
ಪುಣೆ, ಭೀಮಾಶಂಕರ, ನಾಸಿಕ್, ತ್ರಯಂಬಕೇಶ್ವರ, ಶಿರಿಡಿ, ಶನಿ ಶಿಂಗ್ನಾಪುರ, ಘೃಷ್ಣೇಶ್ವರ, ಎಲ್ಲೋರ, ಛತ್ರಪತಿ ಸಂಭಾಜಿನಗರ, ಅಜಂತ, ಓಂಕಾರೇಶ್ವರ, ಉಜ್ಜಯಿನಿ, ಆವುಂದ ನಾಗನಾಥ, ಪರಲಿ ವೈದ್ಯನಾಥ.
ದಿನಾಂಕ: JAN 9, 19. FEB 6, 16. MAR 6, 16. APR 3, 13. MAY 8, 18. AUG 14, 24.
70222 59005

16 **ಅಷ್ಟ ವಿನಾಯಕ ಪಂಚ ಜ್ಯೋತಿರ್ಲಿಂಗ ದರ್ಶನ** — 9 ದಿನಗಳು
ಪುಣೆ, ನಾರಾಯಣ ಪುರ, ಮಹಡ್, ಪರಳಿ, ಭೀಮಾಶಂಕರ, ಲೇನ್ಯಾದ್ರಿ, ಓಜಹಾರ್, ನಾಸಿಕ್, ತ್ರಯಂಬಕೇಶ್ವರ, ಶಿರಿಡಿ, ಶನಿ ಶಿಂಗ್ನಾಪುರ, ಎಲ್ಲೋರ, ಘೃಷ್ಣೇಶ್ವರ, ಛತ್ರಪತಿ ಸಂಭಾಜಿನಗರ, ಆವುಂದ ನಾಗನಾಥ, ಪರಲಿ ವೈದ್ಯನಾಥ, ಪಂಢರಾಪುರ, ಮೊರ ಗಾಂವ್, ತೇವೂರ್, ಸಿದ್ಧಟೆಕ್, ರಂಜನ್ ಗಾಂವ್
ದಿನಾಂಕ: JAN 7, 15. FEB 4, 12. MAR 4, 12. APR 8, 16. MAY 6, 14. AUG 5, 13.
70222 59005

ಶ್ರೀ ಸುಧಾ ಕೋ–ಆಪರೇಟಿವ್ ಬ್ಯಾಂಕ್ ಲಿ.,
ನಂ.195/33, 'ಶ್ರೀ ಸುಧಾ ರಜತ ಭವನ', ಆರ್.ವಿ.ರಸ್ತೆ, ಜಯನಗರ, ಬೆಂಗಳೂರು–560004
ದೂರವಾಣಿ: 26565651, ಫ್ಯಾಕ್ಸ್: 26567189, ಮೊ.: 8867701055
ಇಮೇಲ್ : generalmanager@srisudhabank.com

ಸ್ಥಿರಾಸ್ತಿ ಸ್ವಾಧೀನ ಪ್ರಕಟಣೆ (ಕಾಯ್ದೆ ಭದ್ರತಾ ಆಸಕ್ತಿ (ಜಾರಿ) ನಿಯಮಗಳು,2002ರ ನಿಯಮ 8(1) ರಡಿ ಅನುಬಂಧ IV)

ಆದಾಗಿ, ಕೆಳಸಹಿದಾರರು ಶ್ರೀ ಸುಧಾ ಕೋ–ಆಪ್ ಬ್ಯಾಂಕ್ ಲಿಮಿಟೆಡ್‌ನ ಅಧಿಕೃತ ಅಧಿಕಾರಿ0ಯಾಗಿದ್ದು, ನೋಟೀಸ್‌ನಲ್ಲಿ ತಿಳಿಸಿರುವಂತೆ ದಿನಾಂಕ 03–09–2025 ರಂದು ಇದ್ದಂತೆ ರೂ.26,01,105/– (ಇಪ್ಪತ್ತಾರು ಲಕ್ಷದ ಒಂದು ಸಾವಿರದ ಒಂದು ನೂರ ಐದು ರೂಪಾಯಿಗಳು ಮಾತ್ರ) ಮೊತ್ತವನ್ನು ಸದರಿ ನೋಟೀಸ್ ತಲುಪಿದ ದಿನಾಂಕದಿಂದ 60 ದಿನಗಳ ಒಳಗೆ ಮರುಪಾವತಿ ಮಾಡುವಂತೆ ಸಾಲಗಾರರಾದ **ಶ್ರೀ. ಶಿವಸುಂದರ್ ಹೆಚ್.ಎಲ್. ಬಿನ್ ಲಿಂಗಪ್ಪ** ನಂ.10, 1ನೇ ಮುಖ್ಯ ರಸ್ತೆ, 4ನೇ ಬ್ಲಾಕ್, 4ನೇ ಕ್ರಾಸ್, ಗೊರಗುಂಟೇಪಾಳ್ಯ, ಬೆಂಗಳೂರು–560022 ಮತ್ತು ಜಾಮೀನುದಾರರಾದ **ಶ್ರೀ.ಎಂ.ಮಹಾಲಿಂಗಯ್ಯ ಬಿನ್ ಸಿದ್ದೇಶ್ವರಪ್ಪ** ನಂ–10, 1ನೇ ಮುಖ್ಯ ರಸ್ತೆ, 4ನೇ ಬ್ಲಾಕ್, 4ನೇ ಕ್ರಾಸ್, ಗೊರಗುಂಟೇಪಾಳ್ಯ, ಬೆಂಗಳೂರು – 560022 ಇವರಿಗೆ ಕರೆ ನೀಡಿ ಆರ್ಥಿಕ ಸ್ವತ್ತುಗಳ ಭದ್ರತೆ ಮತ್ತು ಪುನರ್ ರಚನೆ ಮತ್ತು ಭದ್ರತಾ ಆಸಕ್ತಿ ಜಾರಿ ಕಾಯ್ದೆ, 2002ರ ಅನ್ವಯ ಮತ್ತು ಭದ್ರತಾ ಆಸಕ್ತಿ (ಜಾರಿ) ನಿಯಮಗಳು 2002ರ ನಿಯಮ 3 ಓದಿಕೊಂಡಂತೆ ಪ್ರಕರಣ 13(12) ರ ಅನ್ವಯ ಪ್ರದತ್ತವಾದ ಅಧಿಕಾರ ಚಲಾಯಿಸಿ ದಿನಾಂಕ: 04–09–2025 ರಂದು ಡಿಮ್ಯಾಂಡ್ ನೋಟಿಸ್ ನೀಡಿದ್ದರೂ ಸಹ, ಸಾಲಗಾರರು ಸಾಲದ ಬಾಕಿಯನ್ನು ಮರುಪಾವತಿ ಮಾಡಲು ಹಾಗೂ ಜಾಮೀನುದಾರರುಗಳು ಸಾಲಗಾರರಿಂದ ಸಾಲ ಮರುಪಾವತಿ ಮಾಡಿಸುವಲ್ಲಿ ವಿಫಲರಾಗಿರುವುದರಿಂದ ಸಾಲಗಾರರಿಗೆ, ಜಾಮೀನುದಾರರಿಗೆ ಮತ್ತು ಸಾಮಾನ್ಯವಾಗಿ ಸಾರ್ವಜನಿಕರಿಗೆ ಈ ಮೂಲಕ ಸೂಚಿಸುವುದೇನೆಂದರೆ, ಭದ್ರತಾ ಆಸಕ್ತಿ (ಜಾರಿ) ನಿಯಮಗಳು, 2002 ರ ನಿಯಮ 8 ಓದಿಕೊಂಡಂತೆ ಕಾಯ್ದೆಯ ಪ್ರಕರಣ 13 ರ ಉಪಪ್ರಕರಣ (4) ರ ಅನ್ವಯ ಪ್ರದತ್ತವಾಗಿರುವ ಅಧಿಕಾರಗಳನ್ನು ಚಲಾಯಿಸಿ ಈ ಕೆಳಗೆ ವಿವರಿಸಿರುವ ಸ್ವತ್ತನ್ನು ದಿನಾಂಕ:15/11/2025 ರಂದು ಕೆಳಸಹಿದಾರರು **ಸ್ವಾಧೀನಪಡಿಸಿಕೊಂಡಿದ್ದಾರೆ.** ನಿರ್ದಿಷ್ಟವಾಗಿ ಸಾಲಗಾರರಿಗೆ, ಜಾಮೀನುದಾರರಿಗೆ ಮತ್ತು ಸಾಮಾನ್ಯವಾಗಿ ಸಾರ್ವಜನಿಕರಿಗೆ ಈ ಮೂಲಕ ಎಚ್ಚರಿಸುವುದೇನೆಂದರೆ, 0ಯಾರೂ ಕೂಡ ಸದರಿ ಸ್ವತ್ತಿನ ಬಗ್ಗೆ ವ್ಯವಹರಿಸಬಾರದು. ಒಂದು ವೇಳೆ 0ಯಾರಾದರೂ, ಸದರಿ "ಸ್ವತ್ತಿನ ಸಂಬಂಧ ವ್ಯವಹರಿಸಿದ್ದೇ ಆದರೆ ಅದು "ಶ್ರೀ ಸುಧಾ ಕೋ–ಆಪರೇಟಿವ್ ಬ್ಯಾಂಕ್ ಲಿ, ಟಿ. ದಾಸರಹಳ್ಳಿ ಶಾಖೆ, ಬೆಂಗಳೂರು–560057". ಇದರ ಸಾಲದ ಖಾತೆ ಸಂಖ್ಯೆ ಐ.ಪಿ.ಹೆಚ್–801700000010 ರ ಸಂಬಂಧ ದಿನಾಂಕ:24/11/2025 ರಂದು ಇದ್ದಂತೆ ಅಸಲು, ಬಡ್ಡಿ ಮತ್ತಿತರೆ ಬಾಬ್ತು ಬರಬೇಕಾಗಿರುವ ರೂ.26,17,510/– (ಇಪ್ಪತ್ತಾರು ಲಕ್ಷ ಹದಿನೇಳು ಸಾವಿರದ ಐದು ನೂರ ಹತ್ತು ರೂಪಾಯಿಗಳು ಮಾತ್ರ) ಜೊತೆಗೆ ಖಾತೆ ಚುಕ್ತಾ ದಿನಾಂಕದವರೆಗಿನ ಬಡ್ಡಿ ಮತ್ತಿತರೆ ಖರ್ಚುಗಳ ಬಾಬ್ತು ಪಾವತಿಗೊಳಪಡುತ್ತದೆ. ಭದ್ರತಾ ಆಸ್ತಿಗಳನ್ನು ಬಿಡಿಸಿಕೊಳ್ಳಲು ಲಭ್ಯವಿರುವ ಸಮಯದ ಸಂಬಂಧ ಕಾಯ್ದೆಯ ಪ್ರಕರಣ 13(8) ರ ಉಪಬಂಧಗಳ ಬಗ್ಗೆ ಸಾಲಗಾರರ ಗಮನ ಸೆಳೆಯಲಾಗಿದೆ.

ಸಾಲಗಾರರ ಹೆಸರು

ಶ್ರೀ ಶಿವಸುಂದರ್ ಹೆಚ್.ಎಲ್. ಬಿನ್ ಲಿಂಗಪ್ಪ

ಜಾಮೀನುದಾರರ ಹೆಸರು



ಶ್ರೀ ಎಂ.ಮಹಾಲಿಂಗಯ್ಯ ಬಿನ್ ಸಿದ್ದೇಶ್ವರಪ್ಪ

ಶ್ರೀ. ಹೆಚ್.ಎಲ್. ಶಿವಸುಂದರ್ ಬಿನ್ ಶ್ರೀ. ಲಿಂಗಪ್ಪ ರವರಿಗೆ ಸೇರಿದ ಸ್ವತ್ತಿನ ವಿವರ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮಾಜಿ 11ನೇ ವಾರ್ಡ್ ಹಾಲಿ 38ನೇ ವಾರ್ಡ್‌ಗೆ ಸೇರಿದ ಬೆಂಗಳೂರು ನಗರ, ಹಿಂದೆ ಜಾರಕಬಂಡೆ ಕಾವಲು ದಾಖಲೆ, ಗೊರಗುಂಟೆ ಪಾಳ್ಯದ ಸರ್ವೆ ನಂ.07ರ ಪೈಕಿ 10ನೇ ನಂಬರು ಸ್ವತ್ತಾಗಿ, ನಂತರ ಖಾತಾ ಪ್ರಕಾರ ಗೊರಗುಂಟೆಪಾಳ್ಯ, 4ನೇ ಬ್ಲಾಕ್, 4ನೇ ಅಡ್ಡ ರಸ್ತೆಯಲ್ಲಿರುವ 10ನೇ ನಂಬರು ಪೈಕಿ ಉತ್ತರಾರ್ಧ ಭಾಗದ ಸ್ವತ್ತಾಗಿ ಹಾಲಿ ಕಾರ್ಪೊರೇಷನ್ ಪಿಐಡಿ ನಂ.11–41–10/1, ಮುನ್ಸಿಫಲ್ 10/1ನೇ ನಂಬರು ಸ್ಥಿರಾಸ್ತಿಗೆ ಚೆಕ್ಕುಬಂದಿ: **ಪೂರ್ವಕ್ಕೆ :** ರಸ್ತೆ, **ಪಶ್ಚಿಮಕ್ಕೆ :** ಶ್ರೀ. ಸೊಣ್ಣಪ್ಪ ರವರ ಸ್ವತ್ತು, **ಉತ್ತರಕ್ಕೆ :** ಶ್ರೀ. ಸೊಣ್ಣಪ್ಪ ರವರ ಸ್ವತ್ತು, **ದಕ್ಷಿಣಕ್ಕೆ:** ಇದೇ ಮಾಜಿ ನಂ.10ನೇ ನಂಬರು ಪೈಕಿ ಹೆಚ್. ಎಲ್.ಕೃಷ್ಣಮೂರ್ತಿ ರವರ ದಕ್ಷಿಣಾರ್ಧ ಭಾಗದ ಸ್ವತ್ತು. ಈ ಮಧ್ಯೆಯಿರುವ, **ಪೂರ್ವ ಪಶ್ಚಿಮ:** 30–00 ಅಡಿಗಳು ಮತ್ತು **ಉತ್ತರ ದಕ್ಷಿಣ:** 12–50 ಅಡಿಗಳು **ಒಟ್ಟು 375–00 ಚದರ ಅಡಿಗಳ** ನಿವೇಶನವನ್ನೊಳಗೊಂಡ ಪೂರ್ಣ ಕಟ್ಟಡ.

ಸಹಿ/–
ಅಧಿಕೃತ ಅಧಿಕಾರಿ/ಪ್ರಧಾನ ವ್ಯವಸ್ಥಾಪಕರು
ಶ್ರೀ ಸುಧಾ ಕೋ–ಆಪರೇಟಿವ್ ಬ್ಯಾಂಕ್ ಲಿ., ಬೆಂಗಳೂರು–560004

ಸ್ಥಳ: ಬೆಂಗಳೂರು
ದಿನಾಂಕ: 24/11/2025

ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ
ಎಲ್.ಆರ್.ಡಿ.ಇ. ಕಟ್ಟಡ, ನಂ.1, ಅಲಿ ಆಸ್ಕರ್ ರಸ್ತೆ, ಬೆಂಗಳೂರು–560 052. ದೂರವಾಣಿ ಸಂಖ್ಯೆ: 22263479

ಸಂಖ್ಯೆ: STRRPA/TP/CLU/101/2025-26 ದಿನಾಂಕ : 25.11.2025

"ಪ್ರಕಟಣೆ"

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14(ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು "ವ್ಯವಸಾಯ" ವಲಯದಿಂದ "ವಾಣಿಜ್ಯ" ವಲಯಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತವೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು ಮತ್ತು ವಿಳಾಸ	ತಾಲ್ಲೂಕು	ಹೋಬಳಿ	ಗ್ರಾಮ	ಸ.ನಂ.	ವಿಸ್ತೀರ್ಣ ಎ–ಗು	ಅನುಮೋದಿತ ಮಹಾಯೋಜನೆಯಂತೆ ಭೂಉಪಯೋಗ	ಬದಲಾವಣೆ ಕೋರಿರುವ ಭೂಉಪಯೋಗ
1	2	3	4	5	6	7	8	9
1	ಶ್ರೀ ಎಸ್.ಎನ್. ರವಿಕುಮಾರ್ ಬಿನ್ ಎ.ಎಸ್. ನಾರಾಯಣರಾಜು, ನಂ.12, ಸ್ಟಾನ್ ಬೆರಿ ಕೋರ್ಟ್, ಪೆಂಟ್‌ಹೌಸ್, 60ಅಡಿ ರಸ್ತೆ, ಸಂಜಯನಗರ್, ಬೆಂಗಳೂರು–94	ದೊಡ್ಡಬಳ್ಳಾಪುರ	ಕಸಬಾ	ಮಂಡಿಬ್ಯಾಡರಹಳ್ಳಿ	67 68 69 70	2–00 2–00 2–00 ಪೈಕಿ 1–23½ 2–00	ವ್ಯವಸಾಯ	ವಾಣಿಜ್ಯ

ಷರಾ:–ಪ್ರಸ್ತಾವನೆಯಲ್ಲಿನ ಪ್ರಶ್ನಿತ ಜಮೀನಿನಲ್ಲಿ ಯೋಜಿತ ಬೆಳವಣಿಗೆಯ ವಾಣಿಜ್ಯ ಚಟುವಟಿಕೆಯನ್ನು ಅಭಿವೃದ್ಧಿಪಡಿಸುವ ಉದ್ದೇಶವನ್ನು ಹೊಂದಿದ್ದು, ಸದರಿ ಜಮೀನಿನಲ್ಲಿ ಅಭಿವೃದ್ಧಿ ಕಾರ್ಯ ಕೈಗೊಂಡಲ್ಲಿ ವಾಣಿಜ್ಯ ಉದ್ದೇಶದ ಬೇಡಿಕೆಗಳನ್ನು ಪೂರೈಸುವ ಕಾರ್ಯ ಹಾಗೂ ಮೂಲಭೂತ ಸೌಕರ್ಯ ಚಟುವಟಿಕೆಯಿಂದಾಗಿ ಸಾರ್ವಜನಿಕರಿಗೆ ಉದ್ಯೋಗಾವಕಾಶ ಪೂರೈಸುವ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿರುತ್ತದೆಂದು ಸಾರ್ವಜನಿಕ ಹಿತಾಸಕ್ತಿ ಅಂಶವಾಗಿ ತಿಳಿಸಿರುತ್ತಾರೆ.

ಸಹಿ/–
ಸದಸ್ಯ ಕಾರ್ಯದರ್ಶಿಗಳು ಹಾಗೂ
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು,
ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ, ಬೆಂಗಳೂರು.

DIPR/CP/4021/NR/2025-26

prajavani.net prajavani
ಬುಧವಾರ, ನವೆಂಬರ್ 26, 2025
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಟಿ20 ವಿಶ್ವಕಪ್‌ಗೆ ರೋಹಿತ್ ರಾಯಭಾರಿ

ಭಾರತ ತಂಡದ ಮಾಜಿ ನಾಯಕ ರೋಹಿತ್ ಶರ್ಮಾ ಅವರು ಭಾರತ ಮತ್ತು ಶ್ರೀಲಂಕಾದಲ್ಲಿ ಮುಂದಿನ ವರ್ಷ ನಡೆಯಲಿರುವ ಟಿ20 ವಿಶ್ವಕಪ್ ಟೂರ್ನಿಯ ರಾಯಭಾರಿಯಾಗಿ ನೇಮಕವಾಗಿದ್ದಾರೆ

ಪ್ರತಿಭಟನೆ

ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ತ್ರಿಪ್ರಾ ವಿದ್ಯಾರ್ಥಿ ಸಂಘಟನೆಯ (ಟಿಎಸ್‌ಎಫ್) ಸದಸ್ಯೆ ತ್ರಿಪುರದ ಅಗರ್ತಲಾದಲ್ಲಿ ಪ್ರತಿಭಟನೆ ನಡೆಸಿದರು

ಚಿನ್ನದ ಬೆಲೆ ₹3,500 ಏರಿಕೆ 10
'ಬಿಹಾರ ಮಾದರಿಯಲ್ಲಿ ಮದ್ಯ ನಿಷೇಧಿಸಿ' 5

ಅಕ್ರಮ ಗಳಿಕೆ: ಸ್ಥಿರಾಸ್ತಿಗೆ ಹೂಡಿಕೆ

₹35.31 ಕೋಟಿಯ ಸ್ವತ್ತು ಪತ್ತೆ ಮಾಡಿದ ಲೋಕಾಯುಕ್ತ • ₹78 ಲಕ್ಷ ನಗದು ವಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆದಾಯಕ್ಕಿಂತ ಹೆಚ್ಚು ಆಸ್ತಿ ಗಳಿಸಿದ ಪ್ರಕರಣದಲ್ಲಿ ರಾಜ್ಯ ಸರ್ಕಾರದ ವಿವಿಧ ಇಲಾಖೆಗಳ ಅಧಿಕಾರಿಗಳಿಗೆ ಸೇರಿದ 47 ಸ್ಥಳಗಳಲ್ಲಿ ಶೋಧ ನಡೆಸಿರುವ ಲೋಕಾಯುಕ್ತ ಪೊಲೀಸರು ₹35.31 ಕೋಟಿ ಮೌಲ್ಯದ ಸ್ವತ್ತು ಪತ್ತೆಮಾಡಿದ್ದಾರೆ. ಬಹುತೇಕ ಅಧಿಕಾರಿಗಳು ನಿವೇಶನ, ಮನೆ ಮತ್ತು ಕೃಷಿ ಜಮೀನುಗಳ ಮೇಲೆ ಹೂಡಿಕೆ ಮಾಡಿದ್ದಾರೆ.

ರಾಜ್ಯದ ವಿವಿಧ ಲೋಕಾಯುಕ್ತ ಪೊಲೀಸ್ ಠಾಣೆಗಳಲ್ಲಿ ದಾಖಲಾಗಿದ್ದ ದೂರುಗಳ ಆಧಾರದಲ್ಲಿ ಮಂಗಳವಾರ ಬೆಳಿಗ್ಗೆಯೇ, 10 ಸರ್ಕಾರಿ ಅಧಿಕಾರಿಗಳಿಗೆ ಸೇರಿದ ಸ್ಥಳಗಳ ಮೇಲೆ ದಾಳಿ ನಡೆಸಲಾಗಿತ್ತು.

ಎಲ್ಲ ಹತ್ತು ಅಧಿಕಾರಿಗಳ ಬಳಿ ಒಟ್ಟು 50 ನಿವೇಶನ, 23 ಮನೆ–ಬಂಗಲೆ, 78 ಎಕರೆ 21 ಗುಂಟೆಗಳಷ್ಟು ಕೃಷಿ ಜಮೀನು ಪತ್ತೆಯಾಗಿದೆ. ಈ ಎಲ್ಲವುಗಳ ಮೌಲ್ಯ ₹22.31 ಕೋಟಿಯಷ್ಟಾಗುತ್ತದೆ. ಈ ಅಧಿಕಾರಿಗಳು ತಮ್ಮ ಕುಟುಂಬದವರು, ಸಂಬಂಧಿಕರು ಮತ್ತು ಆಪ್ತರ ಹೆಸರಿನಲ್ಲಿ ಕೃಷಿ ಜಮೀನು, ನಿವೇಶನ ಮತ್ತು ವಾಹನಗಳನ್ನು ಹೊಂದಿರುವುದು ಗೊತ್ತಾಗಿದೆ.

ಈ ಅಧಿಕಾರಿಗಳು ಸ್ಥಿರಾಸ್ತಿಯ ನಂತರ, ಚಿನ್ನಾಭರಣಗಳ ಮೇಲೆ ಹೆಚ್ಚಿನ ಹೂಡಿಕೆ ಮಾಡಿದ್ದಾರೆ. ದಾಳಿಯ ವೇಳೆ ಒಟ್ಟು ₹5.91 ಕೋಟಿ ಮೌಲ್ಯದಷ್ಟು ಚಿನ್ನಾಭರಣ, ಬೆಳ್ಳಿಯ ವಸ್ತುಗಳು ಪತ್ತೆಯಾಗಿವೆ.

ಕಾರ್ಯಪಾಲಕ ಎಂಜಿನಿಯರ್ ಬಳಿ ಗರಿಷ್ಠ ಆಸ್ತಿ: ಹಾವೇರಿ ಜಿಲ್ಲಾ ನಗರಾಭಿವೃದ್ಧಿ ಘಟಕದ ಕಾರ್ಯಪಾಲಕ ಎಂಜಿನಿಯರ್ ಶೇಖಪ್ಪ ಸಣ್ಣಪ್ಪ ಮಟ್ಟಿಕಟ್ಟಿ ಅವರಿಗೆ ಸೇರಿದ ₹5.36 ಕೋಟಿ ಮೌಲ್ಯದ ಆಸ್ತಿ ಇದ್ದು, ಮಂಗಳವಾರದ ದಾಳಿಯ ವೇಳೆ ಪತ್ತೆಯಾದ ಗರಿಷ್ಠ ಮೊತ್ತ ಇದಾಗಿದೆ.

ಬೆಂಗಳೂರಿನ ಎಲೆಕ್ಟ್ರಾನಿಕ್ಸ್ ಸಿಟಿ ಪ್ರಾದೇಶಿಕ ಸಾರಿಗೆ ಕಚೇರಿ (ಆರ್‌ಟಿಒ) ಸೂಪರಿಂಟೆಂಡೆಂಟ್ ಕೃಷ್ಣಮೂರ್ತಿ ಪಿ. ಅವರ ಬಳಿ ₹4.26 ಕೋಟಿ ಮೌಲ್ಯದ ಆಸ್ತಿ ಪತ್ತೆಯಾಗಿದೆ.

6

ಯಾವುದರ ಮೇಲೆ, ಎಷ್ಟು ಹೂಡಿಕೆ...

- ₹22.31 ಕೋಟಿ ಸ್ಥಿರಾಸ್ತಿಗಳು
- ₹78.40 ಲಕ್ಷ ನಗದು
- ₹5.91 ಕೋಟಿ ಚಿನ್ನಾಭರಣ
- ₹2.33 ಕೋಟಿ ವಾಹನಗಳು
- ₹3.96 ಕೋಟಿ ಗೃಹೋಪಯೋಗಿ ವಸ್ತುಗಳು, ಷೇರು, ಮ್ಯೂಚುವಲ್ ಫಂಡ್

ಮಂಡ್ಯ ನಗರಸಭೆ ಕಾರ್ಯಾಲಯದ ಸಮುದಾಯ ಸಂಘಟನಾಧಿಕಾರಿ ಸಿ.ಪುಟ್ಟಸ್ವಾಮಿ ಅವರ ಬಂಗಲೆ

ಅಧಿಕಾರಿಗಳ ಆಸ್ತಿ ವಿವರ

ಕೃಷ್ಣಮೂರ್ತಿ ಪಿ., ಕಚೇರಿ ಸೂಪರಿಂಟೆಂಡೆಂಟ್, ಆರ್‌ಟಿಒ, ಎಲೆಕ್ಟ್ರಾನಿಕ್ಸ್ ಸಿಟಿ, ಬೆಂಗಳೂರು
- ₹**3.34** ಕೋಟಿ ಮೌಲ್ಯದ **7** ನಿವೇಶನ, **4** ಮನೆ, **5** ಎಕರೆ 30 ಗುಂಟೆ ಕೃಷಿ ಜಮೀನು
- ₹**22** ಲಕ್ಷ ನಗದು, ₹**32** ಲಕ್ಷದ ಚಿನ್ನಾಭರಣ
- ₹**22** ಲಕ್ಷದ ವಾಹನ
- ₹**16** ಲಕ್ಷ ಮೌಲ್ಯದ ಹೂಡಿಕೆ ಮತ್ತು ಗೃಹೋಪಯೋಗಿ ವಸ್ತುಗಳು
- ₹**4.26** ಕೋಟಿ ಆಸ್ತಿಯ ಒಟ್ಟು ಮೌಲ್ಯ

ಸಿ.ಪುಟ್ಟಸ್ವಾಮಿ, ಸಮುದಾಯ ಸಂಘಟನಾಧಿಕಾರಿ, ನಗರಸಭೆ ಕಾರ್ಯಾಲಯ, ಮಂಡ್ಯ ಟೌನ್, ಮಂಡ್ಯ
- ₹**3.48** ಕೋಟಿ ಮೌಲ್ಯದ **8** ನಿವೇಶನ, **2** ಮನೆ, **12** ಎಕರೆ ಕೃಷಿ ಜಮೀನು
- ₹**1.75** ಲಕ್ಷ ನಗದು
- ₹**25** ಲಕ್ಷದ ಚಿನ್ನಾಭರಣ
- ₹**33** ಲಕ್ಷದ ವಾಹನ
- ₹**29.25** ಲಕ್ಷ ಮೌಲ್ಯದ ಹೂಡಿಕೆ ಮತ್ತು ಗೃಹೋಪಯೋಗಿ ವಸ್ತುಗಳು
- ₹**4.37** ಕೋಟಿ ಆಸ್ತಿಯ ಒಟ್ಟು ಮೌಲ್ಯ

ಶೇಖಪ್ಪ ಸಣ್ಣಪ್ಪ ಮಟ್ಟಿಕಟ್ಟಿ, ಕಾರ್ಯಪಾಲಕ ಎಂಜಿನಿಯರ್, ಜಿಲ್ಲಾ ನಗರಾಭಿವೃದ್ಧಿ ಘಟಕ, ಹಾವೇರಿ
- ₹**3.67** ಕೋಟಿ ಮೌಲ್ಯದ **14** ನಿವೇಶನ, **3** ಮನೆ
- ₹**10.44** ಲಕ್ಷ ನಗದು
- ₹**25.40** ಲಕ್ಷದ ಚಿನ್ನಾಭರಣ
- ₹**15** ಲಕ್ಷದ ವಾಹನ
- ₹**1.18** ಕೋಟಿ ಮೌಲ್ಯದ ಹೂಡಿಕೆ ಮತ್ತು ಗೃಹೋಪಯೋಗಿ ವಸ್ತುಗಳು
- ₹**5.36** ಕೋಟಿ ಆಸ್ತಿಯ ಒಟ್ಟು ಮೌಲ್ಯ

ಐಎಎಸ್ ಅಧಿಕಾರಿ ಬೀಳಗಿ ಸಾವು

ಪ್ರಜಾವಾಣಿ ವಾರ್ತೆ

ಕಲಬುರಗಿ/ ಜೇವರ್ಗಿ: ಪಟ್ಟಣ ಸಮೀಪದ ಬೈಪಾಸ್‌ನ ಗೌನಳ್ಳಿ ಕ್ರಾಸ್ ಬಳಿ ಮಂಗಳವಾರ ಸಂಜೆ ರಸ್ತೆ ಅಪಘಾತದಲ್ಲಿ ರಾಜ್ಯ ಖನಿಜ ನಿಗಮದ ವ್ಯವಸ್ಥಾಪಕ ನಿರ್ದೇಶಕ, ಐಎಎಸ್ ಅಧಿಕಾರಿ ಮಹಾಂತೇಶ ಬೀಳಗಿ (51) ಸೇರಿ ಮೂವರು ಮೃತಪಟ್ಟಿದ್ದಾರೆ.

ಮಹಾಂತೇಶ ಬೀಳಗಿ ಅವರ ಸಹೋದರ ಸಂಬಂಧಿಗಳಾದ ಶಂಕರ ಬೀಳಗಿ (55), ಈರಣ್ಣ ಬೀಳಗಿ (53) ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಕಾರಿನಲ್ಲಿದ್ದ ಮತ್ತೊರ್ವ ಸಂಬಂಧಿ ಈರಣ್ಣ ಶಿರಸಂಗಿ ಹಾಗೂ ಕಾರು ಚಾಲಕನಿಗೆ ಗಾಯಗಳಾಗಿದ್ದು, ಅವರಿಗೆ ಚಿಕಿತ್ಸೆ ನೀಡಲಾಗುತ್ತಿದೆ.

ಮಹಾಂತೇಶ ಬೀಳಗಿ

ಕಲಬುರಗಿಯಲ್ಲಿ ಬುಧವಾರ ನಡೆಯಲಿರುವ ಅಣ್ಣನ ಮಗಳ ಮದುವೆಯಲ್ಲಿ ಪಾಲ್ಗೊಳ್ಳಲು ಮಹಾಂತೇಶ ಬೀಳಗಿ ಅವರು ಸಂಬಂಧಿಕರೊಂದಿಗೆ ಸ್ವಂತ ಊರು ಬೆಳಗಾವಿ ಜಿಲ್ಲೆ ರಾಮದುರ್ಗದಿಂದ ಇನೊವಾ ಕಾರಿನಲ್ಲಿ ಬರುತ್ತಿದ್ದರು. ಚಾಲಕನ ನಿಯಂತ್ರಣ ತಪ್ಪಿದ ಕಾರು ತಡೆಗೋಡೆಗೆ ಡಿಕ್ಕಿ ಹೊಡೆದು ಪಲ್ಟಿಯಾಗಿ ಜಮೀನಿಗೆ ಉರುಳಿತ್ತು. ಶಂಕರ ಬೀಳಗಿ, ಈರಣ್ಣ ಬೀಳಗಿ ಸ್ಥಳದಲ್ಲೇ ಮೃತಪಟ್ಟರು. ಮಹಾಂತೇಶ ಬೀಳಗಿ ಅವರು ಚಿಕಿತ್ಸೆಗಾಗಿ ಕಲಬುರಗಿಗೆ ತರುವ ಮಾರ್ಗಮಧ್ಯದಲ್ಲೇ ಕೊನೆಯುಸಿರೆಳೆದರು.

ಮಹಾಂತೇಶ ಬೀಳಗಿ ಅವರಿಗೆ ಪತ್ನಿ, ಪುತ್ರಿ ಇದ್ದಾರೆ.

5

'ಎಐ' ಮನುಷ್ಯರ ಸೃಷ್ಟಿಸಿ ಜೂಜು, ಸಾವಿರಾರು ಕೋಟಿ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೆಹಲಿ ಮತ್ತು ಗುರುಗ್ರಾಮದ ಎರಡು ಗೇಮಿಂಗ್ ಕಂಪನಿಗಳು ಮನುಷ್ಯರ ಸ್ವರೂಪದಲ್ಲಿ ಆಟವಾಡುವಂತೆ ರೂಪಿಸಿದ್ದ ಕೃತಕ ಬುದ್ಧಿಮತ್ತೆ ತಂತ್ರಾಂಶಗಳ ಮೂಲಕ ಆನ್‌ಲೈನ್ ಜೂಜು ನಡೆಸಿ, ಚಂದಾದಾರರಿಗೆ ಸಾವಿರಾರು ಕೋಟಿ ರೂಪಾಯಿ ವಂಚಿಸಿರುವುದನ್ನು ಜಾರಿ ನಿರ್ದೇಶನಾಲಯವು (ಇ.ಡಿ) ಪತ್ತೆ ಮಾಡಿದೆ. ಈ ಕಂಪನಿಗಳಿಗೆ ಸೇರಿದ ₹523.57 ಕೋಟಿ ಮೊತ್ತದ ಠೇವಣಿಗಳನ್ನು ಮುಟ್ಟುಗೋಲು ಹಾಕಿಕೊಂಡಿದೆ.

ಆನ್‌ಲೈನ್ ಜೂಜು ನಿಷೇಧವಿದ್ದರೂ ಅಂತಹ ಗೇಮ್‌ಗಳನ್ನು ಆಡಿಸುತ್ತಿರುವುದರ ಸಂಬಂಧ ವಿನ್‌ಝೋ ಮತ್ತು ಪಾಕೆಟ್ 52 ಎಂಬ ಎರಡು ಗೇಮಿಂಗ್ ಆ್ಯಪ್‌ಗಳ ವಿರುದ್ಧ ಇ.ಡಿಯ ಬೆಂಗಳೂರು ವಲಯ ಕಚೇರಿಯಲ್ಲಿ ದೂರು ದಾಖಲಾಗಿತ್ತು.

5

ಅಯೋಧ್ಯೆಯ ರಾಮ ಮಂದಿರದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಮಂಗಳವಾರ ಧ್ವಜಾರೋಹಣ ನೆರವೇರಿಸಿದರು. ಈ ವೇಳೆ ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್, ಉತ್ತರ ಪ್ರದೇಶ ರಾಜ್ಯಪಾಲೆ ಆನಂದಿಬೆನ್ ಪಟೇಲ್ ಮತ್ತು ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಉಪಸ್ಥಿತರಿದ್ದರು –ಪಿಟಿಐ ಚಿತ್ರ

ಸಮಾರಂಭದಲ್ಲಿ ಭಾವುಕರಾದ ಪ್ರಧಾನಿ ಮೋದಿ

ರಾಮಧ್ವಜ ಆರೋಹಣ

ಪ್ರಜಾವಾಣಿ ವಾರ್ತೆ/ಪಿಟಿಐ

ಅಯೋಧ್ಯೆ: ಅಯೋಧ್ಯೆಯ ರಾಮ ಮಂದಿರದಲ್ಲಿ ಸೇರಿದ್ದ ಲಕ್ಷಾಂತರ ಭಕ್ತರ 'ಜೈ ಶ್ರೀರಾಮ್' ಘೋಷಣೆ ಮಧ್ಯೆ ಪ್ರಧಾನಿ ನರೇಂದ್ರ ಮೋದಿ ಅವರು ಮಂದಿರ ನಿರ್ಮಾಣ ಪೂರ್ಣಗೊಂಡಿದ್ದರ ಸಂಕೇತವಾಗಿ ಮಂಗಳವಾರ 'ರಾಮಧ್ವಜ'ದ ಆರೋಹಣ ನೆರವೇರಿಸಿದರು.

ಮಂದಿರದ ಶಿಖರಕ್ಕೆ 'ರಾಮ ಧ್ವಜ'ವನ್ನು ಆರೋಹಣ ಮಾಡಿದ ವೇಳೆ ಪ್ರಧಾನಿ ಮೋದಿ ಅವರು ಭಾವುಕರಾಗಿದ್ದರು. ಅಲ್ಲಿ ಸೇರಿದ್ದ ಸಾಧು–ಸಂತರು ಕಣ್ಣಾಲಿಗಳು ತೇವಗೊಂಡವು. 'ಎಷ್ಟೋ ವರ್ಷದ ಕಠಿಣ ತಪಸ್ಸಿನಿಂದ ಮಾತ್ರವೇ ಇಂಥ ದೃಶ್ಯಕ್ಕೆ ಸಾಕ್ಷಿಯಾಗಲು ಸಾಧ್ಯ' ಎಂದು ಸಾಧು–ಸಂತರು ಸಂತಸ ವ್ಯಕ್ತಪಡಿಸಿದರು.

ಬೆಳಿಗ್ಗೆ 11.50ರ ಬಳಿಕ ಬಂದ ಅಭಿಜಿತ್ ಮುಹೂರ್ತದಲ್ಲಿ ಪ್ರಧಾನಿ ಮೋದಿ ಅವರು ಧ್ವಜಾರೋಹಣ ನೆರವೇರಿಸಿದರು. 'ಮಂಗಳವಾರವು ವಿವಾಹ ಪಂಚಮಿ ಹಬ್ಬವಾಗಿದ್ದು, ಇದೇ ದಿನ ರಾಮ ಮತ್ತು ಸೀತೆಯು ವಿವಾಹವಾಗಿದ್ದರು ಎಂದು ನಂಬಲಾಗಿದೆ. ಜೊತೆಗೆ 17ನೇ ಶತಮಾನದಲ್ಲಿ ಅಯೋಧ್ಯೆಯಲ್ಲಿ 48 ತಾಸು ಧ್ಯಾನ ಕೈಗೊಂಡಿದ್ದ ಗುರು ತೇಗ್ ಬಹದ್ದೂರ್ ಅವರ ಸ್ಮರಣೆಯ ದಿನವೂ ಹೌದು' ಎಂದು ಪ್ರಧಾನಿ ಕಚೇರಿ ಹೇಳಿದೆ.

11

ರಾಮಧ್ವಜ ಹೇಗಿದೆ?

ರಾಮ ಮಂದಿರದ ಶಿಖರದಿಂದ 161 ಅಡಿ ಮೇಲೆ ಹಾರಾಡುತ್ತಿರುವ ರಾಮ ಧ್ವಜವು ತ್ರಿಭುಜ ಆಕಾರದಲ್ಲಿದ್ದು 11 ಅಡಿ ಅಗಲ ಮತ್ತು 21 ಅಡಿ ಉದ್ದವಿದೆ. ಧ್ವಜವು 2 ಕೆ.ಜಿ. ತೂಕವಿದೆ. ಪ್ಯಾರಾಚೂಟ್‌ನಲ್ಲಿ ಬಳಸುವ ಬಟ್ಟೆಯ ಮಾದರಿಯನ್ನೇ ಧ್ವಜದಲ್ಲಿಯೂ ಬಳಸಲಾಗಿದೆ. ಹಗ್ಗವನ್ನು ನೈಲಾನ್‌ನಿಂದ ಮಾಡಲಾಗಿದೆ. 'ಧ್ವಜದಲ್ಲಿರುವ ಕೇಸರಿ ಬಣ್ಣವು ಬೆಂಕಿಯನ್ನು, ಉದಯಿಸುವ ಸೂರ್ಯನನ್ನೂ ಸಂಕೇತಿಸುತ್ತದೆ. ಇದು ತ್ಯಾಗ ಮತ್ತು ಸಮರ್ಪಣೆಯ ರೂಪಕ' ಎಂದು ಟ್ರಸ್ಟ್ ಹೇಳಿದೆ.

ಏನನ್ನು ಸಂಕೇತಿಸುತ್ತದೆ?

ಧ್ವಜದಲ್ಲಿ 3 ಪ್ರತೀಕಗಳಿವೆ– ಸೂರ್ಯ, ಓಂ ಮತ್ತು ಕೋವಿದಾರಾ ಮರ

ಸೂರ್ಯ: ರಾಮನ 'ಸೂರ್ಯವಂಶ'ದ ಸಂಕೇತ. ಇದು ತ್ರೇತಾಯುಗವನ್ನೂ ಪ್ರತಿನಿಧಿಸುತ್ತದೆ

ಓಂ: ಆಧ್ಯಾತ್ಮದ ಪ್ರತೀಕ

ಕೋವಿದಾರಾ ಮರ: ಕರ್ನಾಟಕದ ಕೆಲವು ಭಾಗಗಳಲ್ಲಿ ಈ ಮರವನ್ನು 'ಬಸವನ ಪಾದ' (ಇದಕ್ಕೆ ಔಷಧೀಯ ಮಹತ್ವವೂ ಇದೆ) ಎಂದೂ ಕರೆಯುತ್ತಾರೆ. ಈ ಮರವು ಅಯೋಧ್ಯೆಯ ಲಾಂಛನವಾಗಿತ್ತು ಎಂದು ರಾಮಾಯಣದಿಂದ ತಿಳಿಯುತ್ತದೆ. ರಾಮ, ಸೀತೆ ಮತ್ತು ಲಕ್ಷ್ಮಣರು ವನವಾಸದಲ್ಲಿದ್ದಾಗ ಭರತನು ಇವರನ್ನು ಅಯೋಧ್ಯೆಗೆ ಹಿಂದಕ್ಕೆ ಕರೆತರಲು ಕಾಡಿಗೆ ಹೋಗುತ್ತಾನೆ. ಆಗ ರಥದಲ್ಲಿದ್ದ ಈ ವೃಕ್ಷದ ಲಾಂಛನವನ್ನು ನೋಡಿಯೇ ಬರುತ್ತಿರುವುದು ಭರತನೇ ಎಂದು ಲಕ್ಷ್ಮಣನು ರಾಮನಿಗೆ ಖಚಿತಪಡಿಸುತ್ತಾನೆ ಎನ್ನುವ ವಿವರ ಈ ರಾಮಾಯಣದಲ್ಲಿದೆ

ಮರಳು ಗಣಿಗಾರಿಕೆ: 8 ಮಂದಿ ವಿರುದ್ಧ ಪ್ರಕರಣ

ಯಾದಗಿರಿ: ಕೃಷ್ಣಾ ನದಿಯಿಂದ 11,500 ಟನ್ ಮರಳು ಗಣಿಗಾರಿಕೆ ನಡೆಸಿ, ಅದನ್ನು ಜಮೀನುಗಳಲ್ಲಿ ಅಕ್ರಮವಾಗಿ ದಾಸ್ತಾನು ಮಾಡಿದ ಆರೋಪದಡಿ ಎಂಟು ಮಂದಿ ವಿರುದ್ಧ ಸುರಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಭಾರತ ಸರ್ಕಾರ, ಬಾಹ್ಯಾಕಾಶ ಇಲಾಖೆ,
ಎಲೆಕ್ಟ್ರೋ ಆಪ್ಟಿಕ್ಸ್ ಸಿಸ್ಟಮ್ಸ್ (ಲಿಯೋಸ್) ಗಾಗಿ ಪ್ರಯೋಗಾಲಯ
ಲಿಯೋಸ್ ನಿರ್ಮಾಣ ಮತ್ತು ನಿರ್ವಹಣಾ ವಿಭಾಗ (ಎಲ್.ಸಿ.ಎಂ.ಡಿ.)
ಪೀಣ್ಯ, ಬೆಂಗಳೂರು - 560058
(ದೂರವಾಣಿ : 080-22685086, 5047, 5094, 28392310)
ತಿದ್ದುಪಡಿ - 1

ಕ್ರ.ಸಂ.	ವಿವರಣೆ	ವಿವರಗಳು
1.	ಕೆಲಸದ ಹೆಸರು	ಲಿಯೋಸ್ & ಆರ್ಯಭಟ ಕ್ಯಾಂಪಸ್, ಲಿಯೋಸ್, ಪೀಣ್ಯ, ಬೆಂಗಳೂರು – 58. ಇಲ್ಲಿ ಡ್ರಪ್ಸ್ ಕಟ್ಟಡಕ್ಕಾಗಿ ಭೂತಾಂತ್ರಿಕ ತನಿಖೆ ನಡೆಸುವುದು.
2.	ಇ-ಟೆಂಡರ್ ನೋಟೀಸ್ ನಂ.	CMG/LEOS/2025-26/LMN-02 dtd : 29.10.2025
3.	ಟೆಂಡರ್‌ಗೆ ಇಡಲಾದ ಅಂದಾಜು ವೆಚ್ಚ	₹ 8.28 ಲಕ್ಷಗಳು
4.	ಟೆಂಡರ್ ಡಾಕ್ಯೂಮೆಂಟ್ ಅನ್ನು ಡೌನ್‌ಲೋಡ್ ಮಾಡಬಹುದಾದ ಅವಧಿ	ದಿನಾಂಕ : 28.11.2025 ರಂದು 16.30 ರವರೆಗೆ ವಿಸ್ತರಿಸಲಾಗಿದೆ
5.	ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ	ದಿನಾಂಕ : 03.12.2025 ರಂದು 14.30 ಗಂಟೆಯವರೆಗೆ
6.	ಟೆಂಡರ್‌ಗಳು ತೆರೆಯುವ ದಿನಾಂಕ ಮತ್ತು ಸಮಯ	ದಿನಾಂಕ : 03.12.2025 ರಂದು 15.00 ಗಂಟೆಯ ನಂತರ

ಆಸಕ್ತ ಟೆಂಡರ್‌ಗಳು ಅರ್ಹತಾ ಮಾನದಂಡಗಳು ಮತ್ತು ಇತರ ವಿವರಗಳಿಗಾಗಿ ವೆಬ್‌ಸೈಟ್ : www.isro.gov.in ನಲ್ಲಿ ಹಿಂದಿ ಆವೃತ್ತಿಯೊಂದಿಗೆ ವಿವರವಾದ ಇ-ಟೆಂಡರ್ ಆಹ್ವಾನ ಪ್ರಕಟಣೆ (NIET) ಅನ್ನು ದಯವಿಟ್ಟು ನೋಡಬಹುದು ಮತ್ತು ಟೆಂಡರ್ ದಾಖಲೆಗಳನ್ನು www.tenderwizard.com/ISRO ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.
ಸಹಿ/-
ಸಮೂಹ ನಿರ್ದೇಶಕರು, ಸಿ & ಎಂ.ಜಿ.

ಭಾರತ ಸರ್ಕಾರ, ಬಾಹ್ಯಾಕಾಶ ಇಲಾಖೆ,
ಎಲೆಕ್ಟ್ರೋ ಆಪ್ಟಿಕ್ಸ್ ಸಿಸ್ಟಮ್ಸ್ (ಲಿಯೋಸ್) ಗಾಗಿ ಪ್ರಯೋಗಾಲಯ
ಲಿಯೋಸ್ ನಿರ್ಮಾಣ ಮತ್ತು ನಿರ್ವಹಣಾ ವಿಭಾಗ (ಎಲ್.ಸಿ.ಎಂ.ಡಿ.)
ಪೀಣ್ಯ, ಬೆಂಗಳೂರು - 560058
(ದೂರವಾಣಿ : 080-22685086, 5047, 5094, 28392310)
ತಿದ್ದುಪಡಿ - 1

ಕ್ರ.ಸಂ.	ವಿವರಣೆ	ವಿವರಗಳು
1.	ಕೆಲಸದ ಹೆಸರು	ಬೆಂಗಳೂರಿನ ಪೀಣ್ಯದಲ್ಲಿರುವ ಹಳೇ ಇಸ್ಟ್ರಾಡ್ ಕ್ಯಾಂಪಸ್‌ನಲ್ಲಿ ಅಸ್ತಿತ್ವದಲ್ಲಿರುವ ಕಟ್ಟಡದ ತಾಂತ್ರಿಕ ಮೌಲ್ಯಮಾಪನ / ಆರೋಗ್ಯ ಮೌಲ್ಯಮಾಪನಕ್ಕಾಗಿ ವಿನಾಶಕಾರಿಯಲ್ಲದ ಪರೀಕ್ಷೆಗಳನ್ನು ನಡೆಸುವುದು. ಕ್ಯಾಂಪಸ್‌ನಲ್ಲಿ ಪ್ರಸ್ತಾವಿತ ಅಡೋರ್ ಕಟ್ಟಡದ ನಿರ್ಮಾಣಕ್ಕಾಗಿ.
2.	ಇ-ಟೆಂಡರ್ ನೋಟೀಸ್ ನಂ.	CMG/LEOS/2025-26/LMN-08 dtd : 29.10.2025
3.	ಟೆಂಡರ್‌ಗೆ ಇಡಲಾದ ಅಂದಾಜು ವೆಚ್ಚ	₹ 4.53 ಲಕ್ಷಗಳು
4.	ಟೆಂಡರ್ ಡಾಕ್ಯೂಮೆಂಟ್ ಅನ್ನು ಡೌನ್‌ಲೋಡ್ ಮಾಡಬಹುದಾದ ಅವಧಿ	ದಿನಾಂಕ : 28.11.2025 ರಂದು 16.30 ರವರೆಗೆ ವಿಸ್ತರಿಸಲಾಗಿದೆ
5.	ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ	ದಿನಾಂಕ : 03.12.2025 ರಂದು 14.30 ಗಂಟೆಯವರೆಗೆ
6.	ಟೆಂಡರ್‌ಗಳು ತೆರೆಯುವ ದಿನಾಂಕ ಮತ್ತು ಸಮಯ	ದಿನಾಂಕ : 03.12.2025 ರಂದು 15.00 ಗಂಟೆಯ ನಂತರ

ಆಸಕ್ತ ಟೆಂಡರ್‌ಗಳು ಅರ್ಹತಾ ಮಾನದಂಡಗಳು ಮತ್ತು ಇತರ ವಿವರಗಳಿಗಾಗಿ ವೆಬ್‌ಸೈಟ್ : www.isro.gov.in ನಲ್ಲಿ ಹಿಂದಿ ಆವೃತ್ತಿಯೊಂದಿಗೆ ವಿವರವಾದ ಇ-ಟೆಂಡರ್ ಆಹ್ವಾನ ಪ್ರಕಟಣೆ (NIET) ಅನ್ನು ದಯವಿಟ್ಟು ನೋಡಬಹುದು ಮತ್ತು ಟೆಂಡರ್ ದಾಖಲೆಗಳನ್ನು www.tenderwizard.com/ISRO ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.
ಸಹಿ/-
ಸಮೂಹ ನಿರ್ದೇಶಕರು, ಸಿ & ಎಂ.ಜಿ.

ನೈಋತ್ಯ ರೈಲ್ವೆ
ಟೆಂಡರು ಸೂಚನೆ ಸಂ. 27/SBC/25, ದಿನಾಂಕ: 14.11.2025
ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕ್ರಸಂ	ಸಂಕ್ಷಿಪ್ತವಾದ ವಿವರಣೆ	ಅಂದಾಜು ಮೌಲ್ಯ
1	ಬೆಂಗಳೂರು ವಿಭಾಗ (ಎಸ್‌ಬಿಸಿ): ಎಸ್‌ಎಸ್‌ಇ/ಪಿ.ವೇ./ಬೆಂಗಳೂರು ವಿಭಾಗದಲ್ಲಿ ಎರಡು ವರ್ಷಗಳ ಅವಧಿಗೆ ಪರ್ಮನೆಂಟ್ ವೇ ನಿರ್ವಹಣೆ ಒಪ್ಪಂದ.	ರೂ. 5,44,80,188/-
2	ಬೆಂಗಳೂರು ವಿಭಾಗ (ಡಬ್ಲ್ಯೂಎಫ್‌ಡಿ): ಎಸ್‌ಎಸ್‌ಇ/ಪಿ.ವೇ./ವೈಟ್‌ಫೀಲ್ಡ್ ವಿಭಾಗದಲ್ಲಿ ಎರಡು ವರ್ಷಗಳ ಅವಧಿಗೆ ಪರ್ಮನೆಂಟ್ ವೇ ನಿರ್ವಹಣೆ ಒಪ್ಪಂದ.	ರೂ. 6,22,30,640/-
3	ಬೆಂಗಳೂರು ವಿಭಾಗ (ಬಿಡಬ್ಲ್ಯೂಟಿ): ಎಸ್‌ಎಸ್‌ಇ/ಪಿ.ವೇ./ಬಂಗಾರಪೇಟೆ ವಿಭಾಗದಲ್ಲಿ ಎರಡು ವರ್ಷಗಳ ಅವಧಿಗೆ ಪರ್ಮನೆಂಟ್ ವೇ ನಿರ್ವಹಣೆ ಒಪ್ಪಂದ.	ರೂ. 4,37,33,001/-
4	ಬೆಂಗಳೂರು ವಿಭಾಗ (ಕೆಪಿಎನ್): ಎಸ್‌ಎಸ್‌ಇ/ಪಿ.ವೇ./ಕುಪ್ಪಂ ವಿಭಾಗದಲ್ಲಿ ಎರಡು ವರ್ಷಗಳ ಅವಧಿಗೆ ಪರ್ಮನೆಂಟ್ ವೇ ನಿರ್ವಹಣೆ ಒಪ್ಪಂದ.	ರೂ. 4,96,68,240/-
5	ಬೆಂಗಳೂರು ವಿಭಾಗ (ಕೆಕ್ಯೂಜಡ್): ಎಸ್‌ಎಸ್‌ಇ/ಪಿ.ವೇ./ಕೋಲಾರ ವಿಭಾಗದಲ್ಲಿ ಎರಡು ವರ್ಷಗಳ ಅವಧಿಗೆ ಪರ್ಮನೆಂಟ್ ವೇ ನಿರ್ವಹಣೆ ಒಪ್ಪಂದ.	ರೂ. 5,66,31,732/-
6	ಬೆಂಗಳೂರು ವಿಭಾಗ (ಎಂವೈಎ): ಎಸ್‌ಎಸ್‌ಇ/ಪಿ.ವೇ./ಮಂಡ್ಯ ವಿಭಾಗದಲ್ಲಿ ಎರಡು ವರ್ಷಗಳ ಅವಧಿಗೆ ಪರ್ಮನೆಂಟ್ ವೇ ನಿರ್ವಹಣೆ ಒಪ್ಪಂದ.	ರೂ. 5,09,70,880/-
7	ಬೆಂಗಳೂರು ವಿಭಾಗ (ಕೆಜಿಐ): ಎಸ್‌ಎಸ್‌ಇ/ಪಿ.ವೇ./ಕೆಂಗೇರಿ ವಿಭಾಗದಲ್ಲಿ ಎರಡು ವರ್ಷಗಳ ಅವಧಿಗೆ ಪರ್ಮನೆಂಟ್ ವೇ ನಿರ್ವಹಣೆ ಒಪ್ಪಂದ.	ರೂ. 4,46,87,498/-
8	ಉಪ ಕಾಮಗಾರಿ–1: ಕೆಎಸ್‌ಆರ್ ಬೆಂಗಳೂರು: ನಂದಿ ಕ್ಲಬ್‌ನಲ್ಲಿ ವಿವಿಧ ಸೌಲಭ್ಯಗಳ ಮೇಲೆ ಪ್ರಸ್ತಾವಿತ ಅಭಿವೃದ್ಧಿ. ಉಪ ಕಾಮಗಾರಿ–2: ಬೆಂಗಳೂರು – ಯೆಲಿಯೂರು ವಿಭಾಗ: ಬೆಂಗಳೂರು – ಯೆಲಿಯೂರು ವಿಭಾಗದ ಹನಕೆರೆ (ಹೆಎನ್‌ಕೆ), ಶೆಟ್ಟಿಹಳ್ಳಿ (ಎಸ್‌ಇಟಿ), ಹೆಜ್ಜಾಲ (ಹೆಚ್‌ಜೆಎಲ್) ಮತ್ತು ನಾಯಂಡಹಳ್ಳಿ (ಎನ್‌ವೈಹೆಚ್) ನಿಲ್ದಾಣಗಳಲ್ಲಿ ಎಸ್‌ಎಂಗಳಿಗೆ ಶೌಚಾಲಯಗಳ ವ್ಯವಸ್ಥೆ. ನಿರ್ವಹಣೆಯ ಅವಧಿ: 6 ತಿಂಗಳುಗಳು ಅಥವಾ ಒಂದು ಮಾನ್ಸೂನ್ ಅವಧಿಯಲ್ಲಿ ಯಾವುದು ನಂತರದಲ್ಲಿ ಬರುವುದೋ ಅದು. (ಸಂಯುಕ್ತ ಟೆಂಡರು).	ರೂ. 1,04,43,685/-
9	ಬೆಂಗಳೂರು ವಿಭಾಗ: ವಾಟರ್ ಕೂಲರ್‌ಗಳ ವ್ಯವಸ್ಥೆ – ಕೆಎಸ್‌ಆರ್ ಬೆಂಗಳೂರು (ಎಸ್‌ಬಿಸಿ) – 14 ನಂ., ಯಲಹಂಕ (ವೈಎನ್‌ಕೆ) – 9 ನಂ., ಬಿದಡಿ (ಬಿಐಡಿ) – 1 ನಂ., ಚಾಂಪಿಯನ್ (ಸಿಹೆಚ್‌ಯು) – 1 ನಂ., ಕೋರಮಂಡಲ್ (ಸಿಓಎಲ್) – 1 ನಂ. ಮತ್ತು ಊರಿಗಾಂ (ಓಜಿಎಂ) – 1 ನಂ. (ಒಟ್ಟು – 27 ನಂ.) ನಿರ್ವಹಣೆಯ ಅವಧಿ: 6 ತಿಂಗಳುಗಳು ಅಥವಾ ಒಂದು ಮಾನ್ಸೂನ್ ಅವಧಿಯಲ್ಲಿ ಯಾವುದು ನಂತರದಲ್ಲಿ ಬರುವುದೋ ಅದು.	ರೂ. 31,87,663/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 10.12.2025, 15:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
PUB/665/AAF/PRB/SWR/2025-26 ವರಿಷ್ಠ ವಿಭಾಗೀಯ ಇಂಜಿನಿಯರ್/ಸಂಯೋಜನೆ/ಬೆಂಗಳೂರು
ಕಾಯ್ದಿರಿಸದ ಟಿಕೆಟುಗಳನ್ನು ಸುಲಭವಾಗಿ ಬುಕಿಂಗ್ ಮಾಡಲು ಗೂಗಲ್ ಪ್ಲೇ ಸ್ಟೋರ್‌ನಿಂದ ಯುಟಿಎಸ್ ಮೊಬೈಲ್ ಆ್ಯಪ್‌ಅನ್ನು ಡೌನ್‌ಲೋಡ್ ಮಾಡಿರಿ
South Western Railway - SWR | SWRRLY | SWRAILWAYHQ | sw_railways

ಚಾಲಕ ಗೈಡ್ ತರಬೇತಿ ಪ್ರಸ್ತಾವ ಮುಂದಿಟ್ಟ ಉಬರ್ ಇಂಡಿಯಾ

ಬೆಂಗಳೂರು: ಯುವಕರಿಗೆ ಜೀವನೋಪಾಯದ ಅವಕಾಶಗಳನ್ನು ಒದಗಿಸುವ ಉದ್ದೇಶದಿಂದ ರಾಜ್ಯ ಪ್ರವಾಸಿ ತಾಣಗಳಲ್ಲಿ 'ಚಾಲಕ-ಕಮ್-ಪ್ರವಾಸಿ ಮಾರ್ಗದರ್ಶಿ' ಯೋಜನೆ ಜಾರಿಗೆ ತರಲು ಉಬರ್ ಇಂಡಿಯಾ ಮುಂದಾಗಿದೆ.

ಈ ಕುರಿತಂತೆ ಕೌಶಲಾಭಿವೃದ್ಧಿ, ಜೀವನೋಪಾಯ ಸಚಿವರಾದ ಡಾ. ಶರಣಪ್ರಕಾಶ ಪಾಟೀಲ ಜೊತೆ ಉಬರ್‌ನ ಏಷ್ಯಾ ಪೆಸಿಫಿಕ್‌ನ ಸಾರ್ವಜನಿಕ ನೀತಿ ಮುಖ್ಯಸ್ಥ ಮೈಕ್ ಆರ್ಗಿಲ್ ಅವರು ವಿಕಾಸ ಸೌಧದಲ್ಲಿ ಮಂಗಳವಾರ ಮಾತುಕತೆ ನಡೆಸಿದರು.

ಕರ್ನಾಟಕ ಕೌಶಲ ಅಭಿವೃದ್ಧಿ ನಿಗಮದ (ಕೆಎಸ್‌ಡಿಸಿ) ಮುಂದಿನ ಸಭೆಯಲ್ಲಿ ಈ ಪ್ರಸ್ತಾವವನ್ನು ಮಂಡಿಸಲಾಗುವುದು ಎಂದು ಆರ್ಗಿಲ್ ಅವರಿಗೆ ಸಚಿವರು ಭರವಸೆ ನೀಡಿದರು.

'ಪ್ರವಾಸೋದ್ಯಮಕ್ಕೆ ಸಂಬಂಧಿಸಿದ ಕೌಶಲಗಳೊಂದಿಗೆ ಚಾಲಕರನ್ನು ಸಜ್ಜುಗೊಳಿಸುವುದು ವಿಶೇಷವಾಗಿ ತಳ ಸಮುದಾಯದ ಯುವಕರಿಗೆ ಆದಾಯದ ಅವಕಾಶಗಳನ್ನು ಒದಗಿಸುವುದು ಹಾಗೂ ಸಬಲೀಕರಣಕ್ಕೆ ಆದ್ಯತೆ ನೀಡುವ ಯೋಜನೆ ಇದಾಗಿದೆ' ಎಂದು ಸಚಿವರು ತಿಳಿಸಿದರು.

'ಅಭ್ಯರ್ಥಿಗಳಿಗೆ ಕೆಎಸ್‌ಡಿಸಿಯು ಲಘು ಮತ್ತು ಭಾರೀ ವಾಹನ ಚಾಲನೆ ತರಬೇತಿ ನೀಡುತ್ತಿದೆ. ತರಬೇತಿ ಪಡೆದ 100ಕ್ಕೂ ಹೆಚ್ಚು ಚಾಲಕರು ಈಗಾಗಲೇ ಭಾರತ ಮತ್ತು ವಿದೇಶಗಳಲ್ಲಿ ಉದ್ಯೋಗ ಪಡೆದುಕೊಂಡಿದ್ದಾರೆ. ಈ ಸಾಮರ್ಥ್ಯವನ್ನು ಮತ್ತಷ್ಟು ಹೆಚ್ಚಿಸಲು ಈ ಯೋಜನೆಯನ್ನು ಉಬರ್ ಸಂಸ್ಥೆಯು ಪ್ರಸ್ತಾಪಿಸಿದೆ' ಎಂದರು.

ನಗರಸಭಾ ಕಾರ್ಯಾಲಯ ಮಾದನಾಯಕನಹಳ್ಳಿ
ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ–562123
ದೂರವಾಣಿ ಸಂಖ್ಯೆ: 080–23718487
ಇ–ಮೇಲ್: itstaff_ulb_mnhalli@yahoo.com
ಸಂಖ್ಯೆ: ಮಾ.ನ.ಕಾ/ತಾ.ಶಾ/35/2025–26 ದಿನಾಂಕ: 25–12–2025
ಅಲ್ಪಾವಧಿ ಟೆಂಡರ್ ಪ್ರಕಟಣೆ
(Through GOK e-Procurement Portal www.kppp.karnataka.gov.in only)
ನಗರಸಭಾ ನಿಧಿ ಅಡಿಯಲ್ಲಿ ಮಾದನಾಯಕನಹಳ್ಳಿ ನಗರಸಭಾ ವ್ಯಾಪ್ತಿಯಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಇ–ಪ್ರೊಕ್ಯೂರ್‌ಮೆಂಟ್ ವೇದಿಕೆಯಡಿಯಲ್ಲಿ ಈ ಕೆಳಕಂಡಂತೆ ಐಟಂವಾರು ಟೆಂಡರ್ ಆಹ್ವಾನಿಸಲಾಗಿದ್ದು, ಅರ್ಹ ಹಾಗೂ ಅನುಭವವುಳ್ಳ ಗುತ್ತಿಗೆದಾರರು ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಸಲ್ಲಿಸಬಹುದಾಗಿರುತ್ತದೆ. ಹೆಚ್ಚಿನ ವಿವರಗಳನ್ನು ಕಛೇರಿಯ ವೇಳೆಯಲ್ಲಿ ತಾಂತ್ರಿಕ ಶಾಖೆಯಿಂದ ಪಡೆಯಬಹುದಾಗಿರುತ್ತದೆ.

ಇಂಡೆಂಟ್ ಸಂಖ್ಯೆಗಳು:	DMA/2025-26/OW/WORK_INDENT52054
	DMA/2025-26/BD/WORK_INDENT52057

ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಸಲ್ಲಿಸಲು, ಕೊನೆಯ ದಿನಾಂಕ: 12–12–2025 ಸಂಜೆ 5.00 ಗಂಟೆಯವರೆಗೆ ಹಾಗೂ ಸಲ್ಲಿಸಿರುವ ಟೆಂಡರ್‌ಗಳ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 15–12–2025 ಸಂಜೆ 5.15 ಗಂಟೆಗೆ. ಸದರಿ ಟೆಂಡರ್‌ಗೆ ಸಂಬಂಧಿಸಿದಂತೆ ಯಾವುದಾದರು ತಿದ್ದುಪಡಿಗಳಿದ್ದಲ್ಲಿ ಆನ್‌ಲೈನ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.
ಸಹಿ/– ಪೌರಾಯುಕ್ತರು,
ನಗರಸಭೆ, ಮಾದನಾಯಕನಹಳ್ಳಿ
ವಾಸಾಸಂಇ/ವಾಪ್ರ/4023/ಸ್ಪ್ಯಾನ್/2025–26

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ,
ಕಾರ್ಯಪಾಲಕ ಇಂಜಿನೀಯರ್‌ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ–562 101
ದೂರವಾಣಿ ಸಂಖ್ಯೆ: ಕಛೇರಿ: 08156–295427 ಫ್ಯಾಕ್ಸ್: 08156–295427
ಇಮೇಲ್ : eemidcbpura@gmail.com
ಸಂಖ್ಯೆ : ಕಾಸಬ/ಸ.ನೀ ಮತ್ತು ಅ.ಅ.ವಿ/ಚಿ.ಪುರ/ತಾಂಶಾ/ತಾಂಸ/ಟೆಂಡರ್ ಪ್ರಕಟಣೆ / 2019/2025–26 ದಿನಾಂಕ : 25/11/2025
ಅಲ್ಪಾವಧಿ ಪ್ರೀ ಕ್ವಾಲಿಫಿಕೇಶನ್ ಟೆಂಡರ್ ಪ್ರಕಟಣೆ ಸಂಖ್ಯೆ: 18/2025–26/ ದಿನಾಂಕ: 25/11/2025
ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ ರವರಿಂದ ಕೆಡಬ್ಲ್ಯೂ–6 ಟೆಂಡರ್ ಡಾಕ್ಯೂಮೆಂಟ್ ಅಳವಡಿಸಿಕೊಂಡು ಕೆಟಿಪಿಪಿ ನಿಯಮಾವಳಿ ಅನ್ವಯ ಒಂದು ಲಕೋಟೆ ಪದ್ಧತಿಯಲ್ಲಿ 4702 ಪ್ರಧಾನ ಕಾಮಗಾರಿ–ಏತ ನೀರಾವರಿ ಯೋಜನೆಯಡಿಯಲ್ಲಿ 01 ಕಾಮಗಾರಿಗೆ ಟೆಂಡರ್ ಕರೆಯಲಾಗಿದೆ. ಮೊತ್ತ 65000.00 ಲಕ್ಷ ನಿಗಧಿತ ಟೆಂಡರ್ ಪ್ರೊಸೆಸ್ಸಿಂಗ್ ಫೀ ಕೆಪಿಪಿ–ಪೋರ್ಟಲ್ ನಿಯಮಾನುಸಾರ, ಟೆಂಡರ್ ಡಾಕ್ಯುಮೆಂಟ್‌ಗಳನ್ನು ವೆಬ್‌ಸೈಟ್ ನಲ್ಲಿ ದಿನಾಂಕ: 25–11–2025 ರ ಸಂಜೆ 04:30 ಗಂಟೆಯಿಂದ ಪಡೆಯಬಹುದು (Download). ಪ್ರೀ ಬಿಡ್ ಸಭೆಯನ್ನು ದಿನಾಂಕ: 05–12–2025 ರಂದು ಬೆಳಿಗ್ಗೆ 11.00 ಗಂಟೆಗೆ ಅಧೀಕ್ಷಕ ಇಂಜಿನಿಯರ್ ರವರ ಕಚೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವೃತ್ತ, 3ನೇ ಮಹಡಿ ಬಿ.ಡಿ.ಎ ಕಾಂಪ್ಲೆಂಕ್ಸ್, ಜಯನಗರ, ಬೆಂಗಳೂರು ಇಲ್ಲಿ ಆಯೋಜಿಸಲಾಗಿರುತ್ತದೆ. ಪ್ರೀ ಕ್ವಾಲಿಫಿಕೇಶನ್ ಡಾಕ್ಯುಮೆಂಟ್‌ಗಳನ್ನು ಸಲ್ಲಿಸಲು ಕೊನೆಯ (Upload) ದಿನಾಂಕ: 12–12–2025 ಸಂಜೆ 04:30 ಗಂಟೆಯವರೆಗೆ, ಪ್ರೀ ಕ್ವಾಲಿಫಿಕೇಶನ್ ಬಿಡ್ ತೆರೆಯುವ ದಿನಾಂಕ: 15–12–2025ರ ಬೆಳಿಗ್ಗೆ 11:00 ಗಂಟೆಯ ನಂತರ. ಮೇಲಿನ ವಿವರಗಳು ಭವಿಷ್ಯದಲ್ಲಿ ಸಂದರ್ಭೋಚಿತವಾಗಿ ಬದಲಾವಣೆಗೆ ಒಳಪಟ್ಟಿರುತ್ತವೆ. ಹೆಚ್ಚಿನ ವಿವರ ಹಾಗೂ ನಿಬಂಧನೆಗಳಿಗೆ www.kppp.karnataka.gov.in ಅಂತರ್ಜಾಲ ತಾಣದಲ್ಲಿ ಅಥವಾ ಈ ಕಛೇರಿಯ ಕೆಲಸದ ವೇಳೆಯಲ್ಲಿ (ರಜಾದಿನ ಹೊರತುಪಡಿಸಿ) ಪಡೆಯಬಹುದು. ಟೆಂಡರ್‌ನ್ನು ಯಾವುದೇ ಕಾರಣ ನೀಡದೇ ಅನುಮೋದಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ.
ಸಹಿ/– ಕಾರ್ಯಪಾಲಕ ಇಂಜಿನಿಯರ್
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ

'1ನೇ ತರಗತಿಯಿಂದ ಕಂಪ್ಯೂಟರ್ ಶಿಕ್ಷಣ'

ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಹಮ್ಮಿಕೊಂಡಿದ್ದ ಸಂವಾದ ಕಾರ್ಯಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸರ್ಕಾರಿ ಶಾಲಾ ವಿದ್ಯಾರ್ಥಿಗಳನ್ನು ತಾಂತ್ರಿಕವಾಗಿ ಸದೃಢಗೊಳಿಸಲು 1ನೇ ತರಗತಿಯಿಂದಲೇ ಕಂಪ್ಯೂಟರ್ ಶಿಕ್ಷಣವನ್ನು ಆರಂಭಿಸಲಾಗುವುದು' ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಹೇಳಿದರು.

ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯು ಜವಾಹರಲಾಲ್ ನೆಹರೂ ತಾರಾಲಯದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ 'ಗಗನಯಾತ್ರಿ ಶುಭಾಂಶು ಶುಕ್ಲಾ ಅವರೊಂದಿಗೆ ವಿದ್ಯಾರ್ಥಿ ಸಂವಾದ' ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಪ್ರಸ್ತುತ ಯುಗವು ಕೃತಕ ಬುದ್ಧಿಮತ್ತೆ (ಎಐ) ಮತ್ತು ಕಂಪ್ಯೂಟರ್‌ಗಳ ಯುಗವಾಗಿದೆ. ಈ ಸ್ಪರ್ಧಾತ್ಮಕ ಜಗತ್ತಿನಲ್ಲಿ ಸರ್ಕಾರಿ ಶಾಲಾ ಮಕ್ಕಳು ಹಿಂದೆ ಉಳಿಯಬಾರದು. ಆದ್ದರಿಂದ ಸರ್ಕಾರವು 1ನೇ ತರಗತಿಯಿಂದ ಕಂಪ್ಯೂಟರ್ ಶಿಕ್ಷಣ ಆರಂಭಿಸುವ ನಿರ್ಧಾರಕ್ಕೆ ಬಂದಿದೆ' ಎಂದರು.

'900 ಕರ್ನಾಟಕ ಪಬ್ಲಿಕ್ ಶಾಲೆಗಳ ಮೂಲಕ 11 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ 1ನೇ ತರಗತಿಯಿಂದಲೇ ಕಂಪ್ಯೂಟರ್ ಶಿಕ್ಷಣ ನೀಡಲು ಸಿದ್ಧತೆ ನಡೆಸಿದ್ದೇವೆ. ಶುಭಾಂಶು ಶುಕ್ಲಾ ಅವರಂತಹ ಸಾಧಕರ ಕನಸುಗಳನ್ನು ನಮ್ಮ ಮಕ್ಕಳು ಮುಂದುವರಿಸಬೇಕಾದರೆ, ಅವರಿಗೆ ಬಾಲ್ಯದಿಂದಲೇ ಭದ್ರ ಬುನಾದಿ ಹಾಕುವುದು ನನ್ನ ಕರ್ತವ್ಯ' ಎಂದು ಹೇಳಿದರು.

'ಸುಮಾರು 40 ವರ್ಷಗಳ ಹಿಂದೆ ರಾಕೇಶ್ ಶರ್ಮಾ ಅವರು ಬಾಹ್ಯಾಕಾಶಕ್ಕೆ ಹೋದಾಗ ನಮಗೆ ಉಂಟಾದ ರೋಮಾಂಚನವನ್ನು ಶುಕ್ಲಾ ಅವರು ಮತ್ತೆ ನೆನಪಿಸುತ್ತಿದ್ದಾರೆ. ಅಂದು ನಮ್ಮ ದೇಶದ ಜನಸಂಖ್ಯೆ 100 ಕೋಟಿಗಿಂತ ಕಡಿಮೆಯಿತ್ತು. ಇಂದು 140 ಕೋಟಿ ಜನರ ಕನಸನ್ನು ಶುಕ್ಲಾ ಅವರು ಹೊತ್ತು ಸಾಗುತ್ತಿದ್ದಾರೆ. ಲಖನೌದಲ್ಲಿ ಕಷ್ಟಪಟ್ಟು ಓದಿ, ಇಂದು ಈ ಸ್ಥಾನಕ್ಕೆ ಏರಿರುವ ಅವರ ಸಾಧನೆ ಮಕ್ಕಳಿಗೆ ಮಾದರಿಯಾಗಬೇಕು' ಎಂದು ಸಚಿವರು ಬಣ್ಣಿಸಿದರು.

ಕಾರ್ಯಕ್ರಮದಲ್ಲಿ ಶುಭಾಂಶು ಶುಕ್ಲಾ ಅವರನ್ನು ಗೌರವಿಸಲಾಯಿತು. ಮಂಜುಳಾ ಎನ್, ಎನ್.ಎಸ್. ಬೋಸರಾಜು, ಮಧು ಬಂಗಾರಪ್ಪ, ಸದಾಶಿವ ಪ್ರಭು ಬಿ. ಹಾಗೂ ಬಿ.ಆರ್. ಗುರುಪ್ರಸಾದ್ ಉಪಸ್ಥಿತರಿದ್ದರು

ಕಾರ್ಯಕ್ರಮದ ಪ್ರಮುಖ ಆಕರ್ಷಣೆಯಾಗಿದ್ದ ಗ್ರೂಪ್ ಕ್ಯಾಪ್ಟನ್ ಶುಭಾಂಶು ಶುಕ್ಲಾ ಅವರು ಶಾಲಾ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದರು. ಬಾಹ್ಯಾಕಾಶ, ವಿಜ್ಞಾನ ಮತ್ತು ಗಗನಯಾನದ ಕುರಿತು ವಿದ್ಯಾರ್ಥಿಗಳು ಕೇಳಿದ ಕುತೂಹಲಕಾರಿ ಪ್ರಶ್ನೆಗಳಿಗೆ ಶುಕ್ಲಾ ಅವರು ಉತ್ತರಿಸಿದರು.

ಸಣ್ಣ ನೀರಾವರಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್.ಎಸ್. ಬೋಸರಾಜು, ಐಟಿ-ಬಿಟಿ ಮತ್ತು ವಿಜ್ಞಾನ ತಂತ್ರಜ್ಞಾನ ಇಲಾಖೆಯ ಕಾರ್ಯದರ್ಶಿ ಮಂಜುಳಾ ಎನ್, ನಿರ್ದೇಶಕ ಸದಾಶಿವ ಪ್ರಭು ಬಿ. ಹಾಗೂ ಜವಾಹರಲಾಲ್ ನೆಹರೂ ತಾರಾಲಯದ ನಿರ್ದೇಶಕ ಬಿ.ಆರ್.ಗುರುಪ್ರಸಾದ್ ಉಪಸ್ಥಿತರಿದ್ದರು.

ಲೋಕೋಪಯೋಗಿ ಇಲಾಖೆ, ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ವಿಭಾಗ ಚಿಕ್ಕಬಳ್ಳಾಪುರ.
ಅಲ್ಪಾವಧಿ ಟೆಂಡರ್‌ಗಳಿಗಾಗಿ ಆಹ್ವಾನ (ಐ.ಎಫ್.ಟಿ)
ಸಂಖ್ಯೆ:12/2025–26 ದಿನಾಂಕ:20.11.2025
ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಸ್ಟೇಡಿಯಂ/ ಕಟ್ಟಡ/ ರಸ್ತೆ ನಿರ್ಮಾಣ/ನಿರ್ವಹಣೆ ಕಾಮಗಾರಿಗಳಿಗೆ ಕೆ.ಡಬ್ಲ್ಯು–1,2,3,4 ರಂತೆ ಕಾರ್ಯಪಾಲಕ ಇಂಜಿನಿಯರ್, ಲೋ.ಇ ರವರು ರಾಜ್ಯಪಾಲರ ಪರವಾಗಿ ದ್ವಿ–ಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿರುತ್ತಾರೆ. ಹೆಚ್ಚಿನ ವಿವರಗಳನ್ನು https://kppp.karnataka.gov.in ಟೆಂಡರ್‌ಗಳನ್ನು ಸಲ್ಲಿಸಲು ಕಡೆಯ ದಿನಾಂಕ:27.11.2025, 01.12.2025 ಮತ್ತು 03.12.2025 ರವರೆಗೆ ಪಡೆದು ಸಂಜೆ 4.00 ಗಂಟೆಗಳ ಒಳಗಾಗಿ ಸಲ್ಲಿಸಬಹುದಾಗಿರುತ್ತದೆ. ಟೆಂಡರ್‌ನ ವೇಳಾಪಟ್ಟಿ ಮತ್ತು ಷರತ್ತುಗಳ ಬದಲಾವಣೆ ಇದ್ದಲ್ಲಿ ಕೆ.ಪಿ.ಪಿ ಪೋರ್ಟಲ್ ನಲ್ಲಿ ಮಾತ್ರ ಅಧಿಸೂಚಿಸಲಾಗುವುದು. ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ.
ಸಹಿ/–ಕಾರ್ಯಪಾಲಕ ಇಂಜಿನಿಯರ್, ಲೋ.ಇ. ಚಿಕ್ಕಬಳ್ಳಾಪುರ ವಿಭಾಗ, ಚಿಕ್ಕಬಳ್ಳಾಪುರ.

ಹೈವಿಷನ್ ಇಂಡಿಯಾ– ಜಿಟಿಟಿಸಿ ಒಪ್ಪಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಐಫೋನ್ ತಯಾರಕ ಫಾಕ್ಸ್‌ಕಾನ್‌ಗೆ ಕ್ಯಾಮೆರಾ ಪರಿಕರಗಳನ್ನು ಒದಗಿಸುವ ಕೊರಿಯನ್ ಸಂಸ್ಥೆಯಾದ ಹೈವಿಷನ್ ಇಂಡಿಯಾ ಪ್ರೈವೆಟ್ ಲಿಮಿಟೆಡ್ ಮತ್ತು ಜಿಟಿಟಿಸಿ ಒಪ್ಪಂದಕ್ಕೆ ಸಹಿ ಹಾಕಿವೆ. ಒಪ್ಪಂದಕ್ಕೆ ಹೈವಿಷನ್ ಇಂಡಿಯಾದ ವ್ಯವಸ್ಥಾಪಕ ನಿರ್ದೇಶಕ ಲೀ ಯುನ್ಹೋ ಮತ್ತು ಜಿಟಿಟಿಸಿಯ ವ್ಯವಸ್ಥಾಪಕ ನಿರ್ದೇಶಕ ಸಿದ್ದಲಿಂಗಪ್ಪ ಪೂಜಾರಿ ಸಹಿ ಹಾಕಿದರು.

ಎರಡೂ ಸಂಸ್ಥೆಗಳು ಅರ್ಹ ಜಿಟಿಟಿಸಿ ಪ್ರಶಿಕ್ಷಣಾರ್ಥಿಗಳಿಗೆ ಕೈಗಾರಿಕಾ ಮಾನ್ಯತೆ, ಇಂಟರ್ನ್‌ಶಿಪ್ ಮತ್ತು ಉದ್ಯೋಗಾವಕಾಶಗಳನ್ನು ಒದಗಿಸಲು ಸಮ್ಮತಿಸಿವೆ. ಜೊತೆಗೆ, ಶೈಕ್ಷಣಿಕ ಮತ್ತು ಸಂಶೋಧನಾ ಉದ್ದೇಶಗಳಿಗಾಗಿ ಕೈಗಾರಿಕಾ ಸೌಲಭ್ಯಗಳು ಮತ್ತು ಪ್ರಾತ್ಯಕ್ಷಿಕೆ ಸಲಕರಣೆಗಳನ್ನು ಪೂರೈಸಲಿವೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.
ನಂ:ಬೆಂಅಪ್ರಾ/ನಯೋಸ/CLU–357/3219/2025–26 ದಿನಾಂಕ:25.11.2025
ಪ್ರಕಟಣೆ
ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14–A ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ಶೈಕ್ಷಣಿಕ ವಲಯಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ–ಗುಂ	ಪರಿಷ್ಕೃತ ಮಹಾ ಯೋಜನೆ 2015ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂಉಪಯೋಗ
1	ಶ್ರೀ ಹೆಚ್.ಎನ್.ಮನೋಜ್‌ಕುಮಾರ್ ಮತ್ತು ಹೆಚ್.ಪಿ.ತಿಮ್ಮಾರೆಡ್ಡಿ ಬಿನ್ ಹೆಚ್.ಟಿ.ಪಿಲ್ಲಾರೆಡ್ಡಿ ಹುಲಿಮಂಗಲ ಗ್ರಾಮ, ಜಿಗಣಿ ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ	ಆನೇಕಲ್	ಜಿಗಣಿ	ಹುಲಿ ಮಂಗಲ	114/1	1–00	ವ್ಯವಸಾಯ ವಲಯ	ಶೈಕ್ಷಣಿಕ (ಪ್ರೈಮರಿ ಶಾಲೆ)
					114/5	0–24		
					114/6	0–05		
					114/8	1–00		
					ಒಟ್ಟು	2–29		

ಷರಾ: ಅರ್ಜಿದಾರರು ಪ್ರಶ್ನಿತ ಜಮೀನನ್ನು ವ್ಯವಸಾಯಕ್ಕಾಗಿ ಬಳಸಲು ಸಾಧ್ಯವಿರುವುದಿಲ್ಲ. ಸದರಿ ಜಮೀನಿನ ಸುತ್ತಮುತ್ತ ಶಾಲಾ ಶಿಕ್ಷಣ ಸಂಸ್ಥೆಗಳಿಗೆ ಉತ್ತಮ ಬೇಡಿಕೆ ಇದ್ದು, ವ್ಯವಸಾಯ ವಲಯದಿಂದ ಶೈಕ್ಷಣಿಕ ಉದ್ದೇಶಕ್ಕಾಗಿ ಭೂಉಪಯೋಗ ಬದಲಾವಣೆ ಮಾಡುವುದರಿಂದ ಸುತ್ತಮುತ್ತಲಿನ ಸಾರ್ವಜನಿಕರಿಗೆ ಒಳ್ಳೆಯ ಶಿಕ್ಷಣ ಮತ್ತು ಎಷ್ಟೋ ಜನ ಶಿಕ್ಷಕರಿಗೆ ಮತ್ತು ಸಿಬ್ಬಂದಿಗಳಿಗೆ ಉದ್ಯೋಗಾವಕಾಶ ಕಲ್ಪಿಸಿದಂತಾಗುತ್ತದೆ. ವ್ಯವಸಾಯ ವಲಯದಿಂದ ಶೈಕ್ಷಣಿಕ ಉದ್ದೇಶಕ್ಕಾಗಿ ಭೂಉಪಯೋಗ ಬದಲಾವಣೆ ಆದೇಶ ಪಡೆದ ನಂತರ ಶಾಲಾ ಶಿಕ್ಷಣ ಕಟ್ಟಡ ನಿರ್ಮಾಣ ಮಾಡುವುದರಿಂದ ವಿದ್ಯಾವಂತ ಶಿಕ್ಷಕರಿಗೆ ಮತ್ತು ಸಿಬ್ಬಂದಿ ವರ್ಗಕ್ಕೆ ಉದ್ಯೋಗಾವಕಾಶ ಸೃಷ್ಟಿಯಾಗಿರುತ್ತದೆ. ಸದರಿ ಪ್ರದೇಶದಲ್ಲಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವುದರಿಂದ ಸಾರ್ವಜನಿಕರಿಗೆ ಅನುಕೂಲವಾಗುತ್ತದೆ. ಈ ಪ್ರದೇಶ ಅಭಿವೃದ್ಧಿಪಡಿಸುವುದರಿಂದ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕಿಸಿಕೊಡುವಂತಾಗುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಸದರಿ ಜಮೀನುಗಳನ್ನು 'ವ್ಯವಸಾಯ ವಲಯ' ದಿಂದ 'ಶೈಕ್ಷಣಿಕ ವಲಯ'ಕ್ಕೆ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛೆಸಿರುವುದಾಗಿ ತಿಳಿಸಿರುತ್ತಾರೆ.
ಸಹಿ/– ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು

ಚಿತ್ರಕಲಾ ಸ್ಪರ್ಧೆ 29ರಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ಕಲಾ ದರ್ಪಣ ಆರ್ಟ್ ರಿಫ್ಲೆಕ್ಟ್ಸ್ ಸಂಸ್ಥೆಯಿಂದ ಮಕ್ಕಳಿಗಾಗಿ ರಾಜ್ಯಮಟ್ಟದ ಚಿತ್ರಕಲಾ ಸ್ಪರ್ಧೆಯನ್ನು ಇದೇ 29ರಂದು ಜೆ.ಸಿ. ರಸ್ತೆಯಲ್ಲಿರುವ ರವೀಂದ್ರ ಕಲಾಕ್ಷೇತ್ರದಲ್ಲಿ ಹಮ್ಮಿಕೊಂಡಿದೆ.

ಈ ಸ್ಪರ್ಧೆಯು 8 ವರ್ಷ, 13 ವರ್ಷ ಹಾಗೂ 18 ವರ್ಷದೊಳಗಿನ ವಿಭಾಗದಲ್ಲಿ ನಡೆಯಲಿದೆ. ಭಾಗವಹಿಸಿದ ಎಲ್ಲರಿಗೂ ಬಹುಮಾನ ಹಾಗೂ ಪ್ರಮಾಣ ಪತ್ರಗಳನ್ನು ಕೊಡಲಾಗುತ್ತದೆ. ವಿಜೇತರಿಗೆ ಟ್ರೋಫಿಯ ಜತೆಗೆ ನಗದು ನೀಡಲಾಗುತ್ತದೆ.

ಹೆಚ್ಚು ಸಂಖ್ಯೆಯಲ್ಲಿ ಭಾಗವಹಿಸಿದ ಶಾಲಾ ತಂಡಗಳಿಗೆ ಸ್ಕೂಲ್ ಅವಾರ್ಡ್‌ಗಳನ್ನು ಕೊಡಲಾಗುತ್ತದೆ. ಆಸಕ್ತರು ಇದೇ 26ರೊಳಗೆ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬೇಕು ಎಂದು ಸಂಸ್ಥೆಯ ಕಾರ್ಯದರ್ಶಿ ವಿನಾಯಕ ಪಾಟೀಲ ತಿಳಿಸಿದ್ದಾರೆ.

ಮಾಹಿತಿಗೆ 93806 71947.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Accounts & Finance

WANTED LADY Accountant having 2-3 years of experience in profit &loss account, balance-sheet and GST. Preferably B.com graduate with tally knowledge. Contact: 6361875259

WANTED ACCOUNTS Officer for a Private Limited Company in Prakash Nagar, Bangalore: 9448481947/ 9448376584: magraa@magraa.in

Hospital & Medical Jobs

ANM A FEMALE & fulltime patient care giver NURSE for CHETANA VIHARA Assisted Living Centre, Shanthinagar, Bangalore- 560027. Boarding & Lodging provided. Contact: 080-26601239/ 97418-62781 Email: cvhospital.in @gmail.com

Teachers/ Professors

WANTED NTT passed teacher for pre KG School RRnagar Bangalore Call 9448091814 or mail dsveeraiahmlc@gmail.com

SILICON CITY EDUCATION TRUST (R)
Recognised by Govt. of Karnataka
SILICON CITY ACADEMY OF SECONDARY EDUCATION
Happy & Creative School
Affiliated to CBSE, Delhi. Aff. No.830133
Kumar Nursery, New Bank Colony, Konankunte, Bangalore-560062
Love for Children. Passion to educate. DESIRE to do it differently. We are seeking TEACHERS who possess these qualities and believe in the philosophy of learning by doing, because to raise the heroes of tomorrow, we need the masters of today, who can guide them and mould them to be nobles, not just by name but by deed too.
If you possess these qualities, then we are looking for you. Staff required for the following posts:
1. PGT (XI & XII) Biology, Physics, Business Studies, Entrepreneurship, History, Financial Accountancy, Statistics, Food and Dietetics, Political Science, Sociology, Computer Science & Engineering Graphics.
2. TGT (VI to X), PRT (I to V) & NTT (KG)- All Subjects
3. Physical Education Teacher
For Sl. 1 & 2: Post Graduate / Graduate with B.Ed and a minimum of 3 years of teaching experience in CBSE Schools is a must.
For Sl. 3: B.P.Ed / M P.Ed Graduation with 3 years of work experience in Schools is a must.
Send your handwritten application with latest photograph by email to siliconcityacademy@gmail.com on or before 9 Dec 2025, clearly mentioning the post applied for in the subject line.
Ignore if already applied.

ವಿಶ್ವ ವೆಂಕಟೇಶ್ವರ ಇಂಟರ್‌ನ್ಯಾಷನಲ್ ಸ್ಕೂಲ್
V.V.INTERNATIONAL SCHOOL
Affiliated to CBSE upto Senior Secondary, New Delhi, Affiliation Number 830685
V. V. PU & DEGREE COLLEGE
Invites applications for
Vice Principal - (School & PU College)
Co-ordinators - (Pre-Primary, Primary & Secondary)
Pre-Primary - NTT/ ECE / Montessori
PRT & TGT - All Subjects
Post Graduates Teachers & Lecturers for School, PU & Degree College - (English, Kannada, Sanskrit, Hindi, Physics, Chemistry, Mathematics, Biology, Economics, Business Studies, Accountancy, Computer Science, Statistics)
Art & Craft, Music, Dance, Physical Instructor, Librarian
Call: 9448 516 410 / 9141 300 990 / 9141 300 991 / 7676 863 934
Sy. No. 72, Tirumala Garden, Kodipalya, Kengeri, Bengaluru - 560 060
E-mail: tirumalabalaji75@gmail.com hr.vvinstitutions@gmail.com
www.vishwavenkateshwaradegreecollege.com | www.vvinternationalschool.com | www.kbcpucollege.com

Hotel

MANAGERS/ SUPERVISOR & Candidates with Hotel Management/ Business Administration Background for CAFE MYTHRI at Bommasandra Industrial Area, Bangalore- 560099. Contact: 080-26601239/ 97418-62781 Email: cafemythri@gmail.com

Marketing & Sales

UNCLE'S WANTED Immediately BUSINESS EXECUTIVES. Smart Promotional SALES GIRLS/ BOYS. Best Salary. Walk-in Everyday 10am: 99000-54461/62

REQUIRED MARKETING Sales Executive with experience 1yr. Location: near RV Eng College, Mysore road. Mobile.no: 7829944556

WANTED MANAGERS, Sales Executives, Telecallers to work different parts of Bangalore earn 20,000-30,000: 8867627879

General

WANTED OFFICE Assistant with two wheeler. Attractive salary will be given based on candidate experience. Contact: 8431046669/ 7090256266

Wanted

WANTED - QUALITY CONTROLLER LEAD For a reputed FMCG Company in Mangalore. Requirements:• Minimum 5-8 years of experience in the Food Industry• Qualification: MSc/BSc in Food Science or Biotechnology. Location: Mangalore. Whatsapp resume to: 7349556605/7411153605

REQUIRED ASSISTANT Godown incharge with Computer Knowledge. Age Limit: Below 45 years, Working Location: Near RV Eng College, Mysore Road. Mob.No :7829944556

Security & Detectives

GLOBE DETECTIVE AGENCY URGENTLY REQUIRES EXPERIENCED MARKETING cum FIELD OFFICERS FOR SECURITY SERVICES AGENCY. PH: 9845042347

Graphic Designers

WANTED MALE Graphic Designer (Corel Draw Photoshop Illustrator) Pvt Ltd Company around Rajajinagar Contact: 9108458798/ 9845579620

REAL ESTATE SELLING

Flat

Kanakapura Road

OFF KANAKAPURA Road Near Adigas Hotel 9th Main Bagegowda Layout 2-BHK Fully Furnished 1200Sq.ft Flat For Sale. Only Vegetarians Need Contact:-9845303631

Industrial & Factory

Intl Airport Road

SALE INDUSTRIAL Properties in APIIC Hindupur RED ZONE from Half Acre to 5Acres with Two Sides Road. Call VERNA DEVELOPERS, Barton Centre,MG Road, BLR. 9916310226.

Mysore Road

SALE 112 Acres Land Commercial, Residencial, Yellow Zone. Bidadi Mysore Express Highway Facing. 9141326819, 9972636255

Tumkur Road

SALE/ BUILT to suit, 10 Acres Industrial Warehouse Land Opposite to Namaste Bangalore Hotel. 9141326819

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology-9880916988

BUSINESS

Business to Business

Finance

ALL LOANS AVAILABLE @4% YEARLY INTEREST PERSONAL BUSINESS PROJECT TAKEOVER MORTGAGE MINIMUM DOCUMENTATION QUICK DISBURSEMENT MAHALAKSHMI FINANCE 9984823862

PERSONAL

Change of Name

CHANGE OF NAME
We, Mr. Sunil Mysore Suresh & Mrs. Sheethal Suryaprakash, residing at # 495, 11th Cross, 8th Main, 2nd Phase, J.P.Nagar, Bengaluru - 560078, have changed our minor son's name from SRIKRISHNA to SRIKRISHNA MYSORE, vide affidavit dt: 01.03.2025 before notary Mohammed Hussian K, Bengaluru. Henceforth, he shall be called as SRIKRISHNA MYSORE only.

CHANGE OF NAME
I, Rajath Immanuel, residing at No. 178, 4th Main, 2nd Cross, Viveknagar Further Extension, Bengaluru-560 047, have changed my name to RAJATH IMMANUEL P vide affidavit dated 25.11.2025 before notary S.I. Balaguru, Bengaluru. Henceforth I shall be called RAJATH IMMANUEL P only

CHANGE OF NAME
I, Debanshu Balsamanta, R/at Flat # 103, 56/2, Ashiana Garden, Doopanahalli, Opp. Corporation School, Off 100 Feet Road, Indiranagar, Bengaluru - 560008, have changed my name to DEBANSHU BAL SAMANTA vide affidavit dated 25.11.2025 before notary Gangaraju B.N., Bengaluru. Henceforth I shall be called DEBANSHU BAL SAMANTA only

CHANGE OF NAME
I, SUNANDA KOTTAKKAL KOVILAKAM, W/O. SASEENDRA VARMA P K, No. 206/1, PRASHANTH NAGAR, PIPELINE ROAD, T. DASARAHALLI, BANGALORE-560057, have changed my name to SUNANDA KOTTAKKAL COVILAKAM, vide Affidavit Dated 21-11-2025 sworn to before Advocate and Notary Public V.Anjanappa, Bengaluru

PUBLIC NOTICE

PUBLIC NOTICE
Public are hereby notified that my clients have agreed to develop and sell the Schedule lands belonging to 1) Sri. B. V. GOPAL REDDY, No.491/40,1st Main, VIII Block, Jayanagar, Bangalore-560 082, 2) Sri. B. V. SADANANDA REDDY, No.801,9th Main Road, III Block, Koramangala, Bangalore-560 034 (No. 1 and 2 are sons of late M. Venkataswamy Reddy), 2A) Smt. B. S. SAHANA REDDY, At: #801, 9th Main Road, 3rd Block, Near Seva Sadan, Koramangala, Bangalore South 2B) Smt. SANJANA S REDDY, At: No.314/2 Farm House, 7th Cross, 3d Main, Behind Canara Bank, Domlur Layout, Bengaluru (No. 2A and 2B are daughters of Sri. B. V. Sadananda Reddy), 3) Sri. B. R. VISHWAS, Son of late B. V. Rajasekhar Reddy, No.80/85, 3rd Main Road, NT Peth, Bangalore-560 002, 4) Smt. CHANDRAKANTHA YADAVANAHALLI RAMA REDDY, No.95, TC Halli, Sarjapur Hobli, Anekal Taluk, Bangalore, 4A) Smt. CHAITRA REDDY PRADEEP, At: No.95/2, Chaitra Nilaya, Thigala Chowdadenahalli, Bengaluru (4 and 4A are wife and daughter of late B. V. Prabhakar Reddy), who have represented that they are the owners of the properties in Item Nos.1 to 4 of the Schedule below. Any person or persons objecting for the proposed development and sale and persons who are having any right, title, interest or ownership or any other right or claim in the Item Nos.1 to 4 in the Schedule Property shall lodge his/her/their objections and/or claims with the undersigned along with supporting documentary evidence within Fifteen (15) days from the date of this publication. Any claims or alleged interest or objections if any, which are not received within Fifteen (15) days from the date of publication of this notice shall be considered to have been consciously waived or abandoned for all intents and purposes. Any objections and/or claims and/or response received thereafter will not be binding on my clients and my clients will proceed to develop and sell Item Nos.1 to 4 in the Schedule Property as if there are no claims/objections.
SCHEDULE
Properties in Sy. Nos. 94, 95, 101 and 102 (Sy. Nos.101 and 102 are forming portion of Old Sy. No.25) situated at Chokksandra Village, Sarjapura-2 Hobli, Anekal Taluk, as detailed below:

Sl. No.	Sy. No.	Extend (A	- G)	Boundaries East by	West by	North by	South by
1.	94	04	03	Property in Sy. Nos. 134 & 135	Property in Sy. Nos. 25	Property in Sy. Nos. 25 & 134	Property in Sy. Nos. 95
2.	95	01	29	Property in Sy. Nos. 94	Property in Sy. Nos. 89	Property in Sy. Nos. 94	Property in Sy. Nos. 96
3.	101	01	00	Road	Property in Sy. Nos. 135	Property in Sy. Nos. 25	Property in Sy. Nos. 102
4.	102	01	00	Road	Property in Sy. Nos. 135	Property in Sy. Nos. 101	Property in Sy. Nos. 103
5.	Total	07	32				

Sd/- S. V. Giridhar, Giridhar & Co., Advocates
A : First Floor, Nos.1 & 2, 6th Cross, Block 9A, Off Railway Parallel Road, Kumara Park West, Bangalore-560020.
Email: svg@giriandco.in
Bangalore
Dated: 24-11-2025

ಹೆಸರು ಬದಲಾವಣೆ
ಜಯಂತಿ ಬಿ.ಕೆ., ಬೆಂಗಳೂರು ದಕ್ಷಿಣ ಜಿಲ್ಲೆ, ಚನ್ನಪಟ್ಟಣ ಟೌನ್, ಎಂ.ಜಿ. ರೋಡ್ ಕ್ರಾಸ್, ತಿರುಚನಗೇರಿ ಮನೆ ನಂ.589/1ರಲ್ಲಿಯ ನಿವಾಸಿಯಾಗಿದ್ದು, ನನ್ನ ಪಾಸ್‌ಪೋರ್ಟ್‌ನಲ್ಲಿ ನನ್ನ ಹೆಸರು ಜಯಂತಿ ಸುರೇಶ್ ಬಾಬು ಎಂದಿದೆ. ಅದರೇ ಆಧಾರ್, ಪ್ಯಾನ್ ಹಾಗೂ ಇತರೆ ದಾಖಲೆಗಳಲ್ಲಿ ಜಯಂತಿ ಬಿ.ಕೆ. ಎಂದಾಗಿದೆ. ಇವೆರಡು ನನ್ನದೇ ಹೆಸರುಗಳಾಗಿದ್ದು ಇದನ್ನು ದಿನಾಂಕ: 19–11–2025ರಂದು ನೋಟರಿಯವರಾದ ಟಿ.ಎಂ. ಲಕ್ಷ್ಮಣ, ಚನ್ನಪಟ್ಟಣ ಅವರ ಮುಂದೆ ಪ್ರಮಾಣೀಕರಿಸಿದ್ದೇನೆ. ಇನ್ನು ಮುಂದೆ ನನ್ನ ಹೆಸರನ್ನು ಜಯಂತಿ ಬಿ.ಕೆ. ಎಂದು ಕರೆಯಲಾಗುವುದು.

DH Classifieds More value, more impact ಪ್ರಜಾವಾಣಿ
RECRUITMENT
BOOK YOUR JOB ADS IN DH ALL KARNATAKA + PRAJAVANI BENGALURU CITY ON WEDNESDAY + SUNDAY
@ 2481/-* FOR 15 WORDS
*Conditions apply
www.dhclassifieds.com BOOK NOW
For more details contact:
+91 9731810277 | +91 9845114560 | +91 9900428036

ಕಟ್ಟಡ ನಕ್ಷೆ ಉಲ್ಲಂಘನೆ ತಡೆಗೆ ಮಾರ್ಗಸೂಚಿ

ತಳಪಾಯಕ್ಕೆ ಪ್ರಮಾಣಪತ್ರ ಕಡ್ಡಾಯ; ನಗರ ಯೋಜನೆ ಅಧಿಕಾರಿಗಳಿಗೆ ಜವಾಬ್ದಾರಿ

● ಆರ್.ಮಂಜುನಾಥ್

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ವ್ಯಾಪ್ತಿಯಲ್ಲಿ ಅನಧಿಕೃತ ಕಟ್ಟಡ ನಿರ್ಮಾಣವನ್ನು ತಡೆಯಲು ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆಯಂತೆ (ಜಿಬಿಜಿಎ) ನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ಮಾರ್ಗಸೂಚಿಗಳನ್ನು ರಚಿಸಲಾಗಿದೆ. ಇದರ ಅನುಷ್ಠಾನ ಹಾಗೂ ಜವಾಬ್ದಾರಿಯನ್ನು ಅಧಿಕಾರಿಗಳಿಗೆ ನಿಗದಿಪಡಿಸಲಾಗಿದೆ.

ಜಿಬಿಜಿಎಯಂತೆ ನಗರ ಪಾಲಿಕೆಗಳ ಆಯುಕ್ತರು ಆದೇಶ ಹೊರಡಿಸಿದ್ದು, ಮಂಜೂರಾತಿ ನಕ್ಷೆಗಳ ಉಲ್ಲಂಘನೆ, ಅನಧಿಕೃತ ಕಟ್ಟಡಗಳ ನಿರ್ಮಾಣ ತಡೆಗೆ ಅನುಸರಿಸಬೇಕಾದ ಕಾರ್ಯ ವಿಧಾನ ಹಾಗೂ ಮಾರ್ಗಸೂಚಿಯನ್ನು ವಿವರಿಸಿದ್ದಾರೆ.

ನಗರ ಪಾಲಿಕೆಯ ಕೇಂದ್ರ ಕಚೇರಿ ಅಥವಾ ವಲಯ ಕಚೇರಿಯಿಂದ ಕಟ್ಟಡಕ್ಕೆ (ನೆಲ ಮತ್ತು ಮೂರು ಮಹಡಿಯ 15 ಮೀಟರ್‌ವರೆಗೆ) ನಕ್ಷೆ ಅನುಮೋದನೆಯಾದ ಮೇಲೆ, ನಿರ್ಮಾಣ ಆರಂಭಿಸುವ 30 ದಿನಗಳೊಳಗೆ 'ತಳಪಾಯದ ಗಡಿರೇಖೆಯ ಗುರುತು' ('ಪ್ಲಿಂತ್ ಲೈನ್ ಮಾರ್ಕಿಂಗ್') ಪಡೆಯಬೇಕು. ನಗರ ಯೋಜನೆ ವಿಭಾಗದ ನಗರ ಯೋಜಕರು/ ಸಹಾಯಕ ನಿರ್ದೇಶಕರು ಕಟ್ಟಡ ಮಾಲೀಕರು ಅಥವಾ ಅವರ ಪ್ರತಿನಿಧಿಗಳ ಮುಂದೆ ಗುರುತು ಮಾಡಿ, ತಳಪಾಯದ ಪ್ರಮಾಣ ಪತ್ರ ನೀಡಬೇಕು. ವಲಯ ಮಟ್ಟದ ಉಪ ನಿರ್ದೇಶಕರು ಇದನ್ನು ದೃಢೀಕರಿಸಿಕೊಳ್ಳಬೇಕು. ಬೃಹತ್ ಕಟ್ಟಡಗಳಿಗೆ ಕೇಂದ್ರ ಮಟ್ಟದಲ್ಲಿ ಜಂಟಿ ನಿರ್ದೇಶಕರಿಗೆ ಈ ಜವಾಬ್ದಾರಿ ವಹಿಸಲಾಗಿದೆ.

ಮಂಜೂರಾದ ನಕ್ಷೆ ಮತ್ತು ದಾಖಲೆಗಳನ್ನು ವಲಯ ಮತ್ತು ಕೇಂದ್ರ ಕಚೇರಿಯ ನಗರ ಯೋಜಕರು ಸಂಬಂಧಪಟ್ಟ ವಾರ್ಡ್‌ಗಳಿಗೆ ಮಾಹಿತಿ ನೀಡಿ, ಅಂತರ್ಜಾಲದಲ್ಲಿ ಪ್ರಕಟಿಸಬೇಕು. ವಾರ್ಡ್‌ಗಳ ಕಿರಿಯ/ ಸಹಾಯಕ ಎಂಜಿನಿಯರ್‌ಗಳು, ನಗರ ಯೋಜಕರು ಕಟ್ಟಡ ನಿರ್ಮಾಣದ ತಪಾಸಣೆಯನ್ನು ಜನವರಿ, ಮಾರ್ಚ್, ಮೇ, ಜುಲೈ, ಸೆಪ್ಟೆಂಬರ್, ನವೆಂಬರ್‌ನಲ್ಲಿ ಕೈಗೊಳ್ಳಬೇಕು. ಜಂಟಿ ನಿರ್ದೇಶಕರು/ ಉಪ ನಿರ್ದೇಶಕರು ತಪಾಸಣೆಯನ್ನು ನಡೆಸಿ ಮೇಲಧಿಕಾರಿಗಳಿಗೆ ವರದಿ ನೀಡಬೇಕು. ಸ್ವಾಧೀನಾನುಭವ ಪ್ರಮಾಣ ಪತ್ರ ಪಡೆದ ನಂತರ ಉಲ್ಲಂಘನೆ ಕಂಡು ಬಂದರೆ, ಆದನ್ನು ಉಪ ವಿಭಾಗದ ಸಹಾಯಕ ಎಂಜಿನಿಯರ್ ಅವರಿಗೆ ವರದಿ ಸಲ್ಲಿಸಬೇಕು. ನಿಯಮದ ಪ್ರಕಾರ ಅವರು ಕ್ರಮ ಕೈಗೊಳ್ಳಬೇಕು.

ಅನುಷ್ಠಾನ ಕಾರ್ಯಪಡೆ

ಅಧ್ಯಕ್ಷ–ನಗರ ಪಾಲಿಕೆ ವಲಯದ ಜಂಟಿ ಆಯುಕ್ತ; ಸದಸ್ಯರು–ನಗರ ಯೋಜನೆ ಜಂಟಿ ನಿರ್ದೇಶಕ, ಉಪ ನಿರ್ದೇಶಕ, ವಿಭಾಗಗಳ ಕಾರ್ಯಪಾಲಕ ಎಂಜಿನಿಯರ್, ಸಹಾಯಕ ಕಂದಾಯ ಅಧಿಕಾರಿ, ಬಿಎಂಟಿಎಫ್ ಡಿಎಸ್‌ಪಿ ಹಾಗೂ ಸಂಚಾಲಕ–ಸಹಾಯಕ ಕಾರ್ಯಪಾಲಕ ಎಂಜಿನಿಯರ್.

ಅನಧಿಕೃತ ಕಟ್ಟಡ ತೆರವು ಹಾಗೂ ನಕ್ಷೆ ಉಲ್ಲಂಘಿಸುವ ನಿರ್ಮಾಣ ತಡೆಯಲು ಕಾಯ್ದೆ ಪ್ರಕಾರ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುತ್ತಿದೆ
ರಾಜೇಂದ್ರ ಚೋಳನ್,
ಆಯುಕ್ತ, ಬೆಂಗಳೂರು ಕೇಂದ್ರ ನಗರ ಪಾಲಿಕೆ

130 ದಿನಗಳಲ್ಲಿ ತೆರವು ಪೂರ್ಣ

ದೂರು ಸ್ವೀಕರಿಸಿದ ದಿನದಿಂದ 130 ದಿನಗಳಲ್ಲಿ ಅಕ್ರಮ ನಿರ್ಮಾಣಗಳನ್ನು ತೆರವುಗೊಳಿಸಲು ನಗರ ಪಾಲಿಕೆ ಅಧಿಕಾರಿಗಳಿಗೆ ಜವಾಬ್ದಾರಿ ವಹಿಸಿ, ಆಯಾ ದಿನಗಳೊಳಗೆ ಕ್ರಮ ಕೈಗೊಳ್ಳಲು ಆದೇಶ ಹೊರಡಿಸಲಾಗಿದೆ.

- ದೂರು ಸ್ವೀಕಾರವಾದ ನಂತರ ಸಹಾಯಕ ಕಾರ್ಯಪಾಲಕ ಎಂಜಿನಿಯರ್ (ಎಇಇ)–3 ದಿನ
- ಸಹಾಯಕ ಎಂಜಿನಿಯರ್ ಸ್ಥಳ ಪರಿಶೀಲನೆ ನಡೆಸಿ ಎಇಇಗೆ ವರದಿ ಸಲ್ಲಿಸಬೇಕು. ನಗರ ಯೋಜನೆ ಸಹಾಯಕ ನಿರ್ದೇಶಕರು ನಿಗಾವಹಿಸಿದ ವರದಿ ಸಲ್ಲಿಕೆ – 7 ದಿನ
- ಎಡಿಟಿಪಿ ಅವರ ಸಹಾಯದೊಂದಿಗೆ ಎಇಇ ಸ್ಥಳ ಮಹಜರು ಮಾಡಿ ವರದಿ ಸಲ್ಲಿಕೆ – 15 ದಿನ
- ಜಿಬಿಜಿಎ ಕಾಯ್ದೆಯಂತೆ ಆದೇಶ ಪಡೆಯಲು ಜಂಟಿ ಆಯುಕ್ತರಿಗೆ ಪ್ರಸ್ತಾವ ಸಲ್ಲಿಕೆ – 7 ದಿನ
- ಜಂಟಿ ಆಯುಕ್ತರು ಸಂಬಂಧಿತ ಎಇಇ ಅವರಿಗೆ ಆದೇಶ ನೀಡಲು ಅನುಮತಿ – 3 ದಿನ
- ಕಟ್ಟಡದ ಮಾಲೀಕರಿಂದ ವಿವರಣೆ ಪಡೆದು, ವಿಚಾರಣೆ ನಡೆಸಲು ಜಂಟಿ ನಿರ್ದೇಶಕರಿಗೆ ಇರುವ ಅವಧಿ – 20 ದಿನ
- ಜಂಟಿ ಆಯುಕ್ತರ ಆದೇಶದ ನಂತರ ಕಾರ್ಯಾಚರಣೆ ಆದೇಶ ಹೊರಡಿಸಲು ಎಇಇಗೆ ಸಮಯ – 5 ದಿನ
- ಕಟ್ಟಡವನ್ನು ಜಪ್ತಿ ಮಾಡಿ, ಬೆಸ್ಕಾಂ, ಜಲಮಂಡಳಿ ಸಂಪರ್ಕವನ್ನು ಕಡಿತಗೊಳಿಸಿ, ತೆರವಿನ ಅಂದಾಜು ಪಟ್ಟಿ ಸಲ್ಲಿಸಲು ಕಾರ್ಯಪಾಲಕ ಎಂಜಿನಿಯರ್‌ಗೆ (ಇಇ) ಸಮಯ – 5 ದಿನ
- ತಾಂತ್ರಿಕ ಮತ್ತು ಆಡಳಿತಾತ್ಮಕ ಅನುಮೋದನೆ ಪಡೆಯಲು ಇಇ ಅಂದಾಜು ಪಟ್ಟಿ ತಯಾರಿಕೆ – 15 ದಿನ
- ಜಂಟಿ ಆಯುಕ್ತ/ ಅನುಷ್ಠಾನ ಕಾರ್ಯಪಡೆಯಿಂದ ತೆರವು ಆದೇಶ ನೀಡಲು – 15 ದಿನ
- ಅಕ್ರಮ ಕಟ್ಟಡದ ತೆರವಿಗೆ ಗುರುತು ಮಾಡುವುದು ಎಇಇ/ ಎಡಿಟಿಪಿಗೆ ಸಮಯ – 15 ದಿನ
- ಅನುಷ್ಠಾನ ಕಾರ್ಯಪಡೆಯಿಂದ ತೆರವು ಕಾರ್ಯಾಚರಣೆ – 10 ದಿನ
- ತೆರವು ಕಾರ್ಯಾಚರಣೆಯ ವೆಚ್ಚವನ್ನು ಭರಿಸಿಕೊಳ್ಳಲು ಜಂಟಿ ಆಯುಕ್ತರು/ ಎಇಇ ಅವರಿಂದ ಕಂದಾಯ ಅಧಿಕಾರಿಗೆ ಆದೇಶ – 5 ದಿನ

ಅಕ್ರಮ ಕಟ್ಟಡ ತೆರವಿಗೆ ನಿಯಮ

ಕಟ್ಟಡ ನಕ್ಷೆ ಪಡೆಯದೆ ನಿರ್ಮಿಸಿರುವ ಕಟ್ಟಡಗಳು, ನಕ್ಷೆ ಪಡೆದರೂ ಅದನ್ನು ಉಲ್ಲಂಘಿಸಿ ನಿರ್ಮಾಣವಾಗಿರುವ ಕಟ್ಟಡಗಳು, ಹೆಚ್ಚುವರಿ ನಿರ್ಮಾಣ ಸೇರಿದಂತೆ ಎಲ್ಲ ರೀತಿಯ ಅನಧಿಕೃತ ಕಟ್ಟಡಗಳ ತೆರವಿಗೆ, ಸಮಯ ನಿಗದಿ ಮಾಡಿ ಆದೇಶ ಹೊರಡಿಸಲಾಗಿದೆ. ತೆರವು ಕಾರ್ಯಾಚರಣೆಗೆ ಜಂಟಿ ಆಯುಕ್ತರ ಅಧ್ಯಕ್ಷತೆಯಲ್ಲಿ ಅನುಷ್ಠಾನ ಕಾರ್ಯಪಡೆಯನ್ನೂ ರಚಿಸಲಾಗಿದೆ.

ಪ್ರತಿಯೊಬ್ಬ ಅಧಿಕಾರಿಗಳೂ ಅವರಿಗೆ ನಿಗದಿಯಾದ ಸಮಯದಲ್ಲಿ ಕ್ರಮ ಕೈಗೊಳ್ಳದಿದ್ದರೆ ಅವರ ಮೇಲೆ ಶಿಸ್ತುಕ್ರಮವಾಗಲಿದೆ. ಸುಪ್ರೀಂ ಕೋರ್ಟ್ ಆದೇಶ ಹಾಗೂ ಜಿಬಿಜಿಎಯಲ್ಲಿರುವ ಎಲ್ಲ ಅವಕಾಶವನ್ನು ಉಪಯೋಗಿಸಿಕೊಂಡು, ಯಾವ ರೀತಿ ನೋಟಿಸ್ ಜಾರಿ ಮಾಡಬೇಕು ಎಂಬುದನ್ನೂ ವಿವರಿಸಲಾಗಿದೆ. ಇದರಿಂದ ಅಕ್ರಮ–ಅನಧಿಕೃತ ಕಟ್ಟಡಗಳ ತೆರವಿಗೆ ನ್ಯಾಯಾಲಯದಿಂದ ತಡೆಯಾಜ್ಞೆ ಸಿಗದಂತೆ ಪ್ರಕ್ರಿಯೆ ನಡೆಸಲು ಸಹಕಾರಿಯಾಗಲಿದೆ ಎಂದು ನಗರ ಯೋಜನೆ ವಿಭಾಗದ ಅಧಿಕಾರಿಗಳು ತಿಳಿಸಿದರು.

ಕರುನಾಡ ಸಾಧಕರಿಗೆ ಆಯೋಜಕರು ಗೌರವ ಸಲ್ಲಿಸಿದರು

ಕರುನಾಡ ಸುಧಾರಕರ ಸಾಧನೆ ಸ್ಮರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಟಿವಿ, ಟಾಕಿಂಗ್ ಪ್ಯಾರೆಟ್ಸ್ ಮತ್ತು ಎಡಿ6 ಅಡ್ವರ್ಟೈಸಿಂಗ್ ಜಂಟಿಯಾಗಿ ನಗರದಲ್ಲಿ ಹಮ್ಮಿಕೊಂಡಿದ್ದ 'ಕರುನಾಡ ಸುಧಾರಕರು' ಕಾರ್ಯಕ್ರಮದಲ್ಲಿ ಏಳು ದಶಕಗಳಲ್ಲಿ ಕನ್ನಡ ನಾಡು ಕಂಡ ಅಪರೂಪದ ಸಾಧಕರ ಸಾಧನೆಯನ್ನು ದೃಶ್ಯ ರೂಪದಲ್ಲಿ ಸ್ಮರಿಸಲಾಯಿತು.

ಕರ್ನಾಟಕ ಏಕೀಕರಣಗೊಂಡು 70 ವರ್ಷಗಳಾದ ಪ್ರಯುಕ್ತ ಈ ವಿನೂತನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ನಾಡು, ನುಡಿ, ನೆಲ, ಜಲದ ವಿಷಯಕ್ಕೆ ಎದ್ದು ನಿಲ್ಲುವ ಸ್ವಾಭಿಮಾನಿಗಳ ಶ್ರೇಷ್ಠತೆಯನ್ನು ಸ್ಮರಿಸಿ, ಅವರಿಗೆ ಗೌರವ ಸಮರ್ಪಿಸಲಾಯಿತು. ಮಯೂರ ವರ್ಮನಿಂದ ಈವರೆಗಿನ ಸಾಧಕರ ಸಾಧನೆಯ ಕಥೆಗಳನ್ನು ದೃಶ್ಯ ರೂಪದಲ್ಲಿ ಸ್ಮರಿಸಲಾಯಿತು. ನಾಡಿನ ಸಾಹಿತಿಗಳು, ಹೋರಾಟಗಾರರು, ಕ್ರಾಂತಿವೀರರು, ವಚನಕಾರರ ಮಾಹಿತಿ ಫಲಕಗಳನ್ನು ಪ್ರದರ್ಶಿಲಾಯಿತು.

ಈ ಕಾರ್ಯಕ್ರಮದ ಬಗ್ಗೆ ಮೆಚ್ಚುಗೆಯ ಮಾತುಗಳನ್ನಾಡಿದ ಸಂಗೀತ ನಿರ್ದೇಶಕ ಹಂಸಲೇಖ, 'ನಾಡ ಶಿಲ್ಪಿಗಳ ನಮನ ಕಾರ್ಯಕ್ರಮ ಸರ್ಕಾರಕ್ಕೂ ಮಾದರಿ' ಎಂದರು. ಮಾಜಿ ಮುಖ್ಯಮಂತ್ರಿ ಡಿ.ವಿ ಸದಾನಂದಗೌಡ, ಸಚಿವರಾದ ಎನ್. ಚಲುವರಾಯಸ್ವಾಮಿ, ಸಂತೋಷ್ ಲಾಡ್, ರಾಮಲಿಂಗಾರೆಡ್ಡಿ ಹಾಗೂ ಜಮೀರ್ ಅಹ್ಮದ್ ಖಾನ್, ಸಂಸದ ಡಾ.ಸಿ. ಎನ್. ಮಂಜುನಾಥ್ ಶ್ಲಾಘಿಸಿದರು.

ಶಾಸಕರಾದ ಟಿ.ಬಿ. ಜಯಚಂದ್ರ, ಎಸ್.ಆರ್. ವಿಶ್ವನಾಥ್, ಎಂ. ಕೃಷ್ಣಪ್ಪ, ಸಿ.ಕೆ. ರಾಮಮೂರ್ತಿ, ರವಿಕುಮಾರ್ ಗಣಿಗ, ಮುನಿರತ್ನ, ಬಸವರಾಜ ಶಿವಣ್ಣನವರ, ಜವರಾಯಿಗೌಡ, ಮಾಜಿ ಶಾಸಕರಾದ ಸುರೇಶ್ ಗೌಡ, ರಮೇಶ್ ಗೌಡ, ಸಿ.ಎಸ್. ನಿರಂಜನ್, ಮಾಗಡಿ ಎ. ಮಂಜುನಾಥ್, ಅಜ್ಜಂಪೀರ್ ಖಾದ್ರಿ, ಎಂ.ಸಿ. ವೇಣುಗೋಪಾಲ್ ಉಪಸ್ಥಿತರಿದ್ದರು.

ಆಸ್ಟ್ರೇಲಿಯಾ, ಅಮೆರಿಕ, ಸೌದಿ ದೇಶಗಳಿಗೆ ನಂದಿನಿ ಉತ್ಪನ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಸ್ಟ್ರೇಲಿಯಾ, ಅಮೆರಿಕ ಮತ್ತು ಸೌದಿ ಅರೇಬಿಯಾ ದೇಶಗಳಿಗೆ ಕೆಎಂಎಫ್ ನಂದಿನಿ ತುಪ್ಪವನ್ನು ರಫ್ತು ಮಾಡುವ ವಾಹನಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮಂಗಳವಾರ ಚಾಲನೆ ನೀಡಿದರು.

ತಮ್ಮ ಕಾವೇರಿ ನಿವಾಸದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಮುಖ್ಯಮಂತ್ರಿ, 'ನಂದಿನಿ ತುಪ್ಪಕ್ಕೆ ದೇಶ ವಿದೇಶಗಳಲ್ಲಿಯೂ ಹೆಚ್ಚಿನ ಬೇಡಿಕೆಯಿದೆ. ಸೌದಿ ಅರೇಬಿಯಾದಿಂದ ಎಂಟು ಟನ್, ಅಮೆರಿಕದಿಂದ ಐದು ಟನ್ ಹಾಗೂ ಆಸ್ಟ್ರೇಲಿಯಾದಿಂದ ಒಂದು ಟನ್ ತುಪ್ಪಕ್ಕೆ ಬೇಡಿಕೆ ಬಂದಿದೆ' ಎಂದರು.

'ದುಬೈ, ಕತಾರ್, ಬ್ರುನೈ, ಮಾಲ್ದೀವ್ಸ್ ಹಾಗೂ ಸಿಂಗಪುರ ಸೇರಿದಂತೆ ಭಾರತೀಯರು, ವಿಶೇಷವಾಗಿ ಕನ್ನಡಿಗರು ಹೆಚ್ಚಾಗಿ ನೆಲಸಿರುವ ನೆರೆಯ ರಾಷ್ಟ್ರಗಳನ್ನು ಕೇಂದ್ರೀಕರಿಸಿ ನಂದಿನಿ ಯುಎಚ್‌ಟಿ ಟೆಟ್ರಾ ಪ್ಯಾಕ್ ಹಾಲು, ತುಪ್ಪ, ಚೀಸ್, ಡೇರಿ ವೈಟ್ನರ್, ಬೆಣ್ಣೆ, ಐಸ್‌ಕ್ರೀಂ, ಸುವಾಸಿತ ಹಾಲು, ಸಿಹಿ ಉತ್ಪನ್ನ, ಸೇವರೀಸ್ ರಫ್ತು ಮಾಡಲಾಗುತ್ತಿದೆ. ಜಾಗತಿಕ ಮಟ್ಟದಲ್ಲಿ ನಂದಿನಿ ಹಾಲು ಮತ್ತು ಹಾಲಿನ ಉತ್ಪನ್ನಗಳ ಮಾರಾಟವನ್ನು ಹೆಚ್ಚಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ' ಎಂದು ಕೆಎಂಎಫ್ ವ್ಯವಸ್ಥಾಪಕ ನಿರ್ದೇಶಕ ಬಿ. ಶಿವಸ್ವಾಮಿ ತಿಳಿಸಿದರು.

'2023ರ ಸೆ. 9ರಂದು ಫ್ರಾಂಚೈಸಿದಾರರ ಮೂಲಕ ಯುಎಇನಲ್ಲಿ ಅಂತರರಾಷ್ಟ್ರೀಯ ಮಟ್ಟದ ಮೊದಲ 'ನಂದಿನಿ ಕೆಫೆ ಮೂ' ಆರಂಭಿಸಿ ತುಪ್ಪ, ಬೆಣ್ಣೆ, ಚೀಸ್, ಯುಎಚ್‌ಟಿ ಹಾಲು, ಐಸ್‌ಕ್ರೀಂ, ಸಿಹಿ ಉತ್ಪನ್ನ ಹಾಗೂ ಖಾರದ ತಿನಿಸುಗಳನ್ನು ರಫ್ತು ಮಾಡಿ ಮಾರಾಟ ವಹಿವಾಟು ವಿಸ್ತರಿಸಲಾಗಿದೆ. ಮರ್ಚೆಂಟ್ ರಫ್ತುದಾರರ ಮೂಲಕ ಇದೇ ಸೆಪ್ಟೆಂಬರ್ ತಿಂಗಳಿನಿಂದ ನಂದಿನಿ ಪೇಡ, ಮೈಸೂರ್ ಪಾಕ್, ಬರ್ಫಿ ಮತ್ತಿತರ ಉತ್ಪನ್ನಗಳನ್ನು ಅಮೆರಿಕಕ್ಕೆ ರಫ್ತು ಮಾಡಲಾಗುತ್ತಿದೆ' ಎಂದರು.

ಪಶು-ಸಂಗೋಪನಾ ಸಚಿವ ಕೆ. ವೆಂಕಟೇಶ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರಾದ ಲಕ್ಷ್ಮಿ ಹೆಬ್ಬಾಳಕರ ಉಪಸ್ಥಿತರಿದ್ದರು.

ನಗರದಲ್ಲಿ ಇಂದು

ಮಕ್ಕಳ ವಚನ ಮೇಳ: ಆಯೋಜನೆ: ವಚನ ಜ್ಯೋತಿ ಬಳಗ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಬೆಳಿಗ್ಗೆ 9.30

ಕರ್ನಾಟಕ ರಾಜ್ಯೋತ್ಸವದ ಸಂಭ್ರಮ, ಮುದ್ರಣ ಬೆಡಗು: ಅತಿಥಿಗಳು: ಎಲ್. ಎನ್. ಮುಕುಂದರಾಜ್, ಕೆ.ಎಸ್. ಮಂಜು, ಆರ್. ಪೂರ್ಣಿಮಾ, ಅಧ್ಯಕ್ಷತೆ: ಡಾ. ವಸುಂಧರಾ ಭೂಪತಿ, ಆಯೋಜನೆ: ಕರ್ನಾಟಕ ಪ್ರಕಾಶಕರ ಸಂಘ, ಸ್ಥಳ: ಲಕ್ಷ್ಮಿ ಮುದ್ರಣಾಲಯ, ಐದನೇ ಅಡ್ಡರಸ್ತೆ, ಚಾಮರಾಜಪೇಟೆ, ಬೆಳಿಗ್ಗೆ 11



ಎಲ್‌.ಎನ್‌. ಮುಕುಂದರಾಜ್

ಸಂವಿಧಾನ ದಿನಾಚರಣೆಯ ಉದ್ಘಾಟನೆ: ಸಿದ್ದರಾಮಯ್ಯ, ಉಪಸ್ಥಿತಿ: ಡಿ.ಕೆ. ಶಿವಕುಮಾರ್, ಬಸವರಾಜ ಹೊರಟ್ಟಿ, ಯು.ಟಿ. ಖಾದರ್, ಅಧ್ಯಕ್ಷತೆ: ಎಚ್.ಸಿ. ಮಹದೇವಪ್ಪ, ಅತಿಥಿಗಳು: ಪ್ರಿಯಾಂಕ್ ಖರ್ಗೆ, ಬಿ.ಝಡ್. ಜಮೀರ್ ಅಹಮದ್ ಖಾನ್, ಶಿವರಾಜ್ ಎಸ್. ತಂಗಡಗಿ, ಮಧು ಬಂಗಾರಪ್ಪ, ಡಾ.ಎಂ.ಸಿ. ಸುಧಾಕರ್, ಆರ್. ಅಶೋಕ, ಛಲವಾದಿ ನಾರಾಯಣಸ್ವಾಮಿ, ರಿಜ್ವಾನ್ ಅರ್ಷದ್, ಆಯೋಜನೆ: ಸಮಾಜ ಕಲ್ಯಾಣ ಇಲಾಖೆ, ಬೆಳಿಗ್ಗೆ 10ಕ್ಕೆ

ವಿಧಾನಸೌಧದ ಭವ್ಯ ಮೆಟ್ಟಿಲುಗಳಿಂದ ಡಾ.ಬಿ.ಆರ್. ಅಂಬೇಡ್ಕರ್ ಭವನದವರೆಗೆ ಕಾಲ್ನಡಿಗೆ ಜಾಥಾ, ವೇದಿಕೆ ಕಾರ್ಯಕ್ರಮ ನಡೆಯುವ ಸ್ಥಳ: ಡಾ.ಬಿ.ಆರ್. ಅಂಬೇಡ್ಕರ್ ಭವನ, ವಸಂತನಗರ, ಬೆಳಿಗ್ಗೆ 11

ಕರ್ನಾಟಕ ರಾಜ್ಯೋತ್ಸವ: ಅತಿಥಿಗಳು: ಗೌರವ್ ಗುಪ್ತಾ, ಅಗ್ರಹಾರ ಕೃಷ್ಣಮೂರ್ತಿ, ಆಯೋಜನೆ: ಶಕ್ತಿ ವಾಹಿನಿ ಕನ್ನಡ ಬಳಗ, ಕರ್ನಾಟಕ ವಿದ್ಯುತ್ ನಿಗಮ, ಸ್ಥಳ: ಖಿಂಚಾ ಸಭಾಂಗಣ, ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಮಧ್ಯಾಹ್ನ 1

ಸಂವಿಧಾನ ದಿನಾಚರಣೆ, ಸಂವಿಧಾನ ಸೈನಿಕರ ಸಮಾವೇಶ, ಭಾರತ ಸಂವಿಧಾನ ನಾಲ್ಕನೇ ದ್ವಿಭಾಷಾ ಆವೃತ್ತಿ ಪುಸ್ತಕ ಬಿಡುಗಡೆ: ಸಿದ್ದರಾಮಯ್ಯ, ಅತಿಥಿ: ಡಾ.ಎಂ.ಸಿ. ಸುಧಾಕರ್, ಅಧ್ಯಕ್ಷತೆ: ಎಚ್.ಕೆ. ಪಾಟೀಲ, ಆಯೋಜನೆ: ಡಾ. ಮನಮೋಹನಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯ, ಸ್ಥಳ: ಜ್ಞಾನಜ್ಯೋತಿ ಸಭಾಂಗಣ, ಸೆಂಟ್ರಲ್ ಕಾಲೇಜಿನ ಆವರಣ, ಮಧ್ಯಾಹ್ನ 1

ರಾಷ್ಟ್ರಕವಿ ಕುವೆಂಪು ಅವರ ಐದು ದಿನಗಳ ರಾಜ್ಯಮಟ್ಟದ ನಾಟಕೋತ್ಸವ: 'ನರಿಗಳಿಗೇಕೆ ಕೋಡಿಲ್ಲ?' ನಾಟಕ ಪ್ರದರ್ಶನ: ಅಮರೇಶ್ವರ ವಿಜಯ ನಾಟಕ ಮಂಡಳಿ, ಸ್ಥಳ: ಎಚ್. ತಿಮ್ಮೇಗೌಡ ಸಭಾಂಗಣ, ವಿದ್ಯಾನಿಕೇತನ ಪಬ್ಲಿಕ್ ಶಾಲೆ, ಸುಂಕದಕಟ್ಟೆ, ಮಧ್ಯಾಹ್ನ 1.30

ಸಂವಿಧಾನ ದಿನಾಚರಣೆ ಅಂಗವಾಗಿ 'ಭಾವೈಕ್ಯ ಭಾರತವ ಕಟ್ಟೋಣ' ವಿಚಾರಗೋಷ್ಠಿ: ಉದ್ಘಾಟನೆ: ಎಂ. ನಾರಾಯಣಸ್ವಾಮಿ, ಅಧ್ಯಕ್ಷತೆ: ಗೋಪಾಲಕೃಷ್ಣ ಹರಳಹಳ್ಳಿ, ವಿಚಾರ ಮಂಡನೆ: ಶೋಭಾ ಸಿ., ಅತಿಥಿಗಳು: ಸಮೀವುಲ್ಲಾ ಖಾನ್, ಶ್ರ.ದೇ. ಪಾರ್ಶ್ವನಾಥ್, ಆಯೋಜನೆ: ದಲಿತ ಸಾಹಿತ್ಯ ಪರಿಷತ್ತು, ಸ್ಥಳ: ಗಾಂಧಿ ಸಾಹಿತ್ಯ ಸಂಘ, ಮಲ್ಲೇಶ್ವರ, ಎಂಟನೇ ಅಡ್ಡರಸ್ತೆ, ಸಂಜೆ 4

ಮಹಾಂತೇಶ ದೊಡ್ಡಮನಿ ಅವರ 'ಅನು ನೊಂದೆನಯ್ಯ ಅನು ಬೆಂದೆನಯ್ಯ' ಏಕವ್ಯಕ್ತಿ ಕಲಾಪ್ರದರ್ಶನದ ಉದ್ಘಾಟನೆ: ಎಂ.ಎಸ್. ಮೂರ್ತಿ, ಅತಿಥಿ: ಶಿವಾನಂದ ಬಸವಂತಪ್ಪ, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಸಂಜೆ 5

ಸಂವಿಧಾನ ದಿನ: ಅತಿಥಿಗಳು: ಎ.ಎಸ್. ಬೊಪ್ಪಣ್ಣ, ವಿಭು ಬಖ್ರು, ಅನು ಶಿವರಾಮನ್, ಕೆ.ಎಸ್. ಮುದಗಲ್, ಆಯೋಜನೆ ಮತ್ತು ಸ್ಥಳ: ಹೈಕೋರ್ಟ್ ಆಫ್ ಕರ್ನಾಟಕ, ಸಂಜೆ 5.30

ಅಧಿಕಾರ ಹಂಚಿಕೆ ಷರತ್ತು ಹಾಕಿರಲಿಲ್ಲ: ಜಾರ್ಜ್

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): 'ಕಾಂಗ್ರೆಸ್ ಸರ್ಕಾರ ರಚನೆ ಸಂದರ್ಭದಲ್ಲಿ ಶಾಸಕಾಂಗ ಪಕ್ಷದ ಸಭೆಯಲ್ಲಿ ಸಿದ್ದರಾಮಯ್ಯ ಅವರನ್ನು ಮುಖ್ಯಮಂತ್ರಿಯಾಗಿ ಆಯ್ಕೆ ಮಾಡಿದ್ದೆವು. ಆಗ ಇಂತಿಷ್ಟು ಅವಧಿಗೆ ಮುಖ್ಯಮಂತ್ರಿ ಎಂಬ ಷರತ್ತು ಹಾಕಿರಲಿಲ್ಲ. ಸದ್ಯಕ್ಕೆ ಮುಖ್ಯಮಂತ್ರಿ ಕುರ್ಚಿ ಖಾಲಿ ಇಲ್ಲ' ಎಂದು ಇಂಧನ ಸಚಿವ ಕೆ.ಜೆ.ಜಾರ್ಜ್ ಹೇಳಿದರು.

ಕೆ.ಜೆ. ಜಾರ್ಜ್

'ಶಾಸಕಾಂಗ ಸಭೆ ಹೊರತುಪಡಿಸಿ ಪಕ್ಷದ ವರಿಷ್ಠರು ಅಧಿಕಾರ ಹಂಚಿಕೆ ಬಗ್ಗೆ ಹೇಳಿದ್ದರೆ, ಅದರ ಬಗ್ಗೆ ನನಗೆ ಮಾಹಿತಿ ಇಲ್ಲ. ಅದರ ಬಗ್ಗೆ ವರಿಷ್ಠರೇ ಹೇಳುವರು' ಎಂದು ಅವರು ಮಂಗಳವಾರ ಸುದ್ದಿಗಾರರಿಗೆ ತಿಳಿಸಿದರು.

'ಕಷ್ಟದಲ್ಲಿದ್ದಾಗ ಮಾಡಿದ ಪೂಜೆ ಮರೆಯಲಾಗದು'

ಕನಕಪುರ(ರಾಮನಗರ): 'ಇವತ್ತು ನಾನು ಉಪ ಮುಖ್ಯಮಂತ್ರಿ ಮತ್ತು ಪಕ್ಷದ ಅಧ್ಯಕ್ಷನಾಗಿದ್ದೇನೆ ಎಂಬ ಕಾರಣಕ್ಕಾಗಿ ಮುಖ್ಯಮಂತ್ರಿಯಾಗಲಿ ಎಂದು ಬೆಂಬಲಿಗರು ಸೇರಿದಂತೆ ಹಲವರು ದೇವಸ್ಥಾನಗಳಲ್ಲಿ ವಿಶೇಷ ಪೂಜೆ ಮಾಡುತ್ತಿದ್ದಾರೆ. ಆದರೆ, ಇವತ್ತಿನ ಪೂಜೆಗಿಂತ ನಾನು ಜೈಲಿನಲ್ಲಿದ್ದಾಗ ಬಿಡುಗಡೆಗಾಗಿ ಪ್ರಾರ್ಥಿಸಿ ಮಾಡಿದ ಪೂಜೆ ಮರೆಯಲಾಗದು' ಎಂದು ಡಿ.ಕೆ. ಶಿವಕುಮಾರ್ ಹೇಳಿದರು.

ಡಿ.ಕೆ. ಶಿವಕುಮಾರ್

ನಾಯಕತ್ವ ಬದಲಾವಣೆಗೆ ಸಂಬಂಧಿಸಿ ಉಂಟಾದ ಗೊಂದಲಗಳಿಗೆ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಪರಿಹಾರ ನೀಡುವುದಾಗಿ ಹೇಳಿದ್ದಾರೆ. ಅಲ್ಲಿಯವರೆಗೂ ಕಾಯೋಣ
ಸತೀಶ ಜಾರಕಿಹೊಳಿ,
ಲೋಕೋಪಯೋಗಿ ಸಚಿವ

ಕನಕಪುರದಲ್ಲಿ ಮಂಗಳವಾರ ಮಾತನಾಡಿದ ಅವರು, 'ಬಿಜೆಪಿ ಅವಧಿಯಲ್ಲಿ ಜೈಲಿನಿಂದ ಬಿಡುಗಡೆಯಾದಾಗ ಪೊಲೀಸರ ಬೆದರಿಕೆಗೂ ಜಗ್ಗದೆ ಜನ ಸ್ವಾಗತಿಸಿದರು. ನಾನು ಜೈಲಿನಲ್ಲಿದ್ದಾಗ ಕರ್ನಾಟಕ ರಕ್ಷಣಾ ವೇದಿಕೆಯ ನಾರಾಯಣ ಗೌಡರಿಗೆ ಪ್ರತಿಭಟನೆ ನಡೆಸದಂತೆ ಅಂದಿನ ಪೊಲೀಸ್ ಕಮಿಷನರ್ ಭಾಸ್ಕರ್ ರಾವ್ ಬೆದರಿಕೆ ಹಾಕಿದ್ದರು. ಕೆಲ ಸ್ವಾಮೀಜಿಗಳು ಬಂದರು, ಉಳಿದವರು ಬರಲಿಲ್ಲ' ಎಂದರು.

'ಚನ್ನಪಟ್ಟಣದಲ್ಲಿ ಜೆಡಿಎಸ್‌ನ ಎಚ್.ಡಿ.ಕುಮಾರಸ್ವಾಮಿ ನನ್ನ ವಿರುದ್ಧ ಹೇಳಿಕೆ ಕೊಟ್ಟರು. ಆಗ ಅನೇಕರು ಮನೆಗೆ ಬಂದು ನನ್ನ ಪತ್ನಿ ಹಾಗೂ ಮಕ್ಕಳಿಗೆ ಧೈರ್ಯ ತುಂಬಿದ್ದರು. ಅಂದು ಜನ ಹರಕೆ ಹೊತ್ತು ಪ್ರಾರ್ಥಿಸಿದ್ದರು. ಆ ಹರಕೆ ಮುಗಿಸಲು ಇನ್ನೂ ಆಗುತ್ತಿಲ್ಲ' ಎಂದು ಪ್ರತಿಕ್ರಿಯಿಸಿದರು.



ಸುರಂಗ ರಸ್ತೆ ವಿರೋಧಿಸಿ ಜನ ಸಮಾವೇಶ 30ಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸುರಂಗ ರಸ್ತೆ ಯೋಜನೆ ಕೈಬಿಡುವಂತೆ ಆಗ್ರಹಿಸಿ ಬೆಂಗಳೂರು ಉಳಿಸಿ ಸಮಿತಿಯು ಇದೇ 30ರಂದು ಬೆಳಿಗ್ಗೆ 10.30ಕ್ಕೆ ಮಿಷನ್ ರಸ್ತೆಯಲ್ಲಿರುವ ಎಸ್‌ಸಿಎಂ ಹೌಸ್‌ನಲ್ಲಿ ಜನಸಮಾವೇಶ ಹಮ್ಮಿಕೊಂಡಿದೆ.

ಮಂಗಳವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಮಿತಿ ಸಂಚಾಲಕ ಶಶಿಕುಮಾರ್ ಜಿ, '₹17 ಸಾವಿರ ಕೋಟಿ ವೆಚ್ಚದಲ್ಲಿ ಹೆಬ್ಬಾಳದಿಂದ ಸಿಲ್ಕ್ ಬೋರ್ಡ್‌ವರೆಗೆ 17 ಕಿ.ಮೀ. ಉದ್ದದ ಸುರಂಗ ರಸ್ತೆ ನಿರ್ಮಿಸಲು ರಾಜ್ಯ ಸರ್ಕಾರ ಮುಂದಾಗಿರುವುದು ದುರಂತ. ಅವೈಜ್ಞಾನಿಕವಾದ ಈ ಯೋಜನೆಯಿಂದ ಬೆಂಗಳೂರಿನ ಪರಿಸರ ವ್ಯವಸ್ಥೆ ಕೆಡಲಿದೆ ಎಂದು ತಜ್ಞರು ಹೇಳುತ್ತಿದ್ದರೂ, ಸರ್ಕಾರ ಈ ಬಗ್ಗೆ ಕಿವಿಗೊಡದೆ ಯೋಜನೆಗೆ ಮುಂದಡಿ ಇಡುತ್ತಿರುವುದು ಸರಿಯಲ್ಲ. ಬೆಂಗಳೂರಿಗೆ ಮಾರಕವಾದ ಈ ಯೋಜನೆಯನ್ನು ಕೈಬಿಡಬೇಕು' ಎಂದು ಆಗ್ರಹಿಸಿದರು.

'ನಮ್ಮ ಮೆಟ್ರೊ ಯಶಸ್ವಿಯಾಗಿ ನಡೆಯುತ್ತಿರುವುದರಿಂದ, ಬೆಂಗಳೂರಿನ ರಸ್ತೆಗಳಲ್ಲಿ ಖಾಸಗಿ ವಾಹನಗಳ ಸಂಖ್ಯೆಯಲ್ಲಿ ಇಳಿಕೆ ಕಂಡುಬಂದಿರುವ ಬಗ್ಗೆ ಬೆಂಗಳೂರು ಸಂಚಾರ ಪೊಲೀಸರು ದೃಢಪಡಿಸಿದ್ದಾರೆ. 220 ಕಿ.ಮೀ.ಗಳ ಸಂಪೂರ್ಣ ಯೋಜನೆ ಪೂರ್ಣಗೊಂಡ ಬಳಿಕ ಸಂಚಾರ ಸಾಂದ್ರತೆಯಲ್ಲಿ ಮತ್ತಷ್ಟು ಇಳಿಕೆಯಾಗುವ ನಿರೀಕ್ಷೆಯಿದೆ. ಬಿಎಂಟಿಸಿ ಪ್ರಸ್ತುತ 45 ಲಕ್ಷಕ್ಕೂ ಅಧಿಕ ಜನರಿಗೆ ಸಂಪರ್ಕ ಕಲ್ಪಿಸುತ್ತಿದೆ. ಈ ಸಾರ್ವಜನಿಕ ಸಂಸ್ಥೆಗಳನ್ನು ಬಲಪಡಿಸುವ ಬದಲು, ಸುರಂಗ ರಸ್ತೆಗೆ ಆದ್ಯತೆ ನೀಡುತ್ತಿರುವುದು ಏಕೆ ಎಂಬುದು ನಿಗೂಢವಾಗಿದೆ' ಎಂದರು.

'ಬಸ್ ಸೇವೆ, ಮೆಟ್ರೊ ಮಾರ್ಗಗಳು, ರೈಲು ಇತ್ಯಾದಿ ಸಾರ್ವಜನಿಕ ಸಾರಿಗೆ ಸೌಲಭ್ಯಗಳಲ್ಲಿ ಸುಧಾರಣೆಯೊಂದಿಗೆ ಸಂಚಾರ ದಟ್ಟಣೆಗೆ ಪರಿಹಾರವಿದೆ. ಬೆಂಗಳೂರಿನ ಉಳಿವಿಗಾಗಿ ಹೋರಾಟ ನಡೆಸಬೇಕಾದ ಸಮಯ ಬಂದಿದೆ. ಜನಸಮಾವೇಶದಲ್ಲಿ ಪರಿಸರ ತಜ್ಞರು, ವಿಜ್ಞಾನಿಗಳು, ನಗರ ಯೋಜಕರು, ನಿರ್ಮಾಣ ತಂತ್ರಜ್ಞರು ಹಾಗೂ ಸಾಮಾಜಿಕ ಹೋರಾಟಗಾರರು ಪಾಲ್ಗೊಳ್ಳುತ್ತಾರೆ' ಎಂದು ಹೇಳಿದರು.

ನೀರಿನ ಅದಾಲತ್ ನಾಳೆ

ಪ್ರಜಾವಾಣಿ ವಾರ್ತೆ

ಜಲಮಂಡಳಿ ಸುದ್ದಿ

ಬೆಂಗಳೂರು: ಬೆಂಗಳೂರು ಜಲ ಮಂಡಳಿಯು ನೀರಿನ ಬಿಲ್ಲು, ನೀರು ಮತ್ತು ಒಳಚರಂಡಿ ಸಂಪರ್ಕ, ಗೃಹ ಬಳಕೆಯಿಂದ ಗೃಹೇತರ ಬಳಕೆಗೆ ಪರಿವರ್ತನೆ ವಿಳಂಬ ಮತ್ತಿತರ ಸಮಸ್ಯೆಗಳನ್ನು ಪರಿಹರಿಸಲು ನ. 27ರಂದು ಬೆಳಿಗ್ಗೆ 9.30ರಿಂದ 11ರವರೆಗೆ ನೀರಿನ ಅದಾಲತ್ ಹಮ್ಮಿಕೊಂಡಿದೆ.

ಮಂಡಳಿ ಸೇವಾ ಠಾಣೆಗಳಾದ ಅರಳೂರು, ದೊಡ್ಡ ಕಣ್ಣನಹಳ್ಳಿ, ಕಸವನ ಹಳ್ಳಿ, ಬಿ.ಟಿ.ಎಂ ಲೇಔಟ್ 1, 2 ಮತ್ತು 3, ವೆಸ್ಟ್ ಆಫ್ ಕಾರ್ಡ್ ರಸ್ತೆ 1 ಮತ್ತು 2, ಕಾಮಾಕ್ಷಿಪಾಳ್ಯ, ಕಮಲಾನಗರ, ಮಹಾಲಕ್ಷ್ಮೀ ಲೇಔಟ್, ಅಗ್ರಹಾರ ದಾಸರಹಳ್ಳಿ, ಶೆಟ್ಟಿಹಳ್ಳಿ, ಅಬ್ಬಿಗೆರೆ, ಚಿಕ್ಕಸಂದ್ರ, ಸಿಡೇದಹಳ್ಳಿ, ದೊಡ್ಡ ಬಿದರಕಲ್ಲು, ಜಿ.ಕೆ.ವಿ.ಕೆ, ಮಾನ್ಯತಾ ಟೆಕ್‌ಪಾರ್ಕ್, ಅಂಜನಾಪುರ, ಬ್ಯಾಂಕ್ ಆಫೀಸರ್ಸ್ ಲೇಔಟ್, ಗೊಟ್ಟಿಗೆರೆ, ಎಂ.ಎಸ್. ಪಾರ್ಕ್, ಬಿ.ಟಿ.ಆರ್, ಮೌಂಟ್ ಜಾಯ್, ನಾಗೇಂದ್ರ ಬ್ಲಾಕ್, ಗಿರಿನಗರ, ಅಂಗಧೀರನಹಳ್ಳಿ, ಹೆಮ್ಮಿಗೆಪುರ, ಬನಶಂಕರಿ 6ನೇ ಹಂತ, ಕೆ.ಆರ್.ಪುರಂ, ಬಸವನಪುರ, ದೇವಸಂದ್ರ, ರಾಮಮೂರ್ತಿ ನಗರ, ವಿಜಿನಾ ಪುರ, ದೂರವಾಣಿನಗರದಲ್ಲಿ ಅದಾಲತ್ ನಡೆಯಲಿವೆ. ಸಾರ್ವಜನಿಕರು ಮಂಡಳಿಯ ಸಹಾಯವಾಣಿ 1916ಕ್ಕೆ ಕರೆ ಮಾಡಿ ದೂರುಗಳನ್ನು ದಾಖಲಿಸಬಹುದು. ವಾಟ್ಸ್‌ಆ್ಯಪ್ ಸಂಖ್ಯೆ 8762228888ಕ್ಕೆ ಸಂದೇಶದ ಮೂಲಕ ದೂರು ಸಲ್ಲಿಸಬಹುದು ಎಂದು ಜಲ ಮಂಡಳಿಯ ಪ್ರಕಟಣೆ ತಿಳಿಸಿದೆ.

ಕನ್ನಡೇತರ ನಿವಾಸಿಗಳಿಂದ ರಾಜ್ಯೋತ್ಸವ ಆಚರಣೆ

ಬೆಂಗಳೂರು: 'ತಾಳ್ಮೆ, ಸಹನೆ, ದೇಶಸೇವೆ, ಪರೋಪಕಾರಿ ನಡತೆ ಕನ್ನಡಿಗರ ಮೂಲ ಗುಣವಾಗಿದೆ. ಸದಾ ಮತ್ತೊಬ್ಬರ ಭಾವನೆಗೆ ಸ್ಪಂದಿಸುವುದು ನಮ್ಮ ನೆಲದ ಸಂಸ್ಕೃತಿ' ಎಂದು ಇತಿಹಾಸಕಾರ ಧರ್ಮೇಂದ್ರ ಕುಮಾರ್ ಹೇಳಿದರು.

ಪೂರ್ವ ಹೈಲ್ಯಾಂಡ್ಸ್ ಅಪಾರ್ಟ್‌ಮೆಂಟ್‌ನಲ್ಲಿ ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ಆಯೋಜಿಸಿದ್ದ, 'ಮಾತೃಭಾಷೆ ಯಾವುದೇ ಇರಲಿ, ಸ್ನೇಹಮಯ ಭಾಷೆ ಕನ್ನಡವಾಗಲಿ' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಕನ್ನಡ ಕೇವಲ ಭಾಷೆಯಲ್ಲ, ಅದೊಂದು ಭಾವನೆ. ನಮ್ಮ ಭಾಷೆ ನಮ್ಮವರ ನಡೆ, ನುಡಿಯನ್ನೂ ಬಿಂಬಿಸುತ್ತದೆ. ಕನ್ನಡಿಗರೆಂದರೇ ನೆನಪಾಗುವುದೇ ತಾಳ್ಮೆ, ಸಹನೆ, ಪರೋಪಕಾರ ಗುಣ ಹೊಂದಿರುವ ಮನಸ್ಸುಗಳು. ಎಲ್ಲರೂ ನಮ್ಮವರೇ ಎಂದು ಅಪ್ಪಿಕೊಂಡು ನಮ್ಮ ನಾಡಿನಲ್ಲಿ ಅವರಿಗೂ ಸ್ಥಳ ಹಾಗೂ ಅವಕಾಶಗಳನ್ನು ನೀಡುತ್ತಾ, ಅವರನ್ನೂ ನಮ್ಮವರನ್ನಾಗಿಸಿಕೊಳ್ಳುವ ಗುಣವಿರುವವರು' ಎಂದರು.

ಈ ಮೂರು ಸಾವಿರಕ್ಕೂ ಹೆಚ್ಚು ನಿವಾಸಿಗಳಲ್ಲಿ ಒಂದು ಸಾವಿರ ಮಂದಿ ಕನ್ನಡೇತರರು ಇದ್ದಾರೆ. ಎಲ್ಲರೂ ಸೇರಿಕೊಂಡು ಕರ್ನಾಟಕ ರಾಜ್ಯೋತ್ಸವವನ್ನು ಆಯೋಜಿಸಿದ್ದರು. ಮಕರಂದ ಸಂಸ್ಥೆ ಸಹಯೋಗದಲ್ಲಿ ಇಲ್ಲಿ, ಪ್ರತಿನಿತ್ಯ ಕನ್ನಡ ಕಲಿಕೆ ನಡೆಯುತ್ತಿದೆ. ಕನ್ನಡ ರಾಜ್ಯೋತ್ಸವದ ಪ್ರಯುಕ್ತ ಅಪಾರ್ಟ್‌ಮೆಂಟ್ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೬೦ | ಬೆಂಗಳೂರು, ಮಂಗಳವಾರ ೧೮ ನವೆಂಬರ್, ೨೦೨೫ (ಕಾರ್ತಿಕಾ, ೨೭ ಶಕವರ್ಷ, ೧೯೪೭) | ಸಂಚಿಕೆ ೨೧೮

Volume 160 | BENGALURU, TUESDAY 18, NOVEMBER, 2025 (KARTHIKA, 27, SHAKAVARSHA, 1947) | Issue 218

ಭಾಗ 3

ಸರ್ಕಾರದ ಆಯಾ ಇಲಾಖೆಗಳ ಮುಖ್ಯಸ್ಥರ ಮತ್ತು ಸ್ಥಳೀಯ ಪ್ರಾಧಿಕಾರಿಗಳಿಗೆ ಸಂಬಂಧಿಸಿದ ಅಧಿಸೂಚನೆಗಳು

ನಮೂನೆ-V

ಗೃಹ ಆಯುಕ್ತರು, ಕರ್ನಾಟಕ ಗೃಹ ಮಂಡಳಿ, ಕಾವೇರಿ ಭವನ, ಬೆಂಗಳೂರು.

[ಕರ್ನಾಟಕ ತಿದ್ದುಪಡಿ ನಿಯಮ-5, 20(1) (ಬಿ)]

ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ ಕಾಯ್ದೆ-2013ರ ಕಲಂ -11(1)ರ ಮೇರೆಗೆ ಅಧಿಸೂಚನೆ

ಸಂಖ್ಯೆ:ಕಗೃಮಂ/ಭೂಸ್ವಾವಿ/ಬೆಂ.ಗ್ರಾ/ವರದನಹಳ್ಳಿ ಮತ್ತು ಸುಣ್ಣಘಟ್ಟ/42/2025-26 ದಿನಾಂಕ:05-11-2025

ಸಾರ್ವಜನಿಕ ಉದ್ದೇಶಕ್ಕಾಗಿ ಅಂದರೆ ವಸತಿ ಯೋಜನೆಗಾಗಿ ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರ ತಾಲ್ಲೂಕು, ಕಸಬಾ ಹೋಬಳಿ, ವರದನಹಳ್ಳಿ ಗ್ರಾಮ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿ ತಾಲ್ಲೂಕು, ಕುಂದಾಣ ಹೋಬಳಿ, ಸುಣ್ಣಘಟ್ಟ ಗ್ರಾಮದಲ್ಲಿ ಈ ಕೆಳಗಿನ ಅನುಸೂಚಿಯಲ್ಲಿ ಕಾಣಿಸಿರುವ ಜಮೀನುಗಳ ಸ್ವಾಧೀನತೆಯ ಅವಶ್ಯಕತೆಯಿರುತ್ತದೆಯೆಂದು ಸರ್ಕಾರವು ಭಾವಿಸುತ್ತದೆ. ಈ ಯೋಜನೆಗೆ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ ಕಾಯ್ದೆ-2013 (2013ರ ಕೇಂದ್ರ ಅಧಿನಿಯಮ ಸಂಖ್ಯೆ: 30)ಕ್ಕೆ ಅನುಗುಣವಾಗಿ ಕರ್ನಾಟಕ ರಾಜ್ಯಕ್ಕೆ ಅನ್ವಯಿಸುವಂತೆ ದಿನಾಂಕ: 23-07-2019 ರಿಂದ ಜಾರಿಗೆ ಬಂದಿರುವ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ (ಕರ್ನಾಟಕ ತಿದ್ದುಪಡಿ) ಕಾಯ್ದೆ – 2019 (2019ರ ಕರ್ನಾಟಕ ಅಧಿನಿಯಮ ಸಂಖ್ಯೆ: 16)ರ ಕಲಂ-10(ಎ)ರಡಿ ಮೂಲ ಕಾಯ್ದೆಯ ಅಧ್ಯಾಯ-II & III ರಲ್ಲಿನ ಉಪಬಂಧಗಳನ್ನು ಅನ್ವಯಿಸುವುದರಿಂದ ವಿನಾಯಿತಿ ನೀಡಿ ಸರ್ಕಾರದ ಸಂಖ್ಯೆ: ಆರ್.ಡಿ.ನಂ.130ಎ.ಕ್ಯೂ.ಬಿ.2025 ದಿನಾಂಕ: 28-08-2025ರ ಸರ್ಕಾರದ ಅಧಿಸೂಚನೆಯನ್ನು ಹೊರಡಿಸಲಾಗಿದ್ದು ಈ ಅಧಿಸೂಚನೆ ರಾಜ್ಯ ಪತ್ರದಲ್ಲಿ ದಿನಾಂಕ: 09-09-2025 ರಂದು ಪ್ರಕಟವಾಗಿರುತ್ತದೆ.

ಆದುದರಿಂದ ಈ ಮೂಲಕ ತಿಳಿಸುವುದೇನೆಂದರೆ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ ಕಾಯ್ದೆ-2013 (2013ರ ಕೇಂದ್ರ ಅಧಿನಿಯಮ ಸಂಖ್ಯೆ: 30)ರ ಕಲಂ-12 ಮೇರೆಗೆ ಪ್ರದತ್ತವಾದ ಅಧಿಕಾರ ಚಲಾಯಿಸುವಂತೆ ಗೃಹ ಆಯುಕ್ತರು, ಕರ್ನಾಟಕ ಗೃಹ ಮಂಡಳಿ, ಬೆಂಗಳೂರು ಇವರಿಗೆ ಅಧಿಕಾರ ನೀಡಲಾಗಿದೆ.

ಈ ಜಮೀನುಗಳ ಸ್ವಾಧೀನ ಕೆಲಸ ನಿರ್ವಹಿಸುವಲ್ಲಿ ಸರ್ಕಾರದಿಂದ ನೇಮಿಸಲ್ಪಟ್ಟ ಮೋಜಣಿದಾರರಿಗಾಗಲಿ ಅಥವಾ ಈ ಕೆಲಸ ಮಾಡುವವರಿಗಾಗಲೀ ಯಾರೂ ಅಡ್ಡಿ ಮಾಡಕೂಡದೆಂದು ಎಚ್ಚರಿಸಲಾಗಿದೆ. ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ ಕಾಯ್ದೆ-2013 (2013ರ ಕೇಂದ್ರ ಅಧಿನಿಯಮ ಸಂಖ್ಯೆ: 30)ರ ಕಲಂ-11(1) ಮೇರೆಗೆ ಈ ಅಧಿಸೂಚನೆ ಪ್ರಕಟಗೊಂಡ ದಿನಾಂಕದಿಂದ ಸದರಿ ಸ್ವಾಧೀನಪಡಿಸಿಕೊಳ್ಳಲಿರುವ ಭೂಮಿಯನ್ನು ಒಪ್ಪಂದದ ಮೇರೆಗೆ ವಿಕ್ರಯಿಸುವ, ಭೋಗ್ಯಕ್ಕೆ ಅಡವಿಡುವ, ಅನುಭವಿಸುವ, ಬದಲಾಯಿಸುವ ಅಥವಾ ಇನ್ನೂ ಯಾವುದೇ ರೀತಿಯ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳದಂತೆ ನಿರ್ಬಂಧಿಸಿದೆ. ಅಂತಹ ಯಾವುದೇ ಕ್ರಮ ಅಥವಾ ಇನ್ನಾವುದೇ ರೀತಿಯ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಲ್ಲಿ ಅದನ್ನು ಐತೀರ್ಪು ರಚಿಸುವಾಗ ಗಣನೆಗೆ ತೆಗೆದುಕೊಳ್ಳದೇ ಅಂತಿಮವಾಗಿ ಸದರಿ ಕಾಯ್ದೆಯನ್ವಯ ಭೂಸ್ವಾಧೀನಪಡಿಸಿಕೊಳ್ಳಲಾಗುವುದೆಂದು ಈ ಮೂಲಕ ತಿಳಿಯಪಡಿಸಲಾಗಿದೆ.

ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ ಕಾಯ್ದೆ-2013 (2013ರ ಕೇಂದ್ರ ಅಧಿನಿಯಮ ಸಂಖ್ಯೆ: 30)ರ ಕಲಂ -15(1)ರ ಮೇರೆಗೆ ಆಸಕ್ತಿಯುಳ್ಳವರು ತಮ್ಮ ಆಕ್ಷೇಪವಿದ್ದಲ್ಲಿ, ಆಕ್ಷೇಪಣೆಗಳನ್ನು ಈ ಅಧಿಸೂಚನೆ ಪ್ರಕಟಗೊಂಡ 60 ದಿನಗಳೊಳಗಾಗಿ ಈ ಕಾರ್ಯಾಲಯಕ್ಕೆ ಸಲ್ಲಿಸಬೇಕು. ತದನಂತರ ಸ್ವೀಕೃತವಾಗುವ ಆಕ್ಷೇಪಣೆಗಳನ್ನು ಯಾವುದೇ ಮುನ್ಸೂಚನೆ ನೀಡದೇ ವಿಲೇಯಕ್ಕೆ ಹಾಕಲಾಗುವುದು.

ಸದರಿ ಪ್ರಕರಣದಲ್ಲಿ ಭೂಸ್ವಾಧೀನಕ್ಕೆ ಒಳಪಡುವ ಜಮೀನಿನ ಒಂದು ನಕ್ಷೆಯನ್ನು ವಿಶೇಷ ಭೂಸ್ವಾಧೀನಾಧಿಕಾರಿ-1, ಕರ್ನಾಟಕ ಗೃಹ ಮಂಡಳಿ, ಬೆಂಗಳೂರು ಇವರ ಕಾರ್ಯಾಲಯದಲ್ಲಿ ಪರಿಶೀಲನೆಗಾಗಿ ಇಡಲಾಗಿದೆ.

ಅನುಸೂಚಿ

ಜಿಲ್ಲೆ : ಬೆಂಗಳೂರು ಗ್ರಾಮಾಂತರ | ತಾಲ್ಲೂಕು: ದೊಡ್ಡಬಳ್ಳಾಪುರ | ಹೋಬಳಿ: ಕಸಬಾ | ಗ್ರಾಮ: ವರದನಹಳ್ಳಿ

ಕ್ರ. ಸಂ	ಪಹಣಿಯಂತೆ ಖಾತೆದಾರರ ಹೆಸರು		ಸರ್ವೆ/ಖಾತಾ ನಂಬರ್	ಸರ್ವೆ ಖಾತಾ ನಂಬರಿನಲ್ಲಿನ ಒಟ್ಟು ವಿಸ್ತೀರ್ಣ (ಪಹಣಿ/ಉತ್ತಾರ ಅನ್ವಯ)		ಸ್ವಾಧೀನಕ್ಕೊಳಪಡುವ ಒಟ್ಟು ವಿಸ್ತೀರ್ಣ		ತರಹೆ	ಚಕ್ಕುಬಂದಿ /ಸರಹದ್ದು				ಷರಾ
	ಭೂಮಾಲೀಕರು / ಹಿಡುವಳಿದಾರರ ಹೆಸರು	ಅನುಭವದಾರರ ಹೆಸರು		ಕೃಷಿ / ಕೃಷಿಯೇತರ ಜಮೀನು (ಎ-ಗುಂ)	ಖರಾಬು (ಎ-ಗುಂ)	ಕೃಷಿ / ಕೃಷಿಯೇತರ ಜಮೀನು (ಎ-ಗುಂ)	ಖರಾಬು (ಎ-ಗುಂ)		ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ	
1	2	3	4	5	6	7	8	9	10	11	12	13	14
1	ಮುನಿಮುತ್ತು ಬಿನ್ ಮುನಿಯಪ್ಪ	ಮುನಿಮುತ್ತು ಬಿನ್ ಮುನಿಯಪ್ಪ	18	31-23	0-00	0-32	0-00	ಖುಷ್ಕಿ	ಸುಣ್ಣಘಟ್ಟ ಗ್ರಾಮ ಗಡಿ	ಸ ನಂ.19, 20, 34	ಸ ನಂ.15, 16, 17	ಸ.ನಂ. 97, 35, 82	
	ರಾಮಯ್ಯ ಬಿನ್ ಓಬಳಪ್ಪ	ರಾಮಯ್ಯ ಬಿನ್ ಓಬಳಪ್ಪ				1-00							
	ಚನ್ನಪ್ಪ ಬಿನ್ ಗುಳ್ಳಪ್ಪ	ಚನ್ನಪ್ಪ ಬಿನ್ ಗುಳ್ಳಪ್ಪ				1-15							
	ಕೆಂಪಣ್ಣ ಬಿನ್ ಮುನಿಶಾಮಪ್ಪ	ಕೆಂಪಣ್ಣ ಬಿನ್ ಮುನಿಶಾಮಪ್ಪ				0-27							
	ಮುನಿಯಪ್ಪ ಬಿನ್ ಕುಂಟಪ್ಪ	ಮುನಿಯಪ್ಪ ಬಿನ್ ಕುಂಟಪ್ಪ				2-11							
	ವೆಂಕಟರಮಣಪ್ಪ ಬಿನ್ ಪೂಜಪ್ಪ	ವೆಂಕಟರಮಣಪ್ಪ ಬಿನ್ ಪೂಜಪ್ಪ				1-01							
	ಕೆಂಪಯ್ಯ ಬಿನ್ ಗುಡ್ಡಪ್ಪ	ಕೆಂಪಯ್ಯ ಬಿನ್ ಗುಡ್ಡಪ್ಪ				1-11							
	ಕೆಂಚಪ್ಪ ಬಿನ್ ಓಬಳಪ್ಪ	ಕೆಂಚಪ್ಪ ಬಿನ್ ಓಬಳಪ್ಪ				0-30							
	ತಮ್ಮಣ್ಣ ಬಿನ್ ಮುನಿಶಾಮಿ	ತಮ್ಮಣ್ಣ ಬಿನ್ ಮುನಿಶಾಮಿ				1-23							
	ಚಿಕ್ಕ ಓಬಳಪ್ಪ ಬಿನ್ ದೊಡ್ಡಸೀಳಪ್ಪ	ಚಿಕ್ಕ ಓಬಳಪ್ಪ ಬಿನ್ ದೊಡ್ಡಸೀಳಪ್ಪ				1-11							
	ದೊಡ್ಡಯ್ಯ ಬಿನ್ ಓಬಳಪ್ಪ	ದೊಡ್ಡಯ್ಯ ಬಿನ್ ಓಬಳಪ್ಪ				0-31							
	ತಿಮ್ಮಯ್ಯ ಬಿನ್ ಗಂಗಪ್ಪ	ತಿಮ್ಮಯ್ಯ ಬಿನ್ ಗಂಗಪ್ಪ				1-08							
	ತಳವಾರಕ್ಕೆಂಪಯ್ಯ ಬಿನ್ ಮುನಿಶಾಮಯ್ಯ	ತಳವಾರಕ್ಕೆಂಪಯ್ಯ ಬಿನ್ ಮುನಿಶಾಮಯ್ಯ				1-23							
	ಪಟಾಲಮ್ಮ ಕೋಂ ಮುನಿದೊಡ್ಡಯ್ಯ	ಪಟಾಲಮ್ಮ ಕೋಂ ಮುನಿದೊಡ್ಡಯ್ಯ				0-20							
	ರಾಮಾಂಜಿನಪ್ಪ ಬಿನ್ ಮುನಿದೊಡ್ಡಯ್ಯ	ರಾಮಾಂಜಿನಪ್ಪ ಬಿನ್ ಮುನಿದೊಡ್ಡಯ್ಯ				ಮೇಲಿನ ಜಂಟಿ							
	ನಾರಾಯಣಸ್ವಾಮಿ ಬಿನ್ ಮುನಿದೊಡ್ಡಯ್ಯ	ನಾರಾಯಣಸ್ವಾಮಿ ಬಿನ್ ಮುನಿದೊಡ್ಡಯ್ಯ				0-20							
	ನಂಜಪ್ಪ ಬಿನ್ ತಮ್ಮಯ್ಯ	ನಂಜಪ್ಪ ಬಿನ್ ತಮ್ಮಯ್ಯ				0-31							
	ಗೋವಿಂದರಾಜು ಬಿನ್ ಲೇಟ್ ಚಿಕ್ಕಮದ್ದೂರಪ್ಪ ಪ್ರಕಾಶ್ ಬಿನ್ ಲೇಟ್ ಚಿಕ್ಕಮದ್ದೂರಪ್ಪ	ಗೋವಿಂದರಾಜು ಬಿನ್ ಲೇಟ್ ಚಿಕ್ಕಮದ್ದೂರಪ್ಪ ಪ್ರಕಾಶ್ ಬಿನ್ ಲೇಟ್ ಚಿಕ್ಕಮದ್ದೂರಪ್ಪ				1-01 ಮೇಲಿನ ಜಂಟಿ							
	ನವೀನ್ ಕುಮಾರ್ ಎನ್ ಬಿನ್ ನಾಗರಾಜಪ್ಪ	ನವೀನ್ ಕುಮಾರ್ ಎನ್ ಬಿನ್ ನಾಗರಾಜಪ್ಪ				1-05							
	ತಾಯಮ್ಮ ಕೋಂ ಲೇಟ್ ಚಿಕ್ಕಮುನಿಯಪ್ಪ	ತಾಯಮ್ಮ ಕೋಂ ಲೇಟ್ ಚಿಕ್ಕಮುನಿಯಪ್ಪ				1-01							
	ಓಬಳೇಶ್ ಬಿನ್ ಲೇಟ್ ಪೂಜಪ್ಪ	ಓಬಳೇಶ್ ಬಿನ್ ಲೇಟ್ ಪೂಜಪ್ಪ				0-31							
	ಮುನಿಯಪ್ಪ ಬಿನ್ ಮುನಿಯಪ್ಪ ಮೈಲಾರಪ್ಪ ಬಿನ್ ಮುನಿಯಪ್ಪ ಮುತ್ತಮ್ಮ ಬಿನ್ ಮುನಿಯಪ್ಪ	ಮುನಿಯಪ್ಪ ಬಿನ್ ಮುನಿಯಪ್ಪ ಮೈಲಾರಪ್ಪ ಬಿನ್ ಮುನಿಯಪ್ಪ ಮುತ್ತಮ್ಮ ಬಿನ್ ಮುನಿಯಪ್ಪ				1-33 ಮೇಲಿನ ಜಂಟಿ ಮೇಲಿನ ಜಂಟಿ							
	ನರಸಮ್ಮ ಕೋಂ ಲೇಟ್ ವಸಂತಪ್ಪ	ನರಸಮ್ಮ ಕೋಂ ಲೇಟ್ ವಸಂತಪ್ಪ				1-01							
	ಆಂಜಿನಮ್ಮ ಕೋಂ ಲೇಟ್ ಕೆ ನರಸಿಂಹಯ್ಯ ಪಟಾಲಪ್ಪ ಬಿನ್ ಲೇಟ್ ಕುಳ್ಳಪ್ಪ ಮುನಿಯಪ್ಪ ಬಿನ್ ಲೇಟ್ ಕುಳ್ಳಪ್ಪ ಮುನಿರತ್ನಮ್ಮ ಬಿನ್ ಲೇಟ್ ಕುಳ್ಳಪ್ಪ ಮುನಿಕೃಷ್ಣಪ್ಪ ಬಿನ್ ಲೇಟ್ ಕುಳ್ಳಪ್ಪ ಕೆ ಪೂಜಪ್ಪ ಬಿನ್ ಲೇಟ್ ಕುಳ್ಳಪ್ಪ ನಾರಾಯಣಸ್ವಾಮಿ ಕೆ ಬಿನ್ ಲೇಟ್ ಕುಳ್ಳಪ್ಪ	ಆಂಜಿನಮ್ಮ ಕೋಂ ಲೇಟ್ ಕೆ ನರಸಿಂಹಯ್ಯ ಪಟಾಲಪ್ಪ ಬಿನ್ ಲೇಟ್ ಕುಳ್ಳಪ್ಪ ಮುನಿಯಪ್ಪ ಬಿನ್ ಲೇಟ್ ಕುಳ್ಳಪ್ಪ ಮುನಿರತ್ನಮ್ಮ ಬಿನ್ ಲೇಟ್ ಕುಳ್ಳಪ್ಪ ಮುನಿಕೃಷ್ಣಪ್ಪ ಬಿನ್ ಲೇಟ್ ಕುಳ್ಳಪ್ಪ ಕೆ ಪೂಜಪ್ಪ ಬಿನ್ ಲೇಟ್ ಕುಳ್ಳಪ್ಪ ನಾರಾಯಣಸ್ವಾಮಿ ಕೆ ಬಿನ್ ಲೇಟ್ ಕುಳ್ಳಪ್ಪ				1-14 ಮೇಲಿನ ಜಂಟಿ ಮೇಲಿನ ಜಂಟಿ ಮೇಲಿನ ಜಂಟಿ ಮೇಲಿನ ಜಂಟಿ ಮೇಲಿನ ಜಂಟಿ ಮೇಲಿನ ಜಂಟಿ							
	ಸರ್ಕಾರಿ ಗೋಮಾಳ	ಸರ್ಕಾರಿ ಗೋಮಾಳ				4-00							
2	ಆಂಜಿನಪ್ಪ ಬಿನ್ ಸುಬ್ಬಣ್ಣ ಮುನಿಯಪ್ಪ ಬಿನ್ ಪೂಜಪ್ಪ ನರಸಿಂಹಯ್ಯ ಬಿನ್ ಕುಳ್ಳಪ್ಪ ಮರಿಯಪ್ಪ ಬಿನ್ ಸುಬ್ಬಣ್ಣ ಮುನಿನರಸಿಂಹಯ್ಯ ಬಿನ್ ಕೈಯಪ್ಪ ನರಸಿಂಹಯ್ಯ ಬಿನ್ ಕೈಯಪ್ಪ ಕೆಂಪಣ್ಣ ಬಿನ್ ಮುನಿಶಾಮಪ್ಪ ನ್ಯಾತಪ್ಪ ಬಿನ್ ಗುಡ್ಡಪ್ಪ ಕೃಷ್ಣಪ್ಪ ಬಿನ್ ಬೈಯಣ್ಣ ಪೂಜಮ್ಮ ಕೋಂ ಓಬಳಪ್ಪ ಮುನಿಯಪ್ಪ ಬಿನ್ ನಾರಾಯಣಪ್ಪ ನಂಜಪ್ಪ ಬಿನ್ ತಮ್ಮಯ್ಯಪ್ಪ ಎಸ್ ಮುನಿಯಪ್ಪ ಬಿನ್ ಶ್ಯಾಮಣ್ಣ ನಾರಾಯಣಪ್ಪ ಬಿನ್ ಚಿಕ್ಕಪಿಳ್ಳಪ್ಪ ರಾಮಯ್ಯ ಬಿನ್ ತಮ್ಮಯ್ಯಪ್ಪ ಕೆಂಪಯ್ಯ ಬಿನ್ ಕೈಯಪ್ಪ ಸರ್ಕಾರಿ ಖರಾಬು ಕೃಷ್ಣಪ್ಪ ಬಿನ್ ಲೇಟ್ ಬೈಯಣ್ಣ ರಾಮಣ್ಣ ಬಿನ್ ಲೇಟ್ ಬೈಯಣ್ಣ ಎಸ್ ನಾಗರತ್ನ ಕೋಂ ಸಿ ನಾರಾಯಣಸ್ವಾಮಿ ಆಂಜಿನಮ್ಮ ಕೋಂ ಲೇಟ್ ಕೆ ನರಸಿಂಹಯ್ಯ ಮಂಜುನಾಥ ಬಿನ್ ಓಬಳಪ್ಪ ಹೆಚ್. ಪಿ.ಶಂಕರ್ ಬಿನ್ ದಿವಂಗತ ಹೆಚ್. ಸಿ.ಪಾಪಣ್ಣ ಗೋಪಿ ಎಮ್ ಬಿನ್ ಲೇಟ್ ಮುನಿನರಸಿಂಹಯ್ಯ ಕಾಂತರಾಜ ಎಮ್ ಬಿನ್ ಲೇಟ್ ಮುನಿನರಸಿಂಹಯ್ಯ ಕೆಂಪರಾಜು ಎಸ್ ಎ ಬಿನ್ ಅಪ್ಪಣ್ಣಪ್ಪ ಕೆಂಪಯ್ಯ ಬಿನ್ ಕೈಯಪ್ಪ ತಿಪ್ಪಮ್ಮ ಕೋಂ ಲೇಟ್ ನರಸಿಂಹಯ್ಯ	ಆಂಜಿನಪ್ಪ ಬಿನ್ ಸುಬ್ಬಣ್ಣ ಮುನಿಯಪ್ಪ ಬಿನ್ ಪೂಜಪ್ಪ ನರಸಿಂಹಯ್ಯ ಬಿನ್ ಕುಳ್ಳಪ್ಪ ಮರಿಯಪ್ಪ ಬಿನ್ ಸುಬ್ಬಣ್ಣ ಮುನಿನರಸಿಂಹಯ್ಯ ಬಿನ್ ಕೈಯಪ್ಪ ನರಸಿಂಹಯ್ಯ ಬಿನ್ ಕೈಯಪ್ಪ ಕೆಂಪಣ್ಣ ಬಿನ್ ಮುನಿಶಾಮಪ್ಪ ನ್ಯಾತಪ್ಪ ಬಿನ್ ಗುಡ್ಡಪ್ಪ ಕೃಷ್ಣಪ್ಪ ಬಿನ್ ಬೈಯಣ್ಣ ಪೂಜಮ್ಮ ಕೋಂ ಓಬಳಪ್ಪ ಮುನಿಯಪ್ಪ ಬಿನ್ ನಾರಾಯಣಪ್ಪ ನಂಜಪ್ಪ ಬಿನ್ ತಮ್ಮಯ್ಯಪ್ಪ ಎಸ್ ಮುನಿಯಪ್ಪ ಬಿನ್ ಶ್ಯಾಮಣ್ಣ ನಾರಾಯಣಪ್ಪ ಬಿನ್ ಚಿಕ್ಕಪಿಳ್ಳಪ್ಪ ರಾಮಯ್ಯ ಬಿನ್ ತಮ್ಮಯ್ಯಪ್ಪ ಕೆಂಪಯ್ಯ ಬಿನ್ ಕೈಯಪ್ಪ ಸರ್ಕಾರಿ ಖರಾಬು ಕೃಷ್ಣಪ್ಪ ಬಿನ್ ಲೇಟ್ ಬೈಯಣ್ಣ ರಾಮಣ್ಣ ಬಿನ್ ಲೇಟ್ ಬೈಯಣ್ಣ ಎಸ್ ನಾಗರತ್ನ ಕೋಂ ಸಿ ನಾರಾಯಣಸ್ವಾಮಿ ಆಂಜಿನಮ್ಮ ಕೋಂ ಲೇಟ್ ಕೆ ನರಸಿಂಹಯ್ಯ ಮಂಜುನಾಥ ಬಿನ್ ಓಬಳಪ್ಪ ಹೆಚ್. ಪಿ.ಶಂಕರ್ ಬಿನ್ ದಿವಂಗತ ಹೆಚ್. ಸಿ.ಪಾಪಣ್ಣ ಗೋಪಿ ಎಮ್ ಬಿನ್ ಲೇಟ್ ಮುನಿನರಸಿಂಹಯ್ಯ ಕಾಂತರಾಜ ಎಮ್ ಬಿನ್ ಲೇಟ್ ಮುನಿನರಸಿಂಹಯ್ಯ ಕೆಂಪರಾಜು ಎಸ್ ಎ ಬಿನ್ ಅಪ್ಪಣ್ಣಪ್ಪ ಕೆಂಪಯ್ಯ ಬಿನ್ ಕೈಯಪ್ಪ ತಿಪ್ಪಮ್ಮ ಕೋಂ ಲೇಟ್ ನರಸಿಂಹಯ್ಯ	35 ಹಾಗೂ ಹೊಸ ಸರ್ವೆ ನಂಬರು ಗಳಾದ 82 88 89 90 91/3 91/4 91/5 92 93 ಸೇರಿದಂತೆ	19-28	0-09 (ಬ)	11-38	0-09 (ಬ)	ಖುಷ್ಕಿ	ಸುಣ್ಣಘಟ್ಟ ಗ್ರಾಮದ ಗಡಿ	ಸ ನಂ. 33 34 87/1 87/3	ಸ ನಂ.18 97	ಸ ನಂ. 36, 75, 76,77, 78,79	
3	ಎ.ವೆಂಕಟೇಶ್ ಬಿನ್ ಆಂಜಿನಪ್ಪ ಎ.ಸೋಮಶೇಖರ್ ಬಿನ್ ಆಂಜಿನಪ್ಪ ಎ ದೊಡ್ಡೇಗೌಡ ಬಿನ್ ಆಂಜಿನಪ್ಪ ಹೆಚ್. ವಿ ಗುರುಮೂರ್ತಿ ಬಿನ್ ಹೆಚ್. ವೆಂಕಟರಮಣಪ್ಪ	ಎ.ವೆಂಕಟೇಶ್ ಬಿನ್ ಆಂಜಿನಪ್ಪ ಎ.ಸೋಮಶೇಖರ್ ಬಿನ್ ಆಂಜಿನಪ್ಪ ಎ ದೊಡ್ಡೇಗೌಡ ಬಿನ್ ಆಂಜಿನಪ್ಪ ಹೆಚ್. ವಿ ಗುರುಮೂರ್ತಿ ಬಿನ್ ಹೆಚ್. ವೆಂಕಟರಮಣಪ್ಪ	83/1, 2,3,7	1-00	0-08 (ಬ)	0-32	0-08 (ಬ)	ಖುಷ್ಕಿ	ಸ ನಂ. 84	ಸ ನಂ. 33,34	ಸ ನಂ. 82	ಸ ನಂ. 35	
4	ಮರಿಯಪ್ಪ ಬಿನ್ ಸುಬ್ಬಣ್ಣ	ಮರಿಯಪ್ಪ ಬಿನ್ ಸುಬ್ಬಣ್ಣ	84	0-38	0-01 (ಬ)	0-37	0-01 (ಬ)	ಖುಷ್ಕಿ	ಸ ನಂ. 85,86/2	ಸ ನಂ. 83/3	ಸ ನಂ.82,	ಸ ನಂ.35	
5	ನ್ಯಾತಪ್ಪ ಬಿನ್ ಗುಡ್ಡಪ್ಪ	ನ್ಯಾತಪ್ಪ ಬಿನ್ ಗುಡ್ಡಪ್ಪ	85	0-15	0-01(ಬ)	0-14	0-01(ಬ)	ಖುಷ್ಕಿ	ಸ.ನಂ. 86/1,2	ಸ ನಂ. 84	ಸ ನಂ. 82	ಸ.ನಂ. 84	

6	ಅನಿಲ್ ಕುಮಾರ್ ಸಿ ಜೈನ್ ಬಿನ್ ಚಗಲಾಲ್ ಪಿ ಜೈನ್ ಜಯಶ್ರೀ ಅನಿಲ್ ಜೈನ್ ಕೋಂ ಅನಿಲ್ ಕುಮಾರ್ ಸಿ ಜೈನ್	ಅನಿಲ್ ಕುಮಾರ್ ಸಿ ಜೈನ್ ಬಿನ್ ಚಗಲಾಲ್ ಪಿ ಜೈನ್ ಜಯಶ್ರೀ ಅನಿಲ್ ಜೈನ್ ಕೋಂ ಅನಿಲ್ ಕುಮಾರ್ ಸಿ ಜೈನ್	86/1	0–27	0–02 (ಬ)	0–25 ಮೇಲಿನ ಜಂಟಿ	0–02 (ಬ)	ಖುಷ್ಕಿ	ಸ ನಂ. 87/1	ಸ ನಂ. 82, 85	ಸ ನಂ.35	ಸ ನಂ. 86/2	
7	ಲಕ್ಷ್ಮೇಗೌಡ ಆರ್ ಬಿನ್ ರಾಮಾಂಜಿನಪ್ಪ ಮಂಜುಳ ಎ ಕೋಂ ಲಕ್ಷ್ಮೇಗೌಡ ಆರ್	ಲಕ್ಷ್ಮೇಗೌಡ ಆರ್ ಬಿನ್ ರಾಮಾಂಜಿನಪ್ಪ ಮಂಜುಳ ಎ ಕೋಂ ಲಕ್ಷ್ಮೇಗೌಡ ಆರ್	86/2	0–25	0–00	0–25 ಮೇಲಿನ ಜಂಟಿ	0–00	ಖುಷ್ಕಿ	ಸ ನಂ. 87/1, 87/2	ಸ ನಂ. 84, 85	ಸ ನಂ. 86/1	ಸ ನಂ. 35	
8	ಮುನಿಯಪ್ಪ ಬಿನ್ ಪೂಜಪ್ಪ	ಮುನಿಯಪ್ಪ ಬಿನ್ ಪೂಜಪ್ಪ	87/1	1–01	0–01 (ಬ)	1–00	0–01 (ಬ)	ಖುಷ್ಕಿ	ಸ ನಂ. 88	ಸ ನಂ. 86/1, 2	ಸ ನಂ. 96	ಸ.ನಂ. 87/2,87/3	
9	ದೇವಿ ಕೋಂ ಶಂಭಪ್ಪ	ದೇವಿ ಕೋಂ ಶಂಭಪ್ಪ	87/2	0–09.12	–	0–09.12	–	ಖುಷ್ಕಿ	ಸ ನಂ. 87/3	ಸ ನಂ. 86/2	ಸ ನಂ. 87/1	ಸ ನಂ. 35	
10	ಎಸ್ ರಾಣಿ ಕೋಂ ಶ್ಯಾಮ್	ಎಸ್ ರಾಣಿ ಕೋಂ ಶ್ಯಾಮ್	87/3	0–05.04	–	0–05.04	–	ಖುಷ್ಕಿ	ಸ ನಂ. 88	ಸ ನಂ. 87/2	ಸ ನಂ. 87/1	ಸ ನಂ. 35	
11	ಮುನಿಕದರಪ್ಪ ಬಿನ್ ಲೇಟ್ ಮುನಿನರಸಿಂಹಯ್ಯ	ಮುನಿಕದರಪ್ಪ ಬಿನ್ ಲೇಟ್ ಮುನಿನರಸಿಂಹಯ್ಯ	91/1	0–14	0–00	0–14	0–00	ಖುಷ್ಕಿ	ಸ ನಂ. 90	ಸ ನಂ. 92	ಸ ನಂ. 94	ಸ ನಂ. 91/2	
12	ನರಸಿಂಹಮೂರ್ತಿ ಬಿನ್ ಲೇಟ್ ಮುನಿನರಸಿಂಹಯ್ಯ	ನರಸಿಂಹಮೂರ್ತಿ ಬಿನ್ ಲೇಟ್ ಮುನಿನರಸಿಂಹಯ್ಯ	91/2	0–12	0–00	0–12	0–00	ಖುಷ್ಕಿ	ಸ ನಂ. 90	ಸ ನಂ. 92	ಸ ನಂ. 91/1	ಸ ನಂ. 91/3	
13	ನಂಜಪ್ಪ ಬಿನ್ ತಮ್ಮಯ್ಯಪ್ಪ	ನಂಜಪ್ಪ ಬಿನ್ ತಮ್ಮಯ್ಯಪ್ಪ	94	0–12	0–00	0–12	0–00	ಖುಷ್ಕಿ	ಸ ನಂ. 35	ಸ ನಂ. 35	ಸ ನಂ. 35	ಸ ನಂ. 90, 91/1	
14	ಸುನೀಲ್ ಎಂ ಬಿನ್ ಮಂಜುನಾಥ್	ಸುನೀಲ್ ಎಂ ಬಿನ್ ಮಂಜುನಾಥ್	95	1–00	0–00	1–00	0–00	ಖುಷ್ಕಿ	ಸ ನಂ. 93	ಸ ನಂ. 35	ಸ ನಂ. 35	ಸ ನಂ. 35	
15	ಶ್ರೀ. ಎಂ.ನಾರಾಯಣಪ್ಪ ಬಿನ್ ಲೇಟ್ ಮುನಿಯಪ್ಪ	ಶ್ರೀ. ಎಂ.ನಾರಾಯಣಪ್ಪ ಬಿನ್ ಲೇಟ್ ಮುನಿಯಪ್ಪ	96	1–01	0–01 (ಬ)	1–00	0–01 (ಬ)	ಖುಷ್ಕಿ	ಸ ನಂ. 35	ಸ ನಂ. 35	ಸ ನಂ. 35	ಸ.ನಂ.87/1, 88, 89	
16	ಕೆಂಪಣ್ಣ ಬಿನ್ ಮುನಿಶಾಮಪ್ಪ	ಕೆಂಪಣ್ಣ ಬಿನ್ ಮುನಿಶಾಮಪ್ಪ	97	0–13	0–00	0–13	0–00	ಖುಷ್ಕಿ	ಸ.ನಂ. 35	ಸ.ನಂ.35	ಸ.ನಂ.18	ಸ.ನಂ. 35	
	ಒಟ್ಟು					49–17	0–23						

ಅನುಸೂಚಿ

ಜಿಲ್ಲೆ : ಬೆಂಗಳೂರು ಗ್ರಾಮಾಂತರ ತಾಲ್ಲೂಕು: ದೇವನಹಳ್ಳಿ ಹೋಬಳಿ: ಕುಂದಾಣ ಗ್ರಾಮ: ಸುಣ್ಣಘಟ್ಟ

ಕ್ರ. ಸಂ	ಪಹಣಿಯಂತೆ ಖಾತೆದಾರರ ಹೆಸರು		ಸರ್ವೆ/ಖಾತಾ ನಂಬರ್	ಸರ್ವೆ ಖಾತಾ ನಂಬರಿನಲ್ಲಿನ ಒಟ್ಟು ವಿಸ್ತೀರ್ಣ (ಪಹಣಿ/ಉತ್ತಾರ ಅನ್ವಯ)		ಸ್ವಾಧೀನಕ್ಕೊಳಪಡುವ ಒಟ್ಟು ವಿಸ್ತೀರ್ಣ		ತರಹೆ	ಚಕ್ಕುಬಂದಿ /ಸರಹದ್ದು				ಷರಾ
	ಭೂಮಾಲೀಕರು / ಹಿಡುವಳಿದಾರರ ಹೆಸರು	ಅನುಭವದಾರರ ಹೆಸರು		ಕೃಷಿ / ಕೃಷಿಯೇತರ ಜಮೀನು (ಎ–ಗುಂ)	ಖರಾಬು (ಎ–ಗುಂ)	ಕೃಷಿ / ಕೃಷಿಯೇತರ ಜಮೀನು (ಎ–ಗುಂ)	ಖರಾಬು (ಎ–ಗುಂ)		ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ	
1	2	3	4	5	6	7	8	9	10	11	12	13	14
1.	ಆರ್.ಜಗನ್ನಾಥ – ಲೇ ರಂಗಪ್ಪ ಮುನಿಯಪ್ಪ – ನಾರಾಯಣಪ್ಪ ಪೂಜಮ್ಮ ಕೋಂ ಲೇ ನಾರಾಯಣಸ್ವಾಮಿ ಲಕ್ಷ್ಮಮ್ಮ ಬಿನ್ ಲಕ್ಕಪ್ಪ ನಾರಾಯಣಮ್ಮ ಬಿನ್ ಲೇ ಮುನಿಶಾಮಿ ಮುನಿಯಮ್ಮ ಬಿನ್ ಲೇ ಮುನಿಶಾಮಿ ದಾಸಪ್ಪ ಬಿನ್ ಲೇ ಮುನಿಶಾಮಪ್ಪ ಮುನಿಶಾಮಿ ಉ ಮುನಿಶಾಮಪ್ಪ ಬಿನ್ ಲೇ ರಂಗಪ್ಪ ಮಹೇಶಪ್ಪ ಬಿನ್ ಲೇ ರಂಗಪ್ಪ ಕೆ.ಎಚ್.ಲಕ್ಷ್ಮಣಗೌಡ –ಹುಚ್ಚೇಗೌಡ ಮುನಿಯಪ್ಪ ಮುನಿಶಾಮಿ ಕೆ.ಎಚ್.ಲಕ್ಷ್ಮಣಗೌಡ –ಹುಚ್ಚೇಗೌಡ ಮುನಿಯಮ್ಮ – ನಾಗಪ್ಪ ಸಾಕಮ್ಮ ಕೋಂ ಲೇ ರಾಮಾಂಜಿನಪ್ಪ ಎಸ್ ಮುನಿರಾಜು ಬಿನ್ ಲೇ ಆರ್ ಸಿದ್ದಪ್ಪ ಎಸ್ ಚನ್ನಪ್ಪ ಬಿನ್ ಲೇ ಆರ್ ಸಿದ್ದಪ್ಪ ಸರ್ಕಾರಿ ಗೋಮಾಳ ಕೃಷ್ಣಪ್ಪ ಬಿನ್ ಮುನಿಶಾಮಪ್ಪ ವೀರಕೆಂಪಯ್ಯ ಬಿನ್ ಸಿದ್ದಪ್ಪ ಅಣ್ಣಯ್ಯಪ್ಪ ಬಿನ್ ಸಿದ್ದಪ್ಪ ಸಿದ್ದರಾಮಯ್ಯ ಬಿನ್ ಸಿದ್ದಪ್ಪ ರಾಮಯ್ಯ ಬಿನ್ ಸಿದ್ದಪ್ಪ ನಾಗರಾಜು ಬಿನ್ ನಾರಾಯಣಪ್ಪ ದೊಡ್ಡ ಸಿದ್ದಪ್ಪ ಬಿನ್ ನಂಜುಂಡಪ್ಪ ಬೀರಪ್ಪ ಬಿನ್ ಲಕ್ಕಣ್ಣ ಉರುಫ್ ಚಿಕ್ಕಣ್ಣ ಕರಿಯಪ್ಪ ಬಿನ್ ಸಿದ್ದಪ್ಪ ಕೃಷ್ಣಪ್ಪ ಬಿನ್ ಮುನಿಶಾಮಪ್ಪ ಸಿದ್ದರಾಮಯ್ಯ ಬಿನ್ ಸಿದ್ದಪ್ಪ ಅಣ್ಣಯ್ಯಪ್ಪ ಬಿನ್ ಸಿದ್ದಪ್ಪ ವಿನೋದ ಬಿನ್ ರಾಜಣ್ಣ ಮುನಿಮುತ್ತಪ್ಪ ಬಿನ್ ಲೇ ಮುನಿಯಪ್ಪ ಸಿದ್ದಗಂಗಮ್ಮ ಕೋಂ ಲೇ ನಾರಾಯಣಪ್ಪ ಕಾಮಾಕ್ಷಮ್ಮ ಕೋಂ ಲೇ ವಿ ಪಿಳ್ಳಸಿದ್ದಪ್ಪ ಕಾಮಾಕ್ಷಮ್ಮ ಕೋಂ ಲೇ ವಿ ಪಿಳ್ಳಸಿದ್ದಪ್ಪ ಕಾಮಾಕ್ಷಮ್ಮ ಕೋಂ ಲೇ ವಿ ಪಿಳ್ಳಸಿದ್ದಪ್ಪ	ಆರ್.ಜಗನ್ನಾಥ – ಲೇ ರಂಗಪ್ಪ ಮುನಿಯಪ್ಪ – ನಾರಾಯಣಪ್ಪ ಪೂಜಮ್ಮ ಕೋಂ ಲೇ ನಾರಾಯಣಸ್ವಾಮಿ ಲಕ್ಷ್ಮಮ್ಮ ಬಿನ್ ಲಕ್ಕಪ್ಪ ನಾರಾಯಣಮ್ಮ ಬಿನ್ ಲೇ ಮುನಿಶಾಮಿ ಮುನಿಯಮ್ಮ ಬಿನ್ ಲೇ ಮುನಿಶಾಮಿ ದಾಸಪ್ಪ ಬಿನ್ ಲೇ ಮುನಿಶಾಮಪ್ಪ ಮುನಿಶಾಮಿ ಉ ಮುನಿಶಾಮಪ್ಪ ಬಿನ್ ಲೇ ರಂಗಪ್ಪ ಮಹೇಶಪ್ಪ ಬಿನ್ ಲೇ ರಂಗಪ್ಪ ಕೆ.ಎಚ್.ಲಕ್ಷ್ಮಣಗೌಡ –ಹುಚ್ಚೇಗೌಡ ಮುನಿಯಪ್ಪ ಮುನಿಶಾಮಿ ಕೆ.ಎಚ್.ಲಕ್ಷ್ಮಣಗೌಡ –ಹುಚ್ಚೇಗೌಡ ಮುನಿಯಮ್ಮ – ನಾಗಪ್ಪ ಸಾಕಮ್ಮ ಕೋಂ ಲೇ ರಾಮಾಂಜಿನಪ್ಪ ಎಸ್ ಮುನಿರಾಜು ಬಿನ್ ಲೇ ಆರ್ ಸಿದ್ದಪ್ಪ ಎಸ್ ಚನ್ನಪ್ಪ ಬಿನ್ ಲೇ ಆರ್ ಸಿದ್ದಪ್ಪ ಸರ್ಕಾರಿ ಗೋಮಾಳ ಕೃಷ್ಣಪ್ಪ ಬಿನ್ ಮುನಿಶಾಮಪ್ಪ ವೀರಕೆಂಪಯ್ಯ ಬಿನ್ ಸಿದ್ದಪ್ಪ ಅಣ್ಣಯ್ಯಪ್ಪ ಬಿನ್ ಸಿದ್ದಪ್ಪ ಸಿದ್ದರಾಮಯ್ಯ ಬಿನ್ ಸಿದ್ದಪ್ಪ ರಾಮಯ್ಯ ಬಿನ್ ಸಿದ್ದಪ್ಪ ನಾಗರಾಜು ಬಿನ್ ನಾರಾಯಣಪ್ಪ ದೊಡ್ಡ ಸಿದ್ದಪ್ಪ ಬಿನ್ ನಂಜುಂಡಪ್ಪ ಬೀರಪ್ಪ ಬಿನ್ ಲಕ್ಕಣ್ಣ ಉರುಫ್ ಚಿಕ್ಕಣ್ಣ ಕರಿಯಪ್ಪ ಬಿನ್ ಸಿದ್ದಪ್ಪ ಕೃಷ್ಣಪ್ಪ ಬಿನ್ ಮುನಿಶಾಮಪ್ಪ ಸಿದ್ದರಾಮಯ್ಯ ಬಿನ್ ಸಿದ್ದಪ್ಪ ಅಣ್ಣಯ್ಯಪ್ಪ ಬಿನ್ ಸಿದ್ದಪ್ಪ ವಿನೋದ ಬಿನ್ ರಾಜಣ್ಣ ಮುನಿಮುತ್ತಪ್ಪ ಬಿನ್ ಲೇ ಮುನಿಯಪ್ಪ ಸಿದ್ದಗಂಗಮ್ಮ ಕೋಂ ಲೇ ನಾರಾಯಣಪ್ಪ ಕಾಮಾಕ್ಷಮ್ಮ ಕೋಂ ಲೇ ವಿ ಪಿಳ್ಳಸಿದ್ದಪ್ಪ ಕಾಮಾಕ್ಷಮ್ಮ ಕೋಂ ಲೇ ವಿ ಪಿಳ್ಳಸಿದ್ದಪ್ಪ ಕಾಮಾಕ್ಷಮ್ಮ ಕೋಂ ಲೇ ವಿ ಪಿಳ್ಳಸಿದ್ದಪ್ಪ	59/*	41–00	0–00	02–00	0–00	ಖುಷ್ಕಿ	ಸ ನಂ.114	ವರದನಹಳ್ಳಿ ಗಡಿ, ಸ ನಂ.129	ಸ. ನಂ. 59ರ ಪೈಕಿ	ಸ ನಂ. 124, 125, 126, 128, 129	
2	ಉಮಾದೇವಿ ಕೋಂ ಶಂಕರ ಬಿ ಮುನಿಯಪ್ಪ ಬಿನ್ ಬೈಯಣ್ಣ ಬಿ ಮುನಿಶಾಮಪ್ಪ ಬಿನ್ ಬೈಯಣ್ಣ	ಉಮಾದೇವಿ ಶಂಕರ ಬಿ ಮುನಿಯಪ್ಪ ಬಿನ್ ಬೈಯಣ್ಣ ಬಿ ಮುನಿಶಾಮಪ್ಪ ಬಿನ್ ಬೈಯಣ್ಣ	111/* ರ ಪೈಕಿ	8–05	0–08(ಅ) 0–21(ಬ)	6–30	0–08(ಅ) 0–21(ಬ)	ಖುಷ್ಕಿ	ಸ.ನಂ.112	ವರದನಹಳ್ಳಿ ಗಡಿ	ಸ ನಂ.112	ಸ ನಂ.111 ರ ಪೈಕಿ	
3	ಉಮಾದೇವಿ– ಶಂಕರ ಬೈಯಣ್ಣ– ಅಂಜನಪ್ಪ	ಉಮಾದೇವಿ– ಶಂಕರ ಬೈಯಣ್ಣ– ಅಂಜನಪ್ಪ	112/* ರ ಪೈಕಿ	5–02	0–03(ಅ) 0–15(ಬ)	2–27	0–03(ಅ) 0–15(ಬ)	ಖುಷ್ಕಿ	ಸ ನಂ.113	ಸ ನಂ. 111	ಸ ನಂ. 116, 117, 119, 120, 121, 122, 123	ಸ ನಂ. 112 ರ ಪೈಕಿ	
4	ಉಮಾದೇವಿ – ಶಂಕರ್	ಉಮಾದೇವಿ – ಶಂಕರ್	113/* ರ ಪೈಕಿ	4–17	0–17(ಬ)	2–20	0–17	ಖುಷ್ಕಿ	ಸ ನಂ.58	ಸ ನಂ.112	ಸ.ನಂ.112	ಸ ನಂ. 113 ರ ಪೈಕಿ	
5	ಉಮಾದೇವಿ – ಶಂಕರ್	ಉಮಾದೇವಿ – ಶಂಕರ್	114/*ರ ಪೈಕಿ	9–35	0–21(ಅ)	6–18	0–21(ಅ)	ಖುಷ್ಕಿ	ಸ ನಂ.64	ಸ ನಂ.127, 128, 129	ಸ ನಂ. 59 ಮತ್ತು 114ರ ಪೈಕಿ	ಸ ನಂ.116, 118, 119, 120, 121, 124, 125, 126, 128	
6	ಹೆಚ್. ಎ. ಶಶಿಕಾಂತ ಬಿನ್ ಹೆಚ್ ಆಂಜನಪ್ಪ	ಹೆಚ್. ಎ. ಶಶಿಕಾಂತ ಬಿನ್ ಹೆಚ್ ಆಂಜನಪ್ಪ	115	1–00	0–00	1–00	0–00	ಖುಷ್ಕಿ	ಸ ನಂ. 58	ಸ ನಂ.116	ಸ ನಂ.131	ಸ.ನಂ. 112, 113	
7	ಹೆಚ್. ಎ. ಶಶಿಕಾಂತ ಬಿನ್ ಹೆಚ್ ಆಂಜನಪ್ಪ	ಹೆಚ್. ಎ. ಶಶಿಕಾಂತ ಬಿನ್ ಹೆಚ್ ಆಂಜನಪ್ಪ	116	1–01	0–01 (ಬ)	1–00	0–01(ಬ)	ಖುಷ್ಕಿ	ಸ.ನಂ.115, 131	ಸ ನಂ. 117, 118	ಸ ನಂ.114	ಸ ನಂ.112	
8	ಹೆಚ್. ಆಂಜಿನಪ್ಪ ಬಿನ್ ಲೇಟ್ ಜಿ.ಸಿ.ಹನುಮಯ್ಯ	ಹೆಚ್. ಆಂಜಿನಪ್ಪ ಬಿನ್ ಲೇಟ್ ಜಿ.ಸಿ.ಹನುಮಯ್ಯ	117	1–00	0–00	1–00	0–00	ಖುಷ್ಕಿ	ಸ ನಂ.116	ಸ ನಂ.119	ಸ ನಂ.118.	ಸ ನಂ.112	
9	ಹೆಚ್. ಎ. ಶ್ರೀಕಾಂತ ಬಿನ್ ಹೆಚ್ ಆಂಜನಪ್ಪ	ಹೆಚ್. ಎ. ಶ್ರೀಕಾಂತ ಬಿನ್ ಹೆಚ್ ಆಂಜನಪ್ಪ	118	1–01	0–01 (ಬ)	1–00	0–01(ಬ)	ಖುಷ್ಕಿ	ಸ ನಂ.116	ಸ ನಂ.119	ಸ ನಂ.114	ಸ ನಂ. 117, 119	
10	ಹೆಚ್. ಎ. ಶಶಿಕಾಂತ ಬಿನ್ ಹೆಚ್ ಆಂಜನಪ್ಪ	ಹೆಚ್. ಎ. ಶಶಿಕಾಂತ ಬಿನ್ ಹೆಚ್ ಆಂಜನಪ್ಪ	119	1–00	0–00	1–00	0–00	ಖುಷ್ಕಿ	ಸ ನಂ. 117, 118	ಸ ನಂ.120	ಸ ನಂ.114	ಸ ನಂ.112	
11	ಹೆಚ್. ಎ. ಶಶಿಕಾಂತ ಬಿನ್ ಹೆಚ್ ಆಂಜನಪ್ಪ	ಹೆಚ್. ಎ. ಶಶಿಕಾಂತ ಬಿನ್ ಹೆಚ್ ಆಂಜನಪ್ಪ	120	1–00	0–00	1–00	0–00	ಖುಷ್ಕಿ	ಸ ನಂ.119	ಸ ನಂ. 114, 121,	ಸ ನಂ.114	ಸ ನಂ.112	
12	ಹೆಚ್. ಎ. ಶಶಿಕಾಂತ ಬಿನ್ ಹೆಚ್ ಆಂಜನಪ್ಪ	ಹೆಚ್. ಎ. ಶಶಿಕಾಂತ ಬಿನ್ ಹೆಚ್ ಆಂಜನಪ್ಪ	121	1–00	0–00	1–00	0–00	ಖುಷ್ಕಿ	ಸ ನಂ.120	ಸ ನಂ.122	ಸ ನಂ.114	ಸ ನಂ.112	
13	ಹೆಚ್. ಎ. ಶಶಿಕಾಂತ ಬಿನ್ ಹೆಚ್ ಆಂಜನಪ್ಪ	ಹೆಚ್. ಎ. ಶಶಿಕಾಂತ ಬಿನ್ ಹೆಚ್ ಅಂಜನಪ್ಪ	122	1–00	0–00	1–00	0–00	ಖುಷ್ಕಿ	ಸ ನಂ.121	ಸ ನಂ.123	ಸ ನಂ. 125, 126	ಸ ನಂ.112	
14	ಹೆಚ್. ಎ. ಶ್ರೀಕಾಂತ ಬಿನ್ ಹೆಚ್ ಆಂಜನಪ್ಪ	ಹೆಚ್. ಎ. ಶ್ರೀಕಾಂತ ಬಿನ್ ಹೆಚ್ ಆಂಜನಪ್ಪ	123	1–00	0–00	1–00	0–00	ಖುಷ್ಕಿ	ಸ ನಂ.122	ವರದನಹಳ್ಳಿ ಗಡಿ	ಸ ನಂ. 124, 125	ಸ ನಂ.112	
15	ಹೆಚ್. ಎ. ಶ್ರೀಕಾಂತ ಬಿನ್ ಹೆಚ್ ಆಂಜನಪ್ಪ	ಹೆಚ್. ಎ. ಶ್ರೀಕಾಂತ ಬಿನ್ ಹೆಚ್ ಆಂಜನಪ್ಪ	124	1–00	0–00	1–00	0–00	ಖುಷ್ಕಿ	ಸ ನಂ.125	ವರದನಹಳ್ಳಿ ಗಡಿ	ಸ. ನಂ.114	ಸ ನಂ.123	
16	ಹೆಚ್. ಎ. ಶಶಿಕಾಂತ ಬಿನ್ ಹೆಚ್ ಆಂಜನಪ್ಪ	ಹೆಚ್. ಎ. ಶಶಿಕಾಂತ ಬಿನ್ ಹೆಚ್ ಆಂಜನಪ್ಪ	125	1–00	0–00	1–00	0–00	ಖುಷ್ಕಿ	ಸ ನಂ.126	ಸ ನಂ.124	ಸ ನಂ.114	ಸ ನಂ. 122, 123	
17	ಹೆಚ್. ಎ. ಶಶಿಕಾಂತ ಬಿನ್ ಹೆಚ್ ಆಂಜನಪ್ಪ	ಹೆಚ್. ಎ. ಶಶಿಕಾಂತ ಬಿನ್ ಹೆಚ್ ಆಂಜನಪ್ಪ	126	1–00	0–00	1–00	0–00	ಖುಷ್ಕಿ	ಸ ನಂ. 127, 128	ಸ ನಂ. 125	ಸ ನಂ.114	ಸ.ನಂ. 114, 122	
18	ಹೆಚ್. ಎ. ಶಶಿಕಾಂತ ಬಿನ್ ಹೆಚ್ ಆಂಜನಪ್ಪ	ಹೆಚ್. ಎ. ಶಶಿಕಾಂತ ಬಿನ್ ಹೆಚ್ ಆಂಜನಪ್ಪ	127	1–00	0–00	1–00	0–00	ಖುಷ್ಕಿ	ಸ ನಂ.114	ಸ ನಂ.126	ಸ ನಂ.128	ಸ ನಂ.114	
19	ಹೆಚ್. ಎ. ಶಶಿಕಾಂತ ಬಿನ್ ಹೆಚ್ ಆಂಜನಪ್ಪ	ಹೆಚ್. ಎ. ಶಶಿಕಾಂತ ಬಿನ್ ಹೆಚ್ ಆಂಜನಪ್ಪ	128	1–00	0–00	1–00	0–00	ತರಿ	ಸ ನಂ.114	ಸ ನಂ.114, 126	ಸ ನಂ.114	ಸ ನಂ.127	
20	ದೇವರಾಜ ಪಿ ಬಿನ್ ವಿ ಪಿಳ್ಳಸಿದ್ದಪ್ಪ	ದೇವರಾಜ ಪಿ ಬಿನ್ ವಿ ಪಿಳ್ಳಸಿದ್ದಪ್ಪ	129	1–00	0–00	1–00	0–00	ಖುಷ್ಕಿ	ಸ ನಂ.114	ವರದನಹಳ್ಳಿ ಗಡಿ	ಸ ನಂ.59	ಸ ನಂ.114	
21	ಸರ್ಕಾರಿ ಗೋಮಾಳ	ಸರ್ಕಾರಿ ಗೋಮಾಳ	131	2–18	0–00	2–18	0–00	ಖುಷ್ಕಿ	ಸ ನಂ. 55, 57, 58	ಸ ನಂ. 114, 116	ಸ ನಂ.64	ಸ ನಂ. 58, 115	
	ಒಟ್ಟು					37–33	2–07						

ಎರಡು ಗ್ರಾಮಗಳಿಂದ ಭೂಸ್ವಾಧೀನಪಡಿಸಲಾಗುವ ಜಮೀನಿನ ವಿಸ್ತೀರ್ಣ

ಗ್ರಾಮ	ಒಟ್ಟು ವಿಸ್ತೀರ್ಣ (ಎ–ಗು)	ಖರಾಬು ವಿಸ್ತೀರ್ಣ	ಐನು ವಿಸ್ತೀರ್ಣ
ವರದನಹಳ್ಳಿ	50–00	0–23	49–17
ಸುಣ್ಣಘಟ್ಟ	40–00	2–07	37–33
ಒಟ್ಟು	90–00	2–30	87–10

ಸಹಿ/–
ಗೃಹ ಆಯುಕ್ತರು,
ಕರ್ನಾಟಕ ಗೃಹ ಮಂಡಳಿ, ಬೆಂಗಳೂರು

ವಾಸಾಸಂಇ/ವಾಪ್ರ/ಜಿಎ/3995/2025–26

ಸಹಿ ಅಭಿಯಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಿಳೆಯರು ಹಾಗೂ ಮಕ್ಕಳ ಮೇಲಿನ ಅಪರಾಧಗಳ ವಿರುದ್ಧ ಹೋರಾಟ ನಡೆಸಲು ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆಯಿಂದ (ಎಐಎಂಎಸ್‌ಎಸ್) ನಗರದಲ್ಲಿ ಸಹಿ ಸಂಗ್ರಹ ಅಭಿಯಾನಕ್ಕೆ ಚಾಲನೆ ನೀಡಲಾಯಿತು.

ಮಹಿಳೆಯರ ಮೇಲಿನ ದೌರ್ಜನ್ಯ ಹತ್ತಿಕ್ಕುವ ದಿನದ ಅಂಗವಾಗಿ ಬೆಂಗಳೂರು ಜಿಲ್ಲಾ ಸಮಿತಿಯು ಬಹುಮಹಡಿ ಕಟ್ಟಡ ಹತ್ತಿರ ಮಹಾನ್ ವ್ಯಕ್ತಿಗಳ ಸೂಕ್ತಿ ಪ್ರದರ್ಶನದೊಂದಿಗೆ ಅಭಿಯಾನ ಆರಂಭವಾಯಿತು.

ಮಹಿಳೆಯರು ಮತ್ತು ಹೆಣ್ಣು ಮಕ್ಕಳ ರಕ್ಷಣೆಗೆ ಸೂಕ್ತ ಕ್ರಮ ಕೈಗೊಳ್ಳಬೇಕು, ಅತ್ಯಾಚಾರ ಪ್ರಕರಣಗಳ ವಿಚಾರಣೆಗೆ ತ್ವರಿತ ನ್ಯಾಯಾಲಯಗಳನ್ನು ಸ್ಥಾಪಿಸಬೇಕು. ಅಶ್ಲೀಲ ಸಿನಿಮಾ-ಸಾಹಿತ್ಯ, ಜಾಹೀರಾತು, ವೆಬ್‌ಸೈಟ್, ಮದ್ಯ-ಮಾದಕ ವಸ್ತುಗಳನ್ನು ನಿಷೇಧಿಸಬೇಕು ಎನ್ನುವ ಹಕ್ಕೊತ್ತಾಯದೊಂದಿಗೆ ಸಹಿ ಸಂಗ್ರಹ ಆರಂಭಿಸಲಾಗಿದೆ ಎಂದು ಸಂಘಟನೆಯ ಜಿಲ್ಲಾ ಕಾರ್ಯದರ್ಶಿ ಎಚ್.ಎಲ್. ನಿರ್ಮಲ ಹೇಳಿದರು.

ಹೆಬ್ಬಾಳ ಲೂಪ್: 15 ದಿನದಲ್ಲಿ ಪೂರ್ಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಬ್ಬಾಳ ಜಂಕ್ಷನ್‌ನಲ್ಲಿ ನಿರ್ಮಾಣವಾಗುತ್ತಿರುವ ಹೊಸ ಲೂಪ್ 15 ದಿನಗಳಲ್ಲಿ ಪೂರ್ಣಗೊಳ್ಳಲಿದೆ ಎಂದು ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ತಿಳಿಸಿದರು.

ಉತ್ತರ ನಗರ ಪಾಲಿಕೆ ವ್ಯಾಪ್ತಿಯ ಹಲವು ಕಾಮಗಾರಿಗಳನ್ನು ಪರಿಶೀಲಿಸಿದ ಸಂದರ್ಭದಲ್ಲಿ ಹೆಬ್ಬಾಳ ಜಂಕ್ಷನ್‌ನಲ್ಲಿ ಕಾಮಗಾರಿಯನ್ನು ಮಂಗಳವಾರ ವೀಕ್ಷಿಸಿದ ಬಳಿಕ ಅವರು ಮಾತನಾಡಿದರು.

ಕೆ.ಆರ್. ಪುರದ ಕಡೆಯಿಂದ ನಗರದೊಳಗೆ ಸಂಪರ್ಕ ಕಲ್ಪಿಸುವ ಮೇಲ್ಸೇತುವೆ ಕಾಮಗಾರಿಯನ್ನು ಬಿಡಿಎ ಪೂರ್ಣಗೊಳಿಸಿ, ವಾಹನ ಸಂಚಾರಕ್ಕೆ ಮುಕ್ತಗೊಳಿಸಲಾಗಿದೆ. ಇದಕ್ಕೆ ಹೊಂದಿಕೊಂಡಂತೆ, ಹೊಸ ಮೇಲ್ಸೇತುವೆ ಹಾಗೂ ಹಳೆಯ ಮೇಲ್ಸೇತುವೆಗೆ ಸಂಪರ್ಕ ಕಲ್ಪಿಸುವ ಲೂಪ್ ಕಾಮಗಾರಿ ಪ್ರಗತಿಯಲ್ಲಿದ್ದು, 15 ದಿನದಲ್ಲಿ ಪೂರ್ಣಗೊಳಿಸಿ ವಾಹನ ಸಂಚಾರಕ್ಕೆ ಅವಕಾಶ ಮಾಡಿಕೊಡಲಾಗುತ್ತದೆ ಎಂದರು.

ಹೆಬ್ಬಾಳ ಮೇಲ್ಸೇತುವೆಯಲ್ಲಿ ಕೈಗೊಂಡಿರುವ ಹೊಸ ಲೂಪ್ ನಿರ್ಮಾಣ ಕಾಮಗಾರಿಯ ಮೊದಲ ಗರ್ಡರ್ ಈಗಾಗಲೇ ಅಳವಡಿಸಲಾಗಿದೆ, ಕಾಂಕ್ರೀಟ್ ಕೆಲಸ ಪ್ರಗತಿಯಲ್ಲಿದೆ. ಉಳಿದ ಎರಡು ಗರ್ಡರ್‌ಗಳ ಅಳವಡಿಕೆ ಕಾರ್ಯ ಕೈಗೊಂಡು ಬಾಕಿ ಕಾಮಗಾರಿಗಳನ್ನು ಶೀಘ್ರ ಪೂರ್ಣಗೊಳಿಸಲು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಮಾನ್ಯತಾ ಟೆಕ್ ಪಾರ್ಕ್‌ನಿಂದ ವಿಮಾನ ನಿಲ್ದಾಣಕ್ಕೆ ಸಂಪರ್ಕ ಕಲ್ಪಿಸಲು ಮೆಟ್ರೊ ಮಾರ್ಗ ಸಮೀಪದಲ್ಲಿ 1.4 ಕಿ.ಮೀ ಉದ್ದದ ಮೇಲ್ಸೇತುವೆ ನಿರ್ಮಿಸಲಾಗುತ್ತದೆ. ಈ ಕುರಿತು ವಿವಿಧ ಇಲಾಖೆಗಳೊಂದಿಗೆ ಚರ್ಚೆ ನಡೆಯುತ್ತಿದ್ದು, ಅದನ್ನು ಶೀಘ್ರ ಅನುಷ್ಠಾನಕ್ಕೆ ತರಲು ಕ್ರಮ ಕೈಗೊಳ್ಳಲಾಗುವುದು ಎಂದು ಬಿಡಿಎ ಅಧಿಕಾರಿಗಳು ಈ ಸಂದರ್ಭದಲ್ಲಿ ಮಾಹಿತಿ ನೀಡಿದರು. ಎಲ್ಲ ಪ್ರಕ್ರಿಯೆಗಳನ್ನು ಶೀಘ್ರ ಪೂರ್ಣಗೊಳಿಸುವಂತೆ ಮಹೇಶ್ವರ್ ರಾವ್ ಹೇಳಿದರು.

‘ರಾಜ್ಯದಲ್ಲಿ ಆಡಳಿತ ಯಂತ್ರ ಕುಸಿದಿದೆ’

ತುಮಕೂರು: ‘ಕಾಂಗ್ರೆಸ್ ಪಾಳಯದಲ್ಲಿ ಕುರ್ಚಿ ಕಾದಾಟದ ರೋಗ ಆವರಿಸಿದೆ. ರಾಜ್ಯದಲ್ಲಿ ಆಡಳಿತ ಯಂತ್ರ ಕುಸಿದಿದೆ’ ಎಂದು ಮಾಜಿ ಮುಖ್ಯಮಂತ್ರಿ ಡಿ.ವಿ.ಸದಾನಂದಗೌಡ ಇಲ್ಲಿ ಮಂಗಳವಾರ ವಾಗ್ದಾಳಿ ನಡೆಸಿದರು.

ಸದಾನಂದ ಗೌಡ

ರಾಜ್ಯದಲ್ಲಿ ಅತಿವೃಷ್ಟಿ-ಅನಾವೃಷ್ಟಿಯಿಂದ ರೈತರು ಸಂಕಷ್ಟಕ್ಕೆ ಸಿಲುಕಿದ್ದರೂ ಸರ್ಕಾರ ಸ್ಪಂದಿಸುತ್ತಿಲ್ಲ. ಒಂದು ಕಡೆ ಕುರ್ಚಿಗಾಗಿ ಪೈಪೋಟಿ ನಡೆಯುತ್ತಿದ್ದರೆ ಮತ್ತೊಂದು ಕಡೆ ಇಲಾಖೆಗಳು, ಅಧಿಕಾರಿಗಳು ನಿಷ್ಕ್ರಿಯರಾಗಿದ್ದಾರೆ. ರೈತರಿಗೆ ಸ್ಪಂದಿಸಬೇಕಾದ ಕೃಷಿ, ತೋಟಗಾರಿಕೆ ಇಲಾಖೆಗಳು ಸತ್ತು ಹೋಗಿವೆ ಎಂದು ಪತ್ರಿಕಾಗೋಷ್ಠಿಯಲ್ಲಿ ಟೀಕಾ ಪ್ರಹಾರ ನಡೆಸಿದರು. ‘ಕರ್ನಾಟಕದ ಆಡಳಿತ ದೇಶಕ್ಕೆ ಮಾದರಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳುತ್ತಿದ್ದಾರೆ. ಯಾವುದು ಮಾದರಿ ಎಂದು ಕೇಳುವಂತಾಗಿದೆ. ಅನ್ನದಾತರ ನೆರವಿಗೆ ಬಾರದೆ ಆಡಳಿತ ನಡೆಸುವುದು ಮಾದರಿಯೇ ಎಂದು ಪ್ರಶ್ನಿಸಬೇಕಾಗಿದೆ’ ಎಂದರು.

ಡಿಕೆಶಿ ಸಿ.ಎಂ ಆಗಲಿ: ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿ ಆಗಬೇಕು ಎಂಬ ಬೇಡಿಕೆ ಸಮಂಜಸವಾಗಿದೆ. ಆ ಸ್ಥಾನ ಕೇಳುವುದರಲ್ಲಿ ತಪ್ಪಿಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ತಮ್ಮ ಬೆಂಬಲಿಗರ ಮೂಲಕ ಮುಖ್ಯಮಂತ್ರಿ ಸ್ಥಾನಕ್ಕೆ ಡಿ.ಕೆ.ಶಿವಕುಮಾರ್ ಕಲ್ಲು ಬೀಸುವಂತೆ ಮಾಡಿದರು. ಆದರೆ, ಈಗ ಪರದಾಡುತ್ತಿದ್ದಾರೆ ಎಂದು ಕುಟುಕಿದರು.

ಬೆಳ್ಳಿ ತೇರು ಎಳೆದ ಮಹಿಳೆಯರು

ಪ್ರಜಾವಾಣಿ ವಾರ್ತೆ

ಸಿಂದಗಿ (ವಿಜಯಪುರ ಜಿಲ್ಲೆ): ಪಟ್ಟಣದ ಸಾರಂಗಮಠ-ಗಚ್ಚಿನಮಠದ ವೀರಭದ್ರೇಶ್ವರ ಮತ್ತು ಭದ್ರಕಾಳಿ ಅಮ್ಮನವರ ಜಾತ್ರೆ ಪ್ರಯುಕ್ತ ಮಂಗಳವಾರ ಮಹಿಳೆಯರು 120 ಕೆಜಿ ತೂಕದ ಬೆಳ್ಳಿ ತೇರು ಎಳೆದರು.

ಸಾರಂಗಮಠ-ಗಚ್ಚಿನಮಠದ ಪೀಠಾಧ್ಯಕ್ಷ ಪ್ರಭು ಸಾರಂಗದೇವ ಶಿವಾಚಾರ್ಯ ಸ್ವಾಮೀಜಿ ಸಮ್ಮುಖದಲ್ಲಿ ವಿವಿಧ ಶ್ರೀಗಳು ರಥೋತ್ಸವಕ್ಕೆ ಚಾಲನೆ ನೀಡಿದರು.

ಬೆಳ್ಳಿ ತೇರಿನಲ್ಲಿ ವೀರಭದ್ರೇಶ್ವರ, ಭದ್ರಕಾಳಿ ಅಮ್ಮನವರ ಉತ್ಸವ ಮೂರ್ತಿಗಳ ಇಡಲಾಗಿತ್ತು. ಹಿರೇಮಣ್ಣೂರ ಹಲಗಿ ವಾದಕರು ಹಲಗೆ ನುಡಿಸಿ, ಸಾಹಸ ಪ್ರದರ್ಶಿಸಿದರು. ಸೋಗಿಯ ಜಾನಪದ ಕಲಾ ತಂಡದವರು ನಂದಿಕೋಲ ನೃತ್ಯ ಪ್ರದರ್ಶಿಸಿದರು. ಉತ್ಸವದಲ್ಲಿ ಭಕ್ತರು ಪಾಲ್ಗೊಂಡಿದ್ದರು.

ಕೆ.ಜಿ.ಹಳ್ಳಿ ದಲಿತರ ಮನೆಗಳ ನೆಲಸಮ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೈಲ್ವೆ ಇಲಾಖೆಯು ಕಾಡುಗೊಂಡನಹಳ್ಳಿಯ ಲೇಔಟ್‌ನಲ್ಲಿ 29 ದಲಿತ ಕುಟುಂಬಗಳ ಮನೆ ನೆಲಸಮ ಮಾಡಿರುವುದನ್ನು ಪ್ರಶ್ನಿಸಿ ಸಂತ್ರಸ್ತರು ಸಲ್ಲಿಸಿರುವ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಮನೆ ಕಳೆದುಕೊಂಡಿರುವ ಕೆ.ಜಿ.ಹಳ್ಳಿಯ ಚುನಾ ಲೈನ್ ನಿವಾಸಿಗಳಾದ ಯು.ರಾಣಿ ಸೇರಿದಂತೆ 12 ಮಂದಿ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ಹೈಕೋರ್ಟ್ ವಕೀಲ ಜಿ.ಆರ್.ಮೋಹನ್ ಅವರ ವಾದ ಆಲಿಸಿದ ನ್ಯಾಯಪೀಠ, ರಾಜ್ಯ ಸರ್ಕಾರ ಮತ್ತು ರೈಲ್ವೆ ಇಲಾಖೆ ಸೇರಿದಂತೆ ಇತರೆ ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿತು.

'ಸಂತ್ರಸ್ತ ಕುಟುಂಬಗಳಿಗೆ ಇದೇ 30ರ ನಂತರ ಹೆಚ್ಚುವರಿಯಾಗಿ 30 ದಿನಗಳ ತಾತ್ಕಾಲಿಕ ಆಶ್ರಯ ನೀಡುವ ಬಗ್ಗೆ ನಿಮ್ಮ ನಿಲುವು ಏನೆಂಬುದನ್ನು ತಿಳಿಸಿ' ಎಂದು ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ವಕೀಲರಿಗೆ ಸೂಚಿಸಿ ವಿಚಾರಣೆಯನ್ನು ಇದೇ 26ಕ್ಕೆ ಮುಂದೂಡಿತು.

ಅರ್ಜಿಯಲ್ಲಿ ಏನಿದೆ?: 'ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) 1985ರಲ್ಲಿ ಬಡಾವಣೆ ನಿರ್ಮಿಸಿ ನಿವೇಶನಗಳನ್ನು ಹಂಚಿಕೆ ಮಾಡಿತ್ತು. 2015–16ರಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಮನೆ ಕಟ್ಟಿಕೊಳ್ಳಲು ಪ್ರತಿಯೊಬ್ಬರಿಗೂ ₹3 ಲಕ್ಷ ಸಹಾಯಧನ ನೀಡಿತ್ತು. ಇಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ ಸೇರಿದ ನಾವುಗಳು ಮನೆಗಳನ್ನು ಕಟ್ಟಿಕೊಂಡು ವಾಸ ಮಾಡುತ್ತಿದ್ದೆವು. ಬಿಬಿಎಂಪಿ ನಮಗೆ ಮೂಲಸೌಕರ್ಯ ಒದಗಿಸಿ ಹಕ್ಕುಪತ್ರಗಳನ್ನೂ ವಿತರಿಸಿದೆ. ಆದರೆ, ರೈಲ್ವೆ ಇಲಾಖೆ ಯಾವುದೇ ನೋಟಿಸ್ ನೀಡದೇ ಅಕ್ಟೋಬರ್ 31ರಂದು ಏಕಾಏಕಿ ನಮ್ಮ 29 ಮನೆಗಳನ್ನು ಧ್ವಂಸಗೊಳಿಸಲಾಗಿದೆ. ಇದರಿಂದ ನಾವೆಲ್ಲಾ ಬೀದಿಪಾಲಾಗಿದ್ದೇವೆ. ಸದ್ಯ ಸ್ಥಳೀಯ ಲಿಡ್ಕರ್ ಭವನದಲ್ಲಿ ನವೆಂಬರ್ 30ರವರೆಗೆ ತಾತ್ಕಾಲಿಕ ಆಶ್ರಯ ಪಡೆದಿದ್ದೇವೆ. ಆದ್ದರಿಂದ, ವಿವಾದ ಇತ್ಯರ್ಥವಾಗುವ ತನಕ ಹೆಚ್ಚುವರಿಯಾಗಿ 30 ದಿನಗಳ ಕಾಲ ಆಶ್ರಯ ಒದಗಿಸಲು ಜಿಬಿಎಗೆ ನಿರ್ದೇಶಿಸಬೇಕು' ಎಂದು ಅರ್ಜಿದಾರರು ಕೋರಿದ್ದಾರೆ.

ಸೊಪ್ಪಿನಬೆಟ್ಟ ಜಮೀನು ಹಂಚಿಕೆ: ನೋಟಿಸ್

ಬೆಂಗಳೂರು: 'ಮಲೆನಾಡಿನ ಸೊಪ್ಪಿನಬೆಟ್ಟ ಜಮೀನನ್ನು ಬೇಕಾಬಿಟ್ಟಿಯಾಗಿ ಖಾಸಗಿ ವ್ಯಕ್ತಿಗಳಿಗೆ ಹಂಚಿಕೆ ಮಾಡಲಾಗಿದೆ' ಎಂದು ಆಕ್ಷೇಪಿಸಲಾದ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಸಾಗರದ ಮಂಕಾಳೆ ನಿವಾಸಿಗಳಾದ ಎಂ.ಎನ್.ವನಿತಾ ಸೇರಿದಂತೆ ಐವರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ಅರ್ಜಿದಾರರ ಪರ ವಕೀಲರ ವಾದ ಆಲಿಸಿದ ನ್ಯಾಯಪೀಠ, ಕಂದಾಯ ಇಲಾಖೆ ಕಾರ್ಯದರ್ಶಿ, ಶಿವಮೊಗ್ಗ ಜಿಲ್ಲಾಧಿಕಾರಿ ಸೇರಿದಂತೆ ಉಳಿದ ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆಯನ್ನು 2026ರ ಫೆ.17ಕ್ಕೆ ಮುಂದೂಡಿತು.

'ಜಾಗತಿಕ ಸಾಮರ್ಥ್ಯ ಕೇಂದ್ರ ಸ್ಥಾಪನೆ'

ಬೆಂಗಳೂರು: ಬ್ರಿಟನ್‌ನ ಎಸ್.ಸಿ.ಐ ಸೆಮಿ ಕಂಡಕ್ಟರ್ಸ್ ಕಂಪನಿ ಕರ್ನಾಟಕದಲ್ಲಿ 'ಜಾಗತಿಕ ಸಾಮರ್ಥ್ಯ ಕೇಂದ್ರ (ಜಿಸಿಸಿ)' ಸ್ಥಾಪಿಸುವ ಆಸಕ್ತಿ ತೋರಿದೆ.

ಈ ಕುರಿತು ಮಾಹಿತಿ ನೀಡಿರುವ ಬ್ರಿಟನ್ ಪ್ರವಾಸದಲ್ಲಿರುವ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ, 'ರಾಜ್ಯದಲ್ಲಿ ಕಂಪನಿಯ ಬಂಡವಾಳ ಹೂಡಿಕೆ, ಭವಿಷ್ಯದ ಸಹಭಾಗಿತ್ವಕ್ಕೆ ಸಂಪೂರ್ಣ ಬೆಂಬಲ ನೀಡುವುದಾಗಿ ರಾಜ್ಯ ಸರ್ಕಾರ ಭರವಸೆ ನೀಡಿದೆ. ಇದರಿಂದ ಕಂಪ್ಯೂಟರ್ ಸುರಕ್ಷತೆಗೆ ಅಗತ್ಯವಿರುವ ಅಂತರ್ಗತ ಸುರಕ್ಷೆಯ ಮೈಕ್ರೊ–ಪ್ರೊಸೆಸರ್‌ಗಳ ತಯಾರಿಕೆ ಸ್ಥಳೀಯವಾಗಿ ಸಾಧ್ಯವಾಗಲಿದೆ' ಎಂದಿದ್ದಾರೆ.

'ವಿಯರ್ ಗ್ರೂಪ್, ಲೇಟೋಸ್ ಡೇಟಾ ಸೆಂಟರ್, ಸ್ಯಾಮ್ಕೋ ಹೋಲ್ಡಿಂಗ್ಸ್, ಎ.ಆರ್.ಎಂ. ಸೆಮಿಕಂಡಕ್ಟರ್ಸ್ ಕಂಪನಿಗಳ ಮುಖ್ಯಸ್ಥರೊಂದಿಗೆ ಬಂಡವಾಳ ಹೂಡಿಕೆ, ವಿಸ್ತರಣೆ ಕುರಿತು ಪ್ರತ್ಯೇಕ ಸಭೆಗಳನ್ನು ನಡೆಸಿದ್ದು, 'ಎ.ಆರ್.ಎಂ. ಸೆಮಿಕಂಡಕ್ಟರ್ಸ್ ಕಂಪನಿಯ 2ನೇ ಅತ್ಯಂತ ದೊಡ್ಡ ಕಚೇರಿ ಬೆಂಗಳೂರಿನಲ್ಲಿದೆ. ಅದು ಆಸ್ಟಿನ್–ಬೆಂಗಳೂರು– ಕ್ಯಾಲಿಫೋರ್ನಿಯಾ (ಎಬಿಸಿ) ವ್ಯಾಪ್ತಿಯನ್ನು ಹೊಂದಿದೆ. ಈಗ ಕಂಪನಿಯು ತನ್ನ ಜಾಗತಿಕ ಕೇಂದ್ರಗಳಲ್ಲಿ ಸಹಭಾಗಿತ್ವವನ್ನು ವಿಸ್ತರಿಸಿಕೊಳ್ಳಲು ಬಯಸಿದೆ. ಬೆಂಗಳೂರಿನಲ್ಲಿ ತನ್ನ ಮತ್ತೊಂದು ಕಚೇರಿ ಸ್ಥಾಪಿಸಲು ಒಲವು ತೋರಿದೆ. ಕೇಂಬ್ರಿಡ್ಜ್ ಮತ್ತು ಬೆಂಗಳೂರು ನಗರಗಳೆರಡೂ ಸೆಮಿಕಂಡಕ್ಟರ್ ವಿನ್ಯಾಸ, ಸಂಶೋಧನೆ, ಅಭಿವೃದ್ಧಿ, ಪ್ರತಿಭಾವಂತ ಯುವಜನರನ್ನು ಹೊಂದಿವೆ' ಎಂದಿದ್ದಾರೆ.

'ಸ್ಯಾಮ್ಕೊ ಹೋಲ್ಡಿಂಗ್ಸ್ ಕಂಪನಿ ರಾಜ್ಯದಲ್ಲಿ ಮರುಬಳಕೆ ಇಂಧನ, ಎಥೆನಾಲ್ ಉತ್ಪಾದನೆ ಮತ್ತು ಬ್ಯಾಟರಿ ತಯಾರಿಕೆ ವಲಯಗಳಲ್ಲಿ ಬಂಡವಾಳ ಹೂಡಲಿದೆ. ಲೇಟೋಸ್ ಡೇಟಾ ಸೆಂಟರ್ ಬೆಂಗಳೂರಿನಲ್ಲಿ ಎಐ ಕ್ಷೇತ್ರಕ್ಕೆ ಇನ್‌ಕ್ಯುಬೇಷನ್ ಕೇಂದ್ರವನ್ನು ತೆರೆಯಲು ಆಸಕ್ತಿ ತೋರಿಸಿದೆ. ಗಣಿಗಾರಿಕೆ, ಖನಿಜ, ಕೈಗಾರಿಕಾ ಕ್ಷೇತ್ರಗಳಲ್ಲಿ ಛಾಪು ಮೂಡಿಸಿದ ವಿಯರ್ ಗ್ರೂಪ್ ಬೆಂಗಳೂರಿನ ಸಮೀಪ ಇರುವ ತಯಾರಿಕಾ ಘಟಕ ವಿಸ್ತರಿಸಲು ಚಿಂತನೆ ನಡೆಸಿದೆ' ಎಂದಿದ್ದಾರೆ.

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೬೦ | ಬೆಂಗಳೂರು, ಶುಕ್ರವಾರ ೨೧ ನವೆಂಬರ್, ೨೦೨೫ (ಕಾರ್ತಿಕಾ, ೩೦ ಶಕವರ್ಷ, ೧೯೪೭) | ಸಂಚಿಕೆ ೨೨೧
Volume 160 | BENGALURU, FRIDAY 21, NOVEMBER, 2025 (KARTHIKA, 30, SHAKAVARSHA, 1947) | Issue 221

ಭಾಗ 3

ಸರ್ಕಾರದ ಆಯಾ ಇಲಾಖೆಗಳ ಮುಖ್ಯಸ್ಥರ ಮತ್ತು ಸ್ಥಳೀಯ ಪ್ರಾಧಿಕಾರಿಗಳಿಗೆ ಸಂಬಂಧಿಸಿದ ಅಧಿಸೂಚನೆಗಳು

ನಮೂನೆ–V

ಗೃಹ ಆಯುಕ್ತರು, ಕರ್ನಾಟಕ ಗೃಹ ಮಂಡಳಿ, ಕಾವೇರಿ ಭವನ, ಬೆಂಗಳೂರು.

[ಕರ್ನಾಟಕ ತಿದ್ದುಪಡಿ ನಿಯಮ–5, 20(1) (ಬಿ)]

ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ ಕಾಯ್ದೆ–2013ರ ಕಲಂ –11(1)ರ ಮೇರೆಗೆ ಅಧಿಸೂಚನೆ

ಸಂಖ್ಯೆ:ಕಗೃಮಂ/ಭೂಸ್ವಾವಿ/ಬೆಂಗಳೂರು/75/2025–26 **ದಿನಾಂಕ: 19.11.2025**

ಸಾರ್ಜಜನಿಕ ಉದ್ದೇಶಕ್ಕಾಗಿ ಅಂದರೆ ಸೂರ್ಯನಗರ 4ನೇ ಹಂತದ ವಸತಿ ಯೋಜನೆಯ ಸಮಗ್ರ ಅಭಿವೃದ್ಧಿ ಯೋಜನೆಯಡಿ ರಾಜ್ಯ ಮಟ್ಟದ ಕ್ರೀಡಾಂಗಣ / ಸಂಪರ್ಕ ರಸ್ತೆ ಕಲ್ಪಿಸಲು ಬೆಂಗಳೂರು ನಗರ ಜಿಲ್ಲೆ, ಆನೇಕಲ್ ತಾಲ್ಲೂಕು, ಕಸಬಾ ಹೋಬಳಿ, ಇಂಡ್ಲವಾಡಿ ಗ್ರಾಮದ ಈ ಕೆಳಗಿನ ಅನುಸೂಚಿಯಲ್ಲಿ ಕಾಣಿಸಿರುವ ಜಮೀನುಗಳ ಸ್ವಾಧೀನತೆಯ ಅವಶ್ಯಕತೆಯಿರುತ್ತದೆಂದು ಸರ್ಕಾರವು ಭಾವಿಸುತ್ತದೆ. ಈ ಯೋಜನೆಗೆ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್‌ವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ–2013(2013ರ ಕೇಂದ್ರ ಅಧಿನಿಯಮ ಸಂಖ್ಯೆ: 30)ಕ್ಕೆ ಅನುಗುಣವಾಗಿ ಕರ್ನಾಟಕ ರಾಜ್ಯಕ್ಕೆ ಅನ್ವಯಿಸುವಂತೆ ದಿನಾಂಕ: 23–07–2019 ರಿಂದ ಜಾರಿಗೆ ಬಂದಿರುವ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್‌ವಸತಿ ಮತ್ತುಪುನರ್‌ನಿರ್ಮಾಣ (ಕರ್ನಾಟಕ ತಿದ್ದುಪಡಿ) ಕಾಯ್ದೆ 2019 (2019ರ ಕರ್ನಾಟಕ ಅಧಿನಿಯಮ ಸಂಖ್ಯೆ: 16)ರ ಕಲಂ –10ರಡಿ ಮೂಲ ಕಾಯ್ದೆಯ ಅಧ್ಯಾಯ– II & III ರಲ್ಲಿನ ಉಪಬಂಧಗಳು ಅನ್ವಯಿಸುವುದರಿಂದ ವಿನಾಯಿತಿ ನೀಡಿ ಸರ್ಕಾರದ ಸಂಖ್ಯೆ: ಆರ್.ಡಿ 134 ಎಕ್ಯೂಬಿ 2025 ದಿನಾಂಕ: 08.09.2025ರಂತೆ ಅಧಿಸೂಚನೆಯನ್ನು ಹೊರಡಿಸಲಾಗಿದ್ದು, ಈ ಅಧಿಸೂಚನೆಯನ್ನು ದಿನಾಂಕ: 18–09–2025ರಂದು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟವಾಗಿರುತ್ತದೆ.

ಆದುದರಿಂದ ಈ ಮೂಲಕ ತಿಳಿಸುವುದೇನೆಂದರೆ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್‌ವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ–2013(2013ರ ಕೇಂದ್ರ ಅಧಿನಿಯಮ ಸಂಖ್ಯೆ: 30) ಕಲಂ–12ರ ಮೇರೆಗೆ ಪ್ರದತ್ತವಾದ ಅಧಿಕಾರ ಚಲಾಯಿಸುವಂತೆ ಗೃಹ ಆಯುಕ್ತರು, ಕರ್ನಾಟಕ ಗೃಹ ಮಂಡಳಿ, ಬೆಂಗಳೂರು ಇವರಿಗೆ ಅಧಿಕಾರ ನೀಡಲಾಗಿದೆ.

ಈ ಜಮೀನುಗಳ ಸ್ವಾಧೀನ ಕೆಲಸ ನಿರ್ವಹಿಸುವಲ್ಲಿ ಸರ್ಕಾರದಿಂದ ನೇಮಿಸಲ್ಪಟ್ಟ ಮೋಜಣಿದಾರರಿಗಾಗಲೀ ಅಥವಾ ಈ ಕೆಲಸ ಮಾಡುವವರಿಗಾಗಲೀ ಯಾರು ಅಡ್ಡಿ ಮಾಡಕೂಡದೆಂದು ಎಚ್ಚರಿಸಲಾಗಿದೆ. ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್‌ವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ–2013(2013ರ ಕೇಂದ್ರ ಅಧಿನಿಯಮ ಸಂಖ್ಯೆ: 30)ರ ಕಲಂ –11(1)ರ ಮೇರೆಗೆ ಈ ಅಧಿಸೂಚನೆಯು ಪ್ರಕಟಗೊಂಡ ದಿನಾಂಕದಿಂದ ಸದರಿ ಸ್ವಾಧೀನಪಡಿಸಿಕೊಳ್ಳಲಿರುವ ಭೂಮಿಯನ್ನು ಒಪ್ಪಂದದ ಮೇರೆಗೆ ವಿಕ್ರಯಿಸುವ, ಭೋಗ್ಯಕ್ಕೆ ಅಡವಿಡುವ, ಅನುಭವಿಸುವ ಬದಲಾಯಿಸುವ ಅಥವಾ ಇನ್ನೂ ಯಾವುದೇ ರೀತಿಯ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳದಂತೆ ನಿರ್ಭಂದಿಸಿದೆ. ಅಂತಹ ಯಾವುದೇ ಅಥವಾ ಇನ್ಯಾವುದೇ ರೀತಿಯ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಲ್ಲಿ ಅದನ್ನು ಐತೀರ್ಪು ರಚಿಸುವಾಗ ಗಣನೆಗೆ ತೆಗೆದುಕೊಳ್ಳದೇ ಅಂತಿಮವಾಗಿ ಸದರಿ ಕಾಯ್ದೆಯನ್ವಯ ಭೂಸ್ವಾಧೀನಪಡಿಸಿಕೊಳ್ಳಲಾಗುವುದೆಂದು ಈ ಮೂಲಕ ತಿಳಿಯಪಡಿಸಲಾಗಿದೆ.

ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್‌ವಸತಿ ಮತ್ತುಪುನರ್ ನಿರ್ಮಾಣ ಕಾಯ್ದೆ–2013(2013ರ ಕೇಂದ್ರ ಅಧಿನಿಯಮ ಸಂಖ್ಯೆ: 30)ರ ಕಲಂ –15(1)ರ ಮೇರೆಗೆ ಆಸಕ್ತಿಯುಳ್ಳವರು ತಮ್ಮ ಆಕ್ಷೇಪವಿದ್ದಲ್ಲಿ, ಆಕ್ಷೇಪಣೆಗಳನ್ನು ಈ ಅಧಿಸೂಚನೆಯು ಪ್ರಕಟಗೊಂಡ 60 ದಿನಗಳೊಳಗಾಗಿ ಈ ಕಾರ್ಯಾಲಕ್ಕೆ ಸಲ್ಲಿಸಬೇಕು. ತದನಂತರ ಸ್ವೀಕೃತವಾಗುವ ಆಕ್ಷೇಪಣೆಗಳನ್ನು ಯಾವುದೇ ಮುನ್ಸೂಚನೆ ನೀಡದೇ ವೀಲೇಯಕ್ಕೆ ಹಾಕಲಾಗುವುದು.

ಸದರಿ ಪ್ರಕರಣದಲ್ಲಿ ಭೂಸ್ವಾಧೀನಕ್ಕೆ ಒಳಪಡುವ ಜಮೀನಿನ ಒಂದು ನಕ್ಷೆಯನ್ನು ವಿಶೇಷ ಭೂಸ್ವಾಧೀನಾಧಿಕಾರಿ–1, ಕರ್ನಾಟಕ ಗೃಹ ಮಂಡಳಿ, ಬೆಂಗಳೂರು ಇವರ ಕಾರ್ಯಾಲಯದಲ್ಲಿ ಪರಿಶೀಲನೆಗಾಗಿ ಇಡಲಾಗಿದೆ.

ವಿ.ಸೂ:– ಆಕ್ಷೇಪಣೆ ಸಲ್ಲಿಸುವವರು ಅಂಚೆ ವಿಳಾಸವನ್ನು ಅಂಚೆ ಕೋಡ್ ಸಂಖ್ಯೆ ಸಮೇತ ಮತ್ತು ಮೊಬೈಲ್ ನಂಬರ್‌ನ್ನುತಪ್ಪದೇ ನಮೂದಿಸುವುದು.

ಅನುಸೂಚಿ

ಜಿಲ್ಲೆ : ಬೆಂಗಳೂರು ನಗರ **ತಾಲ್ಲೂಕು: ಆನೇಕಲ್ ತಾಲ್ಲೂಕು** **ಹೋಬಳಿ: ಕಸಬಾ** **ಗ್ರಾಮ: ಇಂಡ್ಲವಾಡಿ**

ಕ್ರ. ಸಂ	ಪಹಣಿಯಂತೆ ಖಾತೆದಾರರ ಹೆಸರು		ಸರ್ವೆ/ಖಾತಾ ನಂಬರ್	ಸರ್ವೆ ಖಾತಾ ನಂಬರಿನಲ್ಲಿನ ಒಟ್ಟು ವಿಸ್ತೀರ್ಣ (ಪಹಣಿ/ಉತ್ತಾರ ಅನ್ವಯ)		ಸ್ವಾಧೀನಕ್ಕೊಳಪಡುವ ಒಟ್ಟು ವಿಸ್ತೀರ್ಣ		ತರಹೆ	ಚಕ್ಕುಬಂದಿ /ಸರಹದ್ದು				ಷರಾ
	ಭೂಮಾಲೀಕರು / ಹಿಡುವಳಿದಾರರ ಹೆಸರು	ಅನುಭವದಾರರ ಹೆಸರು		ಕೃಷಿ / ಕೃಷಿಯೇತರ ಜಮೀನು (ಎ–ಗುಂ)	ಖರಾಬು (ಎ–ಗುಂ)	ಕೃಷಿ / ಕೃಷಿಯೇತರ ಜಮೀನು (ಎ–ಗುಂ)	ಖರಾಬು (ಎ–ಗುಂ)		ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ	
1	2	3	4	5	6	7	8	9	10	11	12	13	14
1.	ಮುನಿಶಾಮಪ್ಪ ಬಿನ್ ದ್ಯಾವಪ್ಪ	ಮುನಿಶಾಮಪ್ಪ ಬಿನ್ ದ್ಯಾವಪ್ಪ, ಅಗದೂರಪ್ಪ	140	2–00	0–02	0–18	0–02	ಖುಷ್ಕಿ	ಸರ್ವೆ ನಂ. 139/2 ಮತ್ತು 143	ಸರ್ವೆ ನಂ. 142/1	ಸರ್ವೆ ನಂ. 143	ಸರ್ವೆ ನಂ. 141/1	
2.	ಅನ್ನಪೂರ್ಣ, ಮಂಜುಳ, ಚಂದನ, ಮಧುಶ್ರೀ, ನಾರಾಯಣಪ್ಪ ಬಿನ್ ಸೀಕಪಾಪಯ್ಯ, ರಾಜಪ್ಪ ಬಿನ್ ಸೀಕಪಾಪಯ್ಯ, ಕೃಷ್ಣಪ್ಪ ಬಿನ್ ಸೀಕಪಾಪಯ್ಯ	ಅನ್ನಪೂರ್ಣ, ಮಂಜುಳ, ಚಂದನ, ಮಧುಶ್ರೀ, ನಾರಾಯಣಪ್ಪ ಬಿನ್ ಸೀಕಪಾಪಯ್ಯ, ರಾಜಪ್ಪ ಬಿನ್ ಸೀಕಪಾಪಯ್ಯ, ಕೃಷ್ಣಪ್ಪ ಬಿನ್ ಸೀಕಪಾಪಯ್ಯ	142/1, 5, 6, 7,8, 9, 10	1–33.08	–	0–09	–	ಖುಷ್ಕಿ	ಸರ್ವೆ ನಂ. 140 & 141, 1, 3	ಸರ್ವೆ ನಂ. 143	ಸರ್ವೆ ನಂ. 143	ಸರ್ವೆ ನಂ. 143	
3.	ಸರ್ಕಾರಿ ಗೋಮಾಳ, ಮಾದಪ್ಪ ಬಿನ್ ಕಣಿವೆಮಾದಪ್ಪ, ಮಾರಪ್ಪ ಬಿನ್ ಚೂಡಪ್ಪ, ಸಿ. ಮುನಿಶಾಮಪ್ಪ, ನಾರಾಯಣರೆಡ್ಡಿ ಬಿನ್ ಲೇ. ಮುನಿಶಾಮಿರೆಡ್ಡಿ, ಅಗದೂರಪ್ಪ, ನಂಜುಂಡಾಚಾರಿ, ಕಾಳಮ್ಮ ಬಿನ್ w/o ನಂಜುಂಡ, ಕರಗಪ್ಪ ಬಿನ್ ಮುನಿಶಾಮಿ ಉ ಕುಂಟ ಮುನಿಗಾ, ನಾರಾಯಣಪ್ಪ, ವೆಂಕಟೇಶ್, ಮುನಿಯಪ್ಪ ಬಿನ್ ಮುನಿಬಸಪ್ಪ, ನಂಜಮ್ಮ ಕೋಂ ಮಾರಪ್ಪ, ರತ್ನಮ್ಮ ಬಿನ್ ಮಾರಪ್ಪ, ದುಂಡಮ್ಮ ಪಿ.ಎಂ. ಮುನಿಯಪ್ಪ ಬಿನ್ ಮುನಿಯಪ್ಪ, ಪಿ.ಎಂ. ರಾಮಪ್ಪ ಬಿನ್ ಮುನಿಯಪ್ಪ, ಪಿ.ಎಂ. ಮುನಿಶಾಮಪ್ಪ ಬಿನ್ ಮುನಿಯಪ್ಪ, ಮುನಿವೆಂಕಟಮ್ಮ ಅಬ್ಬಯ್ಯಪ್ಪ, ಜಯಲಕ್ಷ್ಮೀ, ರತ್ನಮ್ಮ, ವೆಂಕಟೇಶ್ ಬಿನ್ ವೆಂಕಟಸ್ವಾಮಪ್ಪ, ಪಿ.ಎಂ. ಮುನಿಶಾಮಪ್ಪ ಬಿನ್ ಮುನಿಯಪ್ಪ, ಪಿ.ಎಂ. ಮುನಿಯಪ್ಪ ಬಿನ್ ಮುನಿಯಪ್ಪ, ಪಿ.ಎಂ. ರಾಮಪ್ಪ ಬಿನ್ ಮುನಿಯಪ್ಪ, ಪಿ.ಎಂ. ವೆಂಕಟಸ್ವಾಮಪ್ಪ ಬಿನ್ ಮುನಿಯಪ್ಪ, ರಮೇಶ್ ಬಿನ್ ಲೇ. ಮುನಿಯಲ್ಲಪ್ಪ, ನಾರಾಯಣಪ್ಪ, ಮದ್ದೂರಮ್ಮ ಕೋಂ ಲೆ. ಮುನಿಯಪ್ಪ, ವೆಂಕಟರಮಣಪ್ಪ ಬಿನ್ ಲೇ. ಮುನಿಶಾಮಿ ಉ ಮುದ್ದಲ್ಲಪ್ಪ, ನರಸಿಂಹಯ್ಯ ಬಿನ್ ದೊಡ್ಡಯ್ಯ, ಎಸ್. ರಾಮರಾವ್, ಎಂ. ನಂಜುಂಡರೆಡ್ಡಿ ಬಿನ್ ಮುನಿಶಾಮಿರೆಡ್ಡಿ, ಮುನಿಮಾರಮ್ಮ ಕೋಂ ಲೇ. ಬೆಟ್ಟಪ್ಪ, ಟಿ. ಕೆಂಪಯ್ಯ, ಎಂ. ಮುನಿಶಾಮಪ್ಪ ಬಿನ್ ಅಣ್ಣಯ್ಯ, ಜಿ.ವಿ. ಶಿವರಾಮರೆಡ್ಡಿ ಬಿನ್ ಲೇ. ವಸಂತರೆಡ್ಡಿ, ಮುನಿಯಪ್ಪ ಬಿನ್ ಹನುಮಯ್ಯ, ಮುನಿನಾಗಪ್ಪ ಬಿನ್ ಮಾರಪ್ಪ, ಸುಮಾ ಆರ್. ಬಿನ್ ವಿ. ರಾಮಚಂದ್ರರೆಡ್ಡಿ, ಸಾದಮ್ಮ, ಗೋಪಮ್ಮ, ನಾಗರಾಜು, ಪುಟ್ಟಪ್ಪ, ಮರೇಶ, ಮುನಿಮಾರಮ್ಮ ಕೋಂ ಬೆಟ್ಟಪ್ಪ, ಮಹದೇವಯ್ಯ ಬಿನ್ ಲೇ. ಎ. ಸಂಪಯ್ಯ, ಚಂದ್ರಶೇಖರ್ ಬಿನ್ ನಾರಾಯಣಪ್ಪ, ಚಿನ್ನಮ್ಮ ಕೋಂ ಲೇ. ಮುನಿಶಾಮಪ್ಪ,	ಸರ್ಕಾರಿ ಗೋಮಾಳ, ಮಾದಪ್ಪ ಬಿನ್ ಕಣಿವೆಮಾದಪ್ಪ, ಮಾರಪ್ಪ ಬಿನ್ ಚೂಡಪ್ಪ, ಸಿ. ಮುನಿಶಾಮಪ್ಪ, ನಾರಾಯಣರೆಡ್ಡಿ ಬಿನ್ ಲೇ. ಮುನಿಶಾಮಿರೆಡ್ಡಿ, ಅಗದೂರಪ್ಪ, ನಂಜುಂಡಾಚಾರಿ, ಕಾಳಮ್ಮ ಬಿನ್ w/o ನಂಜುಂಡ, ಕರಗಪ್ಪ ಬಿನ್ ಮುನಿಶಾಮಿ ಉ ಕುಂಟ ಮುನಿಗಾ, ನಾರಾಯಣಪ್ಪ, ವೆಂಕಟೇಶ್, ಮುನಿಯಪ್ಪ ಬಿನ್ ಮುನಿಬಸಪ್ಪ, ನಂಜಮ್ಮ ಕೋಂ ಮಾರಪ್ಪ, ರತ್ನಮ್ಮ ಬಿನ್ ಮಾರಪ್ಪ, ದುಂಡಮ್ಮ ಪಿ.ಎಂ. ಮುನಿಯಪ್ಪ ಬಿನ್ ಮುನಿಯಪ್ಪ, ಪಿ.ಎಂ. ರಾಮಪ್ಪ ಬಿನ್ ಮುನಿಯಪ್ಪ, ಪಿ.ಎಂ. ಮುನಿಶಾಮಪ್ಪ ಬಿನ್ ಮುನಿಯಪ್ಪ, ಮುನಿವೆಂಕಟಮ್ಮ ಅಬ್ಬಯ್ಯಪ್ಪ, ಜಯಲಕ್ಷ್ಮೀ, ರತ್ನಮ್ಮ, ವೆಂಕಟೇಶ್ ಬಿನ್ ವೆಂಕಟಸ್ವಾಮಪ್ಪ, ಪಿ.ಎಂ. ಮುನಿಶಾಮಪ್ಪ ಬಿನ್ ಮುನಿಯಪ್ಪ, ಪಿ.ಎಂ. ಮುನಿಯಪ್ಪ ಬಿನ್ ಮುನಿಯಪ್ಪ, ಪಿ.ಎಂ. ರಾಮಪ್ಪ ಬಿನ್ ಮುನಿಯಪ್ಪ, ಪಿ.ಎಂ. ವೆಂಕಟಸ್ವಾಮಪ್ಪ ಬಿನ್ ಮುನಿಯಪ್ಪ, ರಮೇಶ್ ಬಿನ್ ಲೇ. ಮುನಿಯಲ್ಲಪ್ಪ, ನಾರಾಯಣಪ್ಪ, ಮದ್ದೂರಮ್ಮ ಕೋಂ ಲೆ. ಮುನಿಯಪ್ಪ, ವೆಂಕಟರಮಣಪ್ಪ ಬಿನ್ ಲೇ. ಮುನಿಶಾಮಿ ಉ ಮುದ್ದಲ್ಲಪ್ಪ, ನರಸಿಂಹಯ್ಯ ಬಿನ್ ದೊಡ್ಡಯ್ಯ, ಎಸ್. ರಾಮರಾವ್, ಎಂ. ನಂಜುಂಡರೆಡ್ಡಿ ಬಿನ್ ಮುನಿಶಾಮಿರೆಡ್ಡಿ, ಮುನಿಮಾರಮ್ಮ ಕೋಂ ಲೇ. ಬೆಟ್ಟಪ್ಪ, ಟಿ. ಕೆಂಪಯ್ಯ, ಎಂ. ಮುನಿಶಾಮಪ್ಪ ಬಿನ್ ಅಣ್ಣಯ್ಯ, ಜಿ.ವಿ. ಶಿವರಾಮರೆಡ್ಡಿ ಬಿನ್ ಲೇ. ವಸಂತರೆಡ್ಡಿ, ಮುನಿಯಪ್ಪ ಬಿನ್ ಹನುಮಯ್ಯ, ಮುನಿನಾಗಪ್ಪ ಬಿನ್ ಮಾರಪ್ಪ, ಸುಮಾ ಆರ್. ಬಿನ್ ವಿ. ರಾಮಚಂದ್ರರೆಡ್ಡಿ, ಸಾದಮ್ಮ, ಗೋಪಮ್ಮ, ನಾಗರಾಜು, ಪುಟ್ಟಪ್ಪ, ಮರೇಶ, ಮುನಿಮಾರಮ್ಮ ಕೋಂ ಬೆಟ್ಟಪ್ಪ, ಮಹದೇವಯ್ಯ ಬಿನ್ ಲೇ. ಎ. ಸಂಪಯ್ಯ, ಚಂದ್ರಶೇಖರ್ ಬಿನ್ ನಾರಾಯಣಪ್ಪ, ಚಿನ್ನಮ್ಮ ಕೋಂ ಲೇ. ಮುನಿಶಾಮಪ್ಪ,	143	265–01	–	6–15.08	–	ಖುಷ್ಕಿ	ಸ.ನಂ. 162, 137, 143ರ ಉಳಿಕೆ	ಸ.ನಂ. 147, 227	ಸ.ನಂ. 148, 156/ ಕೆರೆ, 157, 158, 162	ಸ.ನಂ. 142, 140, 137, 139, 143ರ ಉಳಿಕೆ, 227	
4.	ಗೋಪಾಲಪ್ಪ, ಕೃಷ್ಣಪ್ಪ, ರಾಜೇಂದ್ರ, ವೆಂಕಟೇಶ್ ಬಿನ್ ಲೇ. ಕೋಟೆಚನ್ನಪ್ಪ, ನಾಗಲಕ್ಷ್ಮಮ್ಮ ಕೋಂ ಲೇ. ಮುನಿರಾಜು	ಗೋಪಾಲಪ್ಪ, ಕೃಷ್ಣಪ್ಪ, ರಾಜೇಂದ್ರ, ವೆಂಕಟೇಶ್ ಬಿನ್ ಲೇ. ಕೋಟೆಚನ್ನಪ್ಪ, ನಾಗಲಕ್ಷ್ಮಮ್ಮ ಕೋಂ ಲೇ. ಮುನಿರಾಜು, ಚನ್ನಪ್ಪ ಬಿನ್ ಪಾಪಯ್ಯ,	147/1	0–23	0–02	0–23	0–02	ಖುಷ್ಕಿ	ಸರ್ವೆ ನಂ. 148/4, 227/1	ಸರ್ವೆ ನಂ. 143	ಸರ್ವೆ ನಂ. 149	ಸರ್ವೆ ನಂ. 147/2	
5.	ರಾಧಾಕೃಷ್ಣ, ಮಂಜುನಾಥ.ವಿ ಮುರಳಿ.ವಿ ಬಿನ್ ಲೇ. ವೆಂಕಟರಮಣಪ್ಪ, ಮುನಿಯಮ್ಮ ಕೋಂ ಲೇ. ದೇವೇಂದ್ರಕುಮಾರ್, ರಾಧಮ್ಮ ಕೋಂ ಲೇ.ವಿ. ಹರಿ, ಶಾಂತಮ್ಮ ಕೋಂ ಲೇ. ವಿ. ನಾಗರಾಜು, ವೆಂಕಟಲಕ್ಷ್ಮಮ್ಮ ಕೋಂ ಲೇ. ವಿಶ್ವನಾಥ, ವಿ. ಶ್ರೀನಿವಾಸ್ ಬಿನ್ ವೆಂಕಟರಮಣಪ್ಪ	ರಾಧಾಕೃಷ್ಣ, ಮಂಜುನಾಥ.ವಿ ಮುರಳಿ.ವಿ ಬಿನ್ ಲೇ. ವೆಂಕಟರಮಣಪ್ಪ, ಮುನಿಯಮ್ಮ ಕೋಂ ಲೇ. ದೇವೇಂದ್ರಕುಮಾರ್, ರಾಧಮ್ಮ ಕೋಂ ಲೇ.ವಿ. ಹರಿ, ಶಾಂತಮ್ಮ ಕೋಂ ಲೇ. ವಿ. ನಾಗರಾಜು, ವೆಂಕಟಲಕ್ಷ್ಮಮ್ಮ ಕೋಂ ಲೇ. ವಿಶ್ವನಾಥ, ವಿ. ಶ್ರೀನಿವಾಸ್ ಬಿನ್ ವೆಂಕಟರಮಣಪ್ಪ, ಜಾನಕಮ್ಮಾ	147/2	1–03	0–04	1–03	0–04	ಖುಷ್ಕಿ	ಸರ್ವೆ ನಂ. 227/1, 148	ಸರ್ವೆ ನಂ. 143	ಸರ್ವೆ ನಂ. 149	ಸರ್ವೆ ನಂ. 146, 227/1,2	
6.	ಬೀರಪ್ಪ, ಚಂದ್ರಮ್ಮ ಬಿನ್ ಬೀರಪ್ಪ, ಮುನಿತಾಯಮ್ಮ ಬಿನ್ ಬೀರಪ್ಪ, ಬೆಂಗಳೂರಮ್ಮ ಬಿನ್ ಬೀರಪ್ಪ, ಕೆಂಪೀರಮ್ಮ ಬಿನ್ ಬೀರಪ್ಪ	ಬೀರಪ್ಪ, ಚಂದ್ರಮ್ಮ ಬಿನ್ ಬೀರಪ್ಪ, ಮುನಿತಾಯಮ್ಮ ಬಿನ್ ಬೀರಪ್ಪ, ಬೆಂಗಳೂರಮ್ಮ ಬಿನ್ ಬೀರಪ್ಪ, ಕೆಂಪೀರಮ್ಮ ಬಿನ್ ಬೀರಪ್ಪ	148/1	0–12	–	0–12	–	ಖುಷ್ಕಿ	ಸರ್ವೆ ನಂ. 156 ಕೆರೆ	ಸರ್ವೆ ನಂ. 148/2	ಸರ್ವೆ ನಂ. 154/3	ಸರ್ವೆ ನಂ. 143	
7.	ಚಂದ್ರಮ್ಮ ಬಿನ್ ಬೀರಪ್ಪ, ಮುನಿತಾಯಮ್ಮ ಬಿನ್ ಬೀರಪ್ಪ, ಬೆಂಗಳೂರಮ್ಮ ಬಿನ್ ಬೀರಪ್ಪ, ಕೆಂಪೀರಮ್ಮ ಬಿನ್ ಬೀರಪ್ಪ	ಚಂದ್ರಮ್ಮ ಬಿನ್ ಬೀರಪ್ಪ, ಮುನಿತಾಯಮ್ಮ ಬಿನ್ ಬೀರಪ್ಪ, ಬೆಂಗಳೂರಮ್ಮ ಬಿನ್ ಬೀರಪ್ಪ, ಕೆಂಪೀರಮ್ಮ ಬಿನ್ ಬೀರಪ್ಪ	148/2	0–11	–	0–11	–	ಖುಷ್ಕಿ	ಸರ್ವೆ ನಂ. 148/1	ಸರ್ವೆ ನಂ. 148/3	ಸರ್ವೆ ನಂ. 154/3	ಸರ್ವೆ ನಂ. 143	
8.	ಸರೋಜಮ್ಮ ಕೋಂ ಲೇ. ಮುನಿಯಪ್ಪ, ನಾರಾಯಣ.ಎಲ್, ಶಶಿಕುಮಾರ್.ಎಲ್. ಮಹದೇವಪ್ಪ ಎಲ್ ಬಿನ್ ಲೇ. ಲಕ್ಷ್ಮಯ್ಯ	ಸರೋಜಮ್ಮ ಕೋಂ ಲೇ. ಮುನಿಯಪ್ಪ, ನಾರಾಯಣ.ಎಲ್, ಶಶಿಕುಮಾರ್.ಎಲ್. ಮಹದೇವಪ್ಪ ಎಲ್ ಬಿನ್ ಲೇ. ಲಕ್ಷ್ಮಯ್ಯ, ದಾಸಪ್ಪ	148/3	0–24	0–03	0–24	0–03	ಖುಷ್ಕಿ	ಸರ್ವೆ ನಂ. 148/2	ಸರ್ವೆ ನಂ. 148/4	ಸರ್ವೆ ನಂ. 150 & 154/3	ಸರ್ವೆ ನಂ. 227/6, 143	
9.	ಗೋವಿಂದರಾಜು, ದೇವರಾಜು, ಶಾಮಣ್ಣ ಬಿನ್ ಲೇ. ಮುನಿಯಪ್ಪ	ಗೋವಿಂದರಾಜು, ದೇವರಾಜು, ಶಾಮಣ್ಣ ಬಿನ್ ಲೇ ಮುನಿಯಪ್ಪ, ಲಕ್ಷ್ಮಯ್ಯ, ಮುನಿಯಪ್ಪ ಲೇ. ನಾರಾಯಣಪ್ಪ	148/4	0–14	–	0–14	–	ಖುಷ್ಕಿ	ಸರ್ವೆ ನಂ. 148/3	ಸರ್ವೆ ನಂ. 147/1, 149	ಸರ್ವೆ ನಂ. 149, 150	ಸರ್ವೆ ನಂ. 227/1,5,6	
10.	ಕೆಂಪಮ್ಮ ಕೋಂ ಮುನಿಯಪ್ಪ.ಕೆ	ಕೆಂಪಮ್ಮ ಕೋಂ ಮುನಿಯಪ್ಪ.ಕೆ, ದೊಡ್ಡಬೆಂಗಳೂರಪ್ಪ	149	0–17	0–01	0–17	0–01	ಖುಷ್ಕಿ	ಸರ್ವೆ ನಂ. 148/4	ಸರ್ವೆ ನಂ. 143, 231	ಸರ್ವೆ ನಂ. 150, 231	ಸರ್ವೆ ನಂ. 147/1	
11.	ನಾರಾಯಣ.ಎಲ್, ಶಶಿಕುಮಾರ್.ಎಲ್. ಮಹದೇವಪ್ಪ ಎಲ್ ಬಿನ್ ಲೇ. ಲಕ್ಷ್ಮಯ್ಯ	ನಾರಾಯಣ.ಎಲ್, ಶಶಿಕುಮಾರ್.ಎಲ್. ಮಹದೇವಪ್ಪ ಎಲ್ ಬಿನ್ ಲೇ. ಲಕ್ಷ್ಮಯ್ಯ	150/1	0–14	0–02	0–14	0–02	ಖುಷ್ಕಿ	ಸರ್ವೆ ನಂ. 154/3	ಸರ್ವೆ ನಂ. 231/2	ಸರ್ವೆ ನಂ. 151	ಸರ್ವೆ ನಂ. 149, 148/3	
12.	ಅಶ್ವಿನಿ.ಪಿ ಸೋನವಾಲ್ಕರ್ ಬಿನ್ ಪಾಂಡು, ದಿವ್ಯಶ್ರೀ.ಆರ್. ಕೋಂ ಸುಮಂತ್ ವೈ	ಅಶ್ವಿನಿ.ಪಿ ಸೋನವಾಲ್ಕರ್ ಬಿನ್ ಪಾಂಡು, ದಿವ್ಯಶ್ರೀ.ಆರ್. ಕೋಂ ಸುಮಂತ್ ವೈ	150/2	0–14	0–02	0–14	0–02	ಖುಷ್ಕಿ	ಸರ್ವೆ ನಂ. 154/3	ಸರ್ವೆ ನಂ. 231/2	ಸರ್ವೆ ನಂ. 151	ಸರ್ವೆ ನಂ. 149, 148/3	
13.	ಬಿ. ಕರಿಯಣ್ಣ ಬಿನ್ ಬೆಂಗಳೂರಪ್ಪ	ಬಿ. ಕರಿಯಣ್ಣ ಬಿನ್ ಬೆಂಗಳೂರಪ್ಪ	151	0–37	0–03	0–37	0–03	ಖುಷ್ಕಿ	ಸರ್ವೆ ನಂ. 154/2	ಸರ್ವೆ ನಂ. 231/2, 1	ಸರ್ವೆ ನಂ. 152 & 154/2	ಸರ್ವೆ ನಂ. 150, 154	
14.	ಬಿ.ಕರಿಯಣ್ಣ ಬಿನ್ ಬೆಂಗಳೂರಪ್ಪ, ವಸಂತಮ್ಮ, ಶ್ರೀನಿವಾಸ, ನಾಗರಾಜು, ಎಲ್.ಪುಟ್ಟಣ್ಣ ಬಿನ್ ಲಿಂಗಪ್ಪ	ಬಿ.ಕರಿಯಣ್ಣ ಬಿನ್ ಬೆಂಗಳೂರಪ್ಪ, ವಸಂತಮ್ಮ, ಶ್ರೀನಿವಾಸ, ನಾಗರಾಜು, ಎಲ್.ಪುಟ್ಟಣ್ಣ ಬಿನ್ ಲಿಂಗಪ್ಪ ನಾರಾಯಣಪ್ಪ, ಮುನಿಯಮ್ಮ	152	0–25	0–02	0–25	0–02	ಖುಷ್ಕಿ	ಸರ್ವೆ ನಂ. 154/2	ಸರ್ವೆ ನಂ. 231/1, 2	ಸರ್ವೆ ನಂ. 153	ಸರ್ವೆ ನಂ. 151	
15.	ಡಿ.ಎಸ್. ಕೃಷ್ಣಪ್ಪ, ಎಸ್. ರಾಮಚಂದ್ರಪ್ಪ, ಎಸ್. ಕೋದಂಡರಾಮಯ್ಯ ಬಿನ್ ಲೇ. ಎಂ. ಸಂಪಂಗಿರಾಮಯ್ಯ	ಡಿ.ಎಸ್. ಕೃಷ್ಣಪ್ಪ, ಎಸ್. ರಾಮಚಂದ್ರಪ್ಪ, ಎಸ್. ಕೋದಂಡರಾಮಯ್ಯ ಬಿನ್ ಲೇ. ಎಂ. ಸಂಪಂಗಿರಾಮಯ್ಯ	159	0–24	–	0–24	–	ಖುಷ್ಕಿ	ಸರ್ವೆ ನಂ. 160	ಸರ್ವೆ ನಂ. 158	ಸರ್ವೆ ನಂ. 173	ಸರ್ವೆ ನಂ. 162/5, 158	
16.	ದೇವರಾಜು ಬಿನ್ ಲೇ. ಲಕ್ಷ್ಮೀನಾರಾಯಣಪ್ಪ, ಟಿ. ರಾಮಣ್ಣ ಬಿನ್ ಲೇ. ತಿಮ್ಮರಾಯಪ್ಪ, ಸುಮಿತ್ರಾ ಕೋಂ ಲೇ. ಮಾರಪ್ಪ, ಟಿ. ಪಿಳ್ಳಪ್ಪ ಬಿನ್ ಲೇ. ತಿಮ್ಮರಾಯಪ್ಪ ಟಿ. ಗೋವಿಂದರಾಜು ಬಿನ್ ಲೇ. ತಿಮ್ಮರಾಯಪ್ಪ	ದೇವರಾಜು ಬಿನ್ ಲೇ. ಲಕ್ಷ್ಮೀನಾರಾಯಣಪ್ಪ, ಟಿ. ರಾಮಣ್ಣ ಬಿನ್ ಲೇ. ತಿಮ್ಮರಾಯಪ್ಪ, ಸುಮಿತ್ರಾ ಕೋಂ ಲೇ. ಮಾರಪ್ಪ, ಟಿ. ಪಿಳ್ಳಪ್ಪ ಬಿನ್ ಲೇ. ತಿಮ್ಮರಾಯಪ್ಪ ಟಿ. ಗೋವಿಂದರಾಜು ಬಿನ್ ಲೇ. ತಿಮ್ಮರಾಯಪ್ಪ	162/1	0–24.08	0–02.12	0–10	–	ಖುಷ್ಕಿ	ಸರ್ವೆ ನಂ. 163/3, 5	ಸರ್ವೆ ನಂ. 158	ಸರ್ವೆ ನಂ. 160, 161, 164/7	ಸರ್ವೆ ನಂ. 143, ರಸ್ತೆ	
17.	ಮುನಿವೆಂಕಟಪ್ಪ, ಟಿ. ಸೀತಮ್ಮ, ಮುರುಳಿಮೋಹನ್, ಮಹೇಶ್, ಮಂಜುನಾಥ, ಬೀರಪ್ಪ, ಮಾದೇವಯ್ಯ, ಉಜಿನಪ್ಪ, ನಾಗಪ್ಪ,	ಮುನಿವೆಂಕಟಪ್ಪ, ಟಿ. ಸೀತಮ್ಮ, ಮುರುಳಿಮೋಹನ್, ಮಹೇಶ್, ಮಂಜುನಾಥ, ಬೀರಪ್ಪ, ಮಾದೇವಯ್ಯ, ಉಜಿನಪ್ಪ, ನಾಗಪ್ಪ,	174/1	3–36	0–07	0–10	–	ಖುಷ್ಕಿ	ಸರ್ವೆ ನಂ. 172/2, 3, 173	ಸರ್ವೆ ನಂ. 174/3	ಸರ್ವೆ ನಂ. 175 & 176	ಸರ್ವೆ ನಂ. 174/2	
18.	ಬೀರಪ್ಪ ಬಿನ್ ಬೀರಪ್ಪ	ಬೀರಪ್ಪ ಬಿನ್ ಬೀರಪ್ಪ, ಮುನಿನಂಜಪ್ಪ, ಮುನಿಶ್ಯಾಮಪ್ಪ, ಮರಿಯಪ್ಪ	174/2	2–10	0–03	0–10	–	ಖುಷ್ಕಿ	ಸರ್ವೆ ನಂ. 173	ಸರ್ವೆ ನಂ. 154/2	ಸರ್ವೆ ನಂ. 174/1	ಸರ್ವೆ ನಂ. 154/1, 155	

₹23.74 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ

ವಿದೇಶಿ ಡ್ರಗ್ ಪೆಡ್ಲರ್ ಬಂಧನ: ಹೊಸ ವರ್ಷಾಚರಣೆಗೆ ದಾಸ್ತಾನು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾದಕ ದ್ರವ್ಯ ನಿಗ್ರಹ ದಳದ ಪೊಲೀಸರು ಕಾರ್ಯಾಚರಣೆ ನಡೆಸಿ, ವೀಸಾ ಅವಧಿ ಮುಗಿದ ಬಳಿಕವೂ ನಗರದಲ್ಲೇ ವಾಸವಾಗಿದ್ದು ಡ್ರಗ್ ಪೆಡ್ಲಿಂಗ್‌ನಲ್ಲಿ ತೊಡಗಿದ್ದ ವಿದೇಶಿ ಪ್ರಜೆಯನ್ನು ಬಂಧಿಸಿ, ₹23.74 ಕೋಟಿ ಮೌಲ್ಯದ ಮಾದಕ ವಸ್ತುಗಳನ್ನು ಎಜೈಕ್ ನ್ಸೆಗ್ವು ವಶಪಡಿಸಿಕೊಂಡಿದ್ದಾರೆ. ಯಲಹಂಕದ ಸ್ವರ್ಣ ಎನ್‌ಕ್ಲೇವ್‌ನಲ್ಲಿ ವಾಸವಾಗಿದ್ದ ನೈಜೀರಿಯಾ ಪ್ರಜೆ ಎಜೈಕ್ ನ್ಸೆಗ್ವು (42) ಎಂಬಾತನನ್ನು ಬಂಧಿಸಿ, 11 ಕೆ.ಜಿ. 640 ಗ್ರಾಂ ಎಂ.ಡಿ.ಎಂ.ಎ ಕ್ರಿಸ್ಟಲ್ಸ್, 1,040 ಎಕ್ಸ್‌ಟೆಸಿ ಮಾತ್ರೆಗಳು, 2 ಕೆ.ಜಿ. 235 ಗ್ರಾಂ ಡ್ರಗ್ಸ್ ತಯಾರಿಕೆಯ ಸಾಮಾಗ್ರಿ ಹಾಗೂ ತೂಕದ ಯಂತ್ರವನ್ನು ವಶಪಡಿಸಿಕೊಳ್ಳಲಾಗಿದೆ ಎಂದು ನಗರ ಪೊಲೀಸ್ ಕಮಿಷನರ್ ಸೀಮಾಂತ್ ಕುಮಾರ್ ಸಿಂಗ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಬ್ಯುಸಿನೆಸ್ ವೀಸಾದಲ್ಲಿ 2017ರಲ್ಲಿ ಕೊಲಂಬೊ ಮೂಲಕ ಭಾರತಕ್ಕೆ ಬಂದಿದ್ದ ಆರೋಪಿ, ವೀಸಾ ಅವಧಿ ಮುಗಿದ ಬಳಿಕವೂ ನಗರದಲ್ಲಿ ವಾಸವಾಗಿದ್ದುಕೊಂಡು ಜೀವನ ನಿರ್ವಹಣೆಗಾಗಿ ಮಾದಕ ವಸ್ತು ಮಾರಾಟ ಮಾಡುತ್ತಿದ್ದ. ಖಚಿತ ಮಾಹಿತಿ ಮೇರೆಗೆ ದಾಳಿ ನಡೆಸಿ ಬಂಧಿಸಿದ್ದಾರೆ. ಪ್ರಾಥಮಿಕ ತನಿಖೆ ಪ್ರಕಾರ ಹೊಸ ವರ್ಷಾಚರಣೆಗೆ ದುಪ್ಪಟ್ಟು ಹಣಕ್ಕೆ ಮಾರಾಟ ಮಾಡಲು ಡ್ರಗ್ಸ್ ದಾಸ್ತಾನು ಮಾಡಲಾಗಿತ್ತು ಎಂಬ ಮಾಹಿತಿ ಲಭ್ಯವಾಗಿದೆ. ದೆಹಲಿ ಹಾಗೂ ಉತ್ತರ ಭಾರತದ ರಾಜ್ಯಗಳಿಂದ ಮಾದಕ ವಸ್ತು ನಗರಕ್ಕೆ ಪೂರೈಕೆ ಆಗುತ್ತಿದೆ ಎಂದರು.

ಆರೋಪಿ ವಿರುದ್ಧ 2019ರಲ್ಲಿ ಬಾಗಲೂರು ಪೊಲೀಸ್ ಠಾಣೆಯಲ್ಲಿ ಎನ್‌ಡಿಪಿಎಸ್ ಪ್ರಕರಣ ದಾಖಲಾಗಿದ್ದು, ಈ ಪ್ರಕರಣದಲ್ಲಿ ಜೈಲಿಗೆ ಹೋಗಿ ಬಂದ ಬಳಿಕವೂ ಡ್ರಗ್ ಪೆಡ್ಲಿಂಗ್‌ನಲ್ಲಿ ತೊಡಗಿದ್ದರಿಂದ 2020ರಲ್ಲಿ ಕೋಣನಕುಂಟೆ ಪೊಲೀಸ್ ಠಾಣೆಯಲ್ಲಿ ಎನ್‌ಡಿಪಿಎಸ್ ಕಾಯ್ದೆ ಅಡಿ ಮತ್ತು ವಿದೇಶಿಯರ ಕಾಯ್ದೆ ಅಡಿ ಮತ್ತೊಂದು ಪ್ರಕರಣ ದಾಖಲಾಗಿತ್ತು. ಡ್ರಗ್ಸ್ ಮಾರಾಟ ಪ್ರಕರಣಕ್ಕೆ ಸಂಬಂಧಿಸಿದಂತೆ ಚೆನ್ನೈ ಮತ್ತು ಹೈದರಾಬಾದ್ ಪೊಲೀಸರು ಸಹ ಬಂಧಿಸಿದ್ದರು ಎಂಬುದು ತನಿಖೆ ವೇಳೆ ಗೊತ್ತಾಗಿದೆ ಎಂದು ಹೇಳಿದರು.

ದೆಹಲಿಯಿಂದ ಡ್ರಗ್ಸ್ ತರಿಸಿಕೊಂಡು ಮನೆಯಲ್ಲಿ ದಾಸ್ತಾನು ಮಾಡಿದ್ದ. ಕರ್ನಾಟಕ, ಚೆನ್ನೈ, ಹೈದರಾಬಾದ್ ಸೇರಿ ಹಲವೆಡೆ ಪರಿಚಯಸ್ಥ ಪೆಡ್ಲರ್‌ಗಳು, ವಿದ್ಯಾರ್ಥಿಗಳಿಗೆ ಮಾರಾಟ ಮಾಡುತ್ತಿದ್ದ ಎಂಬ ವಿಚಾರಗಳು ತನಿಖೆಯಿಂದ ಗೊತ್ತಾಗಿವೆ.

ನಗರದ ಹೊರವಲಯದಲ್ಲಿರುವ ರೆಸಾರ್ಟ್ ಹಾಗೂ ಪಬ್, ಬಾರ್ ಆ್ಯಂಡ್ ರೆಸ್ಟೋರೆಂಟ್‌ಗಳಿಗೆ ಡ್ರಗ್ಸ್ ಪೂರೈಸಲು ಸಿದ್ಧತೆ ನಡೆದಿತ್ತು. ಆರೋಪಿಯನ್ನು ತೀವ್ರ ವಿಚಾರಣೆಗೆ ಒಳಪಡಿಸಿದ್ದು, ಎಜೈಕ್ ನ್ಸೆಗ್ವು ಸಂಪರ್ಕದಲ್ಲಿ ಯಾವ ಪೆಡ್ಲರ್‌ಗಳಿದ್ದಾರೆ? ಎಷ್ಟು ವರ್ಷಗಳಿಂದ ಪೂರೈಕೆ ಮಾಡುತ್ತಿದ್ದರು ಎಂಬ ಬಗ್ಗೆ ತನಿಖೆ ತೀವ್ರಗೊಳಿಸಿದ್ದಾರೆ. ದೆಹಲಿ ಹಾಗೂ ಮುಂಬೈಯಿಂದ ಬೆಂಗಳೂರಿಗೆ ಡ್ರಗ್ಸ್ ಪೂರೈಕೆ ಮಾಡುತ್ತಿದ್ದರ ಕುರಿತು ಪತ್ತೆ ಕಾರ್ಯ ನಡೆಯುತ್ತಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಮನೆ ಮಾಲೀಕರ ವಿರುದ್ಧ ಕ್ರಮ: ವಿದೇಶಿ ನಾಗರಿಕರಿಗೆ ಮನೆ ಬಾಡಿಗೆಗೆ ನೀಡುವ ಸಂದರ್ಭದಲ್ಲಿ ಕಾನೂನು ಪಾಲಿಸದ ಕಾರಣ ಮನೆ ಮಾಲೀಕರ ವಿರುದ್ಧ ಕ್ರಮ ಕೈಗೊಳ್ಳಲು ಬಾಗಲೂರು ಪೊಲೀಸರಿಗೆ ಸೂಚನೆ ನೀಡಲಾಗಿದೆ. ವಿದೇಶಿಯರಿಗೆ ಮನೆ ನೀಡುವಾಗ ಫಾರಂ ಸಿ ಸಲ್ಲಿಸಬೇಕು. ಪೊಲೀಸ್ ಠಾಣೆಗೆ ಯಾವುದೇ ಮಾಹಿತಿ ನೀಡಿಲ್ಲ. ಅಲ್ಲದೇ ಠಾಣಾ ವ್ಯಾಪ್ತಿಯಲ್ಲಿ ಬೃಹತ್ ಮೊತ್ತದ ಡ್ರಗ್ಸ್ ಸಂಗ್ರಹಿಸಲಾಗಿತ್ತು. ಇದರಲ್ಲಿ ಪೊಲೀಸರ ನಿರ್ಲಕ್ಷ್ಯದ ಬಗ್ಗೆಯೂ ತನಿಖೆ ನಡೆಸಲಾಗುವುದು ಎಂದು ಹೇಳಿದರು.

₹130 ಕೋಟಿ ಡ್ರಗ್ಸ್ ಜಪ್ತಿ

ನಗರದ ವಿವಿಧೆಡೆ ಕಾರ್ಯಾಚರಣೆ ನಡೆಸಿ ಪ್ರಸಕ್ತ ವರ್ಷ ₹113 ಕೋಟಿ ಮೌಲ್ಯದ ಮಾದಕ ವಸ್ತು ಜಪ್ತಿ ಮಾಡಲಾಗಿದೆ. ಹಲವರನ್ನು ಬಂಧಿಸಿ, ಜೈಲಿಗೆ ಕಳುಹಿಸಲಾಗಿದೆ. ಡ್ರಗ್ಸ್ ನಿಯಂತ್ರಣಕ್ಕಾಗಿ ವಿಶೇಷ ಅಭಿಯಾನ ನಡೆಯುತ್ತಿದ್ದು, ನಗರ ಪೊಲೀಸರು, ಸಿಸಿಬಿಯ ಮಾದಕ ದ್ರವ್ಯ ನಿಗ್ರಹ ದಳ ನಿರಂತರ ಕಾರ್ಯಾಚರಣೆ ನಡೆಸುತ್ತಿದೆ ಎಂದು ಪೊಲೀಸರು ಹೇಳಿದರು.

ಆರೋಪಿಯಿಂದ ವಶಪಡಿಸಿಕೊಂಡ ಮಾದಕ ವಸ್ತು

ಅಪರಾಧ ಸುದ್ದಿ

ಎಳನೀರು ವ್ಯಾಪಾರಿ ಬಂಧನ 23 ಕೆ.ಜಿ. ಬೆಳ್ಳಿಗಟ್ಟಿ ವಶ

ದರೋಡೆ, ಕೊಲೆ ಆರೋಪ, 50 ಪ್ರಕರಣ ದಾಖಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಭರಣ ವ್ಯಾಪಾರಿಯ ಬ್ಯಾಗ್‌ನಲ್ಲಿದ್ದ ಲಕ್ಷಾಂತರ ರೂಪಾಯಿ ಮೌಲ್ಯದ ಬೆಳ್ಳಿ ಗಟ್ಟಿಗಳನ್ನು ಕಳವು ಮಾಡಿದ್ದ ಆರೋಪಿಯನ್ನು ಹಲಸೂರು ಗೇಟ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಸೈಯದ್ ಆಯಾಜ್

ಕಾಟನ್‌ಪೇಟೆಯ ಸೈಯದ್ ಅಯಾಜ್ ಅಲಿಯಾಸ್ ಅಯಾಜ್ ಚೌಧರಿ (45) ಎಂಬಾತನನ್ನು ಬಂಧಿಸಿ, ₹37 ಲಕ್ಷ ಮೌಲ್ಯದ 23 ಕೆ.ಜಿ. 260 ಗ್ರಾಂ ಬೆಳ್ಳಿಯ 49 ಗಟ್ಟಿಗಳನ್ನು ವಶಪಡಿಸಿಕೊಳ್ಳಲಾಗಿದೆ. ಸುಮಾರು 50 ಪ್ರಕರಣಗಳಲ್ಲಿ ಆರೋಪಿ ಭಾಗಿಯಾಗಿದ್ದು, ತನಿಖೆ ಮುಂದವರಿದಿದೆ ಎಂದು ಪೊಲೀಸರು ತಿಳಿಸಿದರು.

ಎಂಡಿಪಿ ಮಾರ್ಕೆಟ್ ಮೊದಲ ಹಂತದ ಬೆಟ್ಟಪ್ಪ ಲೈನ್‌ನಲ್ಲಿ ಅಂಬಿಕಾ ಸೇಲ್ಸ್ ಚಿನ್ನದ ಅಂಗಡಿ ಇಟ್ಟುಕೊಂಡಿರುವ ಅಮರ್ ನಾಗನಾಥ್ ಕಾಟೆ ಎಂಬುವರು ತಮ್ಮ ಮಗನಿಗೆ 23 ಕೆ.ಜಿ. ಬೆಳ್ಳಿಯ ಗಟ್ಟಿಯನ್ನು ಸೇಲ್ಸ್ ಕಾರ್ಪನ್ ರಿಫೈನರಿ ವಿನಿಟ್ ಅಂಗಡಿಗೆ ತಲುಪಿಸುವಂತೆ ಹೇಳಿದ್ದರು. ಬೆಳ್ಳಿ ಗಟ್ಟಿ ತೆಗೆದುಕೊಂಡು ಅಂಗಡಿ ಬಳಿ ಬಂದು, ದ್ವಿಚಕ್ರ ವಾಹನ ನಿಲ್ಲಿಸಿ, ಬ್ಯಾಗ್ ಅನ್ನು ಫುಟ್‌ಬೋರ್ಡ್‌ನಲ್ಲಿಟ್ಟು, ಹೆಲ್ಮೆಟ್ ತೆಗೆದಿಡುವ ವೇಳೆ ಗಟ್ಟಿಯಿದ್ದ ಬ್ಯಾಗ್ ಕಳವಾಗಿತ್ತು.

ಅಮರ್ ಅವರ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು, ವಿವಿಧ ಆಯಾಮಗಳಲ್ಲಿ ತನಿಖೆ ಕೈಗೊಂಡು, 24 ಗಂಟೆಯಲ್ಲಿ ಆರೋಪಿಯನ್ನು ಬಂಧಿಸಿ, ಬೆಳ್ಳಿಗಟ್ಟಿಗಳನ್ನು ವಶಕ್ಕೆ ಪಡೆದಿದ್ದಾರೆ.

ಮುಖ್ಯಾಂಶಗಳು

- ಆಭರಣ ವ್ಯಾಪಾರಿಯ ಬ್ಯಾಗ್ ಕಳ್ಳತನ
- 24 ಗಂಟೆಯಲ್ಲಿ ಆರೋಪಿ ಬಂಧನ

ಬೆಳ್ಳಿ ಗಟ್ಟಿಗಳು

ಎಳನೀರು ವ್ಯಾಪಾರ: ಎಳನೀರು, ತೆಂಗಿನಕಾಯಿ ವ್ಯಾಪಾರ ಮಾಡಿಕೊಂಡಿದ್ದ ಆರೋಪಿಯ ವಿರುದ್ಧ ವಿಲ್ಸನ್‌ಗಾರ್ಡನ್, ಚಿಕ್ಕಪೇಟೆ, ಕಾಟನ್‌ಪೇಟೆ, ಪುಲಿಕೇಶಿನಗರ, ಕಲಾಸಿಪಾಳ್ಯ, ಉಪ್ಪಾರಪೇಟೆ ಸೇರಿ ನಗರದ ವಿವಿಧ ಪೊಲೀಸ್ ಠಾಣೆಗಳಲ್ಲಿ 2000 ರಿಂದ 2025ರ ಅವಧಿಯಲ್ಲಿ 50ಕ್ಕೂ ಹೆಚ್ಚು ಕಳ್ಳತನ, ದರೋಡೆ ಪ್ರಕರಣಗಳು ದಾಖಲಾಗಿವೆ. ಹಲವು ಪ್ರಕರಣಗಳಲ್ಲಿ ಜೈಲು ಸೇರಿದ್ದ. ಜಾಮೀನಿನ ಮೇಲೆ ಹೊರಗೆ ಬಂದು, ತೆಂಗಿನ ಕಾಯಿ ವ್ಯಾಪಾರದ ಜತೆ ಕಳ್ಳತನ ಮಾಡಿಕೊಂಡಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.

‘ವೈಟಲ್ ಇನ್‌ಸೈಟ್ಸ್’ ಉದ್ಘಾಟನಾ ಸಮಾರಂಭದಲ್ಲಿ ಡಾ. ಪ್ರಸನ್ನ ವಿಘ್ನೇಶ್, ಡಾ. ಆರತಿ ಪ್ರಸನ್ನ, ಬಸು ಶಂಕರ್, ಡಾ. ಅರುಣ್‌ಕುಮಾರ್ ಗೋವಿಂದರಾಜನ್, ಅವ್ನೀಶ್ ಪರೇಖ್ ಉಪಸ್ಥಿತರಿದ್ದರು

ಜಯನಗರದಲ್ಲಿ ‘ವೈಟಲ್ ಇನ್‌ಸೈಟ್ಸ್’ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರತಿ ಸ್ಕ್ಯಾನ್ಸ್ ಆ್ಯಂಡ್ ಲ್ಯಾಬ್ಸ್ ಜಯನಗರ ಕೇಂದ್ರದಲ್ಲಿ ‘ವೈಟಲ್ ಇನ್‌ಸೈಟ್ಸ್’ ಆರಂಭಿಸಿದೆ.

ಸಾಮಾನ್ಯ ಆರೋಗ್ಯ ತಪಾಸಣೆ ಮೀರಿ, ವ್ಯಕ್ತಿಯ ದೇಹವನ್ನು ಮೂರು ಆಯಾಮಗಳಲ್ಲಿ ‘ವೈಟಲ್ ಇನ್‌ಸೈಟ್ಸ್’ ಪರೀಕ್ಷೆಗೆ ಒಳಪಡಿಸಲಿದೆ. ದೇಹದ ಮ್ಯಾಗ್ನೆಟಿಕ್ ರೆಸೋನೆನ್ಸ್ ಇಮೇಜಿಂಗ್ (ಎಂಆರ್‌ಐ), ಡಿಇಎಕ್ಸ್‌ಎ ಸ್ಕ್ಯಾನ್, ವಿಒ ಮ್ಯಾಕ್ಸ್ ಪರೀಕ್ಷೆ, ರಕ್ತ ಪರೀಕ್ಷೆಯ ಸಮಗ್ರ ವಿಶ್ಲೇಷಣೆ, ದೈಹಿಕ ಸಾಮರ್ಥ್ಯ ಮತ್ತು ಸಮತೋಲನದ ಮೌಲ್ಯಮಾಪನ ನಡೆಸಲಿದೆ ಎಂದು ವಿಕಿರಣ ತಜ್ಞ, ಆರತಿ ಸ್ಕ್ಯಾನ್ಸ್ ಆ್ಯಂಡ್ ಲ್ಯಾಬ್ಸ್‌ನ ನಿರ್ದೇಶಕ ಡಾ. ಪ್ರಸನ್ನ ವಿಘ್ನೇಶ್ ತಿಳಿಸಿದರು.

‘ಬೆಂಗಳೂರು ಕೇಂದ್ರದಲ್ಲಿ 'ವೈಟಲ್ ಇನ್‌ಸೈಟ್ಸ್' ಮೂಲಕ ದತ್ತಾಂಶ ಆಧಾರಿತ ಕಾರ್ಯಕ್ಷಮತೆ ಮತ್ತು ವ್ಯಕ್ತಿಗಳು ಹೆಚ್ಚು ವರ್ಷ ಆರೋಗ್ಯದಿಂದ ಜೀವಿಸಲು ನೆರವಾಗುವ ಮಾಹಿತಿಯನ್ನು ನೀಡಲಾಗುತ್ತದೆ. ಸ್ಪಷ್ಟತೆ, ನಿಯಂತ್ರಣ ಮತ್ತು ಆತ್ಮವಿಶ್ವಾಸದಿಂದ ಬದುಕಲು ವ್ಯಕ್ತಿಗಳನ್ನು ಸಬಲೀಕರಣಗೊಳಿಸಲಾಗುತ್ತದೆ’ ಎಂದರು.

ರಾಯಲ್ ಚಾಲೆಂಜರ್ಸ್ ತಂಡದ ದೈಹಿಕ ಕಾರ್ಯಕ್ಷಮತೆ ತರಬೇತುದಾರ ಬಸು ಶಂಕರ್ ಅವರು ‘ವೈಟಲ್ ಇನ್‌ಸೈಟ್ಸ್’ ಕೇಂದ್ರ ಉದ್ಘಾಟಿಸಿದರು. ಸಂಸ್ಥೆ ನಿರ್ದೇಶಕರಾದ ಡಾ. ಆರತಿ ಪ್ರಸನ್ನ, ಡಾ. ಅರುಣ್‌ಕುಮಾರ್ ಗೋವಿಂದರಾಜನ್, ವೈಟಲ್ ಇನ್‌ಸೈಟ್ಸ್‌ನ ಮುಖ್ಯಸ್ಥ ಅವ್ನೀಶ್ ಪರೇಖ್ ಉಪಸ್ಥಿತರಿದ್ದರು.

₹7 ಕೋಟಿಗೂ ಅಧಿಕ ನಗದು ವಶ

ಒಂದನೇ ಪುಟದಿಂದ...

ಘಟನೆ ನಡೆದ ಬಳಿಕ ಕಾರ್ಯಾಚರಣೆ ನಡೆಸಿ 54 ತಾಸಿನೊಳಗೆ ಮೂವರು ಆರೋಪಿಗಳನ್ನು ಬಂಧಿಸಿ ₹5.76 ಕೋಟಿ ನಗದು ವಶಪಡಿಸಿಕೊಳ್ಳಲಾಯಿತು. ನವೆಂಬರ್ 23 ರಂದು ಹೈದರಾಬಾದ್‌ನ ನಾಂಪಲ್ಲಿ ಮೆಟ್ರೊ ನಿಲ್ದಾಣ ಬಳಿ ಮೂವರನ್ನು ಬಂಧಿಸಿ ₹57.74 ಲಕ್ಷ ನಗದು ಹಾಗೂ ಅದೇ ದಿನ ಹಲಸೂರು ಲೇಕ್ ಕಮ್ಮಹಳ್ಳಿ ಬಿಡಿಎ ಫ್ಲಾಟ್ ಬಳಿ ಮತ್ತೊಬ್ಬ ಆರೋಪಿಯನ್ನು ₹3 ಲಕ್ಷ ಸಮೇತ ವಶಕ್ಕೆ ಪಡೆಯಲಾಯಿತು.

ನವೆಂಬರ್ 24ರಂದು ಆಂಧ್ರ ಪ್ರದೇಶದ ಕುಪ್ಪಂನಲ್ಲಿರುವ ಆರೋಪಿ ಮನೆಯಿಂದ ₹57.50 ಲಕ್ಷ ನಗದು, ಸುಮನಹಳ್ಳಿ ಜಂಕ್ಷನ್ ಬಳಿ ಮತ್ತಿಬ್ಬರು ಆರೋಪಿಗಳನ್ನು ಬಂಧಿಸಿ, ₹ 10 ಲಕ್ಷ ನಗದು ಹಾಗೂ ಮತ್ತೊಬ್ಬ ಆರೋಪಿ ಮನೆಯಿಂದ ₹20 ಲಕ್ಷ ನಗದು ವಶಕ್ಕೆ ಪಡೆಯಲಾಗಿತ್ತು. ಇತರೆ ಆರು ಆರೋಪಿಗಳಿಂದ ₹1.45 ಕೋಟಿ ಜಪ್ತಿ ಮಾಡಲಾಗಿದೆ ಎಂದು ಮಾಹಿತಿ ನೀಡಿದರು.

ಕೊಲೆ ಪ್ರಕರಣದಲ್ಲಿ ಭಾಗಿಯಾಗಿದ್ದ ಆರೋಪಿ: ದರೋಡೆ ಪ್ರಕರಣದಲ್ಲಿ ಬಂಧಿತ 9 ಆರೋಪಿಗಳ ಪೈಕಿ ರವಿ ಎಂಬಾತ 2018ರಲ್ಲಿ ವರ್ತೂರು ಠಾಣೆಯಲ್ಲಿ ದಾಖಲಾಗಿದ್ದ ಕೊಲೆ ಪ್ರಕರಣದಲ್ಲಿ ಭಾಗಿಯಾಗಿದ್ದ ಎಂಬ ವಿಚಾರ ಗೊತ್ತಾಗಿದೆ. ಕೃತ್ಯ ಎಸಗಿದ ಏಳು ವರ್ಷಗಳ ಬಳಿಕ ಆರೋಪಿ ಸೆರೆಸಿಕ್ಕಿದ್ದಾನೆ.

ಬಾಣಸವಾಡಿ ರೌಡಿಶೀಟರ್ ಆಗಿದ್ದ ಚೆಲ್ಲಾ ಕುಮಾರ್‌ನನ್ನು 2018ರಲ್ಲಿ ಎದುರಾಳಿ ಗುಂಪು ಹತ್ಯೆಗೈದಿತ್ತು. ಈ ಕೃತ್ಯದಲ್ಲಿ ರವಿ ಕೂಡ ಭಾಗಿಯಾಗಿ ತಲೆಮರೆಸಿಕೊಂಡಿದ್ದ. ಪೊಲೀಸರು ಆರೋಪಿಯ ಹಿನ್ನೆಲೆ ಕೆದಕಿದಾಗ, ಕೊಲೆ ಪ್ರಕರಣದಲ್ಲಿ ಭಾಗಿಯಾಗಿರುವುದು ಗೊತ್ತಾಗಿದೆ. ಆರೋಪಿ ಜಿತೇಶ್ ವಿರುದ್ಧ ಮಾಗಡಿ ರಸ್ತೆ ಪೊಲೀಸ್ ಠಾಣೆಯಲ್ಲಿ ಕಿರುಕುಳ ಹಾಗೂ ಅಪಘಾತ ಪ್ರಕರಣ ದಾಖಲಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಇದೇ ವೇಳೆ ಆರೋಪಿಗಳ ಪತ್ತೆ ಕಾರ್ಯದಲ್ಲಿ ಶ್ರಮಿಸಿದ 125 ಪೊಲೀಸ್ ಸಿಬ್ಬಂದಿಗೆ ಪ್ರಶಂಸಾ ಪತ್ರ ನೀಡಿ ಕಮಿಷನರ್ ಅಭಿನಂದಿಸಿದರು.

ಆರೋಪಿಗಳಿಂದ ನಗದು ಜಪ್ತಿ

ತಾಂತ್ರಿಕ, ವೈಜ್ಞಾನಿಕ ಸಾಕ್ಷ್ಯ ಹಾಗೂ ಗುಪ್ತಚರ ವಿಭಾಗದ ಮಾಹಿತಿ ಆಧರಿಸಿ ಆರೋಪಿಗಳನ್ನು ಬಂಧಿಸಲಾಗಿದೆ. ತಪ್ಪಿತಸ್ಥರಿಗೆ ಶಿಕ್ಷೆಯಾಗುವಂತೆ ನೋಡಿಕೊಳ್ಳಲಾಗುವುದು.
ಸೀಮಾಂತ್ ಕುಮಾರ್ ಸಿಂಗ್,
ನಗರ ಪೊಲೀಸ್ ಕಮಿಷನರ್

ಸಿಎಂಎಸ್ ಸಿಬ್ಬಂದಿಗೆ ಊಟದ ಚಿಂತೆ

ಸಿಎಂಎಸ್ ವಾಹನ ಅಡ್ಡಗಟ್ಟಿ ₹7.11 ಕೋಟಿ ದರೋಡೆ ಆಗಿದ್ದರೂ ಸಿಬ್ಬಂದಿ ತಡವಾಗಿ ಠಾಣೆಗೆ ದೂರು ನೀಡಿದರು. ಇನೊವಾ ಕಾರಿನಲ್ಲಿ ಕಸ್ಟೋಡಿಯನ್, ಗನ್‌ಮೆನ್ ಅನ್ನು ಕರೆದೊಯ್ದಿದ್ದ ದರೋಡೆ ತಂಡ, ಮಾರ್ಗಮಧ್ಯೆ ಅವರನ್ನು ಇಳಿಸಿ ತೆರಳಿತ್ತು. ದರೋಡೆಕೋರರು ಇಳಿಸಿದ್ದ ಸ್ಥಳದಿಂದ ಠಾಣೆ ಕೂಗಳತೆ ದೂರದಲ್ಲಿದ್ದರೂ ಸಿಎಂಎಸ್ ಸಿಬ್ಬಂದಿ ಪೊಲೀಸರಿಗೆ ಮಾಹಿತಿ ನೀಡಿರಲಿಲ್ಲ. ಘಟನೆ ನಡೆದು 2 ಗಂಟೆ ನಂತರ ಪೊಲೀಸರಿಗೆ ವಿಚಾರ ಗೊತ್ತಾಯಿತು. ಹಾಗಾಗಿ ವಾಹನ ಸಿಬ್ಬಂದಿ ಮೇಲೆ ಮತ್ತಷ್ಟು ಅನುಮಾನ ಮೂಡಿತ್ತು ಎಂದು ಕಮಿಷನರ್ ಹೇಳಿದರು.

ತಡವಾಗಿ ದೂರು ನೀಡಲು ಕಾರಣವೇನು ಎಂದು ಪ್ರಶ್ನಿಸಿದಾಗ, ‘ಊಟದ ಸಮಯ ಆಗಿತ್ತು. ಊಟಕ್ಕೆ ಹೋಗಿದ್ದರಿಂದ ಬರಲು ಆಗಿರಲಿಲ್ಲ’ ಎಂದಿದ್ದರು. ಸಿಎಂಎಸ್ ವಾಹನದ ಕಸ್ಟೋಡಿಯನ್, ಗನ್‌ಮೆನ್ ವಿಚಾರಣೆ ನಡೆಸಿದ್ದು, ಪ್ರಕರಣದಲ್ಲಿ ಸಿಬ್ಬಂದಿ ಭಾಗಿಯಾಗಿರುವ ಬಗ್ಗೆ ಮಾಹಿತಿ ಇಲ್ಲ. ಆದರೆ, ನಿರ್ಲಕ್ಷ್ಯ ತೋರಿರುವುದು ಕಂಡು ಬಂದಿದೆ. ಆರ್‌ಬಿಐ ಮೂಲಕ ಸಿಎಂಎಸ್ ಹಾಗೂ ಬ್ಯಾಂಕ್ ಅಧಿಕಾರಿಗಳ ಸಭೆ ನಡೆಸಲಾಗುವುದು ಎಂದು ವಿವರಿಸಿದರು.

ಮಹಿಳೆ ಜತೆ ಸಲುಗೆ: ಯುವಕನ ಕೊಲೆ

ಬೆಂಗಳೂರು: ವಿವಾಹಿತ ಮಹಿಳೆಯೊಂದಿಗೆ ಸಲುಗೆ ಹೊಂದಿದ್ದ ನರಸಿಂಹರಾಜು (32) ಮೇಲೆ ಮಹಿಳೆಯ ಸಂಬಂಧಿಕರು ಹಲ್ಲೆ ನಡೆಸಿ, ಕೊಲೆ ಮಾಡಿದ್ದಾರೆ ಎಂದು ಆರೋಪಿಸಲಾಗಿದ್ದು, ಈ ಸಂಬಂಧ ಯಶವಂತಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮತ್ತೀಕೆರೆ ಬಳಿಯ ಮುತ್ಯಾಲನಗರದ ನರಸಿಂಹರಾಜು, ಗಾರೆ ಕೆಲಸ ಮಾಡುತ್ತಿದ್ದ. ಅದೇ ಬಡಾವಣೆಯ ಮಹಿಳೆಯೊಂದಿಗೆ ಸಲುಗೆ ಹೊಂದಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.

ಮಹಿಳೆಯು ಶನಿವಾರ ನರಸಿಂಹರಾಜು ಮನೆಗೆ ಬಂದಿದ್ದರು. ಈ ವಿಚಾರ ತಿಳಿದ ಆಕೆಯ ಸಂಬಂಧಿಕರು ಹಿಂಬಾಲಿಸಿಕೊಂಡು ಮನೆ ಬಳಿಯೇ ಬಂದು ನರಸಿಂಹರಾಜು ಜತೆ ಜಗಳವಾಡಿ, ಹೊರಗೆ ಎಳೆದುಕೊಂಡು ಬಂದು ಥಳಿಸಿದ್ದಾರೆ. ತಪ್ಪಿಸಿಕೊಳ್ಳಲು ಯತ್ನಿಸಿದರೂ ರಸ್ತೆಯಲ್ಲಿ ಅಟ್ಟಾಡಿಸಿಕೊಂಡು ಹೊಡೆದಿದ್ದಾರೆ ಎಂದು ಪೊಲೀಸರು ಹೇಳಿದ್ದಾರೆ.

‘ತೀವ್ರ ರಕ್ತಸ್ರಾವದಿಂದ ಅಸ್ವಸ್ಥಗೊಂಡಿದ್ದ ನರಸಿಂಹರಾಜುನನ್ನು ಕುಟುಂಬದ ಸದಸ್ಯರು ಆಸ್ಪತ್ರೆಗೆ ದಾಖಲಿಸಿದ್ದರು. ಆದರೆ, ಚಿಕಿತ್ಸೆಗೆ ಸ್ಪಂದಿಸಲಿಲ್ಲ. ಅನಾರೋಗ್ಯ ಸಮಸ್ಯೆಯಿತ್ತು. ಹೀಗಾಗಿ, ಅನಾರೋಗ್ಯದ ಕಾರಣದಿಂದ ಮೃತಪಟ್ಟಿದ್ದಾನೆಯೇ ಅಥವಾ ಹಲ್ಲೆಯಿಂದ ಸಾವನ್ನಪ್ಪಿದ್ದಾನೆಯೇ ಎಂಬುದು ಖಚಿತವಾಗಿಲ್ಲ. ಮರಣೋತ್ತರ ಪರೀಕ್ಷೆ ವರದಿ ಬಳಿಕ ಸಾವಿನ ನಿಖರ ಕಾರಣ ಗೊತ್ತಾಗಲಿದೆ’ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

‘ಮಹಿಳೆ ಮತ್ತು ಆಕೆಯ ಸಂಬಂಧಿಕರೇ ಅಣ್ಣನನ್ನು ಕೊಲೆ ಮಾಡಿದ್ದಾರೆ’ ಎಂದು ಮೃತರ ಸಹೋದರಿ ಧನಲಕ್ಷ್ಮೀ ಆರೋಪಿಸಿದ್ದಾರೆ. ಕೊಲೆ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಕೆರೆಗೆ ಬಿದ್ದ ಲಾರಿ ಚಾಲಕ ಸಾವು

ಆನೇಕಲ್: ತಾಲ್ಲೂಕಿನ ಬಿದರಗುಪ್ಪೆ ಕೆರೆಗೆ ಆಯತಪ್ಪಿ ಲಾರಿಯೊಂದು ಉರುಳು ಬಿದ್ದು ಅದರ ಚಾಲಕ ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದಾರೆ.

ಕಲಬುರಗಿಯ ಮಹೇಶ್(37) ಮೃತ ಚಾಲಕ. ಹೊಸೂರಿನಿಂದ ವೈಟ್‌ಫೀಲ್ಡ್‌ಗೆ ಮಣ್ಣು ಸಾಗಿಸುವಾಗ ಬಿದರಗುಪ್ಪೆ ಕೆರೆ ಏರಿಯ ಮೇಲೆ ಆಯ ತಪ್ಪಿದ ಲಾರಿ ಕೆರೆಗೆ ಉರುಳಿದೆ. ಲಾರಿ ನೀರಲ್ಲಿ ಮುಳಗಿದ್ದರಿಂದ ಚಾಲಕ ಹೊರ ಬರಲಾರದೆ ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಸೋಮವಾರ ಮಧ್ಯರಾತ್ರಿ ಘಟನೆ ನಡೆದಿದ್ದು, ಮಂಗಳವಾರ ಕೆರೆಯಿಂದ ಶವ ಮತ್ತು ಲಾರಿಯನ್ನು ಹೊರ ತೆಗೆಯಲಾಯಿತು.

ಮೈಸೂರು ರೇಸ್

ಮ್ಯಾಜಿಕ್ ಸರ್ಕಲ್ ಗೆಲ್ಲುವ ನಿರೀಕ್ಷೆ

ಡಾ. ಎಂ.ಎನ್.ದೊರೆಸ್ವಾಮಿ ಮೆಮೋರಿಯಲ್ ಟ್ರೋಫಿ ಬುಧವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಈ ರೇಸ್‌ನಲ್ಲಿ ಮ್ಯಾಜಿಕ್ ಸರ್ಕಲ್ ಗೆಲ್ಲುವ ನಿರೀಕ್ಷೆ ಇದೆ. ಮಧ್ಯಾಹ್ನ 2 ಗಂಟೆಗೆ ಆರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಡೇವಿಡ್ಸ್ ಡಿಲೈಟ್ 3, ಬುಂದೇಲ್‌ಖಂಡ್ ಕ್ವೀನ್ 4, ಜನ್ನತ್ 2
2ನೇ ರೇಸ್: ಡಿ ಅಡ್ಮಿರಲ್ 10, ನ್ಯಾಚುರಲ್ ಕ್ವೀನ್ 12, ಪೆಟ್ಟೀಸ್ ಚಾಯ್ಸ್ 3
3ನೇ ರೇಸ್: ಜಸ್ಟ್ ಬ್ಲೂಸ್ 10, ಇಂಡಿಯನ್ ಗ್ಲೋರಿ 1, ಅರಿಕಾಟ್ಟು 11
4ನೇ ರೇಸ್: ಅಲ್ಟಿಮೇಟ್ ಬ್ಲೂಸ್ 1, ಗೋಲ್ಡನ್ ಬರ್ಡ್ 3, ಸೇಪಿಯೆಂಟ್ 9
5ನೇ ರೇಸ್: ಮ್ಯಾಜಿಕ್ ಸರ್ಕಲ್ 9, ಓಷನ್ 4, ವಿಂಟರ್ ಅಜೆಂಡಾ 7
6ನೇ ರೇಸ್: ಟೈಗರ್‌ಕಿಂಗ್ 6, ನ್ಯಾಚುರಲ್ ಸ್ಪೀಡ್ 1, ಡಿ ರೋಮನ್ ರೀನ್ಸ್ 2
7ನೇ ರೇಸ್: ಸ್ಕ್ವೇರ್ ಕಟ್ 2, ಕ್ಲೌಡಿ ಹಿಲ್ಸ್ 8, ಶೆರೂಕ್ 9

ಉತ್ತಮ ಬೆಟ್: ಸ್ಕ್ವೇರ್ ಕಟ್

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್
3,4,5,67	2,3,4	5,6,7

ಮಚ್ಚು ತೋರಿಸಿ ಸುಲಿಗೆ: ಮೂವರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರ್.ಎಂ.ಸಿ. ಯಾರ್ಡ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ರಾತ್ರಿ ವೇಳೆ ಸಾರ್ವಜನಿಕರಿಗೆ ಮಚ್ಚು ತೋರಿಸಿ, ಸುಲಿಗೆ ಮಾಡುತ್ತಿದ್ದ ಪ್ರಕರಣ ಸಂಬಂಧ ಬಾಲಕ ಸೇರಿ ಮೂವರನ್ನು ಬಂಧಿಸಲಾಗಿದೆ.

ಟಿಂಬರ್ ಲೇಔಟ್‌ನ ಆಕಾಶ್, ಬಾಪೂಜಿ ನಗರದ ಎಸ್.ಕಿಶನ್ ಹಾಗೂ ಬಾಲಕನನ್ನು ಬಂಧಿಸಿ, ಕೃತ್ಯಕ್ಕೆ ಬಳಸಿದ್ದ ಮಚ್ಚು ಹಾಗೂ ದ್ವಿಚಕ್ರ ವಾಹನವನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ನವೆಂಬರ್ 11 ರಂದು ನವೀನ್ ಅವರು ತಮ್ಮ ಸ್ನೇಹಿತರಾದ ಗುರುಪ್ರಸಾದ್, ಶಿವಕುಮಾರ್ ಅವರೊಂದಿಗೆ ಜಿಕೆವಿಕೆಯಲ್ಲಿ ನಡೆಯುತ್ತಿದ್ದ ಕೃಷಿ ಮೇಳಕ್ಕೆ ಹೋಗಲು ಗೋವರ್ಧನ್ ಬಸ್ ನಿಲ್ದಾಣಕ್ಕೆ ನಡೆದುಕೊಂಡು ಹೋಗುವ ವೇಳೆ ಆರೋಪಿಗಳು ದ್ವಿಚಕ್ರ ವಾಹನದಲ್ಲಿ ಬಂದು ಅಡ್ಡಗಟ್ಟಿದ್ದರು. ಮಚ್ಚು ತೋರಿಸಿ, ಹಣ ನೀಡುವಂತೆ ಬೆದರಿಸಿ ₹100 ಕಿತ್ತುಕೊಂಡಿದ್ದರು. ಸಹಾಯಕ್ಕಾಗಿ ನವೀನ್ ಅವರು ಪೊಲೀಸ್ ಎಂದು ಕೂಗಿಕೊಂಡು ಓಡಲು ಶುರು ಮಾಡುತ್ತಿದ್ದಂತೆ ಆರೋಪಿಗಳು ಅಲ್ಲಿಂದ ಪರಾರಿಯಾಗಿ ದ್ದರು ಎಂದು ಪೊಲೀಸರು ತಿಳಿಸಿದರು.

ತನಿಖೆ ಕೈಗೊಂಡ ಪೊಲೀಸರು, ಕೃತ್ಯದ ಸ್ಥಳದಲ್ಲಿ ದೊರೆತ ಸಿಸಿಟಿವಿ ಕ್ಯಾಮೆರಾ ದೃಶ್ಯಾವಳಿ ಪರಿಶೀಲನೆ ಹಾಗೂ ಬಾತ್ಮೀದಾರರ ಮಾಹಿತಿ ಆಧರಿಸಿ ಸ್ಯಾಟಲೈಟ್ ಬಸ್ ನಿಲ್ದಾಣ ಬಳಿ ಇಬ್ಬರು ಆರೋಪಿಗಳನ್ನು ಬಂಧಿಸಲಾಯಿತು.

ಬಾಲಕನನ್ನು ತಮಿಳುನಾಡಿನ ರೈಲ್ವೆ ಚೈಲ್ಡ್ ಹೆಲ್ಪ್ ಡೆಸ್ಕ್‌ನವರು ಠಾಣೆಗೆ ಹಾಜರುಪಡಿಸಿದರು ಎಂದು ಹೇಳಿದರು.

ಕ್ರ. ಸಂ	ಪಹಣಿಯಂತೆ ಖಾತೆದಾರರ ಹೆಸರು: ಭೂಮಾಲೀಕರು / ಹಿಡುವಳಿದಾರರ ಹೆಸರು	ಪಹಣಿಯಂತೆ ಖಾತೆದಾರರ ಹೆಸರು: ಅನುಭವದಾರರ ಹೆಸರು	ಸರ್ವೆ/ಖಾತಾ ನಂಬರ್	ಸರ್ವೆ ಖಾತಾ ನಂಬರಿನಲ್ಲಿನ ಒಟ್ಟು ವಿಸ್ತೀರ್ಣ (ಪಹಣಿ/ಉತ್ತಾರ ಅನ್ವಯ): ಕೃಷಿ / ಕೃಷಿಯೇತರ ಜಮೀನು (ಎ–ಗುಂ)	ಖರಾಬು (ಎ–ಗುಂ)	ಸ್ವಾಧೀನಕ್ಕೊಳಪಡುವ ಒಟ್ಟು ವಿಸ್ತೀರ್ಣ: ಕೃಷಿ / ಕೃಷಿಯೇತರ ಜಮೀನು (ಎ–ಗುಂ)	ಖರಾಬು (ಎ–ಗುಂ)	ತರಹೆ	ಚಕ್ಕುಬಂದಿ /ಸರಹದ್ದು: ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ	ಷರಾ
1	2	3	4	5	6	7	8	9	10	11	12	13	14
19.	ಬಿ. ಮಂಜುನಾಥ ಬಿನ್ ಬೆಳ್ಳಪ್ಪ, ಬಿ. ಹೇಮಚಂದ್ರ ಬಿನ್ ಬೆಳ್ಳಪ್ಪ,	ಬಿ. ಮಂಜುನಾಥ ಬಿನ್ ಬೆಳ್ಳಪ್ಪ, ಬಿ. ಹೇಮಚಂದ್ರ ಬಿನ್ ಬೆಳ್ಳಪ್ಪ, ಬೆಳ್ಳಪ್ಪ – ಅಜ್ಜಪ್ಪ,	179/2	1–17	–	0–03	–	ಖುಷ್ಕಿ	ಸರ್ವೆ ನಂ. 179/4 & 5	ಸರ್ವೆ ನಂ. 179/1	ಸರ್ವೆ ನಂ. 183 & 184	ಸರ್ವೆ ನಂ. 178/1	
20.	ಪಿಲ್ಲಪ್ಪ ಬಿನ್ ಲೇ. ಸಿದ್ದಪ್ಪ	ಪಿಲ್ಲಪ್ಪ ಬಿನ್ ಲೇ. ಸಿದ್ದಪ್ಪ, ಮರಿಯಪ್ಪ ಉ ಚಿಕ್ಕಪ್ಪ ಬಿನ್ ಲೇ. ಅಜ್ಜಪ್ಪ	179/3	0–14	–								
21.	ನಾರಾಯಣರೆಡ್ಡಿ ಬಿನ್ –	ನಾರಾಯಣರೆಡ್ಡಿ ಬಿನ್ –	227/1	0–11	0–02	0–11	0–02	ಖುಷ್ಕಿ	ಸರ್ವೆ ನಂ. 227/5	ಸರ್ವೆ ನಂ. 147/2	ಸರ್ವೆ ನಂ. 148/4 & 147/1	ಸರ್ವೆ ನಂ. 227/2	
22.	ಚಿನ್ನಸ್ವಾಮಿರೆಡ್ಡಿ ಬಿನ್	ಚಿನ್ನಸ್ವಾಮಿರೆಡ್ಡಿ ಬಿನ್	227/2	0–35	0–07	0–20	–	ಖುಷ್ಕಿ	ಸರ್ವೆ ನಂ. 227/3, 4	ಸರ್ವೆ ನಂ. 146, 145	ಸರ್ವೆ ನಂ. 227/1, 5	ಸರ್ವೆ ನಂ. 227/4	
23.	ನಾರಾಯಣರೆಡ್ಡಿ ಬಿನ್ –	ನಾರಾಯಣರೆಡ್ಡಿ ಬಿನ್ –	227/3	0–25	–	0–24.08	–	ಖುಷ್ಕಿ	ಸರ್ವೆ ನಂ. 143	ಸರ್ವೆ ನಂ. 227/2	ಸರ್ವೆ ನಂ. 227/5	ಸರ್ವೆ ನಂ. 227/4, 143	
24.	ನಂಜುಂಡರೆಡ್ಡಿ ಬಿನ್	ನಂಜುಂಡರೆಡ್ಡಿ ಬಿನ್	227/4	0–34	–	0–08	–	ಖುಷ್ಕಿ	ಸರ್ವೆ ನಂ. 143	ಸರ್ವೆ ನಂ. 227/2	ಸರ್ವೆ ನಂ. 227/2,3	ಸರ್ವೆ ನಂ. 143	
25.	ರಾಮಕೃಷ್ಣಾರೆಡ್ಡಿ ಬಿನ್	ರಾಮಕೃಷ್ಣಾರೆಡ್ಡಿ ಬಿನ್	227/5	0–35	–	0–35	–	ಖುಷ್ಕಿ	ಸರ್ವೆ ನಂ. 143	ಸರ್ವೆ ನಂ. 227/1	ಸರ್ವೆ ನಂ. 148/4, 3 & 227/6	ಸರ್ವೆ ನಂ. 227/3, 2, 143	
26.	ಬಿ. ಕರಿಯಪ್ಪ ಬಿನ್ ಲೇ. ದೊಡ್ಡಬೆಂಗಳೂರಪ್ಪ,	ಬಿ. ಕರಿಯಪ್ಪ ಬಿನ್ ಲೇ. ದೊಡ್ಡಬೆಂಗಳೂರಪ್ಪ,	231/1	1–20	0–03.04	1–20	0–03.04	ಖುಷ್ಕಿ	ಸರ್ವೆ ನಂ. 152 & 151	ಬಗ್ಗನದೊಡ್ಡಿ ಸರ್ವೆ ನಂ. 21 ಮತ್ತು ಇಂಡ್ಲವಾಡಿ ಗ್ರಾಮ ಗಡಿ	ಸರ್ವೆ ನಂ. 234	ಸರ್ವೆ ನಂ. 231/2	
27.	ಕೆ.ಎಸ್. ರುದ್ರಮ್ಮ ಕೋಂ ಲೇ. ಎಂ. ನಾಗರಾಜ್, ರಾಘವೇಂದ್ರ.ಎನ್, ಪ್ರತೀಮ.ಎನ್, ನಂದಾದೀಪಾ ಬಿನ್ ಲೇ. ಎಂ.ನಾಗರಾಜ್	ಕೆ.ಎಸ್. ರುದ್ರಮ್ಮ ಕೋಂ ಲೇ. ಎಂ. ನಾಗರಾಜ್, ರಾಘವೇಂದ್ರ.ಎನ್, ಪ್ರತೀಮ.ಎನ್, ನಂದಾದೀಪಾ ಬಿನ್ ಲೇ. ಎಂ.ನಾಗರಾಜ್	231/2	1–00	0–04	1–00	0–04	ಖುಷ್ಕಿ	ಸರ್ವೆ ನಂ. 151 & 150	ಬಗ್ಗನದೊಡ್ಡಿ ಸರ್ವೆ ನಂ. 21 ಮತ್ತು ಇಂಡ್ಲವಾಡಿ ಗ್ರಾಮ ಗಡಿ	ಸರ್ವೆ ನಂ. 231/1	ಸರ್ವೆ ನಂ. 143, 149	
28.	ಎನ್. ನಾಗರಾಜು ಬಿನ್ ಲೇ. ನಂಜಪ್ಪ	ಎನ್. ನಾಗರಾಜು ಬಿನ್ ಲೇ. ನಂಜಪ್ಪ	231/3	1–00	0–01.04	1–00	0–01.04	ಖುಷ್ಕಿ	ಸರ್ವೆ ನಂ. 150,151	ಬಗ್ಗನದೊಡ್ಡಿ ಸರ್ವೆ ನಂ. 21 ಮತ್ತು ಇಂಡ್ಲವಾಡಿ ಗ್ರಾಮ ಗಡಿ	ಸರ್ವೆ ನಂ. 234	ಸರ್ವೆ ನಂ. 143,149	
29.	ಐಶ್ವರ್ಯ ಕೋಂ ಮುರುಳಿ.ಬಿ	ಐಶ್ವರ್ಯ ಕೋಂ ಮುರುಳಿ.ಬಿ	231/4	0–20	0–02.08	0–20	0–02.08	ಖುಷ್ಕಿ	ಸರ್ವೆ ನಂ. 150,151	ಬಗ್ಗನದೊಡ್ಡಿ ಸರ್ವೆ ನಂ. 21 ಮತ್ತು ಇಂಡ್ಲವಾಡಿ ಗ್ರಾಮ ಗಡಿ	ಸರ್ವೆ ನಂ. 234	ಸರ್ವೆ ನಂ. 143,149	

ಘೋಷ್ವಾರೆ

ಗ್ರಾಮ: ಇಂಡ್ಲವಾಡಿ

ತರಹೆ	ಒಟ್ಟು ವಿಸ್ತೀರ್ಣ(ಎ–ಗು)
ಖುಷ್ಕಿ	20–32
ಖರಾಬು	0–34
ಒಟ್ಟು	21–26

ಸಹಿ/–
ಗೃಹ ಆಯುಕ್ತರು,
ಕರ್ನಾಟಕ ಗೃಹ ಮಂಡಳಿ, ಬೆಂಗಳೂರು

ವಾಸಾಸಂಇ/ವಾಪ್ರ/ಜಿಎ/3994/2025–26

ಪಿಎಲ್‌ಎ: ಪ್ಲಾಸ್ಟಿಕ್‌ಗೆ ಪರ್ಯಾಯ

• ವಿಕ್ರಮ ಜೋಶಿ

ಮನೆಯಲ್ಲಿ ಮುಟ್ಟಿದ ಕಡೆಯಲ್ಲೆಲ್ಲಾ ಸಿಗುವ ವಸ್ತುಗಳು ಪ್ಲಾಸ್ಟಿಕ್ ಉತ್ಪನ್ನಗಳು! ಇನ್ನು ಹೊರಗಡೆಯಂತೂ ಪ್ಲಾಸ್ಟಿಕ್ ಕಾಣದ ಜಾಗವೇ ಇಲ್ಲ. ಜಗತ್ತು ಎದುರಿಸುತ್ತಿರುವ ಹಲವಾರು ಭಯಂಕರ ಸಮಸ್ಯೆಗಳಲ್ಲಿ ಪ್ಲಾಸ್ಟಿಕ್ ತ್ಯಾಜ್ಯ ಕೂಡ ಒಂದು. ನಮ್ಮ ಭೂಮಿಯ ಮೇಲೆ ಪ್ರತಿ ವರ್ಷ ಸುಮಾರು 400 ದಶಲಕ್ಷ ಟನ್ ಪ್ಲಾಸ್ಟಿಕ್ ಉತ್ಪಾದನೆಯಾಗುತ್ತದೆ. ಅವೆಲ್ಲವೂ ಮಾನವನಿರ್ಮಿತವೇ. ಇಷ್ಟು ದೊಡ್ಡ ರಾಶಿಯ ತ್ಯಾಜ್ಯದಲ್ಲಿ ಪುನರ್ಬಳಕೆಯಾಗುವುದು ಕೇವಲ ಶೇ 50ರಷ್ಟು ಮಾತ್ರ, ಉಳಿದರ್ಧ ಭಾಗವನ್ನು ನಾವು ಒಮ್ಮೆ ಬಳಸಿ ಎಸೆದುಬಿಡುತ್ತೇವೆ; ಪರಿಸರದಲ್ಲಿ ಅದು ಹಾಗೆಯೇ ಉಳಿದುಬಿಡುತ್ತದೆ.

ನಮಗೆ ಈಗಾಗಲೇ ತಿಳಿದಿರುವ ಹಾಗೆ ಪ್ಲಾಸ್ಟಿಕ್ ಅನ್ನು ಪೆಟ್ರೋಲಿಯಂ ಮೂಲದಿಂದ ತಯಾರಿಸಲಾಗುತ್ತದೆ; ಪಾಲಿ ಪ್ರೊಪಲೀನ್ ಹಾಗೂ ಪಾಲಿ ಇಥಲೀನ್ – ಇವೇ ಪ್ಲಾಸ್ಟಿಕ್‌ನ ಮೂಲ. ಪ್ಲಾಸ್ಟಿಕ್ ಬೇಗ ಮಣ್ಣಿನಲ್ಲಿ ಕರಗುವ ವಸ್ತುವಲ್ಲ; ಎಂದರೆ ಇದು 'ನಾನ್-ಬಯೋಡಿಗ್ರೆಡೆಬಲ್'. ಏನಾದರೂ ಇದರ ಸಂಯೋಜನೆಯು ಜೈವಿಕವಾಗಿ ವಿಘಟನೆಯು ಆಗಬೇಕೆಂದರೆ ನೂರಾರು ವರ್ಷಗಳು ಬೇಕು. ಹೀಗಾಗಿ ನಾವು ಇದನ್ನು ಬಳಸಿ, ಬಿಸಾಡಿದ ಮೇಲೆ ಮಣ್ಣಿನಲ್ಲಿ ಕರಗಿ ಗೊಬ್ಬರವಾಗದೆ ಇದು ನೆಲ, ಜಲ, ಸಾಗರ, ಪರ್ವತ, ಹಾಗೂ ಆಹಾರ ಸರಪಣಿಗಳಲ್ಲಿ ಸೇರಿಕೊಂಡು ಪರಿಸರಮಾಲಿನ್ಯಕ್ಕೆ ಕಾರಣವಾಗುತ್ತದೆ. ಭಾರತದಲ್ಲಿ ಪ್ರತಿವರ್ಷ 3.5 ದಶಲಕ್ಷ ಟನ್ ಪ್ಲಾಸ್ಟಿಕ್ ಬಳಕೆಯಾಗುತ್ತದೆ; ಅದರಲ್ಲಿ ಕೇವಲ ಶೇ 30ರಷ್ಟು ಮಾತ್ರವೇ ಪುನರ್ಬಳಕೆಯಾಗುವುದು. ಪ್ಲಾಸ್ಟಿಕ್ ಮಾಲಿನ್ಯವನ್ನು ತಪ್ಪಿಸಲು, ಪ್ಲಾಸ್ಟಿಕ್‌ನ ಪರ್ಯಾಯವೂ ಪರಿಸರಸ್ನೇಹಿಯೂ ಆದ ವಸ್ತುವಿನ ಹುಡುಕಾಟವಂತೂ ದಶಕಗಳಿಂದ ನಡೆಯುತ್ತಿದೆ. ಅದರ ಫಲವೇ 'ಪಾಲಿ ಲ್ಯಾಕ್ಟಿಕ್ ಆ್ಯಸಿಡ್' - ಪಿಎಲ್‌ಎ.

ಪ್ಲಾಸ್ಟಿಕ್ ಮಾಲಿನ್ಯವನ್ನು ತಪ್ಪಿಸಲು, ಪ್ಲಾಸ್ಟಿಕ್‌ನ ಪರ್ಯಾಯವೂ ಪರಿಸರಸ್ನೇಹಿಯೂ ಆದ ವಸ್ತುವಿನ ಹುಡುಕಾಟವಂತೂ ದಶಕಗಳಿಂದ ನಡೆಯುತ್ತಿದೆ. ಅದರ ಫಲವೇ 'ಪಾಲಿ ಲ್ಯಾಕ್ಟಿಕ್ ಆ್ಯಸಿಡ್' - ಪಿಎಲ್‌ಎ.

'ಪಿಎಲ್‌ಎ' ಇದೊಂದು ಜೈವಿಕ ಪ್ಲಾಸ್ಟಿಕ್. ಇದರ ರಾಸಾಯನಿಕ ಸೂತ್ರ - $(C_3H_4O_2)_n$. ಇದರ ಮೆಲ್ಟಿಂಗ್ ಪಾಯಿಂಟ್ 150-160 ಡಿಗ್ರಿ ಸೆಲ್ಸಿಯಸ್. ಜಗತ್ತಿನಲ್ಲಿ ತಯಾರಾಗುತ್ತಿರುವ ಎಲ್ಲ ಜೈವಿಕ ಪ್ಲಾಸ್ಟಿಕ್‌ಗಳಿಗಿಂತಲೂ ಪಿಎಲ್‌ಎ ಬಹಳ ಜನಪ್ರಿಯ. ಇದನ್ನು ಸಾವಯವ ಮೂಲದಿಂದ ತಯಾರಿಸಲಾಗುತ್ತದೆ. ಇದಕ್ಕೆ ಬೇಕಾಗುವ ಕಚ್ಚಾ ವಸ್ತುಗಳೆಂದರೆ ಪಿಷ್ಟ, ಕಬ್ಬು ಅಥವಾ ಮರಗೆಣಸು. ಇದನ್ನು ಸಕ್ಕರೆಯ ಕಾರ್ಖಾನೆಗಳಲ್ಲಿ ಉಪ-ಉತ್ಪನ್ನವಾಗಿಯೂ ತಯಾರಿಸುತ್ತಾರೆ. ಪಾಲಿ ಲ್ಯಾಕ್ಟಿಕ್ ಆ್ಯಸಿಡ್ ತಯಾರಿಸುವ ವಿಧಾನವೆಂದರೆ, (1) ಕಬ್ಬು ಅಥವಾ ಮೆಕ್ಕೆಜೋಳದಿಂದ ಸಕ್ಕರೆಯ ಉತ್ಪಾದನೆ; (2) ಸಕ್ಕರೆಯನ್ನು ಹದುವಿಕೆಗೆ ಒಳಪಡಿಸಿ ಲ್ಯಾಕ್ಟಿಕ್ ಆ್ಯಸಿಡ್ ಆಗಿ ಪರಿವರ್ತಿಸುವುದು; (3) ಲ್ಯಾಕ್ಟಿಕ್ ಆ್ಯಸಿಡ್‌ನಿಂದ ಪಾಲಿಮರನ್ನು ತಯಾರಿಸುವುದು. ಹೀಗೆ ತಯಾರಾದ ಉತ್ಪನ್ನವು ಪ್ಲಾಸ್ಟಿಕ್ ತರಹದ್ದೇ ಗುಣವನ್ನು ಹೊಂದಿರುತ್ತದೆ. ಅದರಷ್ಟು ಹೆಚ್ಚು ತಾಪಮಾನವನ್ನು ಎದುರಿಸುವ ಕ್ಷಮತೆ ಇಲ್ಲದೇ ಇರುವುದು ಇದರ ನ್ಯೂನತೆ ಎನ್ನಬಹುದು. ಇದು ಜೈವಿಕ ವಿಘಟನೆಯ ವಸ್ತುವಾಗಿದ್ದು, ನಿರ್ದಿಷ್ಟ ವಾತಾವರಣವನ್ನು ಸೃಷ್ಟಿಸಿ ನಿರ್ವಹಿಸಿದರೆ ಬೇಗನೆ ಮಿಶ್ರ ಗೊಬ್ಬರವಾಗಿ ಪರಿವರ್ತನೆಯಾಗಬಲ್ಲದು. ಪಿಎಲ್‌ಎ ಬಳಕೆಯಿಂದ ಪ್ಲಾಸ್ಟಿಕ್ ಮಾಲಿನ್ಯವನ್ನು ತಡೆಯಬಹುದು. ಅಷ್ಟೇ ಅಲ್ಲ, ಇದರ ತಯಾರಿಕೆಯಲ್ಲಿ ಹಾಗೂ ಬಳಕೆಯಲ್ಲಿ ಹೊರಸೂಸುವ 'ಇಂಗಾಲದ ಮುದ್ರೆ'ಯೂ (ಕಾರ್ಬನ್ ಫೂಟ್‌ಪ್ರಿಂಟ್) ಪ್ಲಾಸ್ಟಿಕ್‌ಗಿಂತ ಕಡಿಮೆ ಎನ್ನುವುದು ಗಮನೀಯ ಅಂಶ.

ಪಿಎಲ್‌ಎಯ ಆವಿಷ್ಕಾರವು ಇಂದು ನಿನ್ನೆಯದಲ್ಲ; ಇದರ ಇತಿಹಾಸವನ್ನು ಹುಡುಕುತ್ತಹೋದರೆ ಅದು 1932ಕ್ಕೆ ಹೋಗಿ ನಿಲ್ಲುತ್ತದೆ. 'ಡ್ಯುಪೊಂಟ್' ಎನ್ನುವ ರಾಸಾಯನಿಕ ವಸ್ತುಗಳನ್ನು ತಯಾರಿಸುವ ಕಂಪನಿಯಲ್ಲಿಯ ರಸಾಯನಶಾಸ್ತ್ರಜ್ಞ ವ್ಯಾಲೆಸ್ ಕ್ಯಾರೊಡರ್ಸ್ ಇದರ ಸಂಶೋಧಕ. ಈ ವಿಜ್ಞಾನಿಯೇ ನೈಲಾನ್‌ನನ್ನು ಕಂಡುಹಿಡಿದಿದ್ದು. ಆದರೆ ಅವರು ಇದನ್ನು ಮಾರುಕಟ್ಟೆಗೆ ಸಿದ್ಧಪಡಿಸಿರಲಿಲ್ಲ. ನಂತರ 1980ರ ವೇಳೆಗೆ ಪ್ಯಾಟ್ರಿಕ್ ಗ್ರಬ್ಬರ್ ಎನ್ನುವವರು ಈ ತಂತ್ರಜ್ಞಾನವನ್ನು ಮಾರುಕಟ್ಟೆಗೆ, ಎಂದರೆ ಮಾಸ್ ಪ್ರೊಡಕ್ಷನ್ ಅಥವಾ ದೊಡ್ಡ ಮಟ್ಟದ ಉತ್ಪಾದನೆಗೆ ಬೇಕಾಗುವ ಹಾಗೆ ಅಭಿವೃದ್ಧಿ ಪಡಿಸಿದರು. ಇವರ ಈ ಸಾಧನೆಯೇ 'ನೇಚರ್ ವರ್ಕ್ಸ್ ಎಲ್‌ಎಲ್‌ಸಿ' ಎನ್ನುವ ಕಂಪನಿಯ ಬೆನ್ನೆಲುಬು. ಇಂದು ಜಗತ್ತಿನಲ್ಲಿ ಅತಿ ಹೆಚ್ಚು ಪಿಎಲ್‌ಎಯನ್ನು ಉತ್ಪಾದಿಸುವ ಕಂಪನಿಯೇ ನೇಚರ್ ವರ್ಕ್ಸ್.

ಪ್ಯಾಕೇಜಿಂಗ್, ವೈದ್ಯಕೀಯ, ಔಷಧಗಳ ತಯಾರಿಕೆ, ಬಟ್ಟೆ, 3ಡಿ ಪ್ರಿಂಟಿಂಗ್, ಕೃಷಿಕ್ಷೇತ್ರದಲ್ಲಿ ಪಿಎಲ್‌ಎಯ ಬಳಕೆ ಬಹಳ ಆಶಾದಾಯಕವಾಗಿದೆ. ಪಿಎಲ್‌ಎಯಿಂದ ತಯಾರಾಗುತ್ತಿರುವ ವಸ್ತುಗಳಲ್ಲಿ ಬಾಟಲಿಗಳು, ಆಹಾರದ ಪೊಟ್ಟಣಗಳು, ಕೈಚೀಲಗಳು, ವಸ್ತ್ರಗಳು – ಇವು ಕೆಲವೊಂದು ಉದಾಹರಣೆಗಳು ಮಾತ್ರ. ಜಗತ್ತಿನಲ್ಲಿ ಹಲವಾರು ಕಂಪನಿಗಳು ಪಿಎಲ್‌ಎ ಉತ್ಪನ್ನಗಳನ್ನು ತಯಾರಿಸುತ್ತಿವೆ; ಭಾರತವೂ ಈ ಓಟದ ಸ್ಪರ್ಧೆಯಲ್ಲಿ ಹಿಂದಿಲ್ಲ. ಎಲ್ಲರೂ ಆದಷ್ಟು ಕಡಿಮೆ ಬೆಲೆಯಲ್ಲಿ ಉತ್ತಮ ಗುಣಮಟ್ಟದ ಪಿಎಲ್‌ಎ ಉತ್ಪನ್ನಗಳನ್ನು ಹೊರತರಲು, ಆ ತಂತ್ರಜ್ಞಾನವನ್ನು ಕೈಗೂಡಿಸಿಕೊಳ್ಳಲು ನಿರತರಾಗಿದ್ದಾರೆ. ಇಂದು ಇದರ ಲಭ್ಯತೆಯು ಕಡಿಮೆ ಆಗಿರುವುದರಿಂದಾಗಿ ಸಾಮಾನ್ಯ ಪ್ಲಾಸ್ಟಿಕ್‌ಗಿಂತ ಇದರ ಬೆಲೆಯು ಶೇ 25-30ರಷ್ಟು ಹೆಚ್ಚು. ಮುಂದೆ ಇದು ದೊಡ್ಡ ಮಟ್ಟದ ಬಳಕೆಗೆ ಸಿದ್ಧವಾಗಿ, ಅದೇ ಪ್ರಮಾಣದಲ್ಲಿ ಉತ್ಪಾದನೆಯೂ ನಡೆದಾಗ ಆಗ ಅದರ ಬೆಲೆ ಪ್ಲಾಸ್ಟಿಕ್‌ಗಿಂತಲೂ ಕಡಿಮೆಯಾಗಬಹುದು. ❖

ಸೆಲ್ಯುಲೋಸ್‌ನಿಂದ ಪಿಎಲ್‌ಎವರೆಗಿನ ಪಯಣ

ಪ್ಲಾಸ್ಟಿಕ್ ಸಂಶೋಧನೆಯಾಗಿದ್ದು 1862ರಲ್ಲಿ. ಅದನ್ನು ಸಂಶೋಧಿಸಿದ್ದು ಬ್ರಿಟಿಷ್ ವಿಜ್ಞಾನಿ ಅಲೆಕ್ಸಾಂಡರ್ ಪಾರ್ಕ್ಸ್. ಇವತ್ತಿನ ಹಾಗೆ ಅದು ಪೆಟ್ರೋಲಿಯಂ ಉತ್ಪನ್ನಗಳನ್ನು ಬಳಸಿ ತಯಾರಿಸಿದ ಪ್ಲಾಸ್ಟಿಕ್ ಆಗಿರಲಿಲ್ಲ; ಅದನ್ನು ಸೆಲ್ಯುಲೋಸ್‌ನಿಂದ ಉತ್ಪಾದಿಸಲಾಗಿತ್ತು. ಇವತ್ತು ನಾವು ಬಳಸುವ ಪ್ಲಾಸ್ಟಿಕ್ ಸಂಶೋಧನೆಯಾಗಿದ್ದು 1907ರಲ್ಲಿ. ಲಿಯೋ ಬೇಕಲ್ಯಾಂಡ್ ಎನ್ನುವಾತನು ಮೊದಲಬಾರಿಗೆ ಬ್ಯಾಕೆಲೈಟ್‌ನ್ನು ಪೆಟ್ರೋಕೆಮಿಕಲ್ಸ್ ಬಳಸಿ ತಯಾರಿಸಿದ್ದ. ನವೀನ ಬಗೆಯ ಬೈಯೊಪ್ಲಾಸ್ಟಿಕ್ ಆಗಿರುವ ಪಿಎಲ್‌ಎ ಪಾಲಿಮರ್‌ನ ಒಂದು ರೂಪ. ಎಲ್ಲಿಯವರೆಗೆ ಪ್ಲಾಸ್ಟಿಕ್ ಇಷ್ಟೊಂದು ಸಮಸ್ಯೆಗಳನ್ನು ತರಬಲ್ಲದೆನ್ನುವುದು ಗೊತ್ತಾಗಲಿಲ್ಲವೋ ಅಲ್ಲಿಯ ತನಕ ನಮಗೇನೂ ಸಮಸ್ಯೆ ಇರಲಿಲ್ಲ.

ಕೃತಕ ಪ್ಲಾಸ್ಟಿಕ್ ಸಮಸ್ಯೆಯಾಗಲು ಮುಖ್ಯ ಕಾರಣ ಇದು ಪೆಟ್ರೋಲಿಯಂ ಉತ್ಪನ್ನ; ಅದರ ರಾಸಾಯನಿಕ ಸಂಯೋಜನೆಯಿಂದಾಗಿ ಬೇಗ ಮಣ್ಣಿನಲ್ಲಿ ಸೇರುವುದಿಲ್ಲ. ಮಣ್ಣಿಗೆ ಸೇರಬೇಕು, ಗೊಬ್ಬರವಾಗಬೇಕು ಎಂದರೆ ಮೊದಲು ಜೈವಿಕವಾಗಿ ವಿಘಟನೆಯಾಗಬೇಕು. ಹಾಗಾಗಲು ಸೂಕ್ಷ್ಮಜೀವಿಗಳು ಆ ವಸ್ತುವಿನಲ್ಲಿನ ಇಂಗಾಲದ ಪದಾರ್ಥಗಳನ್ನು ಸೇವಿಸುವುದು ಅತ್ಯಗತ್ಯ. ಕೃತಕ ಪ್ಲಾಸ್ಟಿಕ್‌ನಲ್ಲಿ ಕಾರ್ಬನ್ ಇದ್ದರೂ ಅದು ಸುಲಭವಾಗಿ ಸೂಕ್ಷ್ಮಜೀವಾಣುಗಳ ಆಹಾರವಾಗುವುದಿಲ್ಲ. ಹೀಗಾಗಿ ಅದು ಸಾವಿರಾರು ವರ್ಷಗಳ ಕಾಲ ನಮ್ಮ ನಡುವೆ ತ್ಯಾಜ್ಯದ ರೂಪದಲ್ಲಿ ಹಾಗೆಯೇ ಉಳಿದುಬಿಡುತ್ತದೆ. ಹೀಗಾಗಿ ಮನುಷ್ಯ ಮತ್ತೆ ಜೈವಿಕ ಪ್ಲಾಸ್ಟಿಕ್‌ಗೆ ಮೊರೆ ಹೋಗುತ್ತಿದ್ದಾನೆ. ಹತ್ತೊಂಬತ್ತನೆಯ ಶತಮಾನದಲ್ಲಿ ಅವಿಷ್ಕಾರವಾದ ಸೆಲ್ಯುಲೋಸ್ ಮೂಲದ ಪ್ಲಾಸ್ಟಿಕ್ ಹಾಗೂ ಇಪ್ಪತ್ತೊಂದನೇ ಶತಮಾನದಲ್ಲಿ ಆಸಕ್ತಿ ಮೂಡಿಸಿರುವ ಪಾಲಿ ಲ್ಯಾಕ್ಟಿಕ್ ಆ್ಯಸಿಡ್‌ನಿಂದ ಉತ್ಪಾದನೆಯಾಗುವ ಪ್ಲಾಸ್ಟಿಕ್ – ಎರಡನ್ನೂ ನೋಡಿದಾಗ ನಾವು ಒಂದು ಪರಿಪೂರ್ಣ ವೃತ್ತವನ್ನು ಸುತ್ತಿ ಬಂದಿದ್ದೇವೆ ಎಂದೆನಿಸುತ್ತದೆ.

ಅಪನಂಬಿಕೆಯನ್ನು ಗೆದ್ದ ವೈದ್ಯ

• ಕೊಳ್ಳೇಗಾಲ ಶರ್ಮ

ನೊಬೆಲ್ ವಿಜ್ಞಾನಿಗಳು 7

ಶಿಮೊನ್ ಸಕಾಗುಚಿ, ಜಪಾನಿನ ಒಸಾಕಾ ವಿಶ್ವವಿದ್ಯಾಲಯದಲ್ಲಿ ಅನ್ವಯಿಕ ರೋಗನಿರೋಧಿ ವಿಜ್ಞಾನ ವಿಭಾಗದಲ್ಲಿ ಪ್ರೊಫೆಸರ್. ನಲವತ್ತು ವರ್ಷಗಳ ಹಿಂದೆ ಎಲ್ಲರೂ ಕೈ ಬಿಟ್ಟು ನಡೆದಿದ್ದ ವಿಷಯವೊಂದನ್ನು ಬೆಂಬತ್ತಿದವರು. ಅದಕ್ಕಾಗಿ ಈ ವರ್ಷದ ಶರೀರಕ್ರಿಯೆ ಹಾಗೂ ವೈದ್ಯ ವಿಭಾಗದ ನೊಬೆಲ್ ಪಾರಿತೋಷಕವನ್ನು ಇನ್ನಿಬ್ಬರ ಜೊತೆಗೆ ಹಂಚಿಕೊಂಡರು. ನಮ್ಮ ದೇಹವು ಹೇಗೆ ತನ್ನ ಹಾಗೂ ಪರಕೀಯ ಅಂಶಗಳನ್ನು ಗುರುತಿಸಿ, ಕೇವಲ ಪರಕೀಯ ಅಂಶಗಳನ್ನಷ್ಟೆ ಹತ್ತಿಕ್ಕುತ್ತದೆ ಎಂಬುದಕ್ಕೆ ವಿವರಣೆಯನ್ನು ಒದಗಿಸಿದ್ದಕ್ಕಾಗಿ ಅವರಿಗೆ ಈ ಪ್ರಶಸ್ತಿ ಸಂದಿತು.

ನಲವತ್ತು ವರ್ಷಗಳ ಹಿಂದೆಯೂ ದೇಹದಲ್ಲಿ ಸೋಂಕು ರೋಗಗಳಿಂದ ಕಾಪಾಡುವ ವ್ಯವಸ್ಥೆ ಇದೆ ಎಂಬುದು ಸ್ಪಷ್ಟವಾಗಿತ್ತು. ಅದು ಇರುವುದರಿಂದಲೇ ಸೋಂಕುವ ರೋಗಾಣುಗಳ ಪರಿಚಯವನ್ನು ದೇಹಕ್ಕೆ ನೀಡಿದರೆ ಸಾಕು. ದೇಹ ಅನಂತರ ಅಂತಹ ರೋಗಾಣು ಒಳನುಸುಳಿದ ಕೂಡಲೇ, ಅದನ್ನು ಹತ್ತಿಕ್ಕಬಹುದು ಎನ್ನುವ ಧೈರ್ಯ ಬಂದಿತ್ತು. ಅದಕ್ಕಾಗಿ ಲಸಿಕೆಗಳನ್ನು ಸೃಷ್ಟಿ ಮಾಡಿದ್ದೂ ಆಗಿತ್ತು. ಕೋವಿಡ್‌ನಂತಹ ಮಾರಿಯನ್ನು ಕೇವಲ ಲಸಿಕೆಗಳಿಂದಲೇ ಹತ್ತಿಕ್ಕಲಾಗಿತ್ತು. ಇಷ್ಟೆಲ್ಲ ಸಾಧನೆಗಳು ಆಗಿದ್ದರೂ, ಒಂದು ಸಮಸ್ಯೆ ಇದ್ದೇ ಇತ್ತು. ದೇಹದ ರೋಗನಿರೋಧಕ ವ್ಯವಸ್ಥೆ ತನ್ನದಲ್ಲದ್ದನ್ನಷ್ಟ ಹೇಗೆ ಹುಡುಕುತ್ತದೆ? ತನ್ನದೇ ಅಂಶಕ್ಕೆ ಏಕೆ ಅಪಾಯ ಮಾಡುವುದಿಲ್ಲ? ಇದು ಪ್ರಶ್ನೆ. ಏಕೆಂದರೆ, ದೇಹ ರೋಗನಿರೋಧಕ ವ್ಯವಸ್ಥೆಯಲ್ಲಿ ಪಾಲ್ಗೊಳ್ಳುವ ಬಿಳಿರಕ್ತಕೋಶಗಳ ಕೋಟ್ಯಂತರ ರೂಪಗಳನ್ನು ತಯಾರಿಸಿರುತ್ತದೆ. ಇವುಗಳಲ್ಲಿ ನಮ್ಮದೇ ವ್ಯವಸ್ಥೆಯನ್ನು ತಾಕುವ ಕೋಶಗಳೂ ಇರಬಲ್ಲವು. ಹಾಗಿದ್ದೂ, ದೇಹ ಯಾವಾಗಲೂ ಪರಕೀಯ ವಸ್ತುಗಳನ್ನೇ ಹುಡುಕಿ ನಾಶಪಡಿಸುತ್ತದಲ್ಲ? ಅದು ಹೇಗೆ?


ಶಿಮೊನ್ ಸಕಾಗುಚಿ
ಚಿತ್ರಕೃಪೆ: ನೊಬೆಲ್ ಅಧಿಕೃತ ವೆಬ್‌ಸೈಟ್

ಈ ಪ್ರಶ್ನೆಯನ್ನು ಕೇಳಲು ಕಾರಣವೂ ಇತ್ತೆನ್ನಿ. ಯಾವುದೇ ಸುವ್ಯವಸ್ಥೆ ಆಗಾಗ ಹದಗೆಡುವಂತೆಯೇ ದೇಹದ ರೋಗನಿರೋಧಕ ಗುಣವೂ ಆಗಾಗ್ಗೆ ಹಾದಿ ತಪ್ಪುತ್ತದೆ. ಅಂತಹ ಸಂದರ್ಭದಲ್ಲಿ ದೇಹ ತನ್ನದೇ ಅಂಗಗಳ ಮೇಲೆ, ಅರ್ಥಾತ್ 'ಬಾಂಧವ'ರ ಮೇಲೆಯೇ ಎರಗುವುದುಂಟು. ಆಟೊ ಇಮ್ಯೂನ್ ಕಾಯಿಲೆಗಳು ಹೀಗೆ ಉಂಟಾಗುತ್ತವೆ. ಮಧುಮೇಹ, ಹೆಂಗಸರಲ್ಲಿ ಗರ್ಭಪಾತವಾಗುವುದು, ಕೆಲವು ಅಂಗಗಳ ಬೆಳವಣಿಗೆ ಕ್ಷೀಣಿಸುವುದು, ಮಯಾಸ್ತೀನಿಯಾ ಗ್ರಾವಿಸ್‌ನಂತಹ ನರರೋಗಗಳು ಕಾಣಿಸಿಕೊಳ್ಳುತ್ತವೆ. ಇವುಗಳಿಗೆಲ್ಲ ಈಗ ಚಿಕಿತ್ಸೆ ಬಂದಿದೆ. ರೋಗಕ್ಕೆ ಕಾರಣವಾಗುವ ಆ್ಯಂಟಿಬಾಡಿಗಳ ಉತ್ಪಾದನೆಯನ್ನು ಹತ್ತಿಕ್ಕುವ ಔಷಧಗಳು ಇವೆ.

ಆದರೂ ಒಂದು ಪ್ರಶ್ನೆ ಎಲ್ಲರನ್ನೂ ಕಾಡುತ್ತಿತ್ತು. ಸೋಂಕುಂಟು ಮಾಡುವ ಪರಕೀಯ ಜೀವಿಗಳನ್ನು ಹತ್ತಿಕ್ಕಬೇಕಾದ ರಕ್ಷಕಕೋಶಗಳು ದೇಹದ್ದೇ ಭಾಗಗಳಿಗೆ ತೊಂದರೆ ಕೊಡುವುದು ಏಕೆ? ಇದಕ್ಕೆ ಎರಡು ಕಾರಣಗಳನ್ನು ವಿಜ್ಞಾನಿಗಳು ತರ್ಕಿಸಿದ್ದರು. ಮೊದಲನೆಯದು, ಬಿಳಿರಕ್ತಕೋಶಗಳು ಹುಟ್ಟುವಾಗಲೇ ಅದು ಹೇಗೋ ದೇಹ ಅವುಗಳಲ್ಲಿ ತನ್ನ ಅಂಶಗಳನ್ನು ಗುರುತಿಸುವ ಕೋಶಗಳು ಹುಟ್ಟದಂತೆ ಮಾಡುತ್ತಿರಬೇಕು. ಅಥವಾ ಅಂತಹ ವಿನಾಶಕಾರಿ ಕೋಶಗಳು ಹುಟ್ಟಿದರೂ, ಅವು ಕಾರ್ಯಪ್ರವೃತ್ತವಾಗದಂತೆ ತಡೆಯುತ್ತಿರಬೇಕು. ಆಗ ಸಕಾಗುಚಿ ಕ್ಯೋಟೋ ವಿಶ್ವವಿದ್ಯಾಲಯದಲ್ಲಿ ಸಂಶೋಧಕರಾಗಿ ಸೇರಿದ್ದ ದಿನಗಳು. ಅಲ್ಲಿ ಆ ಹಿಂದೆ ಇದ್ದ ಮತ್ತೊಬ್ಬ ಸಂಶೋಧಕರು ಒಂದು ವಿಶಿಷ್ಟ ಪ್ರಯೋಗವನ್ನು ಮಾಡಿದ್ದರು. ಆಗ ತಾನೇ ಹುಟ್ಟಿದ ಇಲಿಗಳ ಥೈಮಸ್ ಗ್ರಂಥಿಗಳನ್ನು ಕಿತ್ತೊಗೆದು ಏನಾಗುತ್ತದೆ ಎಂದು ಪರೀಕ್ಷಿಸಿದ್ದರು. ಥೈಮಸ್ ಗ್ರಂಥಿ ಬಿಳಿ ರಕ್ತಕೋಶಗಳು ಬೆಳೆಯುವ ಸ್ಥಳ; ತರಬೇತಿ ಕೇಂದ್ರ ಎನ್ನಿ! ಹೀಗೆ ಹುಟ್ಟಿದ ಇಲಿಮರಿಗಳು ಎಲ್ಲ ಸೋಂಕಿಗೂ ಬಲಿಯಾಗುತ್ತಿದ್ದುವು. ಅವುಗಳಲ್ಲಿ ರೋಗ ನಿರೋಧಕಶಕ್ತಿ ಇರಲೇ ಇಲ್ಲ; ಬಿಳಿರಕ್ತಕಣಗಳೂ ಕಾಣಿಸಲಿಲ್ಲ.

ಮತ್ತೊಂದು ಪ್ರಯೋಗದಲ್ಲಿ ಮರಿಗಳು ಹುಟ್ಟಿದ ಮೂರು ದಿನದ ನಂತರ ಥೈಮಸ್ ಗ್ರಂಥಿಯನ್ನು ಕಿತ್ತೊಗೆದರು. ಇಂಥವುಗಳಲ್ಲಿಯೂ ರೋಗ ನಿರೋಧಕಶಕ್ತಿ ಕುಗ್ಗಬೇಕಿತ್ತು. ಬದಲಿಗೆ, ಅವುಗಳಲ್ಲಿ ಆಟೊ ಇಮ್ಯೂನ್ ಕಾಯಿಲೆಗಳು ಕಂಡವು. ಕೆಲವು ಇಲಿಗಳ ಥೈರಾಯಿಡ್ ಗ್ರಂಥಿ ಬೆಳೆಯಲೇ ಇಲ್ಲ. ಇನ್ನು ಹೆಣ್ಣುಮರಿಗಳಲ್ಲಿ ಗರ್ಭಾಶಯ ಕ್ಷೀಣವಾಗುತ್ತ ಹೋಯಿತು. ಅರ್ಥಾತ್, ರೋಗ ನಿರೋಧಕತೆ ಇತ್ತು. ಆದರೆ ಸ್ವಂತದ್ದನ್ನೂ ಗುರುತಿಸುತ್ತಿತ್ತು. ಅಂದರೆ ಸ್ವಂತದ್ದನ್ನು ಗುರುತಿಸುವ ಶಕ್ತಿ ಸಹಜವಾಗಿಯೇ ಇರುತ್ತದೆ. ಆದರೆ ಕುಗ್ಗಿರುತ್ತದೆ. ಆ ನಿಯಂತ್ರಣ ತಪ್ಪಿದಾಗ ಆಟೋ ಇಮ್ಯೂನ್ ಕಾಯಿಲೆಗಳು ಉಂಟಾಗುತ್ತವೆ. ಈ ಪ್ರಯೋಗಗಳನ್ನು ಇನ್ನೂ ಹಲವರು ಮಾಡಿದರು. ಆದರೆ ಖಚಿತವಾಗಿ ಹೀಗೇ ಅಗುತ್ತಿದೆ ಎಂದು ನಿರೂಪಿಸಲು ಯಾರಿಂದಲೂ ಆಗಿರಲಿಲ್ಲ. ಹೀಗಾಗಿ ಎಲ್ಲರೂ ಥೈಮಸ್ ಗ್ರಂಥಿಯಲ್ಲಿ ಸ್ವಂತ ಪತ್ತೆ ಮಾಡುವ ಕೋಶಗಳು ಹುಟ್ಟುತ್ತಲೇ ಇಲ್ಲ ಎಂದು ತೀರ್ಮಾನಿಸಿ, ಪ್ರಯೋಗಗಳನ್ನು ಕೈಚೆಲ್ಲಿಬಿಟ್ಟಿದ್ದರು.

ಸಕಾಗುಚಿಯ ಪ್ರಯೋಗಗಳು ಆರಂಭವಾಗಿದ್ದು ಈ ಸಂದರ್ಭದಲ್ಲಿ. ಇದೇ ಥೈಮಸ್ ಕಿತ್ತ ಇಲಿಗಳ ಪ್ರಯೋಗವನ್ನು ಮತ್ತೊಮ್ಮೆ ಮುಂದುವರೆಸಿದ ಸಕಾಗುಚಿ, ಒಂದು ಸಣ್ಣ ಬದಲಾವಣೆಯನ್ನು ಮಾಡಿದರು. ಹುಟ್ಟಿದ ತಕ್ಷಣವೇ ಥೈಮಸ್ ಗ್ರಂಥಿಯನ್ನು ತೆಗೆದ ಹಾಗೂ ಮೂರು ದಿನಗಳ ನಂತರ ಥೈಮಸ್ ಗ್ರಂಥಿಯನ್ನು ಕಿತ್ತ ಇಲಿಮರಿಗಳಿಗೆ, ಬೇರೆ ಇಲಿಗಳಿಂದ ಹೆಕ್ಕಿದ ಬಿಳಿರಕ್ತಕೋಶಗಳನ್ನು ಚುಚ್ಚಿದ. ಥೈಮಸ್ ಗ್ರಂಥಿಯನ್ನು ಆರಂಭದಲ್ಲಿಯೇ ಕಿತ್ತೊಗೆದ ಇಲಿಗಳಲ್ಲಿ ಏನೂ ಬದಲಾವಣೆ ಕಾಣಲಿಲ್ಲ. ಆದರೆ ಮೂರು ದಿನಗಳ ನಂತರ ಕಿತ್ತೊಗೆದವುಗಳಲ್ಲಿ ಯಾವುದೇ ಆಟೊ ಇಮ್ಯೂನ್ ಕಾಯಿಲೆಗಳು ತೋರಲಿಲ್ಲ. ಜೊತೆಗೆ ಅವುಗಳ ರಕ್ತದಲ್ಲಿ ಬಿಳಿರಕ್ತಕೋಶಗಳ ಸಂಖ್ಯೆ ಹಾಗೂ ವೈವಿಧ್ಯವೂ ಎಂದಿನಂತೆ ಇತ್ತು. ಥೈಮಸ್ ಗ್ರಂಥಿಯಲ್ಲಿ ಸ್ವಂತ ನಾಶಕಕೋಶಗಳು ಹುಟ್ಟುತ್ತವೆ. ಆದರೆ ಅವು ಕೆಲಸ ಮಾಡದಂತೆ ಏನೋ ತಡೆಯುತ್ತದೆ ಎಂಬುದು ಸ್ಪಷ್ಟವಾಯಿತು. ತದನಂತರ ಈ ಕೋಶಗಳ ಸ್ವರೂಪವೂ ಬಯಲಾಯಿತು.

ಹೀಗೆ ಥೈಮಸ್ ಕೋಶಗಳು ಅಥವಾ ಟಿ-ಕೋಶಗಳು ಎನ್ನುವ ಜೀವಕೋಶಗಳ ಪತ್ತೆಯಾಯಿತು. ಅವುಗಳಲ್ಲಿ ಇರುವ ವೈವಿಧ್ಯವೂ ಪತ್ತೆಯಾಯಿತು. ಅವುಗಳಲ್ಲಿ ಒಂದು ಬಗೆ (ಸಪ್ರೆಸರ್ ಟಿ-ಕೋಶಗಳು) ದೇಹದ ರೋಗನಿರೋಧಕ ವ್ಯವಸ್ಥೆಯನ್ನು ಹದ್ದುಬಸ್ತಿನಲ್ಲಿ ಇಡುತ್ತವೆ ಎಂಬುದೂ ಸ್ಪಷ್ಟವಾಯಿತು. ಈ ಎಲ್ಲ ಅಂಶಗಳೂ ಸ್ಪಷ್ಟವಾಗುವುದಕ್ಕೆ ಎಲ್ಲರೂ ಕೈಬಿಟ್ಟ ಪ್ರಯೋಗಗಳನ್ನು, ತತ್ವಗಳನ್ನು ಮರುಪರಿಶೀಲಿಸುವ ಸಾಹಸ ಮಾಡಿದ ಸಕಾಗುಚಿಯ ಸಂಶೋಧನೆಗಳು ಕಾರಣವಾದವು. ❖

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ-ಪಿಯುಸಿ ಪರೀಕ್ಷೆ ದಿಕ್ಸೂಚಿ

ವಿಜ್ಞಾನ

ವಿದ್ಯುಚ್ಛಕ್ತಿ

40) ವಿದ್ಯುತ್ ಸಾಮರ್ಥ್ಯದ ಬಗ್ಗೆ ಬರೆಯಿರಿ.

ಉತ್ತರ:– (……ಹಿಂದಿನ ಸಂಚಿಕೆಯಿಂದ)

ವಿದ್ಯುತ್ ಸಾಮರ್ಥ್ಯದ SI ಏಕಮಾನ ವ್ಯಾಟ್ (W)

'ವ್ಯಾಟ್'' ಏಕಮಾನವು ತುಂಬಾ ಚಿಕ್ಕದು. ಆದ್ದರಿಂದ ವಾಸ್ತವವಾಗಿ ರೂಢಿಯಲ್ಲಿ ನಾವು ಕಿಲೋವ್ಯಾಟ್ ಎಂಬ ದೊಡ್ಡ ಏಕಮಾನ ಬಳಸುತ್ತೇವೆ, ಇದು 1000 ವ್ಯಾಟ್‌ಗಳಿಗೆ ಸಮ.

ವಿದ್ಯುತ್ ಶಕ್ತಿಯ ವ್ಯವಹಾರಿಕ ಏಕಮಾನ ಕಿಲೋವ್ಯಾಟ್ ಗಂಟೆ (kWh). ಸಾಮಾನ್ಯವಾಗಿ ಇದನ್ನು ' ಯೂನಿಟ್' ಎನ್ನುವರು.

41) ವಿಭವಾಂತರದ ಅಂತಾರಾಷ್ಟ್ರೀಯ ಏಕಮಾನ ಯಾವುದು? ವಿಭವಾಂತರವನ್ನು ಅಳೆಯಲು ಬಳಸುವ ಸಾಧನವನ್ನು ಹೆಸರಿಸಿ.

ಉತ್ತರ:– ವೋಲ್ಟ್

ವೋಲ್ಟ್ ಮೀಟರ್

42) (ಎ) ವಿದ್ಯುತ್ ಮಂಡಲದಲ್ಲಿ ವಿದ್ಯುತ್ ಉಪಕರಣಗಳನ್ನು ಸರಣಿಕ್ರಮದಲ್ಲಿ ಜೋಡಿಸುವ ಬದಲು ಸಮಾಂತರವಾಗಿ ಜೋಡಿಸುವುದರಿಂದ ಆಗುವ ಪ್ರಯೋಜನಗಳೇನು?(ಏಪ್ರಿಲ್–2022)

(ಬಿ) ಅಮ್ಮೀಟರ್ ಮತ್ತು ವೋಲ್ಟ್ ಮೀಟರ್‌ಗಳನ್ನು ವಿದ್ಯುತ್ ಮಂಡಲದಲ್ಲಿ ಹೇಗೆ ಜೋಡಿಸುತ್ತಾರೆ ? ಅವುಗಳ ಕಾರ್ಯಗಳೇನು?

ಉತ್ತರ:– (ಎ) ವಿದ್ಯುತ್ ಉಪಕರಣಗಳನ್ನು ಸಮಾಂತರ ಕ್ರಮದಲ್ಲಿ ಜೋಡಿಸಿದಾಗ

*ಸಮಾಂತರ ಮಂಡಲವು ವಿದ್ಯುತ್ ಉಪಕರಣಗಳ ಮೂಲಕ ವಿದ್ಯುತ್ ಪ್ರವಾಹವನ್ನು ವಿಭಜಿಸುತ್ತದೆ.

* ಒಂದು ಘಟಕ ವಿಫಲವಾದರೆ ಮಂಡಲವು ಮುಂದು ಹೋಗುವುದಿಲ್ಲ

* ಸಮಾಂತರ ಮಂಡಲದಲ್ಲಿ ಒಟ್ಟು ರೋಧ ಕಡಿಮೆಯಾಗುತ್ತದೆ, ಅದ್ದರಿಂದ ವಿದ್ಯುತ್ ಉಪಕರಣಗಳು ಅವುಗಳ ರೋಧಕ್ಕನುಗುಣವಾದ ವಿದ್ಯುತ್ ಪ್ರವಾಹವನ್ನು ಪಡೆಯುತ್ತವೆ.

(ಬಿ) * ಅಮ್ಮೀಟರ್ ಅನ್ನು ವಿದ್ಯುತ್ ಮಂದಲದಲ್ಲಿ ಸರಣಿ ಕ್ರಮದಲ್ಲಿ ಜೊಡಿಸುತ್ತಾರೆ.

* ವೋಲ್ಟ್ ಮೀಟರ್ ಅನ್ನು ವಿದ್ಯುತ್ ಮಂಡಲದಲ್ಲಿ ಸಮಾಂತರ ಕ್ರಮದಲ್ಲಿ ಜೋಡಿಸುತ್ತಾರೆ

* ಅಮ್ಮೀಟರ್ ವಿದ್ಯುತ್ ಮಂಡಲದಲ್ಲಿನ ವಿದ್ಯುತ್ ಪ್ರವಾಹದ ದರವನ್ನು ಅಳೆಯುತ್ತದೆ.

ವೋಲ್ಟ್ ಮೀಟರ್ ವಿದ್ಯುತ್ ಮಂಡಲದಲ್ಲಿನ ವಾಹಕದ ತುದಿಗಳ ನಡುಬಿನ ವಿಭವಾಂತರವನ್ನು ಅಳೆಯುತ್ತದೆ.

43) ವಿದ್ಯುತ್ ಕೋಶ, ವಿದ್ಯುತ್ ಬಲ್ಬ್, ಅಮ್ಮೀಟರ್ ಮತ್ತು ಪ್ಲಗ್ ಕೀ ಅವುಗಳನ್ನು ಒಳಗೊಂಡಿರುವ ವಿದ್ಯುತ್ ಮಂಡಲದ ರೇಖಾಚಿತ್ರವನ್ನು ಬರೆಯಿರಿ (ಏಪ್ರಿಲ್ 2022)

ಉತ್ತರ:–



ವಿದ್ಯುಚ್ಛಕ್ತಿ ಪ್ರವಾಹದ ಕಾಂತೀಯ ಪರಿಣಾಮಗಳು

1) ದಂಡ ಕಾಂತದ ಸುತ್ತ ಕಾಂತೀಯ ಬಲರೇಖೆಗಳನ್ನು ಎಳೆಯಿರಿ

ಉತ್ತರ:–



2) ಕಾಂತೀಯ ಬಲರೇಖೆಗಳ ಗುಣಗಳನ್ನು ಪಟ್ಟಿ ಮಾಡಿ

ಉತ್ತರ:– ಕಾಂತೀಯ ಬಲರೇಖೆಗಳ ಗುಣಗಳು

(1) ಕಾಂತೀಯ ಬಲರೇಖೆಗಳು ಆವೃತ ಜಾಲಗಳಾಗಿವೆ

(2) ಯಾವುದೇ ಎರಡು ಕಾಂತೀಯ ಬಲರೇಖೆಗಳು ಒಂದನ್ನೊಂದನ್ನು ಛೇದಿಸುವುದಿಲ್ಲ.

(3) ಕಾಂತೀಯ ರೇಖೆಗಳ ಸಾಂದ್ರತೆಯು ಹೆಚ್ಚಾಗಿದ್ದಲ್ಲಿ ಕಾಂತಕ್ಷೇತ್ರದ ಬಲವು ಹೆಚ್ಚಾಗಿರುತ್ತದೆ.

3) ಎರಡು ಕಾಂತೀಯ ಬಲ ರೇಖೆಗಳು ಒಂದನ್ನೊಂದು ಛೇದಿಸುವುದಿಲ್ಲ ಏಕೆ?

ಉತ್ತರ:– ಎರಡು ಕಾಂತೀಯ ಬಲರೇಖೆಗಳು ಒಂದನ್ನೊಂದು ಛೇದಿಸುವುದೇ ಇಲ್ಲ. ಇದು ಅಸಂಭವ ಹಾಗೆ ಛೇದಿಸಬೇಕಾದರೆ ಛೇದಿಸುವ ಬಿಂದುವಿನಲ್ಲಿ ಕಾಂತವು (ದಿಕ್ಸೂಚಿ) ಎರಡು ದಿಕ್ಕುಗಳನ್ನು ನಿರ್ದೇಶಿಸುತ್ತದೆ ಎಂಬ ಅರ್ಥ ಬರುತ್ತದೆ. ಇದು ಸಂಭವನೀಯವಲ್ಲ.

4) ಮೇಜಿನ ಸಮತಲದ ಮೇಲಿರುವ ಒಂದು ವೃತ್ತಾಕಾರದ ವಾಹಕ ಸುರುಳಿಯನ್ನು ಪರಿಗಣಿಸಿ. ಸುರುಳಿಯಲ್ಲಿ ವಿದ್ಯುತ್ ಪ್ರವಾಹವು ಪ್ರದಕ್ಷಿಣಾಕಾರವಾಗಿ ಪ್ರವಹಿಸುವಂತಿರಲಿ. ಬಲಗೈ ನಿಯಮ ಅನ್ವಯಿಸಿ ಸುರುಳಿಯ ಒಳಭಾಗ ಮತ್ತು ಹೊರಭಾಗದಲ್ಲಿ ಕಾಂತಕ್ಷೇತ್ರದ ದಿಕ್ಕನ್ನು ಕಂಡುಹಿಡಿಯಿರಿ.



ಉತ್ತರ:– ಈ ಪ್ರಯೋಗದಲ್ಲಿ ಒಳಭಾಗದಲ್ಲಿ ಕಾಂತಕ್ಷೇತ್ರದ ದಿಕ್ಕು ಸುರುಳಿಯಲ್ಲಿ ಅಂದರೆ ಮೇಲಿನ ಒಲಗಡೆ ಇರುತ್ತವೆ,

ಇದೇ ರೀತಿ ಹೊರಭಾಗದಲ್ಲಿ ಸುರುಳಿಯಿಂದ ಹೊರಗೆ ಅಂದರೆ ಮೇಲಿನ ಹೊರಗಡೆ ಕಾಂತಕ್ಷೇತ್ರವು ಇರುತ್ತದೆ.

5) ಕೊಟ್ಟಿರುವ ಪ್ರದೇಶದಲ್ಲಿನ ಕಾಂತಕ್ಷೇತ್ರವು ಏಕರೂಪವಾಗಿದೆ. ಇದನ್ನು ಪ್ರತಿನಿಧಿಸುವ ಚಿತ್ರವನ್ನು ರಚಿಸಿರಿ

ಉತ್ತರ:–

(ಮುಂದುವರಿಯುವುದು)

ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

CHEMISTRY

Alcohols, Phenols and Ethers

3(i) Draw the structures of all isomeric alcohols of molecular formula $C_5H_{12}O$ and give their IUPAC names.

(ii) Classify the isomers of alcohols in question.

Soln : (i) The structures & IUPAC names of all isomeric alcohols with a molecular formula of $C_5H_{12}O$ are shown below:

(a) CH_3-CH_2-CH_2-CH_2-CH_2-OH

Pentan – 1 – ol (1 °)



2 – Methylbutan – 2 – ol (3 °)

(ii)Primary alcohol: Pentan –1– ol ; 2– Methylbutan–1 –ol ; 3 – Methylbutan – 1 – ol ; 2, 2 – Dimethylpropan – 1 – ol

Secondary alcohol: Pentan – 2–ol; 3– Methylbutan –2 –ol ; Pentan – 3 – ol

Tertiary alcohol: 2 – methylbutan – 2 – ol

***4:* Explain why propanol has higher boiling point than that of the hydrocarbon, butane.**

Soln: The presence of – OH group makes Propanol undergo intermolecular H-bonding. Butane, while on the other side does not have the same privilege



Hence, additional energy would be required to break the intermolecular hydrogen bonds.

This is the reason why hydrocarbon butane has a lower boiling point than propanol.

***5* :Alcohols are comparatively more soluble in water than hydrocarbons of comparable molecular masses. Explain this fact.**

***Soln* :** Due to the presence of – OH group, alcohols form H – bonds with water.



As a result, alcohols are comparatively more soluble in water than hydrocarbons of comparable molecular masses.

***6:* What is meant by the hydroboration-oxidation reaction? Illustrate it with an example.**

Soln : The hydroboration – oxidation reaction is the reaction where borane is added in order for the oxidation to take place. For example, propan –1– ol is formed by making propene undergo the hydroboration–oxidation reaction. In the above reaction, the reaction between propene and diborane $(BH_3)_2$ takes place in order to form **trialkyl borane** which acts an additional product. This additional product is oxidized to alcohol by hydrogen peroxide in the presence of aqueous sodium hydroxide.



***15.*Explain why ortho nitrophenol is more acidic than ortho methoxyphenol.**

Soln : The nitro – group is an electron-withdrawing group. The existence of this group in the ortho position decreases the electron density in the O – H bond. Consequently, it is easier to give away a proton. Furthermore, the o-nitrophenoxide ion formed after the loss of protons is stabilized by resonance. Therefore, ortho nitrophenol is a stronger acid. In contrast, a methoxy group is an electron – releasing group. Thus, it increases the electron density in the O – H bond and thus, losing proton is not possible easily. Therefore, ortho – nitrophenol is more acidic than ortho – methoxyphenol.

ಚಿಟಿಕೆ ಸುದ್ದಿ

ಮುರುಘಾ ಶರಣರ ವಿರುದ್ಧದ ಪ್ರಕರಣ ಆದೇಶ ಇಂದು

ಶಿವಮೂರ್ತಿ ಶರಣರು

ಚಿತ್ರದುರ್ಗ: ಇಲ್ಲಿನ ಶಿವಮೂರ್ತಿ ಮುರುಘಾ ಶರಣರ ವಿರುದ್ಧದ ಮೊದಲ ಪೋಕ್ಸೊ ಪ್ರಕರಣದ ಆದೇಶವನ್ನು ಬುಧವಾರ (ನ. 26) 2ನೇ ಹೆಚ್ಚುವರಿ ಜಿಲ್ಲಾ ಮತ್ತು ಸಿವಿಲ್ ಕೋರ್ಟ್‌ನ ನ್ಯಾಯಾಧೀಶ ಗಂಗಾಧರಪ್ಪ ಹಡಪದ ಅವರು ಬೆಳಿಗ್ಗೆ 11ಕ್ಕೆ ಪ್ರಕಟಿಸಲಿದ್ದಾರೆ.

ಸುಪ್ರೀಂ ಕೋರ್ಟ್ ಸೂಚನೆಯಂತೆ ಶರಣರ ವಿರುದ್ಧ ದಾಖಲಾಗಿರುವ 2 ಪೋಕ್ಸೊ ಪ್ರಕರಣಗಳ ಪೈಕಿ ಮೊದಲ ಪ್ರಕರಣದ ಸುದೀರ್ಘ ವಿಚಾರಣೆ ನಡೆದಿದೆ. ಆರೋಪಿ, ಸಂತ್ರಸ್ತೆ ಹಾಗೂ ಸಾಕ್ಷಿಗಳ ವಿಚಾರಣೆ ನಡೆಸಲಾಗಿದೆ. ದೋಷಾರೋಪ ಪಟ್ಟಿಯ ಅಂಶಗಳಿಗೆ ಎರಡೂ ಕಡೆಯಿಂದ ಹೇಳಿಕೆ ದಾಖಲಿಸಿಕೊಳ್ಳಲಾಗಿದೆ. ಪಾಟಿ ಸವಾಲು ನಡೆಸಲಾಗಿದೆ.

‘ಭಾಸ್ಕರ’ ಪ್ರಶಸ್ತಿಗೆ ಕಾಕೋಡ್ಕರ್ ಆಯ್ಕೆ

ಅನಿಲ್ ಕಾಕೋಡ್ಕರ್

ಸಿಂದಗಿ (ವಿಜಯಪುರ ಜಿಲ್ಲೆ): ಪಟ್ಟಣದ ಸಾರಂಗಮಠ-ಗಚ್ಚಿನಮಠದ ಚೆನ್ನವೀರ ಸ್ವಾಮೀಜಿ ಪ್ರತಿಷ್ಠಾನ ನೀಡುವ 2025ರ ಭಾಸ್ಕರ ರಾಷ್ಟ್ರೀಯ ಪ್ರಶಸ್ತಿಗೆ ಪರಮಾಣು ವಿಜ್ಞಾನಿ ಮುಂಬೈನ ಅನಿಲ್ ಕಾಕೋಡ್ಕರ್ ಆಯ್ಕೆಯಾಗಿದ್ದಾರೆ. ಪ್ರಶಸ್ತಿ ₹1 ಲಕ್ಷ ನಗದು ಒಳಗೊಂಡಿದೆ ಎಂದು ಪ್ರತಿಷ್ಠಾನದ ಪ್ರಕಟಣೆ ತಿಳಿಸಿದೆ.

ಸಂಶೋಧನಾ ಕೇಂದ್ರ: ಕ್ರಮಕ್ಕೆ ನಿರ್ದೇಶನ

ಬೆಂಗಳೂರು: ‘ಸರ್ ಸೈಯದ್ ಅಹ್ಮದ್ ಖಾನ್ ಸಂಶೋಧನಾ ಕೇಂದ್ರದ ಕಾರ್ಯವೈಖರಿ ಕುರಿತು ಮಾಡಲಾಗಿರುವ ಆರೋಪಗಳನ್ನು ಪರಿಶೀಲಿಸಿ ಸೂಕ್ತ ಕ್ರಮ ಜರುಗಿಸಬೇಕು’ ಎಂದು ಹೈಕೋರ್ಟ್ ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿದೆ.

ಈ ಸಂಬಂಧ ಮೊಹಮ್ಮದ್ ವಜೀರ್ ಬೇಗ್ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

‘ಸಂಶೋಧನಾ ಕೇಂದ್ರದ ಕಾರ್ಯವೈಖರಿ ಬಗ್ಗೆ ಮಾಡಲಾಗಿರುವ ಆರೋಪಗಳನ್ನು ಪರಿಶೀಲಿಸಿ, ತಪ್ಪುಗಳು ಕಂಡುಬಂದರೆ ಅಗತ್ಯ ಕ್ರಮ ಕೈಗೊಳ್ಳಬೇಕು’ ಎಂದು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ನಿರ್ದೇಶನಾಲಯಕ್ಕೆ ನಿರ್ದೇಶಿಸಿ ಅರ್ಜಿ ವಿಲೇವಾರಿ ಮಾಡಿದೆ.

‘ಬಿಹಾರ ಮಾದರಿಯಲ್ಲಿ ಮದ್ಯ ನಿಷೇಧಿಸಿ’

‘ಬೆಂಗಳೂರು ಚಲೋ’ ಪ್ರತಿಭಟನೆ ಮಹಿಳೆಯರ ಒಕ್ಕೊರಲ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಗೃಹಲಕ್ಷ್ಮಿ ಯೋಜನೆಯಡಿ ಮಹಿಳೆಯರಿಗೆ ನೀಡುತ್ತಿರುವ ₹2 ಸಾವಿರ ನಿಲ್ಲಿಸಿದರೂ ಪರವಾಗಿಲ್ಲ, ಬಿಹಾರದ ಮಾದರಿಯಲ್ಲಿ ಕರ್ನಾಟಕದಲ್ಲೂ ಮದ್ಯ ನಿಷೇಧ ಜಾರಿ ಮಾಡಬೇಕು’ ಎಂದು ಮದ್ಯ ನಿಷೇಧ ಆಂದೋಲನದಲ್ಲಿ ಭಾಗವಹಿಸಿದ್ದ ಮಹಿಳೆಯರು ಒತ್ತಾಯಿಸಿದರು.

ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಮಂಗಳವಾರ ‘ಮದ್ಯ ನಿಷೇಧ ಆಂದೋಲನ ಸಂಘಟಿಸಿದ್ದ ‘ಬೆಂಗಳೂರು ಚಲೋ’ದಲ್ಲಿ ಭಾಗವಹಿಸಿದ್ದ ರಾಜ್ಯದ ನಾನಾ ಭಾಗಗಳ ಆರು ಸಾವಿರಕ್ಕೂ ಅಧಿಕ ಮಹಿಳೆಯರು, 25ಕ್ಕೂ ಹೆಚ್ಚು ಸಂಘಟನೆಗಳ ಕಾರ್ಯಕರ್ತರು ಒಕ್ಕೊರಲಿನಿಂದ ಈ ಆಗ್ರಹ ಮಾಡಿದರು.

ಶಾಸಕ ಬಿ.ಆರ್.ಪಾಟೀಲ ಮಾತನಾಡಿ, ‘ಬಿಹಾರದಲ್ಲಿ ನಿತೀಶ್ ಕುಮಾರ್ ಅವರು ಮದ್ಯ ನಿಷೇಧ ಮಾಡಿದ್ದಾರೆ. ಆ ರಾಜ್ಯದಲ್ಲಿ ಈಗ ಶೇ 70ರಷ್ಟು ಮದ್ಯ ಮಾರಾಟ ನಿಯಂತ್ರಣದಲ್ಲಿದೆ. ಇದೇ ಮಾದರಿಯಲ್ಲಿ ಸಿದ್ದರಾಮಯ್ಯ ಅವರೂ ಕರ್ನಾಟಕದಲ್ಲಿ ಮದ್ಯ ನಿಯಂತ್ರಣಕ್ಕೆ ಕಾನೂನು ಜಾರಿಗೊಳಿಸಬೇಕು’ ಎಂದು ಒತ್ತಾಯಿಸಿದರು.

‘ಇದು ಹಲವು ವರ್ಷಗಳಿಂದ ನಡೆದಿರುವ ಹೋರಾಟ. ಅಧಿವೇಶನದಲ್ಲೂ ಈ ವಿಚಾರ ಪ್ರಸ್ತಾಪಿಸಿದ್ದೇನೆ. ಸರ್ಕಾರದ ಇತಿಮಿತಿ ಗೊತ್ತಿದ್ದರೂ ಜನರ ಹಿತದೃಷ್ಟಿಯಿಂದ ಇದು ಜಾರಿಯಾಗುವುದು ಒಳ್ಳೆಯದು. ಪ್ರಧಾನಿ ನರೇಂದ್ರ ಮೋದಿ ಅವರು ದೇಶದಾದ್ಯಂತ ಪಾನ ನಿಷೇಧ ಜಾರಿಗೊಳಿಸಲು ಯೋಚಿಸಬೇಕು’ ಎಂದು ಪಾಟೀಲ ಆಗ್ರಹಿಸಿದರು.

ಸಾಣೇಹಳ್ಳಿ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ‘ಜನರು ಸರ್ಕಾರದಿಂದ ಸಿಗುವ ಲಾಭದ ಬದಲು ನೆಮ್ಮದಿಯ ಬದುಕು ಬಯಸುತ್ತಿದ್ದಾರೆ. ಯೋಜನೆಗಳನ್ನು ಜಾರಿ ಮಾಡುವ ನೆಪದಲ್ಲಿ ಸರ್ಕಾರಗಳು ಮದ್ಯ ಮಾರಾಟ ಹೆಚ್ಚಿಸುತ್ತಿವೆ. ಜನರ ಹಣ, ಆರೋಗ್ಯ, ನೆಮ್ಮದಿ ಹಾಳು ಮಾಡುತ್ತಿರುವ ಮದ್ಯವನ್ನು ದೇಶದಾದ್ಯಂತ ನಿಷೇಧಿಸಬೇಕು’ ಎಂದು ಆಗ್ರಹಿಸಿದರು.

ಮಹಿಳಾ ಸಂಘಟನೆಯ ಜ್ಯೋತಿ ಮಾತನಾಡಿ, ‘ಬಿಹಾರದಲ್ಲಿ ನಿತೀಶ್ ಕುಮಾರ್ ಅವರು ಮದ್ಯ ನಿಷೇಧ ಮಾಡಿದ್ದರಿಂದಲೇ ಮಹಿಳೆಯರು ಅವರಿಗೆ ಈ ಬಾರಿ ಚುನಾವಣೆಯಲ್ಲಿ ಹೆಚ್ಚಿನ ಮತ ನೀಡಿ ಅಧಿಕಾರಕ್ಕೆ ತಂದಿದ್ದಾರೆ. ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರ ಇಂತಹ ನಿರ್ಧಾರ ಮಾಡದೇ ಇದ್ದರೆ, ಮಹಿಳೆಯರು ಮತದಾನದ ವೇಳೆ ಯೋಚನೆ ಮಾಡಬೇಕಾಗುತ್ತದೆ’ ಎಂದರು.

ಪಾಂಡೋಮಟ್ಟಿ ಗುರುಬಸವ ಸ್ವಾಮೀಜಿ, ಮದ್ಯಪಾನ ಸಂಯಮ ಮಂಡಳಿ ಅಧ್ಯಕ್ಷ ಶರಣಪ್ಪ ಸಲಾದಪುರ, ರೈತ ನಾಯಕ ಎಚ್.ಆರ್.ಬಸವರಾಜಪ್ಪ, ಮದ್ಯಪಾನ ನಿಷೇಧ ಹೋರಾಟದ ಸಂಘಟಕಿ ಸ್ವರ್ಣಭಟ್ ಸೇರಿದಂತೆ ಹಲವರು ಮಾತನಾಡಿದರು.

ಸಂಯುಕ್ತ ಹೋರಾಟ ಸಮಿತಿ, ಲೈಂಗಿಕ ಅಲ್ಪಸಂಖ್ಯಾತ ಒಕ್ಕೂಟ, ಬೀದಿ ಶ್ರಮಿಕರ ಸಂಘ, ದಲಿತ ಸಂಘಟನೆಗಳು, ಮಹಿಳಾ ಸಂಘಟನೆಗಳು, ಸ್ಲಂ ಜನಾಂದೋಲನ, ಕರ್ನಾಟಕ ರಾಷ್ಟ್ರ ಸಮಿತಿ ಹೋರಾಟಕ್ಕೆ ಬೆಂಬಲ ಸೂಚಿಸಿದವು.

ಮುಖ್ಯಮಂತ್ರಿ ಭರವಸೆ

ಸಮಾಜ ಕಲ್ಯಾಣ ಸಚಿವ ಎಚ್.ಸಿ.ಮಹದೇವಪ್ಪ ಅವರು ಮಹಿಳೆಯರು ನಡೆಸುತ್ತಿರುವ ಹೋರಾಟದ ಸ್ಥಳಕ್ಕೆ ಭೇಟಿ ನೀಡಿ ಮನವಿ ಸ್ವೀಕರಿಸಿದರು.

ಬಳಿಕ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿದ ಮದ್ಯ ನಿಷೇಧ ಆಂದೋಲನದ ಸದಸ್ಯರು ತಮ್ಮ ಬೇಡಿಕೆಗಳನ್ನು ಸಲ್ಲಿಸಿದರು. ನಿಯೋಗದ ಜೊತೆ ಚರ್ಚಿಸಿದ ಸಿದ್ದರಾಮಯ್ಯ, ‘ಹೋರಾಟಗಾರರ ಬೇಡಿಕೆಗಳನ್ನು ಪರಿಶೀಲಿಸಲಾಗುವುದು’ ಎಂದು ಭರವಸೆ ನೀಡಿದರು.

ಮದ್ಯ ನಿಷೇಧ ಆಂದೋಲನದ ಕಾರ್ಯಕರ್ತೆಯರು ಮದ್ಯ ನಿಷೇಧಕ್ಕೆ ಆಗ್ರಹಿಸಿ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದರು. ಚಿತ್ರ–ಕಿಶೋರ್ ಕುಮಾರ್ ಬೋಳಾರ್

ಎರಡು ಬೇಡಿಕೆ ಈಡೇರಿಕೆಗೆ ಆಗ್ರಹ

- ಮದ್ಯ ಮಾರಾಟಕ್ಕೆ ಪರವಾನಗಿ ಪಡೆಯಲು ಹರಿಯಾಣ, ಮಹಾರಾಷ್ಟ್ರ, ರಾಜಸ್ಥಾನ ರಾಜ್ಯಗಳಲ್ಲಿ ಗ್ರಾಮ ಸಭೆಗಳಿಗೆ ಪರಮಾಧಿಕಾರ ನೀಡಲಾಗಿದೆ. ಗ್ರಾಮ ಸಭೆಯಲ್ಲಿ ಶೇ 20ರಷ್ಟು ಒಪ್ಪಿಗೆ ನೀಡಿದರೆ ಮಾತ್ರ ಮದ್ಯದಂಗಡಿ ತೆರೆಯಲು ಪಂಚಾಯತ್ ರಾಜ್ ಕಾನೂನಿನಲ್ಲಿ ಅವಕಾಶ ಮಾಡಿಕೊಡಲಾಗಿದೆ. ಕರ್ನಾಟಕದಲ್ಲೂ ಇಂತಹ ಕಾನೂನು 2016ರವರೆಗೆ ಇತ್ತು. ಆ ನಂತರ ತೆಗೆದು ಹಾಕಿದ್ದು, ಅದನ್ನು ಮರು ಜಾರಿಗೊಳಿಸಬೇಕು
- ಮನೆಗಳು, ಕಿರಾಣಿ ಅಂಗಡಿ, ಪಾನ್ ಶಾಪ್, ಗೂಡಂಗಡಿಗಳಲ್ಲಿ ಈಗಲೂ ಅಕ್ರಮವಾಗಿ ಮದ್ಯ ಮಾರಾಟವಾಗುತ್ತಿದೆ. ಇದನ್ನು ತಡೆಯಲು ಪ್ರತಿ ಹಳ್ಳಿಯಲ್ಲೂ ಜಾಗೃತಿ ಸಮಿತಿಗಳಿಗೆ ಅರೆನ್ಯಾಯಿಕ ಅಧಿಕಾರ ನೀಡಬೇಕು. ಪಂಚಾಯತ್ ರಾಜ್ ಕಾನೂನಿನಲ್ಲಿ ಹೆಚ್ಚುವರಿ ಸಮಿತಿ ರಚನೆಗೆ ಅವಕಾಶವಿದ್ದು, ಅನುಷ್ಠಾನಗೊಳಿಸಬೇಕು.

ಐಎಎಸ್ ಅಧಿಕಾರಿ ಬೀಳಗಿ ಸೇರಿ ಮೂವರ ಸಾವು

ಎರಡನೇ ಮುಖಪುಟದಿಂದ...

2006ನೇ ತಂಡದ ಕೆಎಎಸ್ ಅಧಿಕಾರಿಯಾದ ಮಹಾಂತೇಶ ಬೀಳಗಿ ಅವರು, 2012ರಲ್ಲಿ ಐಎಎಸ್‌ಗೆ ಬಡ್ತಿ ಹೊಂದಿದ್ದರು. ಧಾರವಾಡ ಉಪವಿಭಾಗಾಧಿಕಾರಿ, ಬೀದರ್ ಜಿ.ಪಂ. ಸಿಇಒ, ದಾವಣಗೆರೆ ಜಿಲ್ಲಾಧಿಕಾರಿ, ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕರಾಗಿ ಕಾರ್ಯನಿರ್ವಹಿಸಿ ಪ್ರಸ್ತುತ ಖನಿಜ ನಿಗಮದ ವ್ಯವಸ್ಥಾಪಕ ನಿರ್ದೇಶಕರಾಗಿ ಕಾರ್ಯನಿರ್ವಹಿಸುತ್ತಿದ್ದರು.

ಕರ್ನಾಟಕ ವಿ.ವಿ.ಯ ಇಂಗ್ಲಿಷ್ ವಿಭಾಗದಿಂದ ಚಿನ್ನದ ಪದಕದೊಂದಿಗೆ ಸ್ನಾತಕೋತ್ತರ ಪದವಿ ಪಡೆದಿದ್ದ ಬೀಳಗಿ ಅವರು ಕಡುಬಡತನದಲ್ಲಿ ಬೆಳೆದು ಬಂದಿದ್ದರು. ಹೀಗಾಗಿ, ಧಾರವಾಡದಲ್ಲಿ ಇಂಗ್ಲಿಷ್ ಟ್ಯೂಷನ್ ಹೇಳುತ್ತಿದ್ದರು. ಬಡತನವನ್ನು ಮೆಟ್ಟಿನಿಂತು ಅಧಿಕಾರಿಯಾಗಿ ಬೆಳೆದ ಬಗೆಗಿನ ಅವರ ಭಾಷಣದ ವಿಡಿಯೊಗಳು ಹಲವು ಜನರಿಗೆ ಸ್ಫೂರ್ತಿಯಾಗಿದ್ದವು.

ಕಲಬುರಗಿಯ ಜಿಮ್ಸ್‌ನಲ್ಲಿ ಮರಣೋತ್ತರ ಪರೀಕ್ಷೆ ನಡೆಸಿದ ಬಳಿಕ ಮೂವರ ಪಾರ್ಥಿವ ಶರೀರಗಳನ್ನು ರಾಮದುರ್ಗಕ್ಕೆ ಕಳುಹಿಸಲಾಗುವುದು ಎಂದು ಜಿಲ್ಲಾಧಿಕಾರಿ ಬಿ.ಫೌಜಿಯಾ ತರನ್ನುಮ್ ‘ಪ್ರಜಾವಾಣಿ’ಗೆ ಮಾಹಿತಿ ನೀಡಿದರು.

ಸಾವಿನ ಸುದ್ದಿ ತಿಳಿದಂತೆಯೇ ಕಲಬುರಗಿ ಪ್ರಾದೇಶಿಕ ಆಯುಕ್ತೆ ಜಹೀರಾ ನಸೀಮ್, ಜಿಲ್ಲಾಧಿಕಾರಿ ಬಿ.ಫೌಜಿಯಾ ತರನ್ನುಮ್, ಈಶಾನ್ಯ ವಲಯದ ಡಿಐಜಿಪಿ ಶಾಂತನು ಸಿನ್ಹಾ, ಎಸ್‌ಪಿ ಅಡ್ಡೂರು ಶ್ರೀನಿವಾಸಲು ಆಸ್ಪತ್ರೆಗೆ ಭೇಟಿ ನೀಡಿ ಕುಟುಂಬದ ಸದಸ್ಯರಿಗೆ ಸಾಂತ್ವನ ಹೇಳಿದರು.

> ಕಾರಿನಲ್ಲಿ ಒಟ್ಟು ಐವರಿದ್ದರು. ಅದರಲ್ಲಿ ಮಹಾಂತೇಶ ಬೀಳಗಿ ಸೇರಿದಂತೆ ಮೂವರು ಮೃತಪಟ್ಟಿದ್ದು, ಇಬ್ಬರಿಗೆ ಚಿಕಿತ್ಸೆ ನೀಡಲಾಗುತ್ತಿದೆ. ಒಬ್ಬರ ಸ್ಥಿತಿ ಗಂಭೀರವಾಗಿದೆ
> **ಅಡ್ಡೂರು ಶ್ರೀನಿವಾಸಲು,** ಕಲಬುರಗಿ ಎಸ್‌ಪಿ

ಪ್ರಜಾವಾಣಿ ಪತ್ರಿಕೆ ಚಂದಾದಾರರಾಗಲು/ದೂರುಗಳಿಗೆ
(ಪತ್ರಿಕೆ ಬಾರದಿರುವುದು, ತಡವಾಗಿ ಪತ್ರಿಕೆ ಬರುವುದು, ಬೇರೆ ಪತ್ರಿಕೆ ಹಾಕುವುದು ಇತ್ಯಾದಿ)
ಸಂಪರ್ಕಿಸಿ
90083 66666
support@deccanherald.co.in
ಸಂಪರ್ಕಿಸಲು ಕೋಡ್ ಸ್ಕ್ಯಾನ್ ಮಾಡಿ ಅಥವಾ ಕೆಳಗಿನ ಲಿಂಕ್‌ಗೆ ಭೇಟಿಮಾಡಿ
https://bit.ly/40dPCqy

ಆಭರಣ ದರೋಡೆ, ಐಜಿ ಸ್ಕ್ವಾಡ್ ಹೆಸರಿನಲ್ಲಿ ಕೃತ್ಯ

ಇಬ್ಬರು ಎಸ್‌ಐ ಸೇರಿ 7 ಬಂಧನ

ಪ್ರಜಾವಾಣಿ ವಾರ್ತೆ

ದಾವಣಗೆರೆ: ಆಭರಣ ತಯಾರಕರೊಬ್ಬರಿಂದ ₹ 7.50 ಲಕ್ಷ ಮೌಲ್ಯದ ಚಿನ್ನಾಭರಣ ದರೋಡೆ ಮಾಡಿದ್ದ ಪ್ರಕರಣದಲ್ಲಿ ಕೆಟಿಜೆ ನಗರ ಠಾಣೆ ಪೊಲೀಸರು, ಇಬ್ಬರು ಸಬ್ ಇನ್‌ಸ್ಪೆಕ್ಟರ್ ಸೇರಿ ಏಳು ಜನರನ್ನು ಮಂಗಳವಾರ ಬಂಧಿಸಿದ್ದಾರೆ.

ಹಾವೇರಿ ಜಿಲ್ಲೆಯ ಹಂಸಬಾವಿ ಠಾಣೆಯಿಂದ ವರ್ಗಾವಣೆಗೊಂಡಿದ್ದ ಪಿಎಸ್‌ಐ ಮಾಳಪ್ಪ ಚಿಪ್ಪಲಕಟ್ಟಿ ಹಾಗೂ ರಾಣೆಬೆನ್ನೂರು ಸಂಚಾರ ಠಾಣೆಯಿಂದ ವರ್ಗಾವಣೆಗೊಂಡಿದ್ದ ಪ್ರವೀಣ್‌ಕುಮಾರ್, ಚಿನ್ನದ ಅಂಗಡಿ ಮಾಲೀಕರಾದ ಸತೀಶ್ ರೇವಣಕರ್, ನಾಗರಾಜ್ ರೇವಣಕರ್, ದುಂಡೆಪ್ಪ, ನಾಗೇಶ್ ಹಾಗೂ ದಿಲ್ಲಪ್ಪ ಬಂಧಿತರು.

ಸಾಗರಕ್ಕೆ ಮತ್ತು ದಾವಣಗೆರೆ ಐ.ಜಿ. ಕಚೇರಿಗೆ ವರ್ಗಾವಣೆಗೊಂಡಿದ್ದ ಈ ಇಬ್ಬರೂ ಪಿಎಸ್‌ಐಗಳು ಕರ್ತವ್ಯಕ್ಕೆ ವರದಿ ಮಾಡಿಕೊಂಡಿರಲಿಲ್ಲ.

ಬಂಧಿತರಿಂದ 78 ಗ್ರಾಂ ಚಿನ್ನಾಭರಣ, ಕೃತ್ಯಕ್ಕೆ ಬಳಸಿದ ಎರಡು ಏರ್‌ಗನ್ ಹಾಗೂ 3 ಕಾರುಗಳನ್ನು ವಶಕ್ಕೆ ಪಡೆಯಲಾಗಿದೆ. ಕಾರವಾರದ ಆಭರಣ ತಯಾರಕ ವಿಶ್ವನಾಥ್ ಅರ್ಕಸಾಲಿ ಅವರನ್ನು ಸೋಮವಾರ ನಸುಕಿನಲ್ಲಿ ಆರೋಪಿಗಳು ದರೋಡೆ ಮಾಡಿದ್ದರು.

ಮಂಡಿಪೇಟೆ, ಹಳೆಪೇಟೆಯ ಆಭರಣ ಮಾರಾಟಗಾರರಿಂದ ಚಿನ್ನದ ಗಟ್ಟಿ ಹಾಗೂ ಹಳೆಯ ಉಂಗುರುಗಳನ್ನು ಸಂಗ್ರಹಿಸಿದ ವಿಶ್ವನಾಥ್, ನ.23ರ ಮಧ್ಯರಾತ್ರಿ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣಕ್ಕೆ ಬಂದಿದ್ದರು. ಕಾರವಾರಕ್ಕೆ ಮರಳಲು ಹುಬ್ಬಳ್ಳಿ ಮಾರ್ಗದ ಬಸ್ ಏರಿದ ಇವರನ್ನು ಪಿಎಸ್‌ಐಗಳು ವಶಕ್ಕೆ ಪಡೆದು ಕೆಟಿಜೆ ನಗರ ಪೊಲೀಸ್ ಠಾಣೆಗೆ ಕರೆತಂದು ಬೆದರಿಸಿದ್ದರು.

‘ಐಜಿ ಸ್ಕ್ವಾಡ್ ಹೆಸರಿನಲ್ಲಿ ಕೆಟಿಜೆ ನಗರ ಠಾಣೆ ಪೊಲೀಸರನ್ನು ಪರಿಚಯಿಸಿಕೊಂಡಿದ್ದರು. ಗೋವಾ, ದುಬೈಗೆ ಚಿನ್ನಾಭರಣ ಕಳ್ಳಸಾಗಣೆ ಮಾಡುತ್ತಿದ್ದೀಯಾ? ಎಂದು ವಿಶ್ವನಾಥ್ ಅವರನ್ನು ಹೆದರಿಸಿದ್ದರು’ ಎಂದು ಎಸ್‌ಪಿ ಉಮಾ ಪ್ರಶಾಂತ್ ಮಾಹಿತಿ ನೀಡಿದ್ದಾರೆ.

‘ವಿಶ್ವನಾಥ್ ಅವರಿಗೆ ಏರ್‌ಗನ್ ತೋರಿಸಿ ಮತ್ತೆ ಬೆದರಿಸಿದ್ದು, ಪ್ರಕರಣ ದಾಖಲಿಸದಿರಲು ಚಿನ್ನಾಭರಣ ನೀಡಲು ಪೀಡಿಸಿ 78 ಗ್ರಾಂ ಚಿನ್ನಾಭರಣ, ಚಿನ್ನದಗಟ್ಟಿ ಕಸಿದುಕೊಂಡಿದ್ದರು. ಈ ಯಾರಿಗೂ ಮಾಹಿತಿ ನೀಡದಂತೆ ಎಚ್ಚರಿಸಿ, ಬಸ್ ನಿಲ್ದಾಣಕ್ಕೆ ಕರೆದೊಯ್ದು ಬಿಟ್ಟಿದ್ದರು.

‘ಆತಂಕಗೊಂಡ ವಿಶ್ವನಾಥ್, ಈ ಕುರಿತು ಮನೆಗೆ ಮಾಹಿತಿ ನೀಡಿ ಸೋಮವಾರ ರಾತ್ರಿ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ. ಚಿನ್ನದ ಅಂಗಡಿಯ ಮಾಲೀಕರೇ ವಿಶ್ವನಾಥ್ ಬಗ್ಗೆ ಪಿಎಸ್‌ಐಗಳಿಗೆ ಮಾಹಿತಿ ನೀಡಿದ್ದರು ಎಂಬುದು ತನಿಖೆಯಿಂದ ಗೊತ್ತಾಗಿದೆ.

ಸುಳ್ಳು ಮಾಹಿತಿ ನೀಡಿದ್ದರು

ಮಾಳಪ್ಪ ಚಿಪ್ಪಲಕಟ್ಟಿ

ಪ್ರವೀಣ್ ಕುಮಾರ್

‘ವಿಶ್ವನಾಥ್ ಅವರನ್ನು ಹೆದರಿಸಲು ಆರೋಪಿಗಳು ಕೆಟಿಜೆ ನಗರ ಪೊಲೀಸ್ ಠಾಣೆಗೆ ಕರೆತಂದಿದ್ದರು. ಠಾಣೆ ಪೊಲೀಸರು ಹಿರಿಯ ಅಧಿಕಾರಿಗಳಿಗೆ ತಿಳಿಸಿದ್ದರು. ಸೋಮವಾರ ಇಬ್ಬರು ಪಿಎಸ್‌ಐಗಳನ್ನು ಠಾಣೆಗೆ ಕರೆಸಿ ವಿಚಾರಣೆ ನಡೆಸಿದ್ದು, ಸುಳ್ಳು ಮಾಹಿತಿ ನೀಡಿದ್ದರು’ ಎಂದು ಎಸ್‌ಪಿ ತಿಳಿಸಿದ್ದಾರೆ.

‘ಪ್ರಕರಣ ದಾಖಲಿಸಿದ ಬಳಿಕ ಕ್ಷಿಪ್ರ ತನಿಖೆ ನಡೆಸಲಾಯಿತು. 30 ದಿನಗಳಲ್ಲಿ ಆರೋಪಪಟ್ಟಿ ಸಲ್ಲಿಸಲು ಸಿದ್ಧತೆ ನಡೆದಿದೆ ಎಂದು ವಿವರಿಸಿದ್ದಾರೆ.

‘ಎಐ’ ಮನುಷ್ಯರ ಸೃಷ್ಟಿಸಿ ಜೂಜು, ಸಾವಿರಾರು ಕೋಟಿ ವಂಚನೆ

ಎರಡನೇ ಮುಖಪುಟದಿಂದ...

ಈ ಆ್ಯಪ್‌ಗಳನ್ನು ನಡೆಸುತ್ತಿರುವ ವಿನ್‌ಝೋ ಗೇಮ್ಸ್ ಪ್ರೈ.ಲಿಮಿಟೆಡ್ ಮತ್ತು ನಿರ್ದೇಸ ನೆಟ್‌ವರ್ಕ್ಸ್ ಪ್ರೈ. ಲಿಮಿಟೆಡ್ ವಿರುದ್ಧ ಇ.ಡಿ ಎರಡು ಪ್ರತ್ಯೇಕ ಪ್ರಕರಣಗಳನ್ನು ದಾಖಲಿಸಿಕೊಂಡಿತ್ತು.

ಈ ಎರಡೂ ಕಂಪನಿಗಳು ದೆಹಲಿ ಮತ್ತು ಗುರುಗ್ರಾಮದಲ್ಲಿ ಕಚೇರಿಗಳನ್ನು ಹೊಂದಿದ್ದು, ಆ ಕಚೇರಿಗಳ ಮೇಲೆ ಇದೇ 18ರಂದು ದಾಳಿ ನಡೆಸಿದ್ದ ಇ.ಡಿ ಅಧಿಕಾರಿಗಳು 22ರವರೆಗೆ ಶೋಧ ನಡೆಸಿದ್ದರು. ಎರಡೂ ಕಂಪನಿಗಳು ಮನುಷ್ಯರ ಹೆಸರಿನಲ್ಲಿ ಎಐ (ಕೃತಕ ಬುದ್ಧಿಮತ್ತೆ) ಖಾತೆಗಳನ್ನು ಸೃಷ್ಟಿಸಿ, ಚಂದಾದಾರರು ಎಐಗಳ ಜತೆಗೆ ಆಡುವಂತೆ ಮಾಡಿದ್ದರು ಎಂಬುದು ಶೋಧದ ವೇಳೆ ಪತ್ತೆಯಾಗಿದೆ.

ಎರಡೂ ಗೇಮಿಂಗ್ ಆ್ಯಪ್‌ಗಳಿಗೆ ಲಕ್ಷಕ್ಕೂ ಹೆಚ್ಚು ಚಂದಾದಾರರು ಇದ್ದಾರೆ. ಈ ಚಂದಾದಾರರು ಪರಸ್ಪರರ ವಿರುದ್ಧ ಆಟ ಆಡಬಹುದಾಗಿದೆ. ಆದರೆ ಕಂಪನಿಗಳು ತಾವೇ ಎಐ ಚಂದಾದಾರರನ್ನು ಸೃಷ್ಟಿಸಿ, ನೈಜ ಚಂದಾದಾರರು ಅವುಗಳ ಜತೆಗೆ ಆಟವಾಡುವಂತೆ ವ್ಯವಸ್ಥೆ ಮಾಡಿದ್ದರು. ಆದರೆ ನೈಜ ಚಂದಾದಾರರು ತಾವು ಮನುಷ್ಯರೊಂದಿಗೇ ಆಟವಾಡುತ್ತಿದ್ದೇವೆ ಎಂದು ತಿಳಿದುಕೊಂಡು, ಜೂಜಾಡುತ್ತಿದ್ದರು. ಈ ರೀತಿಯ ಮೋಸದ ಆಟದ ಬಹುತೇಕ ಸಂದರ್ಭದಲ್ಲಿ ನೈಜ ಚಂದಾದಾರರು ಸೋತಿದ್ದು, ಸಾವಿರ ಕೋಟಿ ರೂಪಾಯಿ ಹಣ ಕಳೆದುಕೊಂಡಿದ್ದಾರೆ.

ವಿನ್‌ಝೋ ಗೇಮ್ಸ್ ಪ್ರೈ.ಲಿಮಿಟೆಡ್ ಭಾರತದಲ್ಲಿ ತನ್ನ ಚಂದಾದಾರರಿಂದ ಸಂಗ್ರಹಿಸಿದ ಹಣವನ್ನು ಅಮೆರಿಕದಲ್ಲಿನ ತನ್ನ ಬ್ಯಾಂಕ್ ಖಾತೆಗೆ ವರ್ಗಾವಣೆ ಆಗುವಂತೆ ವ್ಯವಸ್ಥೆ ಮಾಡಿಕೊಂಡಿತ್ತು. ಈ ಕಂಪನಿಗೆ ಸೇರಿದ ₹505 ಕೋಟಿ ಮೊತ್ತದ ಬ್ಯಾಂಕ್ ಠೇವಣಿ, ಷೇರು ಮತ್ತು ಮ್ಯೂಚುವಲ್ ಫಂಡ್ ಹೂಡಿಕೆಗಳನ್ನು, ನಿರ್ದೇಸ ನೆಟ್‌ವರ್ಕ್ಸ್ ಪ್ರೈ.ಲಿಮಿಟೆಡ್‌ನ ವಿವಿಧ ಖಾತೆಗಳಲ್ಲಿ ಇದ್ದ ₹18.57 ಕೋಟಿ ಮೊತ್ತದ ಸ್ವತ್ತುಗಳನ್ನು ಇ.ಡಿ ಮುಟ್ಟುಗೋಲು ಹಾಕಿಕೊಂಡಿದೆ.

ಪ್ರತಿಭಟನಾ ಮೆರವಣಿಗೆಯಲ್ಲಿ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ, ವಿಧಾನಪರಿಷತ್ ಸದಸ್ಯ ಸಿ.ಟಿ.ರವಿ, ಮಾಜಿ ಸಚಿವ ಎಂ.ಪಿ.ರೇಣುಕಾಚಾರ್ಯ ಎತ್ತಿನ ಗಾಡಿಯಲ್ಲಿ ಬಾರುಕೋಲು ಹಿಡಿದು ಸಾಗಿದರು ಚಿತ್ರ–ಸತೀಶ್ ಬಡಿಗೇರ

ಮೆಕ್ಕೆಜೋಳ, ಭತ್ತ ಖರೀದಿಗೆ ಆಗ್ರಹ

ಬಿಜೆಪಿ ರಾಜ್ಯವ್ಯಾಪಿ ಹೋರಾಟಕ್ಕೆ ವಿಜಯೇಂದ್ರ ಚಾಲನೆ

ಪ್ರಜಾವಾಣಿ ವಾರ್ತೆ

ದಾವಣಗೆರೆ: ಮೆಕ್ಕೆಜೋಳ, ಭತ್ತವನ್ನು ಬೆಂಬಲಬೆಲೆ ಯೋಜನೆಯಡಿ ಖರೀದಿಸಲು ಕೂಡಲೇ ಖರೀದಿ ಕೇಂದ್ರಗಳನ್ನು ತೆರೆಯಬೇಕು ಎಂದು ಒತ್ತಾಯಿಸಿ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ನೇತೃತ್ವದಲ್ಲಿ ಮಂಗಳವಾರ ಇಲ್ಲಿ ಪ್ರತಿಭಟನೆ ನಡೆಯಿತು.

ರಾಜ್ಯ ಸರ್ಕಾರ ರೈತ ವಿರೋಧಿ ನೀತಿ ಅನುಸರಿಸುತ್ತಿದೆ ಎಂದು ಆರೋಪಿಸಿ ಪಕ್ಷ ನ.27ರಿಂದ ನಡೆಸಲಿರುವ ರಾಜ್ಯವ್ಯಾಪಿ ಹೋರಾಟಕ್ಕೆ ಈ ಮೂಲಕ ಚಾಲನೆ ನೀಡಲಾಯಿತು.

ವಿಧಾನಸಭಾ ಕ್ಷೇತ್ರ ವ್ಯಾಪ್ತಿ, ಜಿಲ್ಲಾ ಕೇಂದ್ರಗಳಲ್ಲಿ ಪ್ರತಿಭಟನೆ ನಡೆಸಿದ ಬಳಿಕ ಬೆಳಗಾವಿ ಸುವರ್ಣಸೌಧ ಮುತ್ತಿಗೆ ಹಾಕುವುದಾಗಿ ಸರ್ಕಾರಕ್ಕೆ ಎಚ್ಚರಿಕೆ ನೀಡಲಾಯಿತು.

‘ರಾಜ್ಯದಲ್ಲಿ 45 ಲಕ್ಷ ಟನ್ ಮೆಕ್ಕೆಜೋಳ ಬೆಳೆದಿದ್ದು, ಕೇಂದ್ರ ಬೆಂಬಲ ಬೆಲೆ ಘೋಷಿಸಿದ್ದರೂ ರಾಜ್ಯ ಸರ್ಕಾರ ಖರೀದಿ ಕೇಂದ್ರ ತೆರೆದಿಲ್ಲ’ ಎಂದು ಬಿ.ವೈ. ವಿಜಯೇಂದ್ರ ಹೇಳಿದರು.

‘ರೈತರ ಬೇಡಿಕೆಗಳಿಗೆ ಮುಖ್ಯಮಂತ್ರಿ ಸ್ಪಂದಿಸುತ್ತಿಲ್ಲ. ಡಿ.8ರಿಂದ ನಡೆಯುವ ಚಳಿಗಾಲದ ಅಧಿವೇಶನದಲ್ಲಿ ಸರ್ಕಾರದ ಕಿವಿ ಹಿಂಡುವ ಕೆಲಸ ಆಗಬೇಕಿದೆ. ಕಬ್ಬು, ಭತ್ತ, ಮೆಕ್ಕೆಜೋಳ ಬೆಳೆಗಾರರು ಬೆಳಗಾವಿಗೆ ಬನ್ನಿ’ ಎಂದು ಆಹ್ವಾನ ನೀಡಿದರು.

ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ, ಬಿಜೆಪಿ ರೈತ ಮೋರ್ಚಾ ರಾಜ್ಯ ಘಟಕದ ಅಧ್ಯಕ್ಷ ಎ.ಎಸ್. ಪಾಟೀಲ ನಡಹಳ್ಳಿ, ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ ಹಾಜರಿದ್ದರು.

> ಸಿ.ಎಂ ಕುರ್ಚಿಗೆ ನಡೆಯುತ್ತಿರುವ ಕಾಳಗ ಬೆಳಗಾವಿ ಅಧಿವೇಶನಕ್ಕೂ ಮುನ್ನವೇ ನಿಲ್ಲಲಿ. ರಾಜ್ಯಕ್ಕೆ ಹೊರನಡೆಯುವ ಮುಖ್ಯಮಂತ್ರಿ ಬೇಡ
> **ಬಿ.ವೈ. ವಿಜಯೇಂದ್ರ,** ಬಿಜೆಪಿ ರಾಜ್ಯಘಟಕದ ಅಧ್ಯಕ್ಷ

ಉದ್ಯೋಗ ವಾಣಿ

ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಅಧೀನ ಉದ್ದಿಮೆ)
ಸಿಐಎನ್ ನಂ.ಯು85110ಕೆಎ1947ಎಸ್‌ಜಿಸಿ001321.
ಹಟ್ಟಿ-584115, ಲಿಂಗಸುಗೂರು-ತಾ., ರಾಯಚೂರು ಜಿಲ್ಲೆ, ಕರ್ನಾಟಕ.
ದೂರವಾಣಿ.:(08537)275022 ಫ್ಯಾಕ್ಸ್: (08537)275054

ನೇರ ಸಂದರ್ಶನ

ಹಟ್ಟಿ ಚಿನ್ನದ ಗಣಿ ಕಂಪನಿ ಲಿಮಿಟೆಡ್, ಹಟ್ಟಿ, ರಾಯಚೂರು ಜಿಲ್ಲೆ (ಕರ್ನಾಟಕ) ದಲ್ಲಿರುವ ಅದರ ಗಣಿಗೆ ಗುತ್ತಿಗೆ ಆಧಾರದ ಮೇಲೆ ಭದ್ರತಾ ಅಧಿಕಾರಿ ಬೇಕಾಗಿದ್ದಾರೆ.

ಗುತ್ತಿಗೆ ಆಧಾರದ ಮೇಲೆ ಭದ್ರತಾ ಅಧಿಕಾರಿ	1 ಹುದ್ದೆ
ವಿದ್ಯಾರ್ಹತೆ/ ಅನುಭವ	ಸಶಸ್ತ್ರ ದಳಗಳು ಅಥವಾ ಪ್ಯಾರ ಮಿಲಿಟರಿ ಸೇವೆಗಳು ಅಥವಾ ಪೊಲೀಸ್ ಸೇವೆಯಲ್ಲಿ ಕ್ಯಾಪ್ಟನ್ ಅಥವಾ ತತ್ಸಮಾನ ಹುದ್ದೆ ಹೊಂದಿರುವುದರ ಜೊತೆಗೆ 8 ವರ್ಷಗಳ ಅನುಭವ ಹೊಂದಿರಬೇಕು.
ಗರಿಷ್ಠ ವಯಸ್ಸು	45 ವರ್ಷಗಳು
ಕ್ರೋಡೀಕೃತ ಸಂಬಳ	ರೂ. 70,000/-

ದಿನಾಂಕ: 06.12.2025 ರಂದು ಬೆಳಿಗ್ಗೆ 9.00 ಗಂಟೆಯಿಂದ ಸಂಜೆ 5.00 ಗಂಟೆ ವರೆಗೆ ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತ, ಹಟ್ಟಿ–584 115 ನಲ್ಲಿರುವ ಆಡಳಿತ ಕಛೇರಿಯಲ್ಲಿ ನೇರ ಸಂದರ್ಶನ ನಡೆಸಲಾಗುವುದು. ಅಭ್ಯರ್ಥಿಗಳು ಸಂದರ್ಶನದ ಸಮಯದಲ್ಲಿ ತಮ್ಮ ಪೂರ್ಣ ವಿವರಗಳನ್ನೊಳಗೊಂಡ ಅರ್ಜಿಯನ್ನು ಮತ್ತು ವಿದ್ಯಾರ್ಹತೆಯ ಪ್ರಮಾಣ ಪತ್ರ, ಅನುಭವ ಪ್ರಮಾಣ ಪತ್ರ ಇತ್ಯಾದಿಗಳ ಮೂಲ ಮತ್ತು ಪ್ರತಿಗಳೊಂದಿಗೆ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರದ ಜೊತೆಗೆ ಹಾಜರುಪಡಿಸಬೇಕು.

Br. Jangamakote Cross: No. 295, Hosapet Village, Jangamakote Cross, Shidlaghtta (Tq), Chikballapur, Karnataka-562 102 Ph. No. 08158252222 :- 21696400049748,21696400046595,21696100034719,21696900000241,21696400052346,21696400052296,21696900000035,21696400052171,21696400052007, 21696400045977,21696400045803,21696400057790,21696400048781,21696100034974,21696400051736,21695500029303,21696400055984,21696400060497, 21695500024098,21696400038436,21696400045019,21696400050605,21696400056719,21696400053922,21696400053062.

Br. Hebbal / Kempapura: Elevated ground floor, 319/37/4, Dasarahalli Main Road, Bhuvaneshwari Nagar, Hebbala, Bangalore- 560024 :- 24926400002968,24926900000124.

Br. Bangalore / Vidyaranyapura : Ground Floor, No. 1123, Khata No. 1066/2744/1123, 6th Block, HMT Layout, Vidyaranyapura,Bangalore - 560097 Ph: 9544597221 :- 23966100000731,23966500001560,23966400001512,23966800003662.

Br. Bangalore/Banaswadi: No. 13, Banaswadi Main Road, Bangalore- 560 043 Ph. No. 080-25420700 :- 14716100305783,14716400035866,14716800107455,14716900007621,14716100309991,14716400037011,14716900000915,14716900007811,14716100310551, 14716400037177,14716900001228,14716900008231,14716100313019,14716400038779,14716900001608,14716900008322,14716100314348,14716500005306, 14716900002705,14716900008744,14716100315642,14716800096377,14716900003505,14716900008991,14716400019548,14716800101797,14716900005658, 14716900009585,14716400020777,14716800106747,14716900007464,14716900009650,14716900016721,14716900014858,14716900010351,14716900009791, 14716800099157,14716800100500,14716900007613,14716900006953.

Br. Bangalore/Jalahalli: 17/1, Savithri, S M Road, Jalahalli West, Bangalore- 560 015, Ph. No. 080-28372201:- 15826400142460,15826400141553,15826400144292,15826500014668,15826400142411,15826900007403,15826900004277,15826100634337,15826900007791, 15826900003279,15826900008625,15826500014320,15826100588541,15826100643536,15826400138179,15826400136488,15826800065824,15826100611681, 15826900005357,15826900013112,15826900001745,15826900008039,15826400144169,15826900005373,15826400138245,15826900007965,15826900008047, 15826400144177,15826900001174,15826100638221,15826900001810,15826100633313,15826400141801,15826100579490,15826100642199,15826900001836, 15825600002920,15826100647750,15826500014734,15826900008807,15826400142585,15826400136579,15826900004707,15826100635482,15826100639096, 15826400142593,15826900006397,15826100634550,15826100635490,15826100641936,15826400142601,15826400139359,15826100634568,15826400139292, 15826100642447,15826100647198,15826400144342,15826900009656,15826900002990,15826100642488,15826900009235,15826400144540,15826900012031, 15826900013260,15826900018053,15826900017204,15826900008872,15826900012130,15826400142403,15826100644849,15826100644856,15826100641191, 15826100640193,15826100647958,15826900013583,15826400140936.

Br. Bangalore/R T Nagar : No.20, 1st Main Road, 108 'B' Bus Station, Ganga Nagar, R T Nagar P O, Bangalore- 560 032, Ph. No. 080-23434258 :- 14726100222128,14726900001904,14726900002340,14726400079954,14726400081372,14726400083477,14726100219090,14726400065649,14726400083428, 14726400083691,14726900003819,14726100222276,14726900001896,14726400082032,14726100220452,14726100219595,14726900001144,14726100222367, 14726400079475,14716500005306,14726900004163,14726400068007,14726800069191,14726500018548,14726400079632,14726100222359,14726800071247, 14726900001326,14726400068486,14726100223290,14726800066957.

Br. Bangalore / Thanisandra : GF, No.89/1, Thanisandra, K Narayanapura -Road, Dr. S R K Nagar PO, Bangalore- 560 077 :- 23886400004458,23886400003559,23886900000980,23886900000428,23886400009986, 23886900000790,23886400008459,23886400009143,23886900000493,23886400004839,23886400005851,23886400009572.

Br. Doddaballapur: D Cross Road, Doddaballapur, Bangalore Rural, Karnataka- 561 203 Ph. No. 080-27622105 :- 16316100119306,16316100120718,16316100123928,16316400112621,16316400113033,16316400113280,16316900000573,16316400122281,16316400106383.

Br. Bangalore/Dommasandra: Khata No. 13 - Gramathana, Dommasandra (Bangalore East), Bidarahalli Hobli, Virgonagar P O, Bangalore, Karnataka- 560049 Ph. No. 080-29906232 :- 21656100048598,21656100048952,21656400019323,21656400025353,21656100048945, 21656400017137,21656400024596,21656400029082,21656900002316.

Br. Nelamangala: Paramanna Layout, B H Road, Nelamangala, Bangalore Rural, - 562 123 Ph: 080-27722251 :- 15536400140741,15536400142168,15536400138620,15536400143224,15536400139347,15536400140758,15536400133894, 15536400142507,15536400138976,15536100156658,15536400144677,15536400138646,15536100158332,15536400133522,15536100156666,15536400135840, 15536400136178,15536400138661,15536400139750,15536400139503,15536400137267,15536400140923,15536900000544,15536100159868,15536400141517.

Br. Bangalore/Sadashivanagar: #88, Keerthi, 2nd Main, Palace Guttahalli P O, Bangalore-560 003 Ph: 080 23565050:- 21986900001681, 21986900001673,21986900001657,21986400068891,21986900001699,21986900001129,21986900003091,21986900000790,21986900000998,21986800027208, 21986900003018,21986900002226,21986900002705,21986900003430,21986400064312,21986400063926,21986400067828,21986400067836,21986400069097.

Bangalore 24-11-2025 — Vice President & Zonal Head

ಅಭಿಮತ ವಿಭಾಗ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ

ದೇವರಿದ್ದಾನೆಯೋ ಇಲ್ಲವೋ ತಿಳಿಯದು. ಆದರೆ, ತಾಯಿಯೇ ದೇವರು ಎನ್ನುವುದರಲ್ಲಿ ನನಗೆ ಸಂಶಯವಿಲ್ಲ.

– ಎಚ್. ನರಸಿಂಹಯ್ಯ

ಸಂಪಾದಕೀಯ

ಸದಾಶಯದ ಕಾರ್ಮಿಕ ಸಂಹಿತೆಗಳು ಚರ್ಚೆಯ ಮೂಲಕ ಒಮ್ಮತ ಮೂಡಲಿ

ಕೇಂದ್ರ ಸರ್ಕಾರ ಹೊಸತಾಗಿ ಅನುಷ್ಠಾನಕ್ಕೆ ತಂದಿರುವ ನಾಲ್ಕು ಕಾರ್ಮಿಕ ಸಂಹಿತೆಗಳು, ದೇಶದ ಕಾರ್ಮಿಕ ವಲಯದ ಇತಿಹಾಸದಲ್ಲಿ ಮಹತ್ವದವಾಗಿವೆ. ಆರ್ಥಿಕ ಬೆಳವಣಿಗೆಗೆ ಸಂಬಂಧಿಸಿದಂತೆಯೂ ಮಹತ್ವದ್ದಾಗಿವೆ. ವೇತನ, ಕೈಗಾರಿಕಾ ಸಂಬಂಧ, ಕೆಲಸದ ಸ್ಥಳದಲ್ಲಿ ಸುರಕ್ಷತೆ ಹಾಗೂ ಸಾಮಾಜಿಕ ಭದ್ರತೆಗೆ ಸಂಬಂಧಿಸಿದ ಹೊಸ ಸಂಹಿತೆಗಳನ್ನು 'ಚಾರಿತ್ರಿಕ' ಎಂದು ಸರ್ಕಾರ ಬಣ್ಣಿಸಿದೆ. ಕಾರ್ಮಿಕರು ಮತ್ತು ಕೈಗಾರಿಕೆಗಳಿಗೆ ಸಂಬಂಧಿಸಿದ 29 ಕಾರ್ಮಿಕ ಕಾನೂನುಗಳನ್ನು ಒಟ್ಟುಗೂಡಿಸಿ ಹೊಸ ಸಂಹಿತೆಗಳಲ್ಲಿ ಅಡಕಗೊಳಿಸಲಾಗಿದೆ; 1,228 ಸೆಕ್ಷನ್‌ಗಳನ್ನು 480ಕ್ಕೆ ಹಾಗೂ 1,436 ನಿಯಮಗಳನ್ನು 351ಕ್ಕೆ ಇಳಿಸಲಾಗಿದೆ; 65 ವಿಭಾಗಗಳಿಗೆ ಸಂಬಂಧಿಸಿದ ಅಪರಾಧೀಕರಣವನ್ನು ತೆಗೆದುಹಾಕಲಾಗಿದೆ. ಕಾರ್ಮಿಕ ಕಾನೂನುಗಳಿಗೆ ಸಂಬಂಧಿಸಿದ ಈ ವ್ಯಾಪಕ ಪರಿಷ್ಕರಣೆ ಬಹಳ ಕಾಲದ ಹಿಂದೆಯೇ ನಡೆಯಬೇಕಾಗಿತ್ತು. ಕೆಲವು ಕಾನೂನುಗಳು ನಿರ್ಬಂಧಿತವಾಗಿದ್ದವು ಹಾಗೂ ನಮ್ಯತೆಯ ಕೊರತೆಯನ್ನು ಹೊಂದಿದ್ದವು. ಕಾರ್ಮಿಕ ಮತ್ತು ಬಂಡವಾಳ ಮಾರುಕಟ್ಟೆಗೆ ಸಂಬಂಧಿಸಿದ ವ್ಯವಸ್ಥಿತಿಗೆ ಸ್ಪಂದಿಸುವಲ್ಲಿ ಇರುವ ಕೊರತೆಗೆ ಸಂಬಂಧಿಸಿದಂತೆಯೂ ಟೀಕೆಗಳು ವ್ಯಕ್ತವಾಗಿದ್ದವು. ಪ್ರಸ್ತುತ ಸುಧಾರಣೆಗಳ ಉದ್ದೇಶಗಳನ್ನು ಮೂರು ಆಯಾಮಗಳಲ್ಲಿ ಗುರುತಿಸಬಹುದಾಗಿದೆ: ಪ್ರಸ್ತುತವಿರುವ ಚೌಕಟ್ಟಿನ ಸರಳೀಕರಣ, ಕಾರ್ಮಿಕರ ಉದ್ಯೋಗದಲ್ಲಿ ಡಿಜಿಟಲೀಕರಣವನ್ನು ತರುವುದು ಹಾಗೂ ಕಾರ್ಮಿಕರ ಸ್ಥಿತಿಗತಿ ನಿಭಾಯಿಸುವ ಉದ್ಯೋಗದಾತರಿಗೆ ಹೆಚ್ಚಿನ ನಮ್ಯತೆ ಕಲ್ಪಿಸುವುದು. ಸ್ವಾತಂತ್ರ್ಯಾನಂತರ ತಲೆಮಾರಿನ ಅತ್ಯಂತ ಸಮಗ್ರ ಕಾರ್ಮಿಕ ಕಾನೂನುಗಳ ಸುಧಾರಣೆ ಇದಾಗಿದೆ.

ದೀರ್ಘ ಕಾಲದಿಂದ ನನೆಗುದಿಗೆ ಬಿದ್ದಿದ್ದ ಕಾರ್ಮಿಕ ಕಾನೂನುಗಳನ್ನು ಕೇಂದ್ರ ಸರ್ಕಾರ ಪರಿಷ್ಕರಿಸಿರುವುದು ಸ್ವಾಗತಾರ್ಹ. ಆದರೆ, ಹೊಸ ಸಂಹಿತೆಗಳ ಕುರಿತ ಆತಂಕ ನಿವಾರಿಸುವುದು ಸರ್ಕಾರದ ಕರ್ತವ್ಯ.

ಹೊಸ ಸಂಹಿತೆಗಳು ಗಿಗ್ ಮತ್ತು ಅಸಂಘಟಿತ ವಲಯದ ಕಾರ್ಮಿಕರಿಗೆ ಸಾಮಾಜಿಕ ಭದ್ರತೆಯನ್ನು ಒದಗಿಸಲಿವೆ. ಮಹಿಳೆಯ ಮೇಲಿನ ನ್ಯಾಯಯುತವಲ್ಲದ ನಿರ್ಬಂಧಗಳನ್ನು ತೆಗೆದುಹಾಕಲಿವೆ ಹಾಗೂ ಅಂತರರಾಜ್ಯ ಕಾರ್ಮಿಕರಿಗೆ ಸೌಲಭ್ಯಗಳ ವರ್ಗಾವಣೆಯನ್ನು ಸಾಧ್ಯಗೊಳಿಸುತ್ತವೆ. ಕಾಲಕ್ಕೆ ಸರಿಯಾಗಿ ಕನಿಷ್ಠ ವೇತನ ಪಾವತಿ, ಎಲ್ಲ ಹೊಸ ನೌಕರರಿಗೆ ನೇಮಕಾತಿ ಪತ್ರ, ಮಹಿಳೆಯರಿಗೆ ಸಮಾನವೇತನ, ಒಂದು ವರ್ಷದ ನಂತರ ಕಾಯಂ ನೌಕರರಿಗೆ ಗ್ರಾಚ್ಯುಯಿಟಿ, ನಲವತ್ತು ವರ್ಷಗಳಿಗೂ ಹೆಚ್ಚಿನ ವಯಸ್ಸಿನ ಎಲ್ಲ ನೌಕರರಿಗೆ ವಾರ್ಷಿಕ ಆರೋಗ್ಯ ತಪಾಸಣೆ ಹಾಗೂ ಹೆಚ್ಚಿನ ಅವಧಿಯ ದುಡಿಮೆಗೆ ದುಪ್ಪಟ್ಟು ವೇತನವನ್ನು ಕಡ್ಡಾಯಗೊಳಿಸಲಾಗಿದೆ. ಹೊಸ ಸಂಹಿತೆಗಳು ಪಾರದರ್ಶಕತೆಯ ಕಡೆಗೆ ಮುನ್ನಡೆಯುವ ಪ್ರಯತ್ನವಾಗಿದೆ. ಗಿಗ್ ಮತ್ತು ಪ್ಲಾಟ್‌ಫಾರ್ಮ್ ನೌಕರರನ್ನು ಸಾಮಾಜಿಕ ಭದ್ರತೆಯೊಳಗೆ ಗುರುತಿಸುವುದು ಬಹುಮುಖ್ಯವಾದ ರಚನಾತ್ಮಕ ಬದಲಾವಣೆಯಾಗಿದೆ. ಹಾಗೆಯೇ ಮಹಿಳೆಯರ ಉದ್ಯೋಗ ಸ್ಥಿತಿಗತಿಯ ಸುಧಾರಣೆ ಮತ್ತು ಸಮಾನತೆ ತರುವ ಮೂಲಕ ಕಾರ್ಮಿಕ ಸಂಪನ್ಮೂಲದಲ್ಲಿ ಅವರ ಭಾಗವಹಿಸುವಿಕೆಯನ್ನು ವಿಸ್ತರಿಸುವ ಸಾಧ್ಯತೆ ಈಗ ಕಾನೂನುಬದ್ಧವಾಗಿದೆ.

ಬಹುತೇಕ ಕಾರ್ಮಿಕ ಸಂಘಟನೆಗಳು ಹಾಗೂ ವಿರೋಧ ಪಕ್ಷಗಳು ಹೊಸ ಸಂಹಿತೆಗಳನ್ನು ಕಾರ್ಮಿಕ ವಿರೋಧಿ ಎಂದು ಟೀಕಿಸಿ, ತೀವ್ರ ವಿರೋಧ ವ್ಯಕ್ತಪಡಿಸಿವೆ. ಹೊಸ ನಿಯಮಗಳ ಅನ್ವಯ 300 ಕಾರ್ಮಿಕರನ್ನು ಹೊಂದಿರುವ ಕಂಪನಿಗಳು ಸರ್ಕಾರದ ಅನುಮತಿ ಇಲ್ಲದೆಯೇ ಆ ಕಾರ್ಮಿಕರನ್ನು ಸಾಮೂಹಿಕವಾಗಿ ಕೆಲಸದಿಂದ ವಜಾ ಮಾಡಬಹುದು ಅಥವಾ ಕಂಪನಿಯನ್ನೇ ಮುಚ್ಚಬಹುದು. ಈ ಮೊದಲು 100 ಕಾರ್ಮಿಕರಿಗೆ ಈ ನಿಯಮ ಸೀಮಿತವಾಗಿತ್ತು. ಹೊಸ ನಿಯಮವು ಉದ್ಯೋಗದಾತರ ಪರವಾಗಿದ್ದು, ಕಾರ್ಮಿಕರ ಉದ್ಯೋಗ ಭದ್ರತೆಗೆ ಕೊಡಲಿಪೆಟ್ಟು ನೀಡುತ್ತದೆ ಎಂದು ಕಾರ್ಮಿಕ ಸಂಘಗಳು ಹೇಳಿವೆ. ಸವಲತ್ತುಗಳನ್ನು ಪಡೆಯುವುದಕ್ಕೆ ಸಂಬಂಧಿಸಿದಂತೆ ಕಾರ್ಮಿಕ ಸಂಘಟನೆ ಮಾತುಕತೆಯ ಶಕ್ತಿಯನ್ನು ದುರ್ಬಲಗೊಳಿಸಿ, ಉದ್ಯೋಗದಾತರಿಗೆ ಹೆಚ್ಚಿನ ಅಧಿಕಾರ ಕೊಡುತ್ತವೆ ಎನ್ನುವ ಟೀಕೆಯೂ ಇದೆ. ಕಾರ್ಮಿಕರ ವಿಷಯವು ಸಮವರ್ತಿ ಪಟ್ಟಿಯಲ್ಲಿರುವ ಕಾರಣ, ರಾಜ್ಯ ಸರ್ಕಾರಗಳು ಸಹ ಈ ನಿಯಮ ರೂಪಿಸಿ ಅಧಿಸೂಚನೆ ಪ್ರಕಟಿಸಬೇಕಿದೆ. ಹೊಸ ಸಂಹಿತೆಗಳನ್ನು ಅನುಷ್ಠಾನಗೊಳಿಸುವ ಹೊಣೆ ರಾಜ್ಯಗಳ ಮೇಲೆ ಅವಲಂಬಿತ ಆಗಿರುವುದರಿಂದ, ಅಸಮಾನ ಅಳವಡಿಕೆ ಆಗುವ ಆತಂಕವೂ ಇದೆ. ಹೊಸ ಸಂಹಿತೆಗಳ ವ್ಯಾಪ್ತಿಗೆ ಬರುವ ಶಾಸನಗಳನ್ನು ಈಗಾಗಲೇ ಕೆಲವು ರಾಜ್ಯಗಳು ಹೊಂದಿವೆ. ಪರಿಷ್ಕರಣೆಗೆ ಮೊದಲು, ಕೇಂದ್ರ ಸರ್ಕಾರ ಮತ್ತು ವಿವಿಧ ಪಕ್ಷಗಳ ನಡುವೆ ಸಾಕಷ್ಟು ಚರ್ಚೆಗಳು ನಡೆದಿಲ್ಲ. ನಾಲ್ಕರಲ್ಲಿ ಮೂರು ಸಂಹಿತೆಗಳನ್ನು ಕೋವಿಡ್ ಪಿಡುಗಿನ ಸಂದರ್ಭದಲ್ಲಿ, ಚರ್ಚೆಗಳು ಸ್ಥಗಿತಗೊಂಡಿದ್ದ ಸಂದರ್ಭದಲ್ಲಿ, ಸಂಸತ್ತು ಅಂಗೀಕರಿಸಿತ್ತು. ಈಗ ಪ್ರಕಟಿಸಿರುವ ಸಂಹಿತೆಗಳ ನಿಯಮಗಳನ್ನು ಅಂತಿಮಗೊಳಿಸುವ ಮೊದಲು ಎಲ್ಲ ಪಾಲುದಾರರೊಂದಿಗೆ ಚರ್ಚೆಗಳನ್ನು ನಡೆಸಬೇಕಾಗಿದೆ. ಮಾತುಕತೆಗಳ ಮೂಲಕವೇ ಸದ್ಯದ ಆತಂಕಗಳನ್ನು ಪರಿಹರಿಸಬೇಕಾಗಿದೆ.

'ಸ್ವಸಹಾಯ'ವೂ ರಾಜಕೀಯವೂ...

ವಿಶ್ಲೇಷಣೆ

ಎಂ.ಎಸ್. ಶ್ರೀರಾಮ್

> ಮಹಿಳೆಯರ ನಡುವೆ ಬೆಳೆದುಬಂದ ಸ್ವಸಹಾಯದ ಪರಿಕಲ್ಪನೆ ಸಹಕಾರ ತತ್ತ್ವವನ್ನು ಬಲಗೊಳಿಸುತ್ತಾ ಬೆಳೆದಿದೆ. ಮಹಿಳಾ ಸಬಲೀಕರಣದ ರೂಪದಲ್ಲಿ, 'ಸಹಕಾರ'ದ ಆ ಮಾದರಿಗಳನ್ನು ಸರ್ಕಾರಗಳೂ ನೀರೆರೆದು ಪೋಷಿಸಿವೆ.

ಸ್ವಸಹಾಯ ಗುಂಪುಗಳು ಆವಿಷ್ಕಾರಗೊಂಡ ಬಗೆಗಿನ ಹಲವು ಕಥೆಗಳಲ್ಲಿ ಮುಖ್ಯವಾದುದು ಕರ್ನಾಟಕದ ಕಥನ. 'ಮೈರಾಡ' ಎನ್ನುವ ಸ್ವಾಯತ್ತ ಸ್ವಯಂಸೇವಾ ಸಂಸ್ಥೆಯೊಂದಿಗೆ ಜೊತೆಗೂಡಿದ್ದ ಮಹಿಳೆಯರು ಆ ಸಂಸ್ಥೆಯ ಮುಖ್ಯಸ್ಥರಾದ ಅಲೋಶ್ಯಿಯಸ್ ಫರ್ನಾಂಡಿಸ್ (ಆ್ಯಲ್) ಅವರ ಬಳಿಗೆ ಬಂದು– 'ನಾವು ನಮ್ಮ ಸ್ಥಳೀಯ ಸಹಕಾರ ಸಂಘದಲ್ಲಿ ಸಾಲ ಮಾಡಿದ್ದೆವು. ಅದನ್ನು ಹಿಂತಿರುಗಿಸಬೇಕೆಂದರೆ ಸಂಸ್ಥೆ ಮುಚ್ಚಿಹೋಗಿದೆ. ಆದರೆ, ಆ ಸಾಲದ ಹಣವನ್ನು ನಾವು ಕಟ್ಟಿ, ಮುಂದಿನ ಕೆಲಸಕ್ಕೆ ಹೆಚ್ಚಿನ ಸಾಲ ಪಡೆಯಬೇಕು. ಆ ಸಂಸ್ಥೆ ಇಲ್ಲವಾದ್ದರಿಂದ ಮೈರಾಡಕ್ಕೇ ಹಣ ಕಟ್ಟುತ್ತೇವೆ. ಮುಂದಿನ ಸಾಲವನ್ನು ನೀವೇ ಕೊಡಿ' ಎಂದು ಹೇಳಿದರಂತೆ. ಆ್ಯಲ್ ಅದಕ್ಕೆ ಪ್ರತಿಕ್ರಿಯಿಸಿ, 'ನಮ್ಮ ಸಂಸ್ಥೆಗೆ ಕಟ್ಟುವುದಕ್ಕೆ ಬದಲಾಗಿ ನೀವುಗಳೇ ಒಂದು ಗುಂಪಾಗಿ, ನಿಮ್ಮಲ್ಲೇ ಅದನ್ನು ಉಳಿತಾಯವಾಗಿ ಕಟ್ಟಿಕೊಳ್ಳಿ, ಅವಶ್ಯಕತೆ ಇದ್ದವರಿಗೆ ಸಾಲವಾಗಿ ಕೊಡಿ. ಹೀಗೆ ಸ್ವಸಹಾಯ ಪದ್ಧತಿಯಲ್ಲಿ ಗುಂಪು ಮುಂದುವರಿಸಿಕೊಂಡು ಹೋಗಿ' ಎಂದು ಹೇಳಿದರಂತೆ. ಹೀಗೆ ಆರಂಭವಾದ ಸ್ವಸಹಾಯ ಗುಂಪುಗಳು ಅಲ್ಲಿಂದ ಮುಂದಕ್ಕೆ ಬೆಳೆದವು.

ನೋಂದಣಿಯಾಗದ ಈ ಸ್ವಸಹಾಯ ಗುಂಪುಗಳು ಬ್ಯಾಂಕಿನ ಖಾತೆ ತೆರೆಯಬಹುದಲ್ಲದೇ, ಬ್ಯಾಂಕಿನಿಂದ ಸಾಮೂಹಿಕವಾಗಿ ಸಾಲವನ್ನೂ ಪಡೆಯಬಹುದು ಎನ್ನುವ ಒಂದು ಸುತ್ತೋಲೆಯನ್ನು 1992ರಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್ ಮತ್ತು ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ಜಾರಿ ಮಾಡಿದವು. ಇದರೊಂದಿಗೆ ಈ ಗುಂಪುಗಳಿಗೆ ಒಂದು ರೀತಿಯ ಅಧಿಕೃತ ಮಾನ್ಯತೆ ದೊರೆಯಿತು. ಅಲ್ಲಿಂದ ಮುಂದಕ್ಕೆ ಅನೇಕ ಸ್ವಯಂಸೇವಾ ಸಂಸ್ಥೆಗಳೂ, ರಾಜ್ಯ ಸರ್ಕಾರಗಳೂ, ಈ ರೀತಿಯ ಗುಂಪುಗಳನ್ನು ಅನೇಕ ಯೋಜನೆಗಳಡಿಯಲ್ಲಿ ಪ್ರೋತ್ಸಾಹಿಸುತ್ತಾ ಮುಂದುವರಿದವು.

ಪರಂಪರಾಗತವಾಗಿದ್ದ ಉಳಿತಾಯ–ಸಾಲದ ಪದ್ಧತಿಯನ್ನು ಈ ಗುಂಪುಗಳು ಮುರಿದಿದ್ದವು. ಅಷ್ಟೇ ಅಲ್ಲ, ಅನೇಕ ಹಳೆಯ ಪಡಿಯಚ್ಚುಗಳನ್ನೂ ಈ ಗುಂಪುಗಳು ಮುರಿದವು. ಪುರುಷ ಕೇಂದ್ರಿತವಾಗಿದ್ದ ಆರ್ಥಿಕ ವ್ಯವಹಾರಗಳಲ್ಲಿ ಮಹಿಳೆಯರಿಗೂ ಒಂದು ಪಾತ್ರವನ್ನು ಈ ಸ್ವಸಹಾಯ ಗುಂಪುಗಳು ತಂದುಕೊಟ್ಟದ್ದವು. ಸಾಲಕೇಂದ್ರಿತವಾದ ಗ್ರಾಮೀಣ ಆರ್ಥಿಕ ವ್ಯವಸ್ಥೆಯನ್ನು ಉಳಿತಾಯ ಕೇಂದ್ರಿತವಾಗಿ ಮಾಡಿ, ಅವಶ್ಯಕತೆಯಿದ್ದಾಗ ಮಾತ್ರ ವಿತ್ತೀಯ ವ್ಯವಹಾರಗಳನ್ನು ನಡೆಸುವುದಕ್ಕೆ ಬದಲಾಗಿ– ಪ್ರತಿ ವಾರ ಅಥವಾ ತಿಂಗಳಿಗೊಮ್ಮೆ ಗುಂಪುಗಳು ಒಂದೆಡೆ ಸೇರಿ ವ್ಯವಹರಿಸುವ, ತಮ್ಮ ಲೆಕ್ಕವನ್ನು ತಾವೇ ಬರೆದಿಟ್ಟುಕೊಳ್ಳುವ, ತಮ್ಮಲ್ಲೇ ಸಾಲಗಳನ್ನು ಕೊಟ್ಟುಕೊಳ್ಳುವ, ವ್ಯವಹಾರಕ್ಕೂ ಮಿಗಿಲಾಗಿ ಮಿಕ್ಕ ವಿಚಾರಗಳನ್ನೂ ಚರ್ಚಿಸುವ ಹಾಗೂ ಬ್ಯಾಂಕಿನೊಂದಿಗೆ ವ್ಯವಹರಿಸುವ ಅವಕಾಶಗಳನ್ನು ಈ ಸ್ವಸಹಾಯ ಗುಂಪಿನ ಪದ್ಧತಿ ಉಂಟುಮಾಡಿತ್ತು.

ಇದು ಮಹಿಳಾ ಸಬಲೀಕರಣದ ಒಂದು ಪ್ರತೀಕವಾಗಿಯೂ ಕಾಣುತ್ತಿತ್ತು. ಉದಾಹರಣೆಗೆ, ಆಂಧ್ರಪ್ರದೇಶದ ಸ್ವಸಹಾಯ ಗುಂಪನ್ನು ಸಂದರ್ಶಿಸಲು ಹೋದಾಗ, ಅಲ್ಲಿನ ಮಹಿಳೆಯರು ಸಭೆಯ ನಂತರ ಬಂದು ಅಲ್ಲಿದ್ದ ಪುರುಷರ ಕೈಗಳನ್ನು ಕುಲುಕಿದ್ದನ್ನು ಗಮನಿಸಿದ್ದೆ. ಒಂದು ಸಂಕೇತವಾಗಿ ಇದು ಮಹತ್ವದ ವಿಷಯವಾಗಿತ್ತು. ಪಿತೃಪ್ರಧಾನ ಮತ್ತು ಅಸ್ಪೃಶ್ಯತೆ ಇರುವ ಸಮಾಜದಲ್ಲಿ, ಗ್ರಾಮೀಣ ಮಹಿಳೆಯರು ಆತ್ಮವಿಶ್ವಾಸದೊಂದಿಗೆ ನಗರದಿಂದ ಬಂದ ಪುರುಷರ ಕೈಕುಲುಕಿದ ಘಟನೆ, ಅನೇಕ ಹಳೆಯ ನಂಬಿಕೆ ಮತ್ತು ಪಡಿಯಚ್ಚುಗಳ ಸೀಮೋಲ್ಲಂಘನದಂತೆ ಹಾಗೂ ಮಹಿಳೆಯರ ಆತ್ಮವಿಶ್ವಾಸದ ಪ್ರತೀಕದಂತೆ ಕಾಣಿಸಿತ್ತು. ಈ ಕಾರ್ಯಕ್ರಮದ ಯಶಸ್ಸಿನಲ್ಲಿ ಮಹಿಳೆಯರಲ್ಲಿದ್ದ ಪರಸ್ಪರ ನಂಬಿಕೆ ಮತ್ತು ಶಿಸ್ತು ಮುಖ್ಯವಾಗಿತ್ತು.

ಮಹಿಳೆಯರು ತಮ್ಮದೇ ವ್ಯವಹಾರಗಳನ್ನು ಯಶಸ್ವಿಯಾಗಿ ನಡೆಸುತ್ತಿದ್ದ ನಿದರ್ಶನಗಳನ್ನು ಬೇರೆಡೆಯೂ ಪ್ರಸಾರ ಮಾಡಲು ಸರ್ಕಾರಗಳು ಆ ಸ್ವಸಹಾಯ ಗುಂಪುಗಳ ಮಾದರಿಯನ್ನು ತಮ್ಮದಾಗಿಸಿಕೊಂಡು, ಹೊಸ ಯೋಜನೆಗಳನ್ನು ರೂಪಿಸಿದವು. ಗುಂಪುಗಳನ್ನು ಏರ್ಪಡಿಸಲು ಬೇಕಾದ ಸಮುದಾಯಕರ್ಮಿಗಳ ಖರ್ಚಿಗಾಗಿ ಅನುದಾನ ಕೊಡುವುದು, ಗುಂಪುಗಳು ಪ್ರಾರಂಭ ಆಗುವುದಕ್ಕೆ ಮೂಲಧನವನ್ನು ದೇಣಿಗೆಯಾಗಿ ನೀಡುವುದರೊಂದಿಗೆ ಪ್ರಾರಂಭವಾದ ಪ್ರಕ್ರಿಯೆ, ಕ್ರಮೇಣ ಸರ್ಕಾರಿ ಕಾರ್ಯಕ್ರಮವಾಗುತ್ತಾ ಹೋಯಿತು. ಮೊದಲಿಗೆ, ತಮಿಳುನಾಡಿನ 'ಮಗಳೀರ್ ತಿಟ್ಟಂ' ಕಾರ್ಯಕ್ರಮದಲ್ಲಿ ಇದರ ಸರ್ಕಾರೀಕರಣ ಕಂಡೆವು. ಕೇರಳದ 'ಕುಡುಂಬಶ್ರೀ' ಕಾರ್ಯಕ್ರಮ ಮಾತ್ರ ತುಸು ಭಿನ್ನ ದಾರಿ ಹಿಡಿದು– ರಾಜ್ಯ ಸರ್ಕಾರದ ಕಾರ್ಯಕ್ರಮವಾದರೂ, ಪಂಚಾಯಿತಿಗಳ ಮಟ್ಟದಲ್ಲಿ ಸರ್ಕಾರದ ಯಂತ್ರಾಂಗದೊಂದಿಗೆ ಕೂಡಿದ್ದರಿಂದ ಒಂದು ವಿಕೇಂದ್ರೀಕೃತ ಕಾರ್ಯಕ್ರಮವಾಗಿ ರೂಪುಗೊಂಡಿತು.

ಒಂದು ಯಶಸ್ವೀ ಸ್ವಾಯತ್ತ, ಸ್ವಯಂಸೇವಾ ಕಾರ್ಯಕ್ರಮದ ಸರ್ಕಾರೀಕರಣ ಕ್ರಮೇಣವಾಗಿ ಆದರೂ, ಕಡೆಗೆ ವ್ಯಾಪಕವಾಗಿ ಪಸರಿಸಿದ್ದನ್ನು ನಾವು ನೋಡಬಹುದು. ಮಹಿಳೆಯರು, ಸ್ವ–ಸಹಾಯ, ಅಲ್ಲಿಂದ ಬ್ಯಾಂಕ್‌ಗಳೊಂದಿಗೆ ವ್ಯವಹಾರ, ಅಲ್ಲಿಂದ ಮುಂದಕ್ಕೆ ಸರ್ಕಾರಿ ಕಾರ್ಯಕ್ರಮದಡಿ ತಮ್ಮನ್ನು ಒಳಗೊಳ್ಳುತ್ತಿರುವುದನ್ನು ನಾವು ಕಾಣಬಹುದು. ಪರಸ್ಪರ ನಂಬಿಕೆ ಮತ್ತು ಶಿಸ್ತು ಇದ್ದ ಕಾರಣವಾಗಿ ಸರ್ಕಾರಿ ಯೋಜನೆಗಳನ್ನು– ಅದರಲ್ಲೂ ಮಹಿಳಾ ಕೇಂದ್ರಿತ ಯೋಜನೆಗಳನ್ನು– ರೂಪಿಸುವಾಗ ಈ ಗುಂಪುಗಳನ್ನು ಮನಸ್ಸಿನಲ್ಲಿಟ್ಟು ಕೆಲಸ ಮಾಡುತ್ತಿದ್ದುದನ್ನು ಕಂಡಿದ್ದೇವೆ.

ಸರ್ಕಾರದ ಯೋಜನೆಗಳ ಪಾಲಾದ ಗುಂಪುಗಳಿಗೆ ಬಹುಶಃ ಮೊದಲಿಗೆ ರಾಜಕೀಯ ಲೇಪ ಬಂದದ್ದು ಅವಿಭಜಿತ ಆಂಧ್ರಪ್ರದೇಶದಲ್ಲಿ. ವಿಶ್ವಬ್ಯಾಂಕಿನ ಸಾಲ ಪಡೆದು ಈ ಕಾರ್ಯಕ್ರಮವನ್ನು ಯಶಸ್ವಿಯಾಗಿ ಅಪ್ಪಿಕೊಂಡದ್ದನ್ನು ನಾವು ಅಲ್ಲಿನ 'ವೆಲುಗು' ಕಾರ್ಯಕ್ರಮದಲ್ಲಿ ಕಂಡೆವು. ಆಗಿನ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಆ ಗುಂಪುಗಳನ್ನು ವಿಶೇಷ ಮುತುವರ್ಜಿಯಿಂದ ಬೆಳೆಸಿ, ಅನೇಕ ಸರ್ಕಾರಿ ಕಾರ್ಯಕ್ರಮಗಳನ್ನು ತಲಪಿಸುವ ಮಾಧ್ಯಮವನ್ನಾಗಿ ಉಪಯೋಗಿಸಿದರು. ಆದರೆ, ಅದನ್ನು ಚುನಾವಣಾ ರಾಜಕೀಯಕ್ಕೆ ಎಳೆದು ತಂದದ್ದು ನಂತರದ ಮುಖ್ಯಮಂತ್ರಿಯಾದ ವೈ.ಎಸ್. ರಾಜಶೇಖರ ರೆಡ್ಡಿಯವರು. ಸ್ವಸಹಾಯ ಗುಂಪುಗಳ ಸಾಲಗಳ ಮೇಲೆ ಸಬ್ಸಿಡಿ ಕೊಟ್ಟು, ಗುಂಪಿನ ಮೂಲಮಂತ್ರವಾದ ಪರಸ್ಪರತೆಯಲ್ಲಿ ಅವರು ದಾಖಲು ಅಂದಾಜು ಮಾಡಿದರು. 'ಪಾವಲಾ ವಡ್ಡಿ' ಯೋಜನೆಯಲ್ಲಿ ಸ್ವಸಹಾಯ ಗುಂಪುಗಳಿಗೆ ತಿಂಗಳಿಗೆ ನಾಲ್ಕಾಣೆಯ ಬಡ್ಡಿಯಲ್ಲಿ (ವರ್ಷಕ್ಕೆ ಶೇ 3ರ) ಸಾಲ ಕೊಡಮಾಡುವ ಯೋಜನೆ ರೂಪಿಸಿದಾಗ, ಸ್ವಸಹಾಯ ಗುಂಪುಗಳ ಮೂಲ ಮಂತ್ರದ ಮೇಲೆ ಪ್ರಹಾರವಾಗಿತ್ತು. ಸಾಲ ಬೇಕಿದ್ದರೂ ಇಲ್ಲದಿದ್ದರೂ, ಎಲ್ಲರೂ ಈ ಅಗ್ಗದ ಬಡ್ಡಿಯ ಸಾಲಗಳನ್ನು ವ್ಯಾಪಕವಾಗಿ ಪಡೆದದ್ದರಿಂದ, ಗುಂಪಿನ ಧನ, ಅದರಲ್ಲಿದ್ದ ಪರಸ್ಪರತೆಗೆ ಪೆಟ್ಟು ಬಿದ್ದಿತು. ಅಲ್ಲಿನ ಅಧಿಕಾರಿಯೊಬ್ಬರು ಮಹಿಳೆಯರನ್ನು ಉದ್ದೇಶಿಸಿ, 'ಡಬ್ಬುಲು ಪೆಂಚುಕೋಂಡಿ ಅಂಟೇ ಪಂಚುಕುಂಟುತುನ್ನಾರು (ಧನವರ್ಧನೆ ಮಾಡಿಕೊಳ್ಳಿ ಅಂದರೆ ಹಂಚಿಕೊಳ್ಳುತ್ತಿದ್ದೀರಿ) ಎಂದು ವಿಷಾದದಿಂದ ಹೇಳಿದ್ದರು.

ಆಂಧ್ರಪ್ರದೇಶದ ಯಶಸ್ಸಿನೊಂದಿಗೆ, ಇದೇ ಕಾರ್ಯಕ್ರಮವನ್ನು ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನವಾಗಿ ರೂಪಿಸಿ, ಗುಂಪುಗಳ ಅಡಿಪಾಯದ ಮೇಲೆ ಒಂದು ಭವ್ಯ ಇಮಾರತನ್ನು ಕೇಂದ್ರ ಸರ್ಕಾರ ನಿರ್ಮಿಸಿತು. ಆಂಧ್ರಪ್ರದೇಶದ ಮಾದರಿಯನ್ನು ಕರ್ನಾಟಕದಲ್ಲಿ 'ಸಂಜೀವಿನಿ' ಹೆಸರಿನಲ್ಲಿಯೂ, ಬಿಹಾರದಲ್ಲಿ 'ಜೀವಿಕಾ' ಹೆಸರಿನಲ್ಲಿಯೂ ರೂಪಿಸಲಾಯಿತು. ಆರಂಭದ ದಿನಗಳಲ್ಲಿ ಆಂಧ್ರಪ್ರದೇಶದ ಮಹಿಳೆಯರು ಬಿಹಾರಕ್ಕೆ ಹೋಗಿ ಅಲ್ಲಿನ ಮಹಿಳೆಯರನ್ನು ಒಟ್ಟುಗೂಡಿಸುವ, ಗುಂಪುಗಳನ್ನು ಕಟ್ಟಿ ತರಬೇತಿ ನೀಡುವ ಕೆಲಸವನ್ನು ಸರ್ಕಾರದ ಯೋಜನೆಯ ವತಿಯಿಂದ ಮಾಡಿದರು.

ಈ ಬಾರಿಯ ಬಿಹಾರ ಚುನಾವಣೆಯಲ್ಲಿ 'ಜೀವಿಕಾ' ಸ್ವಸಹಾಯ ಗುಂಪುಗಳ ದೊಡ್ಡ ಪಾತ್ರವನ್ನು ಅನೇಕ ತಜ್ಞರು ಗುರುತಿಸಿದ್ದಾರೆ. ಹಲವು ವರ್ಷಗಳಿಂದ ಚುನಾವಣೆಯಲ್ಲಿ ಮತದಾರರನ್ನು ಒಲಿಸಿ ಮತಪೆಟ್ಟಿಗೆಯತ್ತ ಒಯ್ಯುವ ಕೆಲಸಕ್ಕೆ ಚುನಾವಣಾ ಆಯೋಗ ಈ ಮಹಿಳೆಯರನ್ನು ಬಳಸುತ್ತಿತ್ತು ಎನ್ನುವ ಮಾತು ಕೇಳಿಬರುತ್ತಿದೆ. ಆದರೆ, ಈಚೆಗೆ ನಡೆದ ಚುನಾವಣೆಗೆ ಮುನ್ನ ಈ ಗುಂಪುಗಳ ಸದಸ್ಯರ ವೈಯಕ್ತಿಕ ಖಾತೆಗೆ ತಲಾ ₹10,000 ಮೊತ್ತವನ್ನು ಸರ್ಕಾರ ಪಾವತಿಸಿದ್ದು ಎಲ್ಲರಿಗೂ ತಿಳಿದದ್ದೇ. ಪಾವಲಾ ವಡ್ಡಿಯಲ್ಲಿ ಸರ್ಕಾರ ಸಾಲದ ಬಡ್ಡಿಯ ದರವನ್ನು ನಿರ್ಧರಿಸಿದರೆ, ಇಲ್ಲಿ ಗುಂಪಿನ ಖಾತೆಗಲ್ಲದೇ ವೈಯಕ್ತಿಕ ಖಾತೆಗಳಿಗೆ ಹಣವನ್ನು ಹಾಕಿ ಗುಂಪುಗಳ ಪರಸ್ಪರತೆಗೆ ಧಕ್ಕೆ ತರಲಾಯಿತು. ಇಲ್ಲಿ ಅದಷ್ಟು ಮುಖ್ಯವಾದ ವಿಷಯವಲ್ಲ. ಅದಕ್ಕಿಂತ ಮುಖ್ಯವಾದ ವಿಷಯವೆಂದರೆ, ಈ ದುಡ್ಡು ಖಾತೆಗೆ ಬಿದ್ದ ಹಿನ್ನೆಲೆಯಲ್ಲಿ ಜೀವಿಕಾ ಯೋಜನೆಯ ಮಹಿಳೆಯರು ತಮ್ಮ ಚುನಾವಣಾ ಕರ್ತವ್ಯವನ್ನೂ ಉತ್ಸಾಹದಿಂದ ಮಾಡಿ ಮತದಾರರನ್ನು ಮತಗಟ್ಟೆಗೆ ಕರೆತಂದದ್ದಲ್ಲದೇ, ಕಿವಿಯಲ್ಲಿ ಸರ್ಕಾರದ ಪರವಾಗಿ ಹಲವು ಮಾತುಗಳನ್ನು ಉಲಿದಿರಬಹುದು ಎನ್ನುವುದನ್ನು ವಿಶ್ಲೇಷಕರು ಚರ್ಚಿಸುತ್ತಿದ್ದಾರೆ.

ಸ್ವಸಹಾಯದಿಂದ, ಬ್ಯಾಂಕ್‌ಗಳೊಂದಿಗೆ ವ್ಯವಹಾರ; ಅಲ್ಲಿಂದ ಮುಂದಕ್ಕೆ ಸರ್ಕಾರಿ ಯೋಜನೆಗಳ ಅನುಷ್ಠಾನ ಮತ್ತು ಯೋಜನೆಗಳನ್ನು ಧರೆಗಿಳಿಸುವ ಮಾರ್ಗ; ಅಲ್ಲಿಂದ ಓಟುಗಳನ್ನು ಪಡೆಯಲು ರಾಜಕೀಯ ಪಕ್ಷಗಳು ಮಹಿಳೆಯರನ್ನು ಒಂದು ಓಟ್ ಬ್ಯಾಂಕ್ ಆಗಿ ಉಪಯೋಗಿಸಿದ್ದು. ಈಗ ಚುನಾವಣೆಯಲ್ಲಿ ಮತದಾರರನ್ನು ಮನವೊಲಿಸುವ ಕಾರ್ಯವನ್ನು ಮಹಿಳೆಯರು ಸಶಕ್ತವಾಗಿ ಮಾಡಿದ್ದಾರೆ. ಇದು ನಿಧಾನವಾಗಿ ಅಲ್ಲಲ್ಲಿ ಬೆಳೆದಿರುವ ಮಹಿಳಾ ಸಬಲೀಕರಣ ಮತ್ತು ಸಶಕ್ತೀಕರಣದ ಸಂಕೇತವಾಗಿ ನಾವು ಪರಿಗಣಿಸಿದರೆ ಮುಂದಿನ ಮಾರ್ಗ ಏನಿರಬಹುದು? ಮುಂದೊಂದು ದಿನ ಈ ಮಹಿಳೆಯರೇ ನೇರವಾಗಿ ಚುನಾವಣಾ ಕಣಕ್ಕಿಳಿಯಬಹುದೇ? ಈಗಾಗಲೇ, ಚುನಾವಣೆಯ ಪ್ರಕ್ರಿಯೆಯನ್ನು ಅರ್ಥ ಮಾಡಿಕೊಂಡಿರುವವರಲ್ಲಿ ಇದೂ ಒಂದು ಮಹತ್ವದ ಮತಘಟಕವಾಗುವುದು ಸಹಜವೇ ಇರಬಹುದು. 35 ವರ್ಷಗಳ ತಾಳ್ಮೆಯಿಂದ ನೋಡಿರುವ ಈ ಕಾರ್ಯಕ್ರಮವನ್ನು ಇನ್ನೆರಡು ದಶಕಗಳ ಕಾಲ ಗಮನಿಸಬೇಕಾಗಿದೆ.

ವಾಚಕರ ವಾಣಿ

ಕೌನ್ಸೆಲಿಂಗ್ ವೈಜ್ಞಾನಿಕವಾಗಿ ನಡೆಯಲಿ

ಸರ್ಕಾರಿ ಪದವಿ ಕಾಲೇಜುಗಳಲ್ಲಿ ಅತಿಥಿ ಉಪನ್ಯಾಸಕರ ಸೇವೆಗೆ ಪ್ರಸ್ತುತ ನಡೆಯುತ್ತಿರುವ ಕೌನ್ಸೆಲಿಂಗ್‌ನಲ್ಲಿ, ಅಂಗವಿಕಲ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗಿದೆ. ಶೈಕ್ಷಣಿಕ ಹಾಗೂ ಸೇವಾ ಜ್ಯೇಷ್ಠತೆ ಪರಿಗಣಿಸದೆ, ಕೇವಲ ಅಂಗವೈಕಲ್ಯದ ಅಂಶವನ್ನಷ್ಟೆ ಗಣನೆಗೆ ತೆಗೆದುಕೊಳ್ಳಲಾಗಿದೆ. ಅಂಗವಿಕಲರಿಗೆ ಆದ್ಯತೆ ನೀಡುವುದು ತಪ್ಪಲ್ಲ. ಹಾಗೆಂದು ಶೈಕ್ಷಣಿಕ ಅರ್ಹತೆ ಹೊಂದಿರುವ ಇತರ ಅಭ್ಯರ್ಥಿಗಳನ್ನು ಸಂಪೂರ್ಣವಾಗಿ ಕಡೆಗಣಿಸುವುದು ಸರಿಯಲ್ಲ. ಕಾಲೇಜು ಶಿಕ್ಷಣ ಇಲಾಖೆಯು, ಈ ಹಿಂದೆ ಅಂಗವಿಕಲ ಅಭ್ಯರ್ಥಿಗಳಿಗೆ ನೀಡಿದ್ದ ಮೀಸಲು ಅಂಕಗಳನ್ನಷ್ಟೆ ಪರಿಗಣಿಸಿ ವೈಜ್ಞಾನಿಕ ರೀತಿಯಲ್ಲಿ ಕೌನ್ಸೆಲಿಂಗ್ ನಡೆಸುವುದು ಉತ್ತಮ.

ಸಂಪತ್ ಬೆಟ್ಟಗೆರೆ, ಮೂಡಿಗೆರೆ

ಎಂದಿಗೂ ಮರೆಯದ 'ವೀರು' ನೆನಪು

ನಟ ಧರ್ಮೇಂದ್ರ ಅವರು, ಬಾಲಿವುಡ್‌ನಲ್ಲಿ 'ಹೀ ಮ್ಯಾನ್' ಎಂದೇ ಪ್ರಸಿದ್ಧರು. ಎಪ್ಪತ್ತು– ಎಂಬತ್ತರ ದಶಕದಲ್ಲಿ ಅವರ ಮನೋಜ್ಞ ಅಭಿನಯ ಯುವಜನರ ಮನಸೂರೆಗೊಂಡಿತ್ತು. 'ಶೋಲೆ' ಚಿತ್ರದಲ್ಲಿನ ಅವರ 'ವೀರು' ಪಾತ್ರ ಮತ್ತು ಕರ್ನಾಟಕದೊಂದಿಗಿನ ಅವರ ನಂಟು ಚಿರಕಾಲ ನೆನಪಿನಲ್ಲಿ ಉಳಿಯಲಿದೆ. ಅವರು ಭಾರತೀಯ ಚಿತ್ರರಂಗದ ಅಪ್ರತಿಮ ವ್ಯಕ್ತಿ ಎನ್ನುವುದರಲ್ಲಿ ಎರಡು ಮಾತಿಲ್ಲ.

ಪರಮೇಶ್ವರ ಜೆ.ಎಂ., ಸಂಡೂರು

ಹೈಕಮಾಂಡ್: ಅನ್ಯಾಯ ಸರಿಪಡಿಸಲಿ

ಕರ್ನಾಟಕದಲ್ಲಿ ಇಲ್ಲಿಯವರೆಗೆ ದಲಿತರು ಮುಖ್ಯಮಂತ್ರಿ ಗದ್ದುಗೆ ಏರದಿರುವುದು ದುರದೃಷ್ಟಕರ. ಬಿಜೆಪಿ, ಕಾಂಗ್ರೆಸ್ ಮತ್ತು ಜೆಡಿಎಸ್ ಸೇರಿದಂತೆ ಎಲ್ಲಾ ಪಕ್ಷಗಳು ಅಧಿಕಾರಕ್ಕೆ ಬರುವ ಪೂರ್ವದಲ್ಲಿ ದಲಿತರ ಅಭ್ಯುದಯದ ಬಗ್ಗೆ ಮಾತನಾಡುತ್ತವೆ. ಅಧಿಕಾರ ಸಿಕ್ಕಿದ ತಕ್ಷಣ ದಲಿತರ ಕೂಗು ಮೂಲೆಗೆ ಸರಿಯುತ್ತದೆ. ಬಲಾಢ್ಯ ಜಾತಿಗಳ ಆಟ ಮುನ್ನೆಲೆಗೆ ಬರುತ್ತದೆ. ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು ಎರಡೂವರೆ ವರ್ಷ ಸಂದಿದೆ. ಪ್ರಸ್ತುತ ಮುಖ್ಯಮಂತ್ರಿ ಹುದ್ದೆಗಾಗಿ ಕಿತ್ತಾಟ ನಡೆಯುತ್ತಿದೆ. ಆ ಪಕ್ಷದಲ್ಲಿಯೂ ದಲಿತ ಸಮುದಾಯಕ್ಕೆ ಸೇರಿದ ಹಿರಿಯ ಶಾಸಕರಿದ್ದಾರೆ. ಪಕ್ಷಕ್ಕಾಗಿ ದುಡಿದಿದ್ದಾರೆ. 'ಅಹಿಂದ' ಮತಗಳು ಪಕ್ಷ ಅಧಿಕಾರಕ್ಕೇರುವಲ್ಲಿ ನಿರ್ಣಾಯಕ ಎಂದು ಕಾಂಗ್ರೆಸ್ ವರಿಷ್ಠರೇ ಹೇಳುತ್ತಾರೆ. ದಲಿತರಿಗೆ ಆಗಿರುವ ಅನ್ಯಾಯ ಸರಿಪಡಿಸಲು ಕಾಂಗ್ರೆಸ್ ಹೈಕಮಾಂಡ್‌ಗೆ ಒಳ್ಳೆಯ ಸದವಕಾಶ ಒದಗಿಬಂದಿದೆ. ಅದನ್ನು ಈಡೇರಿಸಲು ಮುಂದಾಗುವುದೆ?

ಪ್ರಶಾಂತ್ ಬುಳ್ಳಣ್ಣವರ, ಉಗರಗೋಳ

ಗೃಹಲಕ್ಷ್ಮೀ: ಅನಿಯಮಿತ ಹಣ ಪಾವತಿ

ಗೃಹಲಕ್ಷ್ಮೀ ಯೋಜನೆಯು ಮಹಿಳೆಯರ ಆರ್ಥಿಕ ಸಬಲೀಕರಣಕ್ಕೆ ನೆರವಾಗಿದೆ. ಆದರೆ, ಯೋಜನೆ ಜಾರಿಗೊಂಡ ದಿನದಿಂದಲೂ ಇಲ್ಲಿಯವರೆಗೆ ಪ್ರತಿ ತಿಂಗಳು ನಿಯಮಿತವಾಗಿ ಹಣ ಪಾವತಿಯಾಗುತ್ತಿಲ್ಲ. ಒಂದು ತಿಂಗಳ ಹಣ ಪಾವತಿ ಮಾಡಿದರೆ, ಮುಂದಿನ 3-4 ತಿಂಗಳ ಹಣ ಪಾವತಿ ಮಾಡುವುದಿಲ್ಲ. ಪಾವತಿ ವಿಳಂಬಕ್ಕೆ ತಾಂತ್ರಿಕ ಸಮಸ್ಯೆಯ ನೆಪ ಮುಂದಿಡುವುದು ಸಾಮಾನ್ಯವಾಗಿದೆ. ಇನ್ನೂ ಕೆಲವು ಮಹಿಳೆಯರ ಬ್ಯಾಂಕ್ ಖಾತೆಗೆ ಒಂದೇ ದಿನ ಎರಡೆರಡು ಕಂತು ಪಾವತಿಯಾದರೆ, ಕೆಲವರಿಗೆ ಬಾಕಿ ತಿಂಗಳುಗಳ ಒಂದೂ ಕಂತು ಜಮೆ ಆಗಿರುವುದಿಲ್ಲ. ಸರ್ಕಾರ ಕೊಟ್ಟ ಮಾತಿನಂತೆ ಪ್ರತಿ ತಿಂಗಳ ನಿರ್ದಿಷ್ಟ ದಿನಾಂಕದಂದು ಎಲ್ಲಾ ಫಲಾನುಭವಿಗಳ ಖಾತೆಗೆ ಏಕಕಾಲಕ್ಕೆ ಹಣ ಜಮೆ ಮಾಡಬೇಕಿದೆ.

ಸಂತೋಷ ಜಾಬೀನ್ ಸುಲೇಪೇಟ, ಕಲಬುರಗಿ

ನಕಲಿ ಪ್ರಮಾಣಪತ್ರ: ಅರ್ಹರಿಗೆ ತೊಂದರೆ

ರಾಜ್ಯದಲ್ಲಿ ನಕಲಿ ಪದವಿ ಪ್ರಮಾಣಪತ್ರಗಳ ಹಾವಳಿಯಿಂದ ಉನ್ನತ ಶಿಕ್ಷಣದ ಪಾವಿತ್ರ್ಯ ಮಲಿನಗೊಂಡಿದೆ. ಕಷ್ಟಪಟ್ಟು ಅಧ್ಯಯನ ಮಾಡಿ, ಪ್ರತಿಭೆಯಿಂದ ಪದವಿ ಪಡೆದವರಿಗೆ ನಕಲಿ ಜಾಲದ ಹಾವಳಿಯು ಕಂಟಕಪ್ರಾಯವಾಗಿದೆ. ಅರ್ಹತೆ ಮತ್ತು ಶ್ರಮಕ್ಕೆ ಬೆಲೆ ಇಲ್ಲದಂತಾಗಿದೆ. ಎಷ್ಟೋ ವಿದ್ಯಾರ್ಥಿಗಳ ಕನಸುಗಳು ಕಮರಿವೆ. ನಕಲಿ ಪದವಿ ಪ್ರಮಾಣಪತ್ರಗಳಿಗೆ ಕಡಿವಾಣ ಹಾಕುವುದಾಗಿ ಸರ್ಕಾರ ಹೇಳಿದೆ. ಈ ಭರವಸೆಯು ಕಾಗದದಲ್ಲಷ್ಟೆ ಉಳಿಯಬಾರದು. ವಿದ್ಯಾರ್ಥಿಗಳ ಭವಿಷ್ಯದ ಜೊತೆಗೆ ಚೆಲ್ಲಾಟ ಆಡುತ್ತಿರುವ ದಂಧೆಕೋರರ ವಿರುದ್ಧ ಕಠಿಣ ಕ್ರಮ ಜರುಗಿಸಬೇಕಿದೆ.

ಲಾರೆನ್ಸ್ ಡಿಸೋಜಾ, ರಾಯಚೂರು

ಶಾಲೆಗಳಲ್ಲಿ ಅನುರಣಿಸಲಿ 'ನೀರಿನ ಗಂಟೆ'

ರಾಜ್ಯದಲ್ಲಿರುವ ಎಲ್‌ಕೆಜಿ, ಯುಕೆಜಿ ಒಳಗೊಂಡಂತೆ ಎಲ್ಲಾ ಸರ್ಕಾರಿ, ಅನುದಾನಿತ ಮತ್ತು ಖಾಸಗಿ ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ದಿನಕ್ಕೆ ಮೂರು ಬಾರಿ ನೀರು ಕುಡಿಯುವಂತೆ ನೆನಪಿಸಲು 'ನೀರಿನ ಗಂಟೆ' ಬಾರಿಸುವಂತಹ ಕೆಲಸವು ಕಡ್ಡಾಯ ಆಗಬೇಕಿದೆ. ಶಾಲೆಯ ಮಕ್ಕಳಿಗೆ ಆಗಾಗ ನೀರು ಕುಡಿಯಬೇಕೆಂಬ ಅರಿವು ಅಷ್ಟಾಗಿ ಇಲ್ಲದೇ ಇರುವುದರಿಂದ, ವಿದ್ಯಾರ್ಥಿಗಳ ಆರೋಗ್ಯದ ದೃಷ್ಟಿಯಿಂದ ಶಾಲೆಗಳಲ್ಲಿ ನೀರು ಕುಡಿಯುವಂತೆ ನೆನಪಿಸಲು ಗಂಟೆ ಬಾರಿಸಬೇಕಾಗಿದೆ. ಬೆರಳೆಣಿಕೆಯಷ್ಟು ಶಾಲೆಗಳಲ್ಲಿ ಈ ಪದ್ಧತಿ ಈಗಾಗಲೇ ಇದೆ. ರಾಜ್ಯ ಸರ್ಕಾರ ಎಲ್ಲಾ ಶಾಲೆಗಳಲ್ಲೂ ಇಂತಹ ನಿಯಮವನ್ನು ಕಡ್ಡಾಯವಾಗಿ ಜಾರಿಗೆ ತರಬೇಕಿದೆ.

ಮಹೇಶ್ ಕೂದುವಳ್ಳಿ, ಚಿಕ್ಕಮಗಳೂರು

ಅಂಗವಿಕಲ ಕ್ರಿಕೆಟಿಗರನ್ನು ಪ್ರೋತ್ಸಾಹಿಸಿ

ಅಂಧರ ಮಹಿಳಾ ವಿಶ್ವಕಪ್ ಗೆದ್ದಿರುವ ಭಾರತ ತಂಡಕ್ಕೆ ಹೆಚ್ಚು ನಗದು ಪುರಸ್ಕಾರ ನೀಡುವ ಮೂಲಕ ಅವರಿಗೆ ಆತ್ಮವಿಶ್ವಾಸ ತುಂಬಬೇಕಿದೆ. ಅಂಗವೈಕಲ್ಯ ಹೊಂದದೆ ಇರುವವರ ಸಾಧನೆಗಿಂತ ಇವರ ಸಾಧನೆಯನ್ನು ವಿಶಿಷ್ಟವೆಂದು ಪರಿಗಣಿಸಬೇಕು. ಆಗಷ್ಟೇ ಅಂಗವಿಕಲರನ್ನು ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಲು ಪ್ರೇರೇಪಿಸಿದಂತಾಗುತ್ತದೆ.

ಬಸವರಾಜ ಕರೆಕಲ್, ಮಾವಿನ ಇಟಗಿ

ದುರಾಲೋಚನೆ ಬೇಡ

ಕರ್ನಾಟಕದ ಹೆರುವಣಿಕೆ ಅಂದರೆ ಒಟ್ಟು ಫಲವತ್ತತೆ ದರ 1.5ಕ್ಕೆ ಕುಸಿದಿದೆ. ಕನ್ನಡಿಗರ ಸಂತತಿ ಒಂದಷ್ಟು ವರ್ಷಗಳಲ್ಲಿ ನಿರ್ನಾಮ ಆಗಲಿದೆ. ಹಾಗಾಗಿ, ಸರ್ಕಾರ ಸಮುದಾಯಕ್ಕೆ ತೆರಿಗೆ ಕಡಿತ, ಮಕ್ಕಳು ಸಾಕಲು ಅನುದಾನ ಕೊಡಬೇಕು. ಅದು ಬಿಟ್ಟು ಪುರುಷರಿಗೆ ಸಂತಾನ ನಿರೋಧ ಶಸ್ತ್ರಚಿಕಿತ್ಸೆ ಮಾಡಲು ಹೊರಟಿದೆ. ಜನಸಂಖ್ಯೆ ಕಡಿತ ಮಾಡುವ ದುರಾಲೋಚನೆ ಬೇಡ.

ಅಮರನಾಥ್ ಶಿವಶಂಕರ್, ಟೆಕ್ಕಿ, 'ಎಕ್ಸ್'ನಿಂದ

ಕಿಡಿನುಡಿ

'ಹೈಕಮಾಂಡ್ ಕಪ್ಪ'ದ ಬಗ್ಗೆ ಬಹಳ ಆಸಕ್ತಿಯಿಂದ ಮಾತನಾಡುವ ಬಿಜೆಪಿ– ಹೈಕಮಾಂಡಿಗೆ ಎಷ್ಟು ಕಪ್ಪ ಕೊಟ್ಟು ಯಡಿಯೂರಪ್ಪನವರು ನಾಲ್ಕು ಬಾರಿ ಪ್ರಮಾಣ ವಚನ ಸ್ವೀಕರಿಸಿದ್ದರು? ಜಗದೀಶ ಶೆಟ್ಟರ್, ಸದಾನಂದಗೌಡ, ಬಸವರಾಜ ಬೊಮ್ಮಾಯಿ ಅವರು ಎಷ್ಟು ಬಿಡ್ ಕೂಗಿ ಮುಖ್ಯಮಂತ್ರಿಗಳಾದರು ಎಂಬ ಪ್ರಶ್ನೆಗಳಿಗೆ ಉತ್ತರಿಸುವುದೇ?

ಪ್ರಿಯಾಂಕ್ ಖರ್ಗೆ, ಐಟಿ–ಬಿಟಿ ಸಚಿವ

ಚುರುಮುರಿ

ನಾನೂ ಸಿಎಂ ಆಕಾಂಕ್ಷಿ

• ಮಣ್ಣೆ ರಾಜು

'ಪಕ್ಷದ ನಾಯಕರು 'ನಾನೂ ಸಿಎಂ ಆಕಾಂಕ್ಷಿ' ಅಭಿಯಾನ ಆರಂಭಿಸಿ ಸಿಎಂ ಕುರ್ಚಿ ಮೇಲೆ ಟವೆಲ್ ಹಾಕ್ತಿದ್ದಾರೆ, ನಾನೂ ಒಂದು ಟವೆಲ್ ಹಾಕಿದ್ದೇನೆ...' ಬೆಳಿಗ್ಗೆ ಉಪಾಹಾರ ಸೇವಿಸುತ್ತಾ ಪತ್ನಿಗೆ ಮಂತ್ರಿ ಹೇಳಿದರು.

'ಟವೆಲ್ ಹಾಕಿದವರೆಲ್ಲಾ ಸಿಎಂ ಆಗಲ್ಲ. ಹೈಕಮಾಂಡ್ ಕೃಪೆ, ಶಾಸಕರ ಬೆಂಬಲ ಇರಬೇಕು. ನಿಮ್ಮ ಖಾತೆಯನ್ನು ಸರಿಯಾಗಿ ನಿಭಾಯಿಸುತ್ತಿಲ್ಲ, ಇಲಾಖೆಯ ಸೌಲಭ್ಯ ಹಂಚುತ್ತಿಲ್ಲ ಅಂತ ಶಾಸಕರು ನಿಮ್ಮ ವಿರುದ್ಧ ತಿರುಗಿಬಿದ್ದಿದ್ದಾರೆ, ಮೊದಲು ಮಂತ್ರಿ ಸ್ಥಾನ ಉಳಿಸಿಕೊಳ್ಳಿ' ಅಂದರು ಪತ್ನಿ.

'ಕೊಡಬೇಕಾದ್ದನ್ನು ಕೊಟ್ಟು ಶಾಸಕರನ್ನು ಬುಟ್ಟಿಗೆ ಹಾಕಿಕೊಂಡು, ಅವರ ಸಹಿ ಸಂಗ್ರಹಿಸಿ, ಹೈಕಮಾಂಡ್ ಎದುರು ಶಾಸಕರ ಬೆಂಬಲ ತೋರಿಸ್ತೀನಿ. ಅದೃಷ್ಟ ಮತ್ತು ಹೈಕಮಾಂಡ್ ಕೃಪೆ ಇದ್ದರೆ ಶಾಸಕರ ಬೆಂಬಲವಿಲ್ಲದಿದ್ದರೂ ಸಿಎಂ ಆಗಿಬಿಡಬಹುದು!'

'ಅದೃಷ್ಟದ ಜೊತೆ ಅರ್ಹತೆಯೂ ಇರಬೇಕು'.

'ಪಕ್ಷದಲ್ಲಿ ನನಗೆ ಸೀನಿಯಾರಿಟಿ, ಸಿನ್ಸಿಯಾರಿಟಿ ಎರಡೂ ಇದೆ. ಪಕ್ಷಕ್ಕೆ, ಸಂಸಾರಕ್ಕೆ ಸಾಕಷ್ಟು ದುಡಿದಿದ್ದೇನೆ. ಸಿಎಂ ಆಗಲು ಇಷ್ಟು ಅರ್ಹತೆ ಸಾಲದೆ?' ಎಂದರು ಮಂತ್ರಿ.

'ನಿಮಗೆ ಮೈತುಂಬಾ ಕಾಯಿಲೆ. ಕಾರು ಹತ್ತಲು, ಇಳಿಯಲು, ವೇದಿಕೆ ಹತ್ತಿಹೋಗಿ ಭಾಷಣ ಮಾಡಲು ಇನ್ನೊಬ್ಬರ ಸಹಾಯಬೇಕು...'

'ನಮ್ಮ ಫ್ಯಾಮಿಲಿ ಡಾಕ್ಟರರಿಂದ ಹೆಲ್ತ್ ಸರ್ಟಿಫಿಕೆಟ್, ಫಿಟ್‌ನೆಸ್ ಸರ್ಟಿಫಿಕೆಟ್ ಕೊಟ್ಟರಾಯಿತು'.

'ಹಾಗಲ್ಲ ರೀ, ಸಿಎಂ ಕುರ್ಚಿ ಮೇಲೆ ಕೆಮ್ಮಿಕೊಂಡು, ಜೂಗರಿಸಿಕೊಂಡು ಬೆಡ್‌ಶೀಟ್ ಹೊದ್ದು ಕುಳಿತು ರಾಜ್ಯಭಾರ ಮಾಡಲಾಗುತ್ತಾ? ಸಿಎಂ ಆಸೆ ಬಿಟ್ಟುಬಿಡಿ...'

'ಹೋಗಲಿ, ನಿನ್ನ ಆಸೆ ಏನು?'

'ಪಿತ್ರಾರ್ಜಿತ ಆಸ್ತಿ ಸಾಕಷ್ಟಿದೆ. ಪುತ್ರಾರ್ಜಿತ ಆಸ್ತಿ ಬಗ್ಗೆ ನೀವು ಗಮನ ಹರಿಸಿಲ್ಲ...'

'ಅಂದರೆ?'

'ಮಗನಿಗೊಂದು ಕ್ಷೇತ್ರ ಹುಡುಕಿಕೊಡಿ, ಇಲ್ಲವೇ ನಿಮ್ಮ ಕ್ಷೇತ್ರವನ್ನೇ ಬಿಟ್ಟುಕೊಡಿ, ಮುಂದಿನ ಚುನಾವಣೆ ಗೆದ್ದು ಮಗ ಅಸೆಂಬ್ಲಿಗೆ ಹೋಗಲೇಬೇಕು...' ಖಡಕ್ಕಾಗಿ ಹೇಳಿದ ಪತ್ನಿಯ ಮಾತಿಗೆ, ಸುಮ್ಮನಿರಲಾರದೆ ಇರುವೆ ಬಿಟ್ಟುಕೊಂಡಂತೆ ಚಡಪಡಿಸತೊಡಗಿದೆ.

25 ವರ್ಷಗಳ ಹಿಂದೆ

ಭಾನುವಾರ, 26-11-2000

• **ಮಂಡ್ಯದಲ್ಲಿ ಗಲಭೆ, ನಿಷೇಧಾಜ್ಞೆ**

ಮಂಡ್ಯ, ನ. 25– ಯುವತಿಯೊಬ್ಬಳ ಆತ್ಮಹತ್ಯೆ ಘಟನೆಗೆ ಸಂಬಂಧಿಸಿ ಇಲ್ಲಿನ ಜಿಲ್ಲಾ ಆಸ್ಪತ್ರೆಯಲ್ಲಿ ಶವವಿಟ್ಟು ಸಾವಿರಾರು ಜನರು ಇಂದು ದಿನವಿಡೀ ಪ್ರತಿಭಟನೆ ನಡೆಸಿದರು. ಪೊಲೀಸರು ಲಾಠಿ ಪ್ರಹಾರ, ಅಶ್ರುವಾಯು ಪ್ರಯೋಗ ಮಾಡಿದರೂ ಹತೋಟಿಗೆ ಬರಲಿಲ್ಲ.

27ರವರೆಗೆ ಪಟ್ಟಣ ಮತ್ತು ಸುತ್ತಮುತ್ತಲ ಪ್ರದೇಶದಲ್ಲಿ 144ನೇ ವಿಧಿಯಡಿ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ.

75 ವರ್ಷಗಳ ಹಿಂದೆ

ಭಾನುವಾರ, 26-11-1950

• **ಸತ್ತ ಮೇಲೂ ಚರ್ಚೆಗೆ ತಲೆಬಾಗದ ಬರ್ನಾಡ್ ಷಾ**

ಲಂಡನ್, ನ. 25– ಜಾರ್ಜ್ ಬರ್ನಾಡ್ ಷಾರವರ ಮರಣ ಶಾಸನದಲ್ಲಿ 8 ಸಾವಿರ ಮಾತುಗಳಿವೆ. ಅವರ ಮಹಾ ಸಂಪತ್ತಿನ ಮೇಲೆ ಬೀಳಬಹುದಾದ ತೆರಿಗೆಗಳ ಸಮಸ್ಯೆಯ ತೊಡಕಿನಲ್ಲಿ ಧರ್ಮದರ್ಶಿಗಳು ಬಿದ್ದಿರುವುದರಿಂದ ಈ ಶಾಸನ ಬಹಿರಂಗವಾಗಿ ಪ್ರಕಟವಾಗಬೇಕಾದರೆ ಇನ್ನೂ ಕೆಲವು ತಿಂಗಳಾಗಬಹುದೆಂದು ಬಗೆಯಲಾಗಿದೆ.

ಇಂದು ಬಿಡುಗಡೆಯಾದ ಮರಣ ಶಾಸನದಲ್ಲಿ, 'ಕ್ರಿಯಾತ್ಮಕ ಪರಿಣಾಮ ವಾದವೇ ನನ್ನ ಧಾರ್ಮಿಕ ಹಾಗೂ ವೈಜ್ಞಾನಿಕ ನಂಬುಗೆಗಳೆಂದು ಹೇಳಬಹುದಾದುದರಿಂದ ನಾನು ವ್ಯವಸ್ಥಿತ ಚರ್ಚಿನ ಪದ್ಧತಿಗಳನ್ನು ಒಪ್ಪಿಕೊಂಡೆನೆಂದು ಸೂಚಿಸುವಂಥ ಯಾವುದೇ ಸ್ಮಾರಕವನ್ನೂ ನನಗೆ ರಚಿಸಬಾರದು ಮತ್ತು ಚಿತ್ರಹಿಂಸೆಯ ಅಥವಾ ರಕ್ತ ಬಲಿಯ ಸೂಚಕವಾಗಬಹುದಾದ ಶಿಲುಬೆಯ ಅಥವಾ ಯಾವುದೇ ರೀತಿಯಲ್ಲಿ ರೂಪಗೊಳಿಸಬಾರದು' ಎಂದು ಷಾ ಅವರು ಹೇಳಿದ್ದಾರೆ.

ಸಂಗತ

ಗಾಂಧಿಮಾರ್ಗ: ಅನ್ಯಥಾ ಶರಣಂ ನಾಸ್ತಿ!

ಪರಿಸರ ಮಾಲಿನ್ಯದ ತೀವ್ರತೆಯಿಂದ ಕಂಗೆಟ್ಟ ಕೊಪ್ಪಳ ಜಿಲ್ಲೆಯ ಜನರಿಗೆ, ತಮ್ಮ ಸಂಕಟಕ್ಕೆ ಉತ್ತರ ಕಂಡುಕೊಳ್ಳಲು 'ಗಾಂಧಿಮಾರ್ಗ'ವೇ ಸರಿಯಾದುದು ಎನ್ನಿಸಿದೆ.

• ಪ್ರಮೋದ ಕುಲಕರ್ಣಿ

ಮಹಾತ್ಮ ಗಾಂಧೀಜಿ ಅವರ ಅಹಿಂಸೆ ಮತ್ತು ಸತ್ಯಾಗ್ರಹ ಹೋರಾಟದ ಮಾದರಿ ವರ್ತಮಾನದಲ್ಲಿಯೂ ಪುನರಾವರ್ತನೆ ಆಗುತ್ತಿರುವುದಕ್ಕೆ ಹೊಸ ನಿದರ್ಶನ, ಕೊಪ್ಪಳ ಜಿಲ್ಲೆಯಲ್ಲಿ ನಡೆಯುತ್ತಿರುವ ಪರಿಸರ ಮಾಲಿನ್ಯವನ್ನು ವಿರೋಧಿಸಿ ನಡೆಯುತ್ತಿರುವ ಚಳವಳಿ.

ಬಿಸಿಲುನಾಡು ಎನಿಸಿರುವ ಕೊಪ್ಪಳ ಜಿಲ್ಲೆ ನೆಲ–ಜಲದ ವಿಷಯದಲ್ಲಿ ಸಂಪದ್ಭರಿತವಾದರೂ, ಆ ಸಂಪತ್ತೇ ಈಗ ಮುಳುವಾಗುತ್ತಿದೆ. ಹೇರಳವಾಗಿ ಲಭ್ಯವಿರುವ ತುಂಗಭದ್ರಾ ಜಲಾಶಯದ ನೀರು ಮಲಿನವಾಗಿದೆ. ಎರಡು ಮೂರು ದಶಕಗಳ ಹಿಂದೆ ಜಿದ್ದಿಗೆ ಬಿದ್ದಂತೆ ಆರಂಭವಾದ ಕಾರ್ಖಾನೆಗಳು ಈಗ ಕೊಪ್ಪಳ ಹಾಗೂ ಸುತ್ತಮುತ್ತಲಿನ 20ಕ್ಕೂ ಹೆಚ್ಚು ಗ್ರಾಮಗಳ ಜನರ ಬದುಕನ್ನು ದುರ್ಬರಗೊಳಿಸಿವೆ. ಕಾರ್ಖಾನೆಗಳು ಹೊರಸೂಸುತ್ತಿರುವ ಕಲುಷಿತ ಕಪ್ಪು ಕಣಗಳ ದೂಳಿನಿಂದಾಗಿ ಜನ ತತ್ತರಿಸಿದ್ದಾರೆ. ಇದರ ಕಾವು ಜಿಲ್ಲಾ ಕೇಂದ್ರದ ಜನರಿಗೂ ತಟ್ಟಿದೆ. ಕೈಗಾರಿಕೆಗಳು ಬಂದರೆ ಸ್ಥಳೀಯರಿಗೆ ಉದ್ಯೋಗ ಸಿಗುತ್ತದೆ, ಜಿಲ್ಲೆಯೂ ಅಭಿವೃದ್ಧಿಯಾಗುತ್ತದೆ ಎನ್ನುವುದು ಜನರ ನಿರೀಕ್ಷೆಯಾಗಿತ್ತು. ಕೈಗಾರಿಕೆಗಳಿಂದ ಸ್ಥಳೀಯರಿಗೆ ಒಂದಷ್ಟು ಉದ್ಯೋಗ ಸಿಕ್ಕಿರುವುದೂ ನಿಜ. ಆದರೆ, ಕಲುಷಿತ ದೂಳಿನಿಂದಾಗಿ ಜನರ ಆರೋಗ್ಯದ ಮೇಲೆ ಆದ ಗಂಭೀರ ಪರಿಣಾಮಕ್ಕೆ, ತೆತ್ತ ಬೆಲೆಗೆ ಲೆಕ್ಕವಿಲ್ಲ.

ಕೊಪ್ಪಳ ತಾಲ್ಲೂಕಿನ ಹಾಲವರ್ತಿ, ಕುಣಿಕೇರಿ, ಅಲ್ಲಾನಗರ, ಚಿಕ್ಕಬಗನಾಳ, ಹಿರೇಬಗನಾಳ, ಕಾಸನಕಂಡಿ, ಹೀಗೆ ಅನೇಕ ಗ್ರಾಮಗಳ ರೈತರು ಸ್ವಂತ ಭೂಮಿಯಿದ್ದರೂ ಉಳುಮೆ ಮಾಡಲಾಗದ ಸ್ಥಿತಿಯಿದೆ. 2024ರಲ್ಲಿ ಬಾಗಲಕೋಟೆಯ ತೋಟಗಾರಿಕಾ ವಿಜ್ಞಾನಗಳ ವಿಶ್ವವಿದ್ಯಾಲಯದ ಸಂಶೋಧಕರ ತಂಡ ಕಾರ್ಖಾನೆಗಳಿಂದ ಬಾಧಿತವಾದ ಗ್ರಾಮಗಳಲ್ಲಿ ಅಧ್ಯಯನ ನಡೆಸಿ, ಕೈಗಾರಿಕೆಗಳ ಕಪ್ಪು ದೂಳು ಎಲೆಗಳ ಮೇಲೆ ಬೀಳುವುದರಿಂದ ದ್ಯುತಿ ಸಂಶ್ಲೇಷಣೆ ಕ್ರಿಯೆ ಕುಂಠಿತವಾಗಿ, ಉತ್ಪಾದನೆ ಮೇಲೆ ಪರಿಣಾಮ ಬೀಳುವ ಸಾಧ್ಯತೆಯಿದೆ ಎಂದು ಆತಂಕ ವ್ಯಕ್ತಪಡಿಸಿದೆ.

ಕೊಪ್ಪಳ ತಾಲ್ಲೂಕು ವ್ಯಾಪ್ತಿಯಲ್ಲಿಯೇ ಸಣ್ಣ, ಮಧ್ಯಮ ಮತ್ತು ಬೃಹತ್ ಗಾತ್ರದ 202 ಕೈಗಾರಿಕೆಗಳಿವೆ. ಬೃಹತ್ ಕೈಗಾರಿಕೆಗಳಲ್ಲಿ 20ಕ್ಕೂ ಹೆಚ್ಚು ಕೈಗಾರಿಕೆಗಳು ಉಕ್ಕು ತಯಾರಿಸುತ್ತವೆ. ಅವುಗಳಿಂದ ಬರುವ ಕಪ್ಪು ದೂಳು ಜನರ ಬದುಕು ಮಬ್ಬಾಗಿಸಿದೆ. ಬಾಧಿತ ಊರುಗಳ ಜೊತೆ ಹೊಸ ಸಂಬಂಧ ಬೆಸೆಯಲು ಜನ ಹಿಂದೇಟು ಹಾಕುವಂತಾಗಿದೆ. ಈಗಿರುವ ಪರಿಸರ ಮಾಲಿನ್ಯದ ಸಮಸ್ಯೆಗಳು ಜನರಿಗೆ ನುಂಗಲಾಗದೆ, ಉಗುಳಲೂ ಆಗದೇ ಕಲುಷಿತ ಗಾಳಿಯಲ್ಲಿ ಏದುಸಿರು ಬಿಡುವಂತಾಗಿದೆ. ಈ ಎಲ್ಲ ಸಂಕಷ್ಟಗಳ ನಡುವೆ ಈಗಿರುವ ಬಲ್ಡೋಟಾ, ಕಿರ್ಲೋಸ್ಕರ್, ಕಲ್ಯಾಣಿ, ಮುಕುಂದ ಸುಮಿ ಹಾಗೂ ಎಕ್ಸ್‌ಇಂಡಿಯಾ ಸೇರಿದಂತೆ ಕೆಲವು ಕಾರ್ಖಾನೆಗಳು ನೂರಾರು ಎಕರೆ ಪ್ರದೇಶದಲ್ಲಿ ವಿಸ್ತರಣೆಗೆ ಮುಂದಾಗಿದ್ದು, ಜನರ ಏದುಸಿರು ಹೆಚ್ಚಾಗುವಂತೆ ಮಾಡಿವೆ.

ಕಾರ್ಖಾನೆಗಳ ವಿಸ್ತರಣೆ ವಿರೋಧಿಸಿ ಕೊಪ್ಪಳ ಜಿಲ್ಲಾ ಬಚಾವೊ ಆಂದೋಲನ ಸಮಿತಿ ಹಾಗೂ ಪರಿಸರ ಹಿತರಕ್ಷಣಾ ಜಂಟಿ ಕ್ರಿಯಾ ವೇದಿಕೆಯಿಂದ ಅನಿರ್ದಿಷ್ಟ ಧರಣಿ ಆರಂಭವಾಗಿದೆ. ಈ ಬೇಡಿಕೆ ಈಡೇರಿಕೆಗೆ ಕೊಪ್ಪಳ ಬಂದ್ ಸೇರಿದಂತೆ ಅನೇಕ ಹೋರಾಟಗಳು ಈ ಮೊದಲು ನಡೆದಿದ್ದರೂ ಪ್ರಯೋಜನವಾಗಿಲ್ಲ. ಹಾಗಾಗಿ, ಹೋರಾಟಗಾರರು ಈ ಬಾರಿ 'ಗಾಂಧಿ ಮಾರ್ಗ'ದ ಮೊರೆ ಹೋಗಿದ್ದಾರೆ. ನಿವೃತ್ತ ಉಪನ್ಯಾಸಕರು ಹಾಗೂ ಬೇರೆ ಬೇರೆ ವೃತ್ತಿಗಳಲ್ಲಿ ತೊಡಗಿಕೊಂಡವರು ಸೇರಿ ಆರಂಭಿಸಿದ ಧರಣಿ ಈಗ ಸಮಾಜಮುಖಿಯಾಗಿ ಪರಿವರ್ತನೆ ಹೊಂದಿದೆ.

ಸರಳತೆ ಹಾಗೂ ಅಹಿಂಸಾ ತತ್ತ್ವವನ್ನು ನಂಬಿಕೊಂಡು ನಿತ್ಯ ಒಂದೊಂದು ಸಂಘಟನೆಗಳು ಧರಣಿಯನ್ನು ಬೆಂಬಲಿಸುತ್ತಿವೆ. ಸಾಮಾಜಿಕ ಪ್ರಜ್ಞೆಯುಳ್ಳವರು ಕುಟುಂಬ ಸಮೇತ ಬಂದು ಹೋರಾಟದಲ್ಲಿ ತೊಡಗಿಕೊಂಡರೆ, ಸಾಹಿತಿಗಳು, ಕವಿಗಳು ಧರಣಿ ವೇದಿಕೆಯಲ್ಲಿ ಕವನ ವಾಚಿಸಿ ತಮ್ಮ ಪ್ರತಿರೋಧ ವ್ಯಕ್ತಪಡಿಸಿದ್ದಾರೆ. ಇನ್ನೂ ಕೆಲವರು ಉಪವಾಸ, ಮೌನವ್ರತ ಕೈಗೊಂಡಿದ್ದಾರೆ. ಅಹಿಂಸಾಮಾರ್ಗವೊಂದನ್ನೇ ಅಸ್ತ್ರವನ್ನಾಗಿಸಿಕೊಂಡು ಕಾರ್ಖಾನೆಗಳ ವಿರುದ್ಧದ ಹೋರಾಟವನ್ನು ಜನರ ಶಾಂತ ರೀತಿಯ ಹೋರಾಟವನ್ನಾಗಿ ರೂಪಿಸಲಾಗಿದೆ. ವಿಶೇಷವೆಂದರೆ, ಜನಸಾಮಾನ್ಯರು ಕೂಡ ಹೋರಾಟಕ್ಕೆ ಸಮಯ ಮೀಸಲಿಡುತ್ತಿದ್ದಾರೆ. ಹೋರಾಟ ಬೆಂಬಲಿಸಿ ಧರಣಿ ವೇದಿಕೆಯಲ್ಲಿ ಹೋರಾಟಗಾರರ ಜೊತೆಯಾಗಲು ಸಂಘ–ಸಂಸ್ಥೆಗಳು, ಸಮುದಾಯಗಳ ಮುಖಂಡರು, ಹಿರಿಯ ನಾಗರಿಕರು, ಯುವಕರು, ಮಹಿಳೆಯರು, ವಯೋವೃದ್ಧರು ಮುಂಗಡವಾಗಿ ಸರತಿಯಲ್ಲಿ ಹೆಸರು ನೋಂದಾಯಿಸುವ ಮೂಲಕ ಚಳವಳಿಗೆ ಹೊಸ ಆಯಾಮ ನೀಡುತ್ತಿದ್ದಾರೆ.

ಅನಿರ್ದಿಷ್ಟ ಹೋರಾಟ ಕೇವಲ ಕಾರ್ಖಾನೆಗಳ ವಿರುದ್ಧ ಮಾತ್ರವಲ್ಲ. ಸ್ವಚ್ಛ ಗಾಳಿ, ಪರಿಸರ, ನೀರು ಬೇಕು ಎನ್ನುವ ಬೇಡಿಕೆಗಳನ್ನೂ ಚಳವಳಿ ಒಳಗೊಂಡಿದೆ. ಪರಿಸರ ಮಾಲಿನ್ಯ ಉಂಟು ಮಾಡುತ್ತಿರುವ ಕಾರ್ಖಾನೆಗಳು ವಿಸ್ತರಣೆ ಆಗಬಾರದು, ಈಗಾಗಲೇ ಕಾರ್ಯ ನಿರ್ವಹಿಸುತ್ತಿರುವ ಕಾರ್ಖಾನೆಗಳು ಹೊಸ ತಂತ್ರಜ್ಞಾನಗಳನ್ನು ಅಳವಡಿಸಿಕೊಂಡು ಮಾಲಿನ್ಯದ ಪ್ರಮಾಣ ಕಡಿಮೆ ಮಾಡಬೇಕು; ಕೊಪ್ಪಳ ಹಾಗೂ ವಿಸ್ತರಣೆಗೆ ಮುಂದಾಗಿರುವ ಕಾರ್ಖಾನೆಗಳು ಎರಡೂ ಒಟ್ಟಿಗೆ ಇರಲು ಸಾಧ್ಯವಿಲ್ಲ ಎನ್ನುವುದು 'ಗಾಂಧಿ ಮಾರ್ಗ'ದ ಹೋರಾಟದ ಧ್ಯೇಯವಾಗಿದೆ.

ಕಾರ್ಖಾನೆಗಳ ವಿಸ್ತರಣೆ ಬೇಡ ಎನ್ನುವ ಬೇಡಿಕೆ ಒಂದೆಡೆಯಾದರೆ, ಹತ್ತಾರು ವರ್ಷಗಳ ಹಿಂದೆಯೇ ಭೂಮಿ ಕಳೆದುಕೊಂಡು– ಅತ್ತ ಉದ್ಯೋಗವೂ ಇಲ್ಲದೆ, ಇತ್ತ ಕಾರ್ಖಾನೆಯಲ್ಲಿ ನೌಕರಿಯೂ ಇಲ್ಲದೆ ಅಡಕತ್ತರಿಯಲ್ಲಿ ಸಿಲುಕಿದ ಇನ್ನೊಂದು ವರ್ಗವೂ ಇದೆ. ಅವರ ಕೂಗು ಅರಣ್ಯರೋದನವಾಗಿದೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.



ಸ್ವತಂತ್ರ ಭಾರತಕ್ಕೆ ಸಂವಿಧಾನವನ್ನು ರೂಪಿಸಲು ರಚನಾ ಸಭೆ ಸ್ಥಾಪನೆಯಾಗಿದ್ದು 1946ರಲ್ಲಿ. ಡಾ.ಬಿ.ಆರ್.ಅಂಬೇಡ್ಕರ್ ಅವರ ನೇತೃತ್ವದಲ್ಲಿ ನೂರಾರು ಮಂದಿ ಸುಮಾರು ಮೂರು ವರ್ಷ ಶ್ರಮಿಸಿ ಸಂವಿಧಾನ ರೂಪಿಸಿದರು. ಸಂವಿಧಾನ ರಚನಾ ಸಭೆಯು 1949ರ ನ.26ರಂದು ಸಂವಿಧಾನವನ್ನು ಅಂಗೀಕರಿಸಿತು. ದೇಶದಲ್ಲಿ ಸಂವಿಧಾನವು 1950 ಜ.26ರಂದು ಜಾರಿಗೆ ಬಂತು. ಸಂವಿಧಾನ ರಚನೆಯ ವೇಳೆ ಅಮೆರಿಕ, ಬ್ರಿಟನ್, ಐರ್ಲೆಂಡ್‌ನ ಸಂವಿಧಾನದ ಕೆಲವು ಅಂಶಗಳು, ಗಾಂಧಿ ತತ್ವಗಳಿಂದಲೂ ಪ್ರೇರಣೆ ಪಡೆಯಲಾಗಿದೆ. ಭಾರತದ ಸಂವಿಧಾನವು ಜಗತ್ತಿನಲ್ಲಿಯೇ ಅತ್ಯಂತ ವಿಶಿಷ್ಟ ಸ್ಥಾನ ಪಡೆದಿದ್ದು, ಹಲವು ದಾಖಲೆಗಳಿಗೆ ಪಾತ್ರವಾಗಿದೆ. ಜಗತ್ತಿನಲ್ಲಿಯೇ ಅತಿ ಹೆಚ್ಚು ತಿದ್ದುಪಡಿಗಳಾಗಿರುವ ಸಂವಿಧಾನ ಎನ್ನುವ ವಿಶೇಷತೆಯೂ ನಮ್ಮ ಸಂವಿಧಾನಕ್ಕಿದೆ. ಭಾರತದಂತಹ ನೂರಾರು ಜಾತಿ, ಹತ್ತಾರು ಧರ್ಮ, ವೈವಿಧ್ಯಮಯವಾದ ಸಂಸ್ಕೃತಿ, ಆಚರಣೆಗಳಿಂದ ಕೂಡಿರುವ ದೇಶಕ್ಕೆ ಸಂವಿಧಾನವನ್ನು ರೂಪಿಸುವುದು ಅತ್ಯಂತ ಸವಾಲಿನ ಕೆಲಸವಾಗಿತ್ತು. ಭಾರತವು ಇಂದು ಜಾಗತಿಕ ಮಟ್ಟದಲ್ಲಿ ಗಮನಾರ್ಹ ಸ್ಥಾನ ಪಡೆದಿದ್ದರೆ, ಅದಕ್ಕೆ ಕಾರಣ, ನಮ್ಮ ಸಶಕ್ತವಾದ ಸಂವಿಧಾನ. ಅದು ದೇಶದ ಆಡಳಿತ ಮತ್ತು ಜನರ ಚಿಂತನೆಯ ಚಾಲಕಶಕ್ತಿಯಾಗಿದೆ

ಜಗತ್ತಿನಲ್ಲಿ ವಿಶಿಷ್ಟ ಸ್ಥಾನ ಪಡೆದಿರುವ ಭಾರತದ ಸಂವಿಧಾನ

ಭಾರತದ ಪ್ರಜೆಗಳಾದ ನಾವು...

• ಬಿ.ವಿ.ಶ್ರೀನಾಥ್, ಸೂರ್ಯನಾರಾಯಣ ವಿ.


ಸಂವಿಧಾನದ ಪ್ರತಿಯಲ್ಲಿ ಕಲಾವಿದರ ಕೈಯಲ್ಲಿ ಮೂಡಿದ ರಾಮಾಯಣದ ಚಿತ್ರ



ಬುದ್ಧನ ಜೀವನ ಬಿಂಬಿಸುವ ಚಿತ್ರ

ಇಂದು ಸಂವಿಧಾನ ದಿನ

ಸಂವಿಧಾನ ರಚನಾ ಸಭೆ

ದೇಶದ ಸಂವಿಧಾನ ರೂಪಿಸುವಲ್ಲಿ ಮಹತ್ವದ ಪಾತ್ರವಹಿಸಿದ್ದು ಸಂವಿಧಾನ ರಚನಾ ಸಭೆ.

ದೇಶವು ಸ್ವತಂತ್ರಗೊಂಡ ನಂತರ ಸರ್ಕಾರ, ಆಡಳಿತ, ಜನಜೀವನಕ್ಕೆ ಮಾರ್ಗದರ್ಶನ ಮಾಡುವ ದಿಸೆಯಲ್ಲಿ ಸಂವಿಧಾನವೊಂದರ ಅಗತ್ಯವಿದೆ ಎಂಬುದು ಭಾರತ ಸ್ವಾತಂತ್ರ್ಯ ಪಡೆಯುವ ಹಾದಿಯಲ್ಲಿದ್ದಾಗ ರಾಷ್ಟ್ರ ನಾಯಕರಿಗೆ ಮನವರಿಕೆ ಆಯಿತು. ಅದಕ್ಕಾಗಿ 1946ರಲ್ಲಿ ಸಂವಿಧಾನ ರಚನಾ ಸಭೆಯನ್ನು ಸ್ಥಾಪಿಸಲಾಯಿತು. ಪರೋಕ್ಷ ಚುನಾವಣೆಯ ಮೂಲಕ ಆಯ್ಕೆಯಾದ ಪ್ರಾಂತೀಯ ಶಾಸನಸಭೆಗಳ ಸದಸ್ಯರನ್ನು ಸೇರಿಸಿ ಈ ರಚನಾ ಸಭೆಯನ್ನು ರೂಪಿಸಲಾಯಿತು. ಡಿ.9ರಂದು ಮೊದಲ ಅಧಿವೇಶನ ನಡೆಯಿತು. ಆಗ ಇದರಲ್ಲಿದ್ದ ಒಟ್ಟು ಸದಸ್ಯರ ಸಂಖ್ಯೆ 389. ದೇಶ ವಿಭಜನೆಯ (1947) ನಂತರ ಈ ಸಂಖ್ಯೆ 299ಕ್ಕೆ ಇಳಿಯಿತು.

ಡಾ.ಸಚ್ಚಿದಾನಂದ ಸಿನ್ಹಾ ಅವರು ಸಂವಿಧಾನ ರಚನಾ ಸಭೆಯ ಮೊದಲ ಅಧ್ಯಕ್ಷ. ನಂತರ ಡಾ.ರಾಜೇಂದ್ರ ಪ್ರಸಾದ್ ಅವರು ಅಧ್ಯಕ್ಷರಾದರು. ಸಂವಿಧಾನದಲ್ಲಿರುವ ಪ್ರತಿ ಕಲಂನ ಬಗ್ಗೆಯೂ ಸಂವಿಧಾನ ರಚನಾ ಸಭೆಯ ಸದಸ್ಯರು ಚರ್ಚೆ ಮಾಡಿದ್ದರು. ಸಂವಿಧಾನವನ್ನು ರೂಪಿಸುವ ಅವಧಿಯಲ್ಲಿ ರಚನಾ ಸಭೆಯ 11 ಅಧಿವೇಶನಗಳು ನಡೆದಿದ್ದು, ಒಟ್ಟು 167 ದಿನ ಚರ್ಚೆ ನಡೆದಿತ್ತು.

ಡಾ.ಬಿ.ಆರ್.ಅಂಬೇಡ್ಕರ್ ಮಹತ್ವ

ಡಾ.ಬಿ.ಆರ್.ಅಂಬೇಡ್ಕರ್ ಅವರು ಸಂವಿಧಾನ ರಚನಾ ಸಭೆಗೆ ಮುಂಬೈ ಪ್ರಾಂತ್ಯದಿಂದ ಸ್ಪರ್ಧಿಸಿದರೂ ಯಶಸ್ವಿಯಾಗಲಿಲ್ಲ. ನಂತರ ಬಂಗಾಳದಿಂದ ಆಯ್ಕೆಯಾದರು. ಆದರೆ, ದೇಶ ವಿಭಜನೆಯ ನಂತರ ತಮ್ಮ ಸ್ಥಾನ ಕಳೆದುಕೊಂಡರು. ಆದಾಗ್ಯೂ, ಕಾಂಗ್ರೆಸ್ ಪಕ್ಷವು ಅವರನ್ನು ಮುಂಬೈ ಪ್ರಾಂತ್ಯದಿಂದ ನಾಮನಿರ್ದೇಶನ ಮಾಡಿತು.

ಸಂವಿಧಾನ ರಚನೆಯ ಮಹತ್ವದ ಜವಾಬ್ದಾರಿಯನ್ನು ಕರಡು ರಚನಾ ಸಮಿತಿಗೆ ವಹಿಸಲಾಗಿತ್ತು. ಡಾ.ಬಿ.ಆರ್.ಅಂಬೇಡ್ಕರ್ ಅವರು ಸಮಿತಿಯ ಅಧ್ಯಕ್ಷರಾಗಿದ್ದರು. ಸಮಿತಿಗೆ ಅಂಬೇಡ್ಕರ್ ಅವರೇ ಅಧ್ಯಕ್ಷರಾಗಲಿ ಎನ್ನುವುದು ದೇಶದ ಒಳಗಿನ ಮತ್ತು ಹೊರಗಿನ ಅನೇಕ ಚಿಂತಕರ ಅಭಿಪ್ರಾಯವಾಗಿತ್ತು. ಕರಡು ರಚನಾ ಸಮಿತಿಯಲ್ಲಿದ್ದ ಆರು ಮಂದಿ ಸದಸ್ಯರೂ ಅಂಬೇಡ್ಕರ್ ಅವರೇ ಅಧ್ಯಕ್ಷರಾಗಲಿ ಎಂದಿದ್ದರು. ಐರ್ಲೆಂಡ್‌ನ ಸಂವಿಧಾನ ರಚಿಸಿದ ಮತ್ತು ಭಾರತದ ಸ್ವಾತಂತ್ರ್ಯ ಹೋರಾಟವನ್ನು ಬೆಂಬಲಿಸಿದ್ದ ಏಮನ್ ಡೆ ವಲೇರಾ ಅವರು ಕರಡು ರಚನಾ ಸಮಿತಿಗೆ ಅಂಬೇಡ್ಕರ್ ಅವರೇ ಸೂಕ್ತ ಎಂದಿದ್ದರು.

ಭಾರತದ ಕೊನೆಯ ವೈಸ್‌ರಾಯ್ ಮತ್ತು ಸ್ವತಂತ್ರ ಭಾರತದ ಮೊದಲ ಗವರ್ನರ್ ಜನರಲ್ ಆಗಿದ್ದ ಲಾರ್ಡ್ ಮೌಂಟ್ ಬ್ಯಾಟನ್ ಅವರ ಪತ್ನಿ ಎಡ್ವಿನಾ ಮೌಂಟ್ ಬ್ಯಾಟನ್ ಅವರು ಕೂಡ ಈ ಬಗ್ಗೆ ಸಂತಸ ವ್ಯಕ್ತಪಡಿಸಿದ್ದರು. 'ದೇಶದಲ್ಲಿರುವ ಪ್ರತಿ ಜಾತಿ, ಮತ, ಪಂಥಕ್ಕೂ ಸಮಾನ ನ್ಯಾಯ ಒದಗಿಸಬಲ್ಲ ಜೀನಿಯಸ್ ಅವರೊಬ್ಬರೇ' ಎನ್ನುವುದು ಅವರ ಅಭಿಪ್ರಾಯವಾಗಿತ್ತು. ಲಾರ್ಡ್ ಮೌಂಟ್ ಬ್ಯಾಟನ್ ಅವರಿಗೂ ಅಂಬೇಡ್ಕರ್ ಬಗ್ಗೆ, ಅವರ ಕೆಲಸದ ಬಗ್ಗೆ ಅಪಾರ ಗೌರವ, ತೃಪ್ತಿ ಇತ್ತು.

ಕರಡು ರಚನೆ ನಡೆಯುತ್ತಿದ್ದ ಕಾಲದಲ್ಲಿ ಅಂಬೇಡ್ಕರ್ ಅವರ ಆರೋಗ್ಯ ಅಷ್ಟೇನೂ ಉತ್ತಮವಾಗಿರಲಿಲ್ಲ. ಮಧುಮೇಹ ಮತ್ತು ರಕ್ತದೊತ್ತಡದಿಂದ ಅವರು ಬಳಲುತ್ತಿದ್ದರು. ಆದರೂ, ಕರಡು ರಚನೆಯ ಮತ್ತು ಅದಕ್ಕೆ ಸಂಬಂಧಿಸಿ ಸಂವಿಧಾನ ರಚನಾ ಸಮಿತಿಗೆ ವಿವರಿಸುವ ಬಹುತೇಕ ಕೆಲಸಗಳನ್ನು ಅಂಬೇಡ್ಕರ್ ಅವರೇ ಮಾಡಿದರು. ರಚನಾ ಸಭೆಯ ಸದಸ್ಯರಿಗೆ ಪ್ರತಿಯೊಂದು ಕಲಂ ಅನ್ನು ವಿವರಿಸುವುದು, ಅವರು ಸೂಚಿಸಿದ ತಿದ್ದುಪಡಿಗಳನ್ನು ಸಕಾರಣವಾಗಿ ಒಪ್ಪಿಕೊಳ್ಳುವುದು ಇಲ್ಲವೇ ತಿರಸ್ಕರಿಸುವುದು... ಹೀಗೆ ಸುಮಾರು 100 ದಿನ ಅಂಬೇಡ್ಕರ್ ಅವರು ಸಭೆಯಲ್ಲಿ ಪಾಲ್ಗೊಂಡು, ಹೆಚ್ಚಿನ ಜವಾಬ್ದಾರಿಗಳನ್ನು ನಿರ್ವಹಿಸಿದರು.

'ಸದಸ್ಯರ ಅನಾರೋಗ್ಯ, ಸಾವು, ಇತರೆ ಕೆಲಸಗಳ ಒತ್ತಡದಿಂದ, ಸಂವಿಧಾನದ ಕರಡು ರೂಪಿಸುವುದಕ್ಕೆ ಸಂಬಂಧಿಸಿದ ಹೆಚ್ಚಿನ ಹೊರೆಯು ಅಂಬೇಡ್ಕರ್ ಅವರ ಮೇಲೆಯೇ ಬಿದ್ದಿದೆ' ಎಂದು ಕರಡು ರಚನಾ ಸಮಿತಿಯ ಸದಸ್ಯರಾಗಿದ್ದ ಟಿ.ಟಿ.ಕೃಷ್ಣಮಾಚಾರಿ ಅವರು 1948ರ ಸಭೆಯಲ್ಲಿ ಹೇಳಿದ್ದರು. 'ಕೌಶಲದಿಂದ ಕೂಡಿದ ಸಂವಿಧಾನದ ಪೈಲಟ್' ಎಂದು ಅಂಬೇಡ್ಕರ್ ಅವರನ್ನು ರಾಜೇಂದ್ರ ಪ್ರಸಾದ್ ಬಣ್ಣಿಸಿದ್ದರು.

ವಿಶಿಷ್ಟ, ವಿಭಿನ್ನ ಸಂವಿಧಾನ

- ಇದು ಭಾರತದ ಪರಮೋಚ್ಚ ಕಾನೂನು
- ಒಕ್ಕೂಟ ವ್ಯವಸ್ಥೆಯಲ್ಲಿ ಸಂಸದೀಯ ಮಾದರಿಯ ಸರ್ಕಾರ ರಚನೆಗೆ ಸಂವಿಧಾನ ಅವಕಾಶ ನೀಡುತ್ತದೆ
- 1949ರ ನವೆಂಬರ್ 26ರಂದು ಅಂಗೀಕೃತಗೊಂಡು, 1950 ಜನವರಿ 26ರಂದು ಜಾರಿಗೆ ಬಂದಾಗ ಸಂವಿಧಾನವು 395 ವಿಧಿಗಳು, ಎಂಟು ಪರಿಚ್ಛೇದಗಳನ್ನು ಹೊಂದಿತ್ತು
- 1.45 ಲಕ್ಷ ಪದಗಳನ್ನು ಹೊಂದಿದ್ದ ಇದು ಜಗತ್ತಿನಲ್ಲೇ ಅತ್ಯಂತ ದೊಡ್ಡ ಸಂವಿಧಾನ
- ಕರಡು ಸಮಿತಿ ಅಧ್ಯಕ್ಷರಾದ ಡಾ.ಬಿ.ಆರ್.ಅಂಬೇಡ್ಕರ್ ಅವರು ನಮ್ಮ ಸಂವಿಧಾನದ ಮುಖ್ಯ ಶಿಲ್ಪಿ
- ಸ್ವತಂತ್ರ ಭಾರತದ ಮೊದಲ ರಾಷ್ಟ್ರಪತಿ ಡಾ.ರಾಜೇಂದ್ರ ಪ್ರಸಾದ್ ಅವರು ಸಂವಿಧಾನಕ್ಕೆ ಸಹಿ ಹಾಕಿದ ಮೊದಲಿಗರು
- ಈಗಲೂ ಇದು ಜಗತ್ತಿನ ಅತ್ಯಂತ ದೊಡ್ಡ ಸಂವಿಧಾನ. ಇದನ್ನು ಹಿಂದಿ ಮತ್ತು ಇಂಗ್ಲಿಷ್‌ನಲ್ಲಿ ಕೈಬರಹದಲ್ಲಿ ಬರೆಯಲಾಗಿದ್ದು, ಕ್ಯಾಲಿಗ್ರಫಿಯಿಂದ ಅಲಂಕೃತಗೊಂಡಿದೆ
- ಬ್ಯೋಹರ್ ರಾಮ್‌ಮನೋಹರ್ ಸಿನ್ಹಾ, ಪ್ರೇಮ್ ಬಿಹಾರಿ ನಾರಾಯಣ ರೈಝಾದಾ ಮತ್ತು ನಂದಲಾಲ್ ಬೋಸ್ ಸೇರಿದಂತೆ ಶಾಂತಿನಿಕೇತನ ಕಲಾವಿದರ ಚಿತ್ರಗಳು ಸಂವಿಧಾನದ ಪುಟಗಳಲ್ಲಿ ಸ್ಥಾನ ಪಡೆದಿವೆ
- ಅಂತಿಮ ಕರಡನ್ನು ಪೂರ್ಣಗೊಳಿಸಲು ಎರಡು ವರ್ಷ 11 ತಿಂಗಳು ಮತ್ತು 17 ದಿನಗಳನ್ನು ತೆಗೆದುಕೊಳ್ಳಲಾಗಿತ್ತು
- ಸದ್ಯ ಸಂವಿಧಾನವು 448 ವಿಧಿಗಳು, 25 ವಿಭಾಗಗಳು ಮತ್ತು 12 ಪರಿಚ್ಛೇದಗಳನ್ನು ಒಳಗೊಂಡಿದೆ. ಈವರೆಗೆ ಸಂವಿಧಾನಕ್ಕೆ 106 ಬಾರಿ ತಿದ್ದುಪಡಿ ತರಲಾಗಿದೆ
- 'ಭಾರತದ ಪ್ರಜೆಗಳಾದ ನಾವು..' ಎಂದು ಆರಂಭವಾಗುವ ಪ್ರಸ್ತಾವನೆಯು, ಸಂವಿಧಾನದ ಆಶಯಗಳನ್ನು, ಸಾರವನ್ನು ಪ್ರತಿನಿಧಿಸುತ್ತದೆ
- ದೇಶದಲ್ಲಿ ಸರ್ಕಾರ, ಆಡಳಿತ ವ್ಯವಸ್ಥೆ ಯಾವ ರೀತಿ ಇರಬೇಕು, ಅದಕ್ಕಾಗಿ ಯಾವ ರೀತಿಯ ಕಾನೂನು, ನಿಯಮಗಳು ಇರಬೇಕು ಎಂಬುದನ್ನು ಸಂವಿಧಾನದಲ್ಲಿ ಸ್ಪಷ್ಟವಾಗಿ ನಮೂದಿಸಲಾಗಿದೆ. ಆದರೆ, ಬೇರೆ ದೇಶಗಳ ಸಂವಿಧಾನಗಳಲ್ಲಿ ಸ್ಥೂಲ ಮಾರ್ಗಸೂಚಿ/ ಅಂಶಗಳು ಮಾತ್ರ ಇರುತ್ತವೆ
- ಅಗತ್ಯವಿದ್ದ ಸಂದರ್ಭಗಳಲ್ಲಿ ಸಂವಿಧಾನಕ್ಕೆ ತಿದ್ದುಪಡಿ ಮಾಡಲು ಸಂಸತ್ತಿಗೆ ಅಧಿಕಾರವನ್ನು ಸಂವಿಧಾನ ನೀಡಿದೆ
- ಒಕ್ಕೂಟ ವ್ಯವಸ್ಥೆಯನ್ನು ಪ್ರತಿಪಾದಿಸುತ್ತದೆ. ಕೇಂದ್ರ ಸರ್ಕಾರದ ಮಾದರಿಯಲ್ಲಿ ರಾಜ್ಯ ಸರ್ಕಾರಗಳಿಗೂ ಅಧಿಕಾರ ನೀಡಿದೆ. ವಿಶೇಷ/ತುರ್ತು ಸಂದರ್ಭಗಳಲ್ಲಿ ಪೂರ್ಣ ಅಧಿಕಾರವನ್ನು ಕೇಂದ್ರಕ್ಕೆ ನೀಡುತ್ತದೆ
- ಪ್ರಜಾಪ್ರಭುತ್ವದ ಮೂರು ಅಂಗಗಳಾದ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗಗಳಿಗೆ ಪ್ರತ್ಯೇಕ ಜವಾಬ್ದಾರಿಗಳನ್ನು ನೀಡಿದೆ
- ಶಾಸನಗಳು ಅಥವಾ ಸಂವಿಧಾನವನ್ನು ಉಲ್ಲಂಘಿಸುವ ಸರ್ಕಾರದ ಕ್ರಮಗಳನ್ನು ರದ್ದು ಮಾಡುವ ಅಧಿಕಾರವನ್ನು ಸ್ವತಂತ್ರ ನ್ಯಾಯಾಂಗಕ್ಕೆ ಕೊಟ್ಟಿದೆ
- ಜಾತ್ಯತೀತ ತತ್ವ ಪ್ರತಿಪಾದಿಸುತ್ತದೆ. ತಮಗೆ ಇಷ್ಟವಾದ ಧರ್ಮವನ್ನು ಅನುಸರಿಸುವ ಹಕ್ಕನ್ನು ಪ್ರಜೆಗಳಿಗೆ ನೀಡಿದೆ
- ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಪ್ರತ್ಯೇಕ ಕಾನೂನುಗಳನ್ನು ರೂಪಿಸಿದರೂ ಈ ಕಾನೂನುಗಳ ಅನುಷ್ಠಾನದ ಮೇಲುಸ್ತುವಾರಿಗೆ ವಿವಿಧ ಹಂತದ ನ್ಯಾಯಾಲಯಗಳನ್ನೊಳಗೊಂಡ ಒಂದು ಸಂಯೋಜಿತ ವ್ಯವಸ್ಥೆಗೆ ಸಂವಿಧಾನ ಅವಕಾಶ ನೀಡಿದೆ
- ಪ್ರಜೆಗಳಿಗೆ ಆರು ಮೂಲಭೂತ ಹಕ್ಕುಗಳು ಮತ್ತು 11 ಮೂಲಭೂತ ಕರ್ತವ್ಯಗಳನ್ನು ನೀಡಿದೆ. ಕಾನೂನಿನ ಮುಂದೆ ಎಲ್ಲರೂ ಸಮಾನರು ಎಂದೂ ಹೇಳಿದೆ

ಆಧಾರ: ಸಂಸದ್.ಇನ್, ಸುಪ್ರೀಂ ಕೋರ್ಟ್ ವೆಬ್‌ಸೈಟ್‌ಗಳು, ಬಿಬಿಸಿ, ಪಿಐಬಿ ಚಿತ್ರಗಳು: ಲಲಿತಕಲಾ ಅಕಾಡೆಮಿ ವೆಬ್‌ಸೈಟ್

ಸಂವಿಧಾನದ ಪ್ರತಿಯಲ್ಲಿ ಚಿತ್ರಿಸಲಾಗಿರುವ ಟಿಪ್ಪು ಸುಲ್ತಾನ್

ಬ್ರಿಟಿಷರ ವಿರುದ್ಧ ಹೋರಾಡಿದ ರಾಣಿ ಲಕ್ಷ್ಮೀಭಾಯಿಯ ಚಿತ್ರವೂ ಸಂವಿಧಾನದಲ್ಲಿದೆ

ಆ 15 ಮಹಿಳೆಯರು

299 ಸದಸ್ಯರ ಸಂವಿಧಾನ ರಚನಾ ಸಭೆಯಲ್ಲಿ 15 ಮಂದಿ ಮಹಿಳೆಯರಿದ್ದರು. ಮಹಿಳೆಯರ ಹಕ್ಕುಗಳು ಸೇರಿದಂತೆ ಸಂವಿಧಾನದಲ್ಲಿ ಅಡಕವಾಗಿರುವ ಹಲವು ಪ್ರಮುಖ ವಿಚಾರಗಳಲ್ಲಿ ಇವರ ಕೊಡುಗೆ ಮಹತ್ವಪೂರ್ಣವಾದುದು ಎನ್ನಲಾಗಿದೆ. ಇವರ ಪೈಕಿ ಸರೋಜಿನಿ ನಾಯ್ಡು, ಸುಚೇತಾ ಕೃಪಲಾನಿ, ವಿಜಯಲಕ್ಷ್ಮಿ ಪಂಡಿತ್, ಪೂರ್ಣಿಮಾ ಬ್ಯಾನರ್ಜಿ, ರಾಣಿ ಅಮೃತ್ ಕೌರ್, ರೇಣುಕಾ ರಾಯ್, ಆ್ಯನಿ ಮ್ಯಾಸ್ಕರೆನ್ ಪ್ರಮುಖರಾದವರು.

ಕೇರಳದ ಪಾಲ್ಘಾಟ್‌ನ ಅಮ್ಮು ಸ್ವಾಮಿನಾಥನ್, ಉತ್ತರ ಪ್ರದೇಶದ ಬೇಗಂ ಅಜಾಜ್ ರಸೂಲ್, ಆಂಧ್ರ ಪ್ರದೇಶದ ದುರ್ಗಾಬಾಯಿ ದೇಶಮುಖ್, ಬರೋಡದ ಹನ್ಸ ಜೀವರಾಜ್ ಮೆಹತಾ, ಲಖನೌದ ಕಮಲಾ ಚೌಧರಿ, ಬಂಗಾಳದ ಮಾಲತಿದೇವಿ ಚೌಧರಿ, ಅಸ್ಸಾಂನ ಲೀಲಾ ರಾಯ್ ಕೂಡ ಸಂವಿಧಾನ ರಚನಾ ಸಭೆಯಲ್ಲಿ ಸ್ಥಾನ ಪಡೆದಿದ್ದರು. ಇವರೆಲ್ಲರ ಜತೆಗೆ ಕೊಚ್ಚಿಯ ದಾಕ್ಷಾಯಿಣಿ ವೇಲಾಯುಧನ್ ಅವರೂ ಇದ್ದರು. ಕೇರಳದ ಕೊಚ್ಚಿಯ ಇವರು, ಪೂಲೆಯ (ಎಸ್‌ಸಿ) ಸಮುದಾಯಕ್ಕೆ ಸೇರಿದ್ದರು. ಜಾತಿ ತಾರತಮ್ಯದ ವಿರುದ್ಧ ಹೋರಾಟ ನಡೆಸಿದ್ದ ಇವರು ಸಂವಿಧಾನ ರಚನೆಯ ವೇಳೆ ದಲಿತರು, ಆದಿವಾಸಿಗಳ ಹಕ್ಕುಗಳ ವಿಚಾರದಲ್ಲಿ ಅಂಬೇಡ್ಕರ್ ಅವರಿಗೆ ಬೆಂಬಲವಾಗಿ ನಿಂತಿದ್ದರು.

ಕಡಲ ದಂಡೆಯ ಬಾಳು

ನುಡಿ ಬೆಳಗು

ವಾಸುದೇವ ನಾಡಿಗ್

ದೈನಂದಿನ ಅನೇಕ ಚಿತ್ರಗಳು ಮತ್ತು ಪ್ರಕ್ರಿಯೆಗಳು ಅದೆಷ್ಟೋ ಅನುಭವಗಳಿಗೆ ದೃಷ್ಟಾಂತವಾಗಬಲ್ಲವು. ಕಾಣುವ ಕಣ್ಣು ಮತ್ತು ಅದರ ಮೂಲಕ ಮಿದುಳನ್ನು ಪ್ರವೇಶಿಸಿ ಹೃದಯಕ್ಕೆ ಸಂದೇಶ ಕೊಡಬೇಕಷ್ಟೆ. ಈ ಸಂದೇಶಗಳೇ ವಿಚಾರಗಳಾಗಿ ನಮ್ಮ ಬದುಕನ್ನು ರೂಪಿಸುತ್ತವೆ. ಅನೇಕ ಸಂತರು ಶರಣರು ಕವಿ ಮುನಿಗಳು ಎಂತಹ ಉದಾಹರಣೆಗಳ ಮೂಲಕವೇ ಅನುಭವವೊಂದನ್ನು ಕಣ್ಣಮುಂದೆ ತಂದು ನಿಲ್ಲಿಸುತ್ತಾರೆ. ಅದರಲ್ಲೂ ಕಡಲನ್ನು ಉದಾಹರಿಸುವ ಮಾತುಗಳಂತೂ ಅಗಾಧವಾಗಿವೆ. ಬಾಳಿನ ವೈಶಾಲ್ಯ ಮತ್ತು ನಶ್ವರತೆ ಎರಡಕ್ಕೂ ಹತ್ತು ಹಲವು ಉದಾಹರಣೆಗಳನ್ನು ನೀಡಬಲ್ಲ ಕಡಲು ಹೀಗೂ ಅಗಾಧವೇ.

ಒಬ್ಬ ಮಹಿಳೆ ದಂಡೆಯಲ್ಲಿ ಕುಳಿತಿರುವಾಗಲೇ ಅವಳ ಪತಿ ಈಜಾಡಲು ಕಡಲಿಗೆ ಇಳಿದು ಒಂದು ಅಚಾನಕ ಅಬ್ಬರಕ್ಕೆ ಬಲಿಯಾಗಿ ಮೇಲೆ ಬಾರದೇ ಹೋಗಿಬಿಡುತ್ತಾನೆ. ರೋದಿಸುತ್ತ ಅವಳು ಕಡಲನ್ನು ದೂರಿ 'ಕಡಲು ವಿನಾಶಕಾರಿ' ಎಂದು ದೊಡ್ಡ ಅಕ್ಷರಗಳಲ್ಲಿ ಬರೆದು ಹೋದಳು. ಪಕ್ಕದ ಮತ್ತೊಂದು ಬದಿಗೆ ಒಬ್ಬ ಬಲೆಯನ್ನು ಬೀಸಿ ಮೀನುಗಳನ್ನು ಹಿಡಿದಾಗ ಅವನು ಕೂಡಾ ಖುಷಿಯಿಂದ 'ಕಡಲು ರಕ್ಷಕ' ಎಂದು ಬರೆದು ಹೋದನು. ಅಲ್ಲೇ ತುಸು ದೂರದಲ್ಲಿ ಇಬ್ಬರು ಮಕ್ಕಳು ಮರಳಿನಲ್ಲಿ ಮನೆ ಕಟ್ಟಿ ಆಟವಾಡುವಾಗ ದಂಡೆಯಲ್ಲಿ ಬಿಟ್ಟಿದ್ದ ಒಬ್ಬ ಹುಡುಗನ ಶೂಗಳು ಅಲೆಯಲ್ಲಿ ತೇಲಿಹೋಗುತ್ತವೆ. ಆ ಹುಡುಗ ಜೋರಾಗಿ ಸಿಟ್ಟಿನಿಂದ ಕೂಗುತ್ತ 'ಕಡಲು ಒಬ್ಬ ದೊಡ್ಡ ಕಳ್ಳ' ಎಂದು ಬರೆಯುತ್ತಾನೆ. ಮತ್ತೊಂದು ಬದಿಯಲ್ಲಿ ನಡೆದು ಬರುತ್ತಿದ್ದ ವೃದ್ಧ ಬಿಕ್ಷುಕನಿಗೆ ಅರೆತೆರೆದ ಒಂದು ಕಪ್ಪೆ ಚಿಪ್ಪು ಕಾಣುತ್ತದೆ. ತೆರೆದು ನೋಡಿದಾಗ ಅದರ ಒಳಗೆ ಫಳ ಫಳ ಹೊಳೆವ ಮುತ್ತುಗಳು ಕಾಣಿಸುತ್ತವೆ. ಅತ್ಯಂತ ಖುಷಿಯಿಂದ ಆ ವೃದ್ಧ ಮರಳಿನ ಮೇಲೆ 'ಕಡಲು ಒಂದು ಅಗಾಧ ನಿಧಿ' ಎಂದು ಬರೆಯುತ್ತಾನೆ. ಕಡಲು ಕೊಟ್ಟ ಅನುಭವವನ್ನು ಗ್ರಹಿಸುತ್ತ ನಾಲ್ಕು ಮನಸ್ಸುಗಳು ನಾಲ್ಕು ಬಗೆಯಲ್ಲಿ ಮರಳಿನ ಮೇಲೆ ಬರೆಯುವುದರ ಮೂಲಕ ತಮ್ಮ ಭಾವವನ್ನು ವ್ಯಕ್ತಪಡಿಸುತ್ತವೆ. ಎಲ್ಲ ಮುಗಿದು ಕತ್ತಲಾದ ಬಳಿಕ ಅವರವರು ಅವರ ಮನೆಯ ದಾರಿ ಹಿಡಿದಾಗ ಅಗಾಧವಾದ ಅಲೆಯೊಂದು ನುಗ್ಗಿ ಆ ನಾಲ್ವರ ಸಾಲುಗಳನ್ನು ಅಳಿಸಿ ಬಿಡುತ್ತದೆ.

ಬಾಳಿನ ಸಾರವನ್ನೇ ಸಾರುವ ಈ ದೃಷ್ಟಾಂತ ಬಹುವಾಗಿ ಕಾಡಬಲ್ಲದು. ಇರುವ ಮತ್ತು ಇಲ್ಲವಾಗುವ ಗಳಿಗೆಗಳ ಮಧ್ಯೆ ನಾವು ನಮ್ಮ ಬಾಳನ್ನು ಹಸನುಗೊಳಿಸಿಕೊಳ್ಳುವ ಮತ್ತು ಮಾಗುವ ಬಗೆಯನ್ನು ಚೊಕ್ಕವಾಗಿ ಹೇಳಿಬಿಡುತ್ತದೆ. ಜೀವನ ಎಂದರೆ ನಾವು ಘಟನೆಗಳಿಗೆ ಕೊಡುವ ಪ್ರತಿಕ್ರಿಯೆ ಅಷ್ಟೇ. ನಮ್ಮ ಮುಗ್ಧತೆ, ಜಾಣತನ, ಹುಂಬತನ, ಭಾವನಾತ್ಮಕ ಗಟ್ಟಿತನ, ಮಾನಸಿಕ ದೌರ್ಬಲ್ಯ ಇತ್ಯಾದಿಗಳ ಮೂಲಕವೇ ಬಾಳಿಗೆ ಉತ್ತರ ಕೊಡುತ್ತ ಹೋಗುತ್ತೇವೆ. ಆದರೆ ಕಡಲಿನ ಮರಳಿನ ಮೇಲೆ ಬರೆದ ಸಾಲುಗಳು ಉಳಿಯುವುದಿಲ್ಲ. 'ಬದುಕಿನ ಸತ್ಯ ಇದು ಅಲ್ಲವೇ ಅಲ್ಲ' ಎಂಬ ಪಾಠವೇ ನಾಳೆ ಮತ್ತೆ ಬಾಳಲು ಪ್ರೇರಣೆ ನೀಡುತ್ತದೆ. ಇಳಿಸಂಜೆ ಖಾಲಿಯಾದ ಕಡಲ ದಂಡೆ ಮತ್ತು ಕಾಣದಾದ ಅಲ್ಲಿನ ಗೆರೆಕೊರೆಗಳು ಕೂಡಾ ಮತ್ತೆ ನಾಳಿನ ಹುಡುಕಾಟಕ್ಕೆ ಪ್ರೇರಣೆಯಾದೀತು. ಜೀವನಕ್ಕೆ ಇದಕ್ಕಿಂತ ಉದಾಹರಣೆ ಬೇಕೆ?

ಗುಂಡಣ್ಣ

ರಾಷ್ಟ್ರೀಯ

ಇಥಿಯೋಪಿಯಾದ ಅಫಾರ್ ವಲಯದಲ್ಲಿ ಸಕ್ರಿಯವಾಗಿರುವ ಜ್ವಾಲಾಮುಖಿಯ ಬೂದಿ ಆಗಸವನ್ನು ಆವರಿಸಿರುವುದನ್ನು ಸ್ಥಳೀಯರು ವೀಕ್ಷಿಸಿದರು

ಜ್ವಾಲಾಮುಖಿಯ ಬೂದಿ ವಿಮಾನಗಳ ಸಂಚಾರಕ್ಕೆ ಅಡ್ಡಿ

ನವದೆಹಲಿ(ಪಿಟಿಐ): ಇಥಿಯೋಪಿಯಾದಲ್ಲಿ ಜ್ವಾಲಾಮುಖಿ ಸ್ಫೋಟದಿಂದ ಉಂಟಾದ ಬೂದಿಯ ಮೋಡಗಳು ಮಂಗಳವಾರ ಭಾರತದ ಕೆಲವು ಭಾಗಗಳನ್ನು ಪ್ರವೇಶಿಸಿದ್ದು, ಇದರಿಂದ ವಿಮಾನಗಳ ಹಾರಾಟಕ್ಕೆ ಅಡ್ಡಿಯುಂಟಾಗಿದೆ. ಆದರೆ, ಹವಾಮಾನ ಅಥವಾ ವಾಯು ಗುಣಮಟ್ಟದ ಮೇಲೆ ಯಾವುದೇ ರೀತಿಯ ಪರಿಣಾಮ ಬೀರಿಲ್ಲ ಎಂದು ಭಾರತೀಯ ಹವಾಮಾನ ಇಲಾಖೆ ಮತ್ತು ನಾಗರಿಕ ವಿಮಾನಯಾನ ಸಚಿವಾಲಯ ತಿಳಿಸಿವೆ.

ಬೂದಿ ಮೋಡಗಳ ಕಾರಣದಿಂದಾಗಿ ಕೆಲವೊಂದು ವಿಮಾನಗಳ ಹಾರಾಟ ರದ್ದಾಗಿದ್ದು, ಇನ್ನೂ ಕೆಲವು ವಿಮಾನಗಳ ಸಂಚಾರ ವಿಳಂಬವಾಗಿದೆ. ಪ್ರತಿಕೂಲ ಹವಾಮಾನ ಕಂಡು ಬಂದ ಕಾರಣದಿಂದ ಏರ್ ಇಂಡಿಯಾ ಕಂಪನಿಯು, ಮಂಗಳವಾರ ಬೆಳಿಗ್ಗೆ ಅಂತರರಾಷ್ಟ್ರೀಯ ಸೇವೆಗಳು ಸೇರಿದಂತೆ 13 ವಿಮಾನಗಳ ಸಂಚಾರವನ್ನು ರದ್ದುಗೊಳಿಸಿತು. ನಾಗರಿಕ ವಿಮಾನಯಾನ ಸಚಿವಾಲಯ ಮತ್ತು ಐಎಂಡಿ ಪರಿಸ್ಥಿತಿ ಮೇಲೆ ನಿಗಾವಹಿಸುತ್ತಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಜ್ವಾಲಾಮುಖಿಯ ಬೂದಿ ಹವಾಗೋಳದ ಪ್ರದೇಶದಲ್ಲಿ ಕಂಡುಬರುತ್ತಿದೆ. ಇದು ವಿಮಾನ ಸಂಚಾರಕ್ಕೆ ಅಡ್ಡಿಯಾಗುತ್ತಿದ್ದು, ಗಾಳಿಯ ಗುಣಮಟ್ಟ ಅಥವಾ ಹವಾಮಾನದ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ. ಬೂದಿ ಮೋಡವು ಚೀನಾದ ಕಡೆಗೆ ಚಲಿಸುತ್ತಿದ್ದು, ಶೀಘ್ರವೇ ಭಾರತದ ಆಕಾಶದಿಂದ ದೂರ ಸರಿಯುತ್ತದೆ' ಎಂದು ಮಹಾಪಾತ್ರ ಹೇಳಿದರು.

ಇಥಿಯೋಪಿಯಾದ ಅಫಾರ್ ವಲಯದಲ್ಲಿ ಹೈಲಿ ಗುಬ್ಬಿ ಜ್ವಾಲಾಮುಖಿ ಭಾನುವಾರ ಸ್ಫೋಟಗೊಂಡು, ಸುಮಾರು 14 ಕಿ.ಮೀ (45,000 ಅಡಿ) ಎತ್ತರಕ್ಕೆ ಹಾರಿ ಕೆಂಪು ಸಮುದ್ರದ ಪೂರ್ವದತ್ತ ವ್ಯಾಪಿಸಿತು. ಗುಜರಾತ್, ದೆಹಲಿ-ಎನ್‌ಸಿಆರ್, ರಾಜಸ್ಥಾನ, ಪಂಜಾಬ್ ಮತ್ತು ಹರಿಯಾಣದಲ್ಲೂ ಈ ಬೂದಿಯ ಪರಿಣಾಮ ಬೀರಬಹುದು ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ (ಸಿಪಿಸಿಬಿ) ಬೆಳಗಿನ ವಾಯು ಗುಣಮಟ್ಟ ಕುರಿತು ಹೊರಡಿಸಿದ ಪ್ರಕಟಣೆ ಪ್ರಕಾರ, 'ದೆಹಲಿಯಲ್ಲಿ ವಾಯು ಗುಣಮಟ್ಟದ ಸೂಚ್ಯಂಕ (ಎಕ್ಯೂಐ) ಸೋಮವಾರ 382 ದಾಖಲಾಗಿತ್ತು. ಮಂಗಳವಾರ 360ಕ್ಕೆ ಇಳಿದಿದೆ. 'ತುಂಬಾ ಕಳಪೆ' ವರ್ಗದಲ್ಲಿಯೇ ಉಳಿದಿದೆ.

ಸತ್ಯದ ರಕ್ಷಣೆಯೇ ಗುರು ತೇಗ್ ಬಹದ್ದೂರ್ ಧರ್ಮವಾಗಿತ್ತು: ಮೋದಿ

ಕುರುಕ್ಷೇತ್ರ(ಪಿಟಿಐ): 'ಸತ್ಯ, ನ್ಯಾಯ ಹಾಗೂ ನಂಬಿಕೆಯ ರಕ್ಷಣೆಯೇ ತನ್ನ ಧರ್ಮ ಎಂಬುದಾಗಿ ಗುರು ತೇಗ್ ಬಹದ್ದೂರ್ ಪರಿಗಣಿಸಿದ್ದರು. ಈ ಉದ್ದೇಶಕ್ಕಾಗಿಯೇ ಅವರು ತಮ್ಮ ಪ್ರಾಣತ್ಯಾಗ ಮಾಡಿದರು' ಎಂದು ಪ್ರಧಾನಿ ಮೋದಿ ಮಂಗಳವಾರ ಹೇಳಿದರು.

ಸಿಖ್ ಧರ್ಮದ 9ನೇ ಗುರು ಆಗಿರುವ ಗುರು ತೇಗ್ ಬಹದ್ದೂರ್ ಅವರ 350ನೇ ಹುತಾತ್ಮ ದಿನದ ಅಂಗವಾಗಿ ಹಮ್ಮಿಕೊಂಡಿದ್ದ ವಿಶೇಷ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ನನ್ನ ನೇತೃತ್ವದ ಸರ್ಕಾರ ಕೂಡ ಈ ಗುರು ಪರಂಪರೆಯನ್ನು ಮುಂದುವರಿಸಿಕೊಂಡು ಹೋಗಲಿದೆ' ಎಂದರು.

ಇದೇ ವೇಳೆ ಅವರು, ಗುರು ತೇಗ್ ಬಹದ್ದೂರ್ ಅವರ 350ನೇ ಹುತಾತ್ಮ ದಿನದ ಅಂಗವಾಗಿ ಹೊರತಂದಿರುವ ವಿಶೇಷ ನಾಣ್ಯ, ಅಂಚೆ ಚೀಟಿ ಬಿಡುಗಡೆ ಮಾಡಿದರು.

'ಇಂದು ಬೆಳಿಗ್ಗೆ ಶ್ರೀರಾಮ ಪ್ರಭುವಿನ ನಗರವಾದ ಅಯೋಧ್ಯೆಯಲ್ಲಿ ಇದ್ದೆ. ಈಗ, ಶ್ರೀಕೃಷ್ಣನ ಊರಿನಲ್ಲಿ ಇದ್ದೇನೆ' ಎಂದೂ ಹೇಳಿದರು.

ಅನಾವರಣ: ಶ್ರೀಕೃಷ್ಣನ ಶಂಖಕ್ಕೆ ಸಮರ್ಪಣೆ ಉದ್ದೇಶದಿಂದ ನಿರ್ಮಿಸಲಾಗಿರುವ 'ಪಾಂಚಜನ್ಯ' ಸ್ಮಾರಕವನ್ನು ಕೂಡ ಮೋದಿ ಇದೇ ವೇಳೆ ಅನಾವರಣಗೊಳಿಸಿದರು.

ಪದಬಂಧ 6235

ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಒಡಹುಟ್ಟಿದವನು ಇಲ್ಲಿದ್ದಾನೆ (4)
3.ಹೆಣ್ಣುದುಂಬಿ ಇಲ್ಲಿದೆ (4)
5.ದೇವರನ್ನು ರಥದಲ್ಲಿಟ್ಟು ಮಾಡುವ ಮೆರವಣಿಗೆ (4)
7.ಒಳ್ಳೆಯ ಮಗನಿವನು (3)
10.ಕೆಲಸ ಮಾಡಲು ಬೇಕಾದ ಸಾಧನ (5)
11.ಎರಡಾಗಿ ಸೀಳಿದುದು (3)
13.ಕುದುರೆಬಾಯಿಗೆ ಹಾಕುವ ಉಕ್ಕಿನ ತುಂಡು ಉಲ್ಟಾ ಕಾಣುತ್ತಿದೆ (4)
16.ಸೆರೆಮನೆಯನ್ನು ಹೀಗೂ ಹೇಳುತ್ತಾರೆ (4)
17.ಹಣಕ್ಕಾಗಿ ನಡೆದ ಗೊಂದಲ (4)

ಮೇಲಿಂದ ಕೆಳಕ್ಕೆ

2.ಭಾರವಲ್ಲದ್ದು ಇದು! (3)
3.ತೂಕದ ಒಂದು ಪ್ರಮಾಣ (2)
4.ಕದಕ್ಕೆ ಒರಗಿಸಿರುವ ಕನ್ನೆ (3)
6.ಗುಂಪು ಗುಂಪಾಗಿ ವಿಂಗಡಿಸುವುದು (5)
7.ಒಳ್ಳೆಯ ಸ್ವಭಾವ (3)
8.ಪಕ್ಷದ ಹದಿಮೂರನೆಯ ದಿನ (4)
9.ಸೂಕ್ಷ್ಮವಾಗಿ ನೋಡುವವನು (4)
10.ಹುಯಿಲಿಡುತ್ತಾ ನೋಡಿರುವ ಮೃತ್ಯುಪತ್ರ! (3)
12.ಯಾವುದಾದರೂ ವಿಷಯದ ಕ್ರಮಬದ್ಧ ನಿರೂಪಣೆ (3)
14.ಈತ ಕಬ್ಬಿಣದ ಕೆಲಸಗಾರ (3)
15.ಆ ಮನೆ ಹತ್ತಿರ ನಿಂತಿರುವ ಗಜ (2)

6234ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಗುರುಕುಲ 3.ಅನುರಾಗ 5.ಗರಡಿ 6.ಹಳವಂಡ 7.ವರಮಾನತೆರಿಗೆ 10.ಅವಧಾನಿ 11.ಸರತಿ 14.ಗರ್ಭಕೋಶ 15.ಪೀಕದಾನಿ

ಮೇಲಿಂದ ಕೆಳಕ್ಕೆ: 1.ಗುಳಿ 2.ಕುವರ 4.ಗರುಡ 5.ಗಡವ 6.ಹಣತೆ 8.ಮಾನಿನಿ 9.ಗೆಳತಿ 10.ಅಪಾಂಗ 12.ರಸಿಕ 13.ಜ್ಞಾನಿ

ಸುಡೊಕು 6619

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

						5		7
	2		6		7		4	
		5		4			9	1
	4				1		7	
8				2			1	4
	9		7			6		
9				3		4		
			4		8		2	
2		4						3

6618 ಸುಡೊಕು

9	3	1	5	6	7	8	4	2
6	7	2	4	8	9	3	1	5
5	8	4	3	1	2	6	7	9
3	5	7	2	9	8	4	6	1
2	9	8	6	4	1	5	3	7
4	1	6	7	5	3	2	9	8
7	2	9	8	3	6	1	5	4
8	6	5	1	7	4	9	2	3
1	4	3	9	2	5	7	8	6

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

26 ನವೆಂಬರ್ 2025 ಬುಧವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಮಾರ್ಗಶಿರ ಶುಕ್ಲ ಷಷ್ಠಿ ಗಂ. 24-03 **ನಕ್ಷತ್ರ:** ಶ್ರವಣ ಗಂ. 25-33 **ಯೋಗ:** ವೃದ್ಧಿ ಗಂ. 12-42 ಕರಣ: ಕೌಲವ ಗಂ 11-34 ವೃಶ್ಚಿಕ ಮಾಸದ 11 ನೇ ದಿನ. ಮಳೆ ನಕ್ಷತ್ರ : ಅನುರಾಧ 3 ನೇ ಪಾದ. **ರಾಹುಕಾಲ :** ಮಧ್ಯಾಹ್ನ 12-00 - 01-30, **ಸೂರ್ಯೋದಯ :** 06-39 **ಸೂರ್ಯಾಸ್ತ :** 05-57, **ಮುಸ್ಲಿಂ ದಿನಾಂಕ :** 4 ಜುಮಾದುಸ್ಸಾನಿ , **ಅದೃಷ್ಟ ಸಂಖ್ಯೆ :** 7, 3

ಮೇಷ: ನಿವೃತ್ತ ಜೀವನವನ್ನು ಮೊಮ್ಮಕ್ಕಳ ಜೊತೆ ಸಂತೋಷದಿಂದ ಕಳೆಯುವ ಕನಸು ಅಕ್ಷರಶಃ ಸತ್ಯವಾಗುತ್ತದೆ. ನೆಂಟರಿಷ್ಟರ ಸಲಹೆ-ಸೂಚನೆಗಳನ್ನು ಆಲಿಸಿ ಸನ್ಮಾರ್ಗದಲ್ಲಿ ನಡೆಯಿರಿ.

ವೃಷಭ: ತಕ್ಷಣದಲ್ಲಿ ನಡೆಯಬೇಕೆಂಬ ಅಗತ್ಯ ಕಾರ್ಯಗಳಲ್ಲಿ ವಿಳಂಬ ತೋರಿಬಂದೀತು. ಹಪ್ಪಳ, ಸಂಡಿಗೆಯಂಥ ವಸ್ತುಗಳ ವ್ಯಾಪಾರಿಗೆ ಉತ್ತಮ ಸಂಪಾದನೆ ಆಗುತ್ತದೆ. ಪಾಲಕರಾಗುವ ಸುದ್ದಿ ತಿಳಿದು ಸಂತಸಗೊಳ್ಳುವಿರಿ.

ಮಿಥುನ: ದಿನದ ಉತ್ತರಾರ್ಧದಲ್ಲಿ ಸುಖಮಯ ಜೀವನವನ್ನು ನಡೆಸಲು ಪೂರ್ವಾರ್ಧದಲ್ಲಿ ಶ್ರಮಿಸಬೇಕು. ವಿದ್ಯಾರ್ಥಿಗಳು ಅತ್ಯಂತ ಪೈಪೋಟಿ ಎದುರಿಸುವ ದಿನವಾಗುವುದು. ಸಂಸಾರ ನಿರ್ವಹಣೆಗೆ ಹಣ ವ್ಯಯಿಸುವಿರಿ.

ಕರ್ಕಾಟಕ: ಹೊಸ ಮನೆಯನ್ನು ಕಟ್ಟಿಸುತ್ತಿರುವವರು ಆ ಸ್ಥಳಕ್ಕೆ ಹೋಗಿ ಬರುವ ತೀರ್ಮಾನವು ನಷ್ಟ ಆಗುವುದನ್ನು ತಪ್ಪಿಸಲು ಸಹಕಾರ ಮಾಡುತ್ತದೆ. ಹಿರಿಯರಿಗೆ ಎದುರುತ್ತರ ಕೊಡುವ ಮುನ್ನ ಯೋಚಿಸಿ.

ಸಿಂಹ: ಜವಾಬ್ದಾರಿಯನ್ನು ಮೈಯ್ಯ ಮೇಲೆ ಎಳೆದುಕೊಳ್ಳಲು ಹೋಗದಿರಿ. ಆಧುನಿಕ ಸಂಪರ್ಕ ಸಾಧನಗಳ ಮೂಲಕ ದೂರವಾಗಿದ್ದ ನೆಂಟಸ್ಥಿಕೆ ಮತ್ತೆ ಹತ್ತಿರವಾಗುವುದು. ಹಸಿರು ಬಣ್ಣವು ಶುಭ ತರುವುದು.

ಕನ್ಯಾ: ಮಳಿಗೆಯನ್ನು ಖರೀದಿಸುವಾಗ ವ್ಯಾವಹಾರಿಕವಾಗಿ ಜಾಗ ಎಷ್ಟು ಸೂಕ್ತ ಎನ್ನುವುದರ ಮೇಲೆ ಗಮನವಿಡಿ. ಕೆಲಸ ಆರಂಭಿಸುವ ಮುನ್ನ ಪ್ರಾಜ್ಞರಲ್ಲಿ ಸಮಯವು ಸರಿಯೇ ಎಂದು ವಿಚಾರಿಸಿ. ಬಂಗಾರದ ವ್ಯಾಪಾರಿಗಳಿಗೆ ಲಾಭ.

ತುಲಾ: ಎದುರಾಗುವ ಸನ್ನಿವೇಶಗಳಲ್ಲಿ ಯಾವ ದಿಕ್ಕಿನಲ್ಲಿ ಸಾಗಬೇಕೆಂಬ ಗೊಂದಲಗಳು ಕಾಡಲಿವೆ. ನೆರೆ ಹೊರೆಯವರೊಡನೆ ಉತ್ತಮ ಬಾಂಧವ್ಯ ಹೊಂದುವಿರಿ. ಹೋಟೆಲ್ ಉದ್ಯಮ ನಡೆಸುವವರಿಗೆ ಶುಭದಿನ.

ವೃಶ್ಚಿಕ: ಧಾರ್ಮಿಕ ಪ್ರವಚನದಂಥ ಸಂಕಲ್ಪವನ್ನು ಹೊಂದಿದವರಿಗೆ ದೇವರ ಅನುಗ್ರಹದಿಂದ ಜನ ಹಾಗೂ ಧನ ಸಹಾಯ ದೊರೆಯುವುದು. ವ್ಯಾಪಾರದ ವಿಚಾರದಲ್ಲಿ ಗಂಭೀರ ಚರ್ಚೆ ನಡೆಯಲಿದೆ.

ಧನು: ಹಿತಶತ್ರುಗಳು ನಾವಿದ್ದೇವೆ ಎಂದು ಹೇಳುವುದು ಅನುಭವಕ್ಕೆ ಬರಲಿದೆ. ರಚನಾತ್ಮಕ ಕೆಲಸಗಳಿಗೆ ಹೆಚ್ಚಿನ ಪ್ರಾಶಸ್ತ್ಯ ಕೊಡುವುದರಿಂದ ಸಂತಸ ಹೊಂದುವಿರಿ. ಜ್ವರ ಶೀತದಂತಹ ಅನಾರೋಗ್ಯವು ಕಾಡಲಿದೆ.

ಮಕರ: ಅನುಪಯುಕ್ತ ವಸ್ತುಗಳನ್ನು ಮನೆಯಿಂದ ಹೊರ ಹಾಕದ ಹೊರತು ಮನೆಯನ್ನು ಚೊಕ್ಕಗೊಳಿಸಲು ಸಾಧ್ಯವಾಗುವುದಿಲ್ಲ. ದಕ್ಷಿಣಾಮೂರ್ತಿಯನ್ನು ಪೂಜಿಸುವುದರಿಂದ ನೆಮ್ಮದಿ ದೊರೆಯುವುದು.

ಕುಂಭ: ಕಾರ್ಯಸಾಧನೆಗೆ ಅಧಿಕ ತಿರುಗಾಟದಿಂದ ಆಯಾಸ ಮತ್ತು ಆಹಾರದಲ್ಲಿ ವಿಷದ ಅಂಶವು ಸೇರಿ ಆರೋಗ್ಯ ಹದಗೆಡುವ ಸಾಧ್ಯತೆಯಿದೆ. ವಿದೇಶಿ ಪ್ರವಾಸದ ಕನಸಿಗೆ ಶುಭ ಮುಹೂರ್ತ ಕೂಡಿ ಬರುವುದು.

ಮೀನ: ಒಂದು ಸುಳ್ಳನ್ನು ಹೇಳಿ ಅದನ್ನು ಸಮರ್ಥಿಸಿಕೊಳ್ಳಲಿಕ್ಕಾಗಿ ಸುಳ್ಳಿನ ದೊಡ್ಡ ಸರಮಾಲೆಗಳನ್ನೆ ಹೇಳಬೇಕಾಗುತ್ತದೆ. ಅತಿಯಾದ ಪುತ್ರವ್ಯಾಮೋಹವು ತಪ್ಪು ಹೆಜ್ಜೆ ಇಡುವಂತೆ ಮಾಡಬಹುದು.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ
ಹಿಂದಿನ ಅಂತ್ಯ: 25,959
ಇಂದಿನ ಅಂತ್ಯ: 25,884
ದಿನದ ಕನಿಷ್ಠ: 25,857
74

ಮೊಟ್ಟೆ ಧಾರಣೆ (ಎನ್‌ಇಸಿಸಿ)
ಬೆಂಗಳೂರು 100ಕ್ಕೆ ₹675, 12ಕ್ಕೆ ₹96
ಮೈಸೂರು 100ಕ್ಕೆ ₹675

ರಾಮನಗರ ರೇಷ್ಮೆಗೂಡು
ಮಿಶ್ರತಳಿ (ಕಿ.ಗ್ರಾಂ) ₹633-746
ದ್ವಿತಳಿ (ಬಿ.ವಿ) ₹580-893

ಎನ್.ಆರ್.ಪುರ ರಬ್ಬರ್ (ಪ್ರತಿ ಕೆಜಿಗೆ)
ಆರ್‌ಎಸ್‌ಎಸ್-4 ₹181.50
ಆರ್‌ಎಸ್‌ಎಸ್-5 ₹176.50
ಗುಡ್ ಲಾಟ್ ₹164

ಮುದ್ರೆ-ಮನೆ ಕಾಫಿ
ಎಪಿ ₹28,750
ಎಸಿ ₹15,540
ಆರ್‌ಪಿ ₹18,900
ಆರ್‌ಸಿ ₹10,590

ಅಡಿಕೆಧಾರಣೆ

ಬೆಳ್ತಂಗಡಿ	
ಕೋಕ	16000-27000
ಹೊಸ	27000-41000
ಹಳತು	48200-54000
ಭದ್ರಾವತಿ	
ಇತರೆ	21580-25917
ಸಿಪ್ಪೆಗೋಟು	10000-11000
ರಾಶಿ	42199-59199
ಕಾರ್ಕಳ	
ಹೊಸ	26000-41000
ಹಳತು	32500-53000
ಕುಂದಾಪುರ	
ಹಳೆಚಾಲಿ	40000-53000
ಹೊಸಚಾಲಿ	30000-39000
ಚಿತ್ರದುರ್ಗ	
ಅಪಿ	57739-58169
ಬೆಟ್ಟೆ	39819-40259
ಕೆಂಪುಗೋಟು	33800-34200
ರಾಶಿ	57229-57689
ಸಿದ್ದಾಪುರ	
ಬಿಳೆಗೋಟು	26619-36399
ಚಾಲಿ	41899-48299
ಕೋಕ	21399-32289
ಕೆಂಪುಗೋಟು	30699-34400
ರಾಶಿ	47099-59099
ತಟ್ಟಿಬೆಟ್ಟೆ	37000-48899
ಯಲ್ಲಾಪುರ	
ಅಪಿ	66009-75019
ಬಿಳೆಗೋಟು	13699-36599
ಚಾಲಿ	36799-49001
ಕೋಕ	12899-32799
ಕೆಂಪುಗೋಟು	18699-34099
ರಾಶಿ	52009-62499
ತಟ್ಟಿಬೆಟ್ಟೆ	37989-49489
ಶಿರಸಿ	
ಬೆಟ್ಟೆ	48599-57099
ಬಿಳೆಗೋಟು	24890-39599
ಚಾಲಿ	43029-49471
ಕೆಂಪುಗೋಟು	28000-37099
ರಾಶಿ	57299-61099
ಪುತ್ತೂರು	
ಕೋಕ	20000-34500
ಹೊಸ	26000-41000
ಶಿವಮೊಗ್ಗ	
ಬೆಟ್ಟೆ	54100-70519
ಗೊರಬಲು	19010-42899
ಹೊಸ	41999-59119
ರಾಶಿ	45360-60089
ಸರಕು	67100-93896
ಸಾಗರ	
ಬಿಳೆಗೋಟು	24569-35666
ಚಾಲಿ	40269-42109
ಕೋಕ	33989-33989
ಕೆಂಪುಗೋಟು	34499-34499
ರಾಶಿ	56029-56029

ಮಾರುಕಟ್ಟೆ: ಹಿಗ್ಗಲಿದೆ ಬೇಡಿಕೆ

ಕಾರ್ಮಿಕ ಸಂಹಿತೆಗಳು ಸೃಷ್ಟಿಸಿದ ಅವಕಾಶ: ಎಸ್‌ಬಿಐ ವರದಿ

ಮುಂಬೈ (ಪಿಟಿಐ): ಹೊಸದಾಗಿ ಜಾರಿಗೆ ಬಂದಿರುವ ಕಾರ್ಮಿಕ ಸಂಹಿತೆಗಳು ದೇಶದ ಮಾರುಕಟ್ಟೆಯಲ್ಲಿ ಬೇಡಿಕೆಯನ್ನು ₹75 ಸಾವಿರ ಕೋಟಿಯಷ್ಟು ಹೆಚ್ಚು ಮಾಡಲಿವೆ ಎಂದು ಎಸ್‌ಬಿಐ ರಿಸರ್ಚ್‌ನ ಸಂಶೋಧನಾ ವರದಿಯೊಂದು ಅಂದಾಜು ಮಾಡಿದೆ.

ಅಲ್ಲದೆ, ಈ ಸಂಹಿತೆಗಳು ಸಂಘಟಿತ ವಲಯದ ಕಾರ್ಮಿಕರ ಪ್ರಮಾಣವನ್ನು ಕನಿಷ್ಠ ಶೇ 15ರಷ್ಟು ಹೆಚ್ಚು ಮಾಡಲಿವೆ ಎಂದು ಕೂಡ ವರದಿಯಲ್ಲಿ ಹೇಳಲಾಗಿದೆ.

ಕಾರ್ಮಿಕ ಸಂಹಿತೆಗಳನ್ನು ನವೆಂಬರ್ 21ರಿಂದ ಜಾರಿಗೆ ತರಲಾಗಿದೆ. ಇವು ಮಧ್ಯಮ ಅವಧಿಯಲ್ಲಿ ನಿರುದ್ಯೋಗ ಪ್ರಮಾಣವನ್ನು ಶೇ 1.3ರಷ್ಟು ಕಡಿಮೆ ಮಾಡುವ ಅಂದಾಜು ಇದೆ ಎಂದು ಎಸ್‌ಬಿಐನ ಅರ್ಥಶಾಸ್ತ್ರಜ್ಞರು ಹೇಳಿದ್ದಾರೆ.

ನಾಲ್ಕು ಸಂಹಿತೆಗಳು ಕಾರ್ಮಿಕರನ್ನೂ ಉದ್ಯೋಗದಾತರನ್ನೂ ಬಲಪಡಿಸುವ ಕೆಲಸ ಮಾಡಲಿವೆ. ರಕ್ಷಣೆ ಇರುವ, ಉತ್ಪಾದಕತೆಯನ್ನು ತೋರಿಸುವ, ಕೆಲಸದ ಜಗತ್ತಿನಲ್ಲಿ ಆಗುತ್ತಿರುವ ಬದಲಾವಣೆಗಳಿಗೆ ಅನುಗುಣವಾಗಿರುವ ಕಾರ್ಮಿಕ ಶಕ್ತಿಯನ್ನು ಈ ಸಂಹಿತೆಗಳು ರೂಪಿಸಲಿವೆ ಎಂದು ವರದಿ ಹೇಳಿದೆ.

ಕೈಗೆ ಸಿಗುವ ವೇತನ ಇಳಿಕೆ

ಬೆಂಗಳೂರು: ಕಾರ್ಮಿಕ ಸಂಹಿತೆಗಳ ಅನುಷ್ಠಾನದ ಪರಿಣಾಮವಾಗಿ ನೌಕರರ ಕೈಗೆ ಸಿಗುವ ವೇತನದ ಮೊತ್ತವು ತುಸು ಕಡಿಮೆ ಆಗಬಹುದು ಎಂದು ಎಸ್‌ಬಿಐ ರಿಸರ್ಚ್ ಹೇಳಿದೆ.

ನೌಕರರ ಮೂಲ ವೇತನವು ಸಿಟಿಸಿಯ ಶೇಕಡ 50ರಷ್ಟು ಇರಬೇಕು ಎಂದು ಸಂಹಿತೆಗಳು ಹೇಳಿವೆ. ಇದರ ಪರಿಣಾಮವಾಗಿ ನೌಕರರ ನಿವೃತ್ತಿ ನಂತರದ ಸೌಲಭ್ಯಗಳಿಗೆ ಹೆಚ್ಚಿನ ಮೊತ್ತ ಕಡಿತವಾಗುತ್ತದೆ. ಹೀಗಾಗಿ ಕೈಗೆ ಸಿಗುವ ವೇತನದ ಮೊತ್ತ ಕಡಿಮೆ ಆಗಬಹುದು ಎಂದು ಅದು ಹೇಳಿದೆ.

ಸಾಮಾಜಿಕ ಭದ್ರತೆಯ ವ್ಯಾಪ್ತಿಯನ್ನು ಸಂಹಿತೆಗಳು ಹೆಚ್ಚು ಮಾಡುತ್ತವೆ ಎಂಬ ಬಗ್ಗೆ ವರದಿಯಲ್ಲಿ ವಿವರಿಸಲಾಗಿದೆ. ದೇಶದ ಅಸಂಘಟಿತ ವಲಯದಲ್ಲಿ ಈಗ ಅಂದಾಜು 44 ಕೋಟಿ ಮಂದಿ ಇದ್ದಾರೆ. ಈ ಪೈಕಿ ಅಂದಾಜು 31 ಕೋಟಿ ಮಂದಿ ಇ-ಶ್ರಮ್ ಪೋರ್ಟಲ್ ಮೂಲಕ ಹೆಸರು ನೋಂದಾಯಿಸಿಕೊಂಡಿದ್ದಾರೆ.

ಶೇ 20ರಷ್ಟು ಮಂದಿ ಅಸಂಘಟಿತ ವಲಯದಿಂದ ಸಂಘಟಿತ ವಲಯಕ್ಕೆ ಬರುತ್ತಾರೆ ಎಂದು ಅಂದಾಜಿಸುವುದಾದರೆ, ಈ ಸಂಹಿತೆಗಳಿಂದಾಗಿ 10 ಕೋಟಿ ಮಂದಿಗೆ ಅನುಕೂಲ ಆಗಲಿದೆ. ಇದರಿಂದಾಗಿ ಸಾಮಾಜಿಕ ಭದ್ರತಾ ವ್ಯವಸ್ಥೆಯ ವ್ಯಾಪ್ತಿಯು ಮುಂದಿನ ಎರಡರಿಂದ ಮೂರು ವರ್ಷಗಳ ಅವಧಿಯಲ್ಲಿ ಶೇ 80ರಿಂದ ಶೇ 85ರವರೆಗೆ ಹೆಚ್ಚಲಿದೆ ಎಂದು ಅಂದಾಜು ಮಾಡಲಾಗಿದೆ.

ಕಾರ್ಮಿಕ ಸಂಹಿತೆಗಳ ಅನುಷ್ಠಾನ, ಕಂಪನಿಗಳ ಮಟ್ಟದಲ್ಲಿ ಆಗುವ ವೆಚ್ಚ ಹಾಗೂ ರಾಜ್ಯಗಳು ಈ ಸಂಹಿತೆಗೆ ಪೂರಕವಾಗಿ ತರುವ ನಿಯಮಗಳನ್ನು ಆಧರಿಸಿ ನಿರುದ್ಯೋಗದ ಪ್ರಮಾಣವು ಕಡಿಮೆ ಆಗಲಿದೆ ಎಂದು ಅದು ಹೇಳಿದೆ.

ಬಂಗಾರದ ಬೆಲೆ ₹3,500 ಏರಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಮಂಗಳವಾರ ನಡೆದ ವಹಿವಾಟಿನಲ್ಲಿ ಚಿನ್ನದ ಬೆಲೆಯು 10 ಗ್ರಾಂಗೆ ₹3,500ರಷ್ಟು ಹೆಚ್ಚಾಗಿದ್ದು ₹1,28,900ಕ್ಕೆ ತಲುಪಿದೆ.

ಮದುವೆಗಳ ಋತು ಶುರುವಾಗುತ್ತಿರುವ ಕಾರಣದಿಂದಾಗಿ ಸ್ಥಳೀಯ ಚಿನ್ನಾಭರಣ ಅಂಗಡಿಗಳ ಪ್ರತಿನಿಧಿಗಳು ಚಿನ್ನವನ್ನು ಹೆಚ್ಚಿನ ಪ್ರಮಾಣದಲ್ಲಿ ಖರೀದಿಸುತ್ತಿರುವುದು ಕೂಡ ಬೆಲೆ ಏರಿಕೆಗೆ ಕಾರಣವಾಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಶೇ 99.5ರಷ್ಟು ಶುದ್ಧತೆಯ ಆಭರಣ ಚಿನ್ನದ ಬೆಲೆಯು 10 ಗ್ರಾಂ ₹3,500ರಷ್ಟು ಹೆಚ್ಚಾಗಿ ₹1,28,300ಕ್ಕೆ ತಲುಪಿದೆ.

ಬೆಳ್ಳಿಯ ಖರೀದಿ ಕೂಡ ಹೆಚ್ಚಾಗಿದ್ದು ಬೆಲೆಯು ಕೆ.ಜಿ.ಗೆ ₹5,800ರಷ್ಟು ಹೆಚ್ಚಳ ಕಂಡಿದೆ. ಕೆ.ಜಿ. ಬೆಳ್ಳಿಯ ಬೆಲೆಯು ₹1,60,800 ಆಗಿದೆ.

ಪ್ರಶ್ನೋತ್ತರ

ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಜಯದೇವ, ಮೈಸೂರು

• ಪ್ರಶ್ನೆ: ನಾನು ಕಳೆದ ಕೆಲವು ವರ್ಷಗಳಿಂದ ಹೂಡಿಕೆಗಾಗಿ ಹಣಕಾಸು ಸಂಸ್ಥೆಗಳಿಂದ ವೈಯಕ್ತಿಕ ಸಾಲ ಪಡೆದಿದ್ದೇನೆ. ಪ್ರಸ್ತುತ ಸುಮಾರು ₹10 ಲಕ್ಷ ಸಾಲ ಇದೆ. ಸುಮಾರು ₹25 ಸಾವಿರದ ಇಎಂಐ ಪಾವತಿ ಮಾಡುತ್ತಿದ್ದೇನೆ. ನನ್ನ ತಿಂಗಳ ವೇತನ ₹90 ಸಾವಿರ. ನಾನು ಈ ಸಂದರ್ಭದಲ್ಲಿ ಈ ಸಾಲದ ಹಣದಿಂದ ಹೂಡಿಕೆ ಹೆಚ್ಚಿಸಲೇ ಅಥವಾ ಬಾಕಿ ಸಾಲವನ್ನು ಬೇಗನೆ ತೀರಿಸಲೇ? ನಾನು ನಿರೀಕ್ಷಿಸಿದಂತೆ ಮಾರುಕಟ್ಟೆ ಏರುಗತಿಯಲ್ಲಿ ಸಾಗುತ್ತಿಲ್ಲ ಹಾಗೂ ವೈಯಕ್ತಿಕ ಸಾಲದ ಬಡ್ಡಿ ಮುಂದಿನ ನಾಲ್ಕು ವರ್ಷದಲ್ಲಿ ₹3.36 ಲಕ್ಷ ಆಗಲಿದೆ. ಸಾಲದ ಮೊತ್ತ ನನ್ನ ಉಳಿತಾಯ ಖಾತೆಯಲ್ಲಿದೆ. ಶೇ 3-4ರಷ್ಟು ಬಡ್ಡಿ ಬರುತ್ತಿದೆ. ಹೂಡಿಕೆ ಸಾಹಸ ಬೇಡವೆಂದು ತೋರುತ್ತಿದೆ. ಈ ಬಡ್ಡಿ ಭರಿಸುವ ಮಟ್ಟಕ್ಕೆ ಮುಂದಿನ ನಾಲ್ಕು ವರ್ಷದಲ್ಲಿ ಮಾರುಕಟ್ಟೆ ಏರಿಕೆ ಆಗಬಹುದೇ?

ಉತ್ತರ: ನೀವು ಹೇಳುತ್ತಿರುವ ಪರಿಸ್ಥಿತಿಯಲ್ಲಿ ಬಹಳಷ್ಟು ಮಂದಿ ಇದ್ದಿರಬಹುದು. ಆದರೆ ಹೂಡಿಕೆಗಾಗಿ ವೈಯಕ್ತಿಕ ಸಾಲ ತೆಗೆದುಕೊಳ್ಳುವುದು ಆಕರ್ಷಕವಾಗಿ ಕಂಡರೂ, ಅದರ ಹಿಂದೆ ಇರುವ ಅಪಾಯ–ಫಲಿತಾಂಶಗಳ ಪೂರ್ವ ನಿರ್ಣಯ ಅಷ್ಟು ಸುಲಭವಲ್ಲ. ಮಾರುಕಟ್ಟೆಯ ದಿಕ್ಕು ಯಾವತ್ತೂ ಅಸ್ಥಿರವಾಗಿರುವ ಸಂದರ್ಭಗಳಲ್ಲಿ ಇದು ಇನ್ನೂ ಸಂಕೀರ್ಣವಾಗುತ್ತದೆ.

ಈಗ ಸುಮಾರು ₹10 ಲಕ್ಷ ಸಾಲ ಬಾಕಿ ಇದೆ, ತಿಂಗಳಿಗೆ ಸುಮಾರು ₹25 ಸಾವಿರ ಇಎಂಐ ಪಾವತಿಸುತ್ತಿದ್ದೀರಿ ಮತ್ತು ನಿಮ್ಮ ಮಾಸಿಕ ವೇತನ ₹90 ಸಾವಿರ. ಈ ಸಂದರ್ಭದಲ್ಲಿ ಹೂಡಿಕೆ ಮುಂದುವರಿಸುವುದು ಮತ್ತು ಸಾಲ ತೀರಿಸುವುದು – ಎರಡರಲ್ಲಿ ಯಾವುದು ಸರಿಯಾದ ದಾರಿ ಎಂದು ಪ್ರಶ್ನೆ ಸಹಜ.

ಹೂಡಿಕೆಗಾಗಿ ತೆಗೆದುಕೊಂಡ ಸಾಲ ಮತ್ತು ಮಾರುಕಟ್ಟೆಯ ಅಸ್ಥಿರತೆ ಒತ್ತಡದ ನಿರ್ಧಾರಕ್ಕೆ ಕಾರಣವಾಗಬಹುದು. ಮಾರುಕಟ್ಟೆ ಮುಂದಿನ ನಾಲ್ಕು ವರ್ಷಗಳಲ್ಲಿ ಏರಿಕೆಯಾಗುತ್ತದೆಯೇ ಎಂಬುದನ್ನು ನಿಖರವಾಗಿ ಹೇಳಲು ಯಾರಿಂದಲೂ ಸಾಧ್ಯವಿಲ್ಲ. ಇದು ಹಲವು ಅಂಶಗಳನ್ನು ಆಧರಿಸಿರುತ್ತದೆ. ನಿಮ್ಮ ಸಾಲದ ಬಡ್ಡಿ ಮುಂದಿನ ನಾಲ್ಕು ವರ್ಷಗಳಲ್ಲಿ ₹3.36 ಲಕ್ಷ ಆಗಲಿದೆ ಎಂದಿದ್ದೀರಿ. ಆದರೆ ಅದೇ ಹಣಕ್ಕೆ, ಉಳಿತಾಯ ಖಾತೆಯಲ್ಲಿ ಶೇ 3–4ರಷ್ಟು ಬಡ್ಡಿ ಬರುವುದರಿಂದ ನಿಮ್ಮ ವೈಯಕ್ತಿಕ ಸಾಲಕ್ಕಿರಬಹುದಾದ ಶೇ 14-15ರ ಬಡ್ಡಿ ಶೇ 11-12ಕ್ಕೆ ಇಳಿದಂತಾಗುತ್ತದೆ. ಇದು ಸ್ಪಷ್ಟವಾಗಿ ನಷ್ಟದ ವ್ಯವಹಾರವೆಂದೇ ತಿಳಿಯಬೇಕಾಗುತ್ತದೆ.

ಸಾಮಾನ್ಯವಾಗಿ ಇಂತಹ ಹಣಕಾಸು ನಿರ್ಧಾರ ಕೈಗೊಳ್ಳುವಾಗ ಅಥವಾ ಸಾಲ ತೆಗೆದುಕೊಳ್ಳುವುದಕ್ಕೂ ಮೊದಲು ಅದರ ಉದ್ದೇಶ ಹಾಗೂ ಅದರ ಪರಿಣಾಮಕಾರಿ ಉಪಯೋಗದ ಬಗ್ಗೆ ಗಮನಿಸಬೇಕು. ಹೂಡಿಕೆ ಮಾಡಲು ಸಾಲ ಬಳಸುವುದಿದ್ದರೂ, ಅದರ ಅಪಾಯ, ಪ್ರಯೋಜನ ಮತ್ತು ದೂರಗಾಮಿ ವಿಶ್ಲೇಷಣೆ ಅಗತ್ಯ. ವಾಸ್ತವದಲ್ಲಿ, ಹೂಡಿಕೆಗಳಿಗೆ ನಮ್ಮದೇ ಹಣ ಬಳಸುವುದು ಹೆಚ್ಚು ಸುರಕ್ಷಿತ. ಕಾರಣ, ಹೂಡಿಕೆಯಲ್ಲಿ ಏನಾದರೂ ನಷ್ಟವಾದರೆ ಅಸಲನ್ನೂ ಕೆಲವೊಮ್ಮೆ ಕಳೆದುಕೊಳ್ಳಬೇಕಾಗುತ್ತದೆ. ಹೀಗಾಗಿ ಅಂತಹ ನಷ್ಟ ಭರಿಸುವ ಸಾಮರ್ಥ್ಯ ಇದ್ದಾಗ ಮಾತ್ರ ಸಾಹಸಕ್ಕೆ ಕೈ ಹಾಕಬಹುದು.

ನೀವು ಈ ಸಂದರ್ಭದಲ್ಲಿ ತಾತ್ಕಾಲಿಕವಾಗಿ ನಿಮ್ಮ ಉಳಿತಾಯ ಖಾತೆಯ ಹಣವನ್ನು ಇನ್ನೂ ಹೆಚ್ಚಿನ ಲಾಭ ನೀಡುವ (ಶೇ 6-7) ಡೆಟ್ ಫಂಡ್ ಅಥವಾ ಈಕ್ವಿಟಿ ಸೇವಿಂಗ್ಸ್ ಫಂಡ್‌ನಲ್ಲಿ (ಶೇ 6-10) ತೊಡಗಿಸಬಹುದು. ಇದರಿಂದ ತುಸು ಬಡ್ಡಿ ನಷ್ಟ ತಗ್ಗಿಸಬಹುದು. ತದನಂತರ ಸೂಕ್ತ ನಿರ್ಧಾರ ಕೈಗೊಳ್ಳಿ. ಸಾಲವನ್ನು ಮುಂಗಡ ಪಾವತಿಸಲು ಯೋಚಿಸುತ್ತಿದ್ದರೆ, ಸಾಲದ ಒಪ್ಪಂದದಲ್ಲಿ ಇರಬಹುದಾದ ಶೇ 2–5 ಪ್ರತಿಶತ ಪೂರ್ವಪಾವತಿ ಶುಲ್ಕ ಭರಿಸುವ ಬಗ್ಗೆಯೂ ಗಮನಿಸಿ. ನಿಧಾನವಾಗಿ ಅವಧಿಪೂರ್ವ ಪಾವತಿ ಮಾಡಿ ಹಾಗೂ ಸಾಲದಿಂದ ಹೊರಬನ್ನಿ.

ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮುಂದುವರಿಸಬೇಕೆಂದೇ ನಿಮ್ಮ ನಿರ್ಧಾರ ಇದ್ದರೆ, ವೈಯಕ್ತಿಕ ಸಾಲಕ್ಕಿಂತ ನಿಮ್ಮ ಡಿ-ಮ್ಯಾಟ್ ಖಾತೆಯಲ್ಲಿ ಇರುವ ಷೇರು ಅಡವಿಟ್ಟು ಅದರ ಮೌಲ್ಯಕ್ಕೆ ಹೊಂದಿಕೊಂಡು ಸಾಲ ನೀಡುವ ‘ಮಾರ್ಜಿನ್ ಟ್ರೇಡಿಂಗ್’ ವ್ಯವಸ್ಥೆಯನ್ನು ಪಡೆಯಬಹುದು. ಇದರಿಂದ ಅನಗತ್ಯವಾಗಿ ಸಾಲ ಉಪಯೋಗಿಸದೆ, ಹೆಚ್ಚಿನ ಬಡ್ಡಿ ಕಟ್ಟುವ ಪ್ರಮೇಯ ನಿವಾರಿಸಬಹುದು. ಮಾರ್ಜಿನ್ ಟ್ರೇಡಿಂಗ್ ಸೌಲಭ್ಯ ಬಳಸಿದಾಗ ಹೂಡಿಕೆಗಳ ಮೌಲ್ಯ, ಅದರ ಗುಣಮಟ್ಟ ಆಧರಿಸಿ ಸಾಲ ಸಿಗುತ್ತದೆ.

ರಾಜೀವ್ ರಂಜನ್, ಹುಬ್ಬಳ್ಳಿ

• ಪ್ರಶ್ನೆ: ನಾನು ಕಾಲೇಜು ವಿದ್ಯಾರ್ಥಿ, ಬಿ.ಕಾಂ ಓದುತ್ತಿದ್ದೇನೆ. ನನಗೆ ಆದಾಯ ಇಲ್ಲ, ಕೆಲವೊಮ್ಮೆ ನನ್ನ ಮಿತ್ರನ ಅಂಗಡಿಯಲ್ಲಿ ಲೆಕ್ಕಪತ್ರ ಬರೆಯಲು ನೆರವಾಗುತ್ತೇನೆ. ನನ್ನ ಶಿಕ್ಷಣಕ್ಕೆಂದು ತಿಂಗಳಿಗೆ ಎರಡು ಸಾವಿರ ಪಾವತಿಸುತ್ತಾರೆ. ಈ ಹಣವನ್ನು ನಾನು ನನ್ನ ಕಾಲೇಜು ವೆಚ್ಚಕ್ಕೆ ಭರಿಸಲೇ ಅಥವಾ ಉಳಿತಾಯ ಮಾಡಲೇ? ಈ ಬಗ್ಗೆ ಮಾರ್ಗದರ್ಶನ ಮಾಡಿ.

ಉತ್ತರ: ನೀವು ನಿಮ್ಮ ಶಿಕ್ಷಣದ ಜೊತೆಗೆ ಲೆಕ್ಕಪತ್ರ ನಿರ್ವಹಿಸುವ ಕೆಲಸ ಮಾಡಿ ಆದಾಯ ಗಳಿಸುತ್ತಿರುವುದು ಪ್ರಶಂಸನೀಯ. ಇದು ನಿಮ್ಮಲ್ಲಿನ ಹೊಣೆಗಾರಿಕೆಯ ಜೊತೆಗೆ ಬದುಕಿನಲ್ಲಿರಬೇಕಾದ ಆರ್ಥಿಕ ಗುರಿಯನ್ನು ತೋರಿಸುತ್ತದೆ.

ನಿಮ್ಮ ಮನೆಯ ಆರ್ಥಿಕ ಸ್ಥಿತಿ ಪರಿಗಣಿಸಿ, ತಿಂಗಳಿಗೆ ದೊರಕುವ ಎರಡು ಸಾವಿರ ರೂಪಾಯಿಯ ಒಂದು ಭಾಗವನ್ನು ಕಾಲೇಜು ವೆಚ್ಚಕ್ಕೆ ಬಳಸಬಹುದು. ಕನಿಷ್ಠ ₹500ನ್ನು ನಿಯಮಿತವಾಗಿ ಉಳಿತಾಯ ಮಾಡಿ. ನೂರು ರೂಪಾಯಿ ಬಳಸಿಯೂ ಮ್ಯೂಚುವಲ್ ಫಂಡ್ ಎಸ್‌ಐಪಿ ಆರಂಭಿಸಬಹುದು. ಇದು ನಿಮ್ಮ ಒಟ್ಟಾರೆ ಹೂಡಿಕೆಯ ದಿಕ್ಕನ್ನು ನಿರ್ಧರಿಸುತ್ತದೆ. ಆರಂಭದ ಹಂತದಲ್ಲೇ ಉಳಿತಾಯದ ಅನುಭವ ಪಡೆಯಿರಿ. ಇಷ್ಟು ಚಿಕ್ಕ ಮೊತ್ತವನ್ನು ಎಸ್‌ಐಪಿ ಮೂಲಕ ಹೂಡಿಕೆ ಮಾಡುವುದರಿಂದ ಮುಂದೆ ಅದರ ವೃದ್ಧಿ ಹೇಗಾಗುತ್ತದೆ ಎಂಬುದನ್ನು ನೀವು ಸೂಕ್ಷ್ಮವಾಗಿ ಗಮನಿಸಿ. ನೀವು ವಾಣಿಜ್ಯ ಪದವಿಯಲ್ಲಿ ಇರುವುದರಿಂದ ಈ ಮಾಹಿತಿ ನಿಮ್ಮ ಶಿಕ್ಷಣಕ್ಕೂ ಪೂರಕ. ಇದು ನಿಮಗೆ ತರಬೇತಿ ಎಂಬುದಾಗಿಯೇ ತಿಳಿದುಕೊಳ್ಳಿ. ಅದರಿಂದಾಗುವ ಲಾಭ–ನಷ್ಟ ಸಣ್ಣ ಪ್ರಮಾಣದ್ದೇ ಆಗಿರಲಿ, ಅದರ ಅನುಭವ ನಿಮ್ಮಲ್ಲಿ ಮತ್ತಷ್ಟು ಆತ್ಮವಿಶ್ವಾಸ ಮೂಡುವಂತೆ ಮಾಡುತ್ತದೆ.

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001.
ಇ–ಮೇಲ್: businessdesk@prajavani.co.in

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

22ನೇ ವರ್ಷದ ಪುಣ್ಯ ಸ್ಮರಣೆ



ಎ.ಆರ್. ವೆಂಕಟರಮಣರೆಡ್ಡಿ
ಜನನ: 5.11.1940 ಮರಣ: 26.11.2003
"ನೀವು ನಮ್ಮೊಂದಿಗೆ ಇರದಿದ್ದರೂ, ನಿಮ್ಮ ನೆನಪುಗಳು ಶಾಶ್ವತ."
ಇಂತಿ
ಮಕ್ಕಳಾದ ವಿ.ರಘು, ವಿ.ಸುಂದರ್‌ರಾಮ್ ರೆಡ್ಡಿ, ವಿ. ವಿಜಯಶಂಕರ್ ರೆಡ್ಡಿ ಮತ್ತು ಸೊಸೆಯಂದಿರು, ಮೊಮ್ಮಕ್ಕಳು ಹಾಗೂ, ಮರಿ ಮೊಮ್ಮಗ, ಕೈಕೊಂಡ್ರಹಳ್ಳಿ.

6ನೇ ವರ್ಷದ ಪುಣ್ಯಸ್ಮರಣೆ

ಶ್ರೀ ಡಿ.ಎಂ. ನಂಜುಂಡಯ್ಯನವರು
ಜನನ: 15.05.1950 – ನಿಧನ: 26.11.2019
ನಿಮ್ಮ ನೆನಪು ಸದಾ ನಮ್ಮಲ್ಲಿ ಅಚ್ಚಳಿಯದೆ ಉಳಿದಿದೆ.
ನಿಮ್ಮ ಆತ್ಮಕ್ಕೆ ಚಿರಶಾಂತಿ ಕೋರುವ
ಮಗ: ಉದಯ್ ಎನ್, ಸರಳಶ್ರೀ ಎನ್.
ಮಗಳು: ಉಷಾ ಎನ್, ರಮೇಶ್‌ಬಾಬು ಆರ್.
ಮೊಮ್ಮಕ್ಕಳು: ಮನಸ್ವಿ, ಹಿಮಶ್ರೀ, ಹಿತಶ್ರೀ, ಸಚಿನ್

ಮತ್ತೆ ಮಾರುಕಟ್ಟೆಗೆ ಟಾಟಾ ಸಿಯಾರಾ

ಮುಂಬೈ (ಪಿಟಿಐ): ಟಾಟಾ ಮೋಟರ್ಸ್ ಪ್ಯಾಸೆಂಜರ್ ವೆಹಿಕಲ್ಸ್ ಲಿಮಿಟೆಡ್ ಕಂಪನಿಯು ತನ್ನ ಬಹುನಿರೀಕ್ಷಿತ ಸಿಯಾರಾ ಎಸ್‌ಯುವಿ ವಾಹನವನ್ನು ಮಾರುಕಟ್ಟೆಗೆ ಮಂಗಳವಾರ ಬಿಡುಗಡೆ ಮಾಡಿದೆ. ಇದರ ಪರಿಚಯಾತ್ಮಕ ಬೆಲೆ ₹11.49 ಲಕ್ಷ.

ಹುಂಡೈ ಕ್ರೆಟಾ, ಕಿಯಾ ಸೆಲ್ಟೋಸ್, ಮಾರುತಿ ಸುಜುಕಿ ಗ್ರ್ಯಾಂಡ್ ವಿಟಾರಾ ಮಾದರಿಗಳಿಗೆ ಸಿಯಾರಾ ಪೈಪೋಟಿ ನೀಡಲಿದೆ. ಇದು ಮೂರು ಎಂಜಿನ್ ಆಯ್ಕೆಗಳಲ್ಲಿ ಲಭ್ಯವಿದೆ. ಸಿಯಾರಾ ಇ.ವಿ. ಮುಂದಿನ ಹಣಕಾಸು ವರ್ಷದಲ್ಲಿ ಬಿಡುಗಡೆ ಆಗಲಿದೆ ಎಂದು ಕಂಪನಿ ಹೇಳಿದೆ.

ಎಸ್‌ಯುವಿ ವರ್ಗದ ವಾಹನಗಳ ಮಾರಾಟದ ಪ್ರಮಾಣವು ತನ್ನ ಒಟ್ಟು ವಾಹನಗಳ ಮಾರಾಟದ ಶೇಕಡ 70ಕ್ಕಿಂತ ಹೆಚ್ಚಿನ ಮಟ್ಟದಲ್ಲಿ ಇರಲಿದೆ ಎಂದು ಕಂಪನಿಯು ಅಂದಾಜು ಮಾಡಿದೆ. ಸಿಯಾರಾ ವಾಹನದ ಮೂಲಕ, ಬಹಳ ವೇಗವಾಗಿ ಬೆಳವಣಿಗೆ ಕಾಣುತ್ತಿರುವ ಮಧ್ಯಮ ಗಾತ್ರದ ಎಸ್‌ಯುವಿ ಮಾರುಕಟ್ಟೆಯಲ್ಲಿ ಪ್ರಾಬಲ್ಯ ಸಾಧಿಸುವ ವಿಶ್ವಾಸ ಕಂಪನಿಗೆ ಇದೆ.

ಜಿಎಸ್‌ಟಿ ದರದಲ್ಲಿ ಈಚೆಗೆ ಆಗಿರುವ ಇಳಿಕೆಯ ಕಾರಣದಿಂದಾಗಿ ಪ್ರಯಾಣಿಕ ವಾಹನಗಳ ಒಟ್ಟು ಮಾರಾಟದಲ್ಲಿ ಎಸ್‌ಯುವಿ ಹೊರತುಪಡಿಸಿದ ವಾಹನಗಳ ಪಾಲು ತುಸು ಹೆಚ್ಚಾಗುವ ನಿರೀಕ್ಷೆ ಇದೆ ಎಂದು ಕಂಪನಿಯ ಸಿಇಒ ಶೈಲೇಶ್ ಚಂದ್ರ ಹೇಳಿದ್ದಾರೆ.

‘ಜಿಎಸ್‌ಟಿ ದರ ಪರಿಷ್ಕರಣೆ ಜಾರಿಗೆ ಬಂದ ನಂತರದಲ್ಲಿ ಕಾಂಪ್ಯಾಕ್ಟ್ ಎಸ್‌ಯುವಿ ಮತ್ತು ಸಬ್ ಕಾಂಪ್ಯಾಕ್ಟ್ ಎಸ್‌ಯುವಿ ವಾಹನಗಳ ಮಾರಾಟ ಗಮನಾರ್ಹವಾಗಿ ಹೆಚ್ಚಾಗಿದೆ’ ಎಂದು ಶೈಲೇಶ್ ಹೇಳಿದ್ದಾರೆ. ಸಿಯಾರಾ ಮಾದರಿಯನ್ನು ಮತ್ತೆ ಬಿಡುಗಡೆ ಮಾಡುವ ಮುನ್ನ ಕಂಪನಿಯು ಅದನ್ನು ಇಂದಿನ ತಲೆಮಾರಿನ ಗ್ರಾಹಕರಿಗೂ ಇಷ್ಟವಾಗುವಂತೆ ಮರುರೂಪಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ. ಸಿಯಾರಾ ವಾಹನಗಳ ಬುಕಿಂಗ್ ಡಿಸೆಂಬರ್ 16ರಿಂದ ಶುರುವಾಗಲಿದೆ. ವಾಹನಗಳನ್ನು ಗ್ರಾಹಕರಿಗೆ ಜನವರಿ 15ರಿಂದ ಹಸ್ತಾಂತರ ಮಾಡಲಾಗುತ್ತದೆ.

ಶಾಂಘೈನಲ್ಲಿ ಭಾರತದ ಮಹಿಳೆಗೆ ಕಿರುಕುಳ ಘಟನೆ

ಆರೋಪ ಅಲ್ಲಗಳೆದ ಚೀನಾ

ಬೀಜಿಂಗ್ (ಪಿಟಿಐ): ಭಾರತದ ಪಾಸ್‌ಪೋರ್ಟ್ ಹೊಂದಿದ್ದ ಅರುಣಾಚಲ ಪ್ರದೇಶದ ಮಹಿಳೆಯೊಬ್ಬರಿಗೆ ಶಾಂಘೈ ವಿಮಾನ ನಿಲ್ದಾಣದ ಅಧಿಕಾರಿಗಳು ಕಿರುಕುಳ ನೀಡಿದ್ದಾರೆ ಎಂಬ ಆರೋಪವನ್ನು ಚೀನಾ ಮಂಗಳವಾರ ಅಲ್ಲಗಳೆದಿದೆ.

ಶಾಂಘೈ ನಿಲ್ದಾಣದಲ್ಲಿ ವಲಸೆ ಅಧಿಕಾರಿಗಳು ತಮ್ಮ ಪಾಸ್‌ಪೋರ್ಟ್ ಅನ್ನು ಪರಿಗಣಿಸಲು ನಿರಾಕರಿಸಿ 18 ತಾಸು ವಶಕ್ಕೆ ಪಡೆದಿದ್ದರು ಎಂದು ಬ್ರಿಟನ್‌ನಲ್ಲಿ ನೆಲಸಿರುವ ಅರುಣಾಚಲ ಪ್ರದೇಶದ ಪೆಮಾ ವಾಂಗ್‌ಜೊಮ್ ತೊಂಗ್‌ಡಾಕ್ ಎಂಬವರು ಸೋಮವಾರ ಆರೋಪಿಸಿದ್ದರು.

‘ಜನ್ಮಸ್ಥಳವನ್ನು ಅರುಣಾಚಲ ಪ್ರದೇಶ ಎಂದು ದಾಖಲಿಸಲಾಗಿದೆ. ಹೀಗಾಗಿ ಪಾಸ್‌ಪೋರ್ಟ್ ಪರಿಗಣಿಸಲು ಸಾಧ್ಯವಿಲ್ಲ ಎಂದು ಅಧಿಕಾರಿಗಳು ಹೇಳಿದರು. ಅರುಣಾಚಲ ಪ್ರದೇಶ ಚೀನಾದ ಭಾಗ ಎಂದು ಹೇಳಿದ ಅಧಿಕಾರಿಗಳು, ಅದನ್ನೇ ಒಪ್ಪಿಕೊಳ್ಳುವಂತೆ ಒತ್ತಾಯಿಸಿದರು. ಯಾವುದೇ ವಿವರಣೆ ನೀಡದೆ 18 ತಾಸು ವಶಕ್ಕೆ ಪಡೆದಿದ್ದರು’ ಎಂದು ಹೇಳಿದ್ದರು.

ಈ ಬಗ್ಗೆ ಪ್ರತಿಕ್ರಿಯೆ ಕೇಳಿದಾಗ ಚೀನಾದ ವಿದೇಶಾಂಗ ಸಚಿವಾಲಯದ ವಕ್ತಾರೆ ಮಾವೊ ನಿಂಗ್, ಮಹಿಳೆ ಆರೋಪಿಸಿದಂತೆ ಯಾವುದೇ ಬಲವಂತದ ಕ್ರಮ, ಬಂಧನ ಅಥವಾ ಶೋಷಣೆ ನಡೆದಿಲ್ಲ ಎಂದಿದ್ದಾರೆ.

‘ಚೀನಾದ ವಲಸೆ ಅಧಿಕಾರಿಗಳು ಕಾನೂನು ಮತ್ತು ನಿಯಮಗಳ ಪ್ರಕಾರವೇ ಎಲ್ಲ ಪ್ರಕ್ರಿಯೆ ಪೂರ್ಣಗೊಳಿಸಿದ್ದಾರೆ. ವಿಮಾನಯಾನ ಸಂಸ್ಥೆಯು ಸಂಬಂಧಪಟ್ಟ ವ್ಯಕ್ತಿಗೆ ವಿಶ್ರಾಂತಿ ಪಡೆಯಲು ಸ್ಥಳ, ಪಾನೀಯ ಮತ್ತು ಆಹಾರ ಒದಗಿಸಿದೆ’ ಎಂದು ಹೇಳಿದರು.

ಝ್ಹಾಂಗ್‌ನಾನ್ (ಅರುಣಾಚಲ ಪ್ರದೇಶಕ್ಕೆ ಚೀನಾ ಇಟ್ಟ ಹೆಸರು) ಮೇಲೆ ಚೀನಾ ಹೊಂದಿರುವ ಹಕ್ಕುಗಳನ್ನು ಅವರು ಪುನರುಚ್ಚರಿಸಿದರು.

ಪ್ರತಿಭಟನೆ ದಾಖಲಿಸಿದ ಭಾರತ: ಈ ಘಟನೆಗೆ ಸಂಬಂಧಿಸಿದಂತೆ ಭಾರತವು ಚೀನಾಕ್ಕೆ ಈಗಾಗಲೇ ತನ್ನ ಪ್ರತಿಭಟನೆ ದಾಖಲಿಸಿದೆ ಎಂದು ದೆಹಲಿಯ ಮೂಲಗಳು ತಿಳಿಸಿವೆ.

ಪೆಮಾ ಖಂಡು ಖಂಡನೆ

ಇಟಾನಗರ: ಶಾಂಘೈನ ಪುಡಾಂಗ್ ವಿಮಾನ ನಿಲ್ದಾಣದ ಅಧಿಕಾರಿಗಳು ಭಾರತದ ಪಾಸ್‌ಪೋರ್ಟ್ ಅನ್ನು ಪರಿಗಣಿಸಲು ನಿರಾಕರಿಸಿರುವ ಘಟನೆಯನ್ನು ಅರುಣಾಚಲ ಪ್ರದೇಶದ ಮುಖ್ಯಮಂತ್ರಿ ಪೆಮಾ ಖಂಡು ಖಂಡಿಸಿದ್ದಾರೆ.

‘ಚೀನಾದ ಅಧಿಕಾರಿಗಳ ನಡವಳಿಕೆಯು ಜನಾಂಗೀಯ ನಿಂದನೆಗೆ ಸಮನಾಗಿದೆ. ಅರುಣಾಚಲ ಪ್ರದೇಶವು ಭಾರತದ ಅವಿಭಾಜ್ಯ ಅಂಗವಾಗಿದೆ. ಯಾವಾಗಲೂ ಭಾರತದೊಂದಿಗೇ ಇರುತ್ತದೆ’ ಎಂದು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ.

ಮುಂಬೈ ಧಾರಣೆ (ಶೇಂಗಾ)

25-11-2025

ಜಾವಾ 70/80(ಹೊಸ)	10700-10800
ಜಾವಾ 80/90(ಹೊಸ)	10000-10100
ದಪ್ಪ ಮಧ್ಯಪ್ರದೇಶ (ಹೊಸ)	7900-8000
ದಪ್ಪ ಗುಜರಾತ್ (ಹೊಸ)	9000-9100
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1560 (1540)
ಒಂದು ವಾರದ ಡೆಲಿವರಿ	1555 (1535)
ಪಾಮ್ ವಾರದ ಡೆಲಿವರಿ	1243 (1243)
ಸೂರ್ಯಕಾಂತಿ ಎಣ್ಣೆ ಕಚ್ಚಾ	1400 (1400)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,24,750
ಬೆಳ್ಳಿ ಕೆ.ಜಿಗೆ	1,56,500 (1,54,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಕೆನರಾ ಬ್ಯಾಂಕ್‌ಗೆ ಕಾರ್ಯನಿರ್ವಾಹಕ ನಿರ್ದೇಶಕರಾಗಿ ಝುಗ್ ನೇಮಕ

ಸುನಿಲ್ ಕುಮಾರ್ ಝುಗ್

ಬೆಂಗಳೂರು: ಕೆನರಾ ಬ್ಯಾಂಕ್‌ನ ಕಾರ್ಯನಿರ್ವಾಹಕ ನಿರ್ದೇಶಕರನ್ನಾಗಿ ಸುನಿಲ್ ಕುಮಾರ್ ಝುಗ್ ಅವರನ್ನು ನವೆಂಬರ್ 24ರಿಂದ ಅನ್ವಯವಾಗುವಂತೆ ಮೂರು ವರ್ಷಗಳ ಅವಧಿಗೆ ನೇಮಕ ಮಾಡಲಾಗಿದೆ.

ಈ ಮೊದಲು ಝುಗ್ ಅವರು ಪಂಜಾಬ್ ನ್ಯಾಷನಲ್ ಬ್ಯಾಂಕ್‌ನ ಮುಖ್ಯ ಮಹಾ ಪ್ರಬಂಧಕರಾಗಿ ಕೆಲಸ ಮಾಡುತ್ತಿದ್ದರು. ಅವರಿಗೆ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಮೂರು ದಶಕಗಳಿಗೂ ಹೆಚ್ಚಿನ ಅವಧಿಯ ಅನುಭವ ಇದೆ.

‘ಪಂಜಾಬ್ ನ್ಯಾಷನಲ್ ಬ್ಯಾಂಕ್‌ನಲ್ಲಿ ಕೆಲಸ ಮಾಡುತ್ತಿದ್ದ ಅವಧಿಯಲ್ಲಿ ಅವರು ಬ್ಯಾಂಕ್‌ನ ಡಿಜಿಟಲ್, ರಿಟೇಲ್ ಮತ್ತು ಕಾರ್ಪೊರೇಟ್ ಕಾರ್ಯತಂತ್ರಗಳಿಗೆ ಮಹತ್ವದ ಕೊಡುಗೆ ನೀಡಿದ್ದಾರೆ’ ಎಂದು ಪ್ರಕಟಣೆ ತಿಳಿಸಿದೆ.

ಎರಡನೇ ಸುತ್ತಿಗೆ ಟ್ರೀಸಾ–ಗಾಯತ್ರಿ

ಲಖನೌ (ಪಿಟಿಐ): ಭಾರತದ ಅನುಭವಿ ಡಬಲ್ಸ್ ಆಟಗಾರ್ತಿಯರಾದ ಟ್ರೀಸಾ ಜೋಳಿ ಮತ್ತು ಗಾಯತ್ರಿ ಗೋಪಿಚಂದ್ ಅವರು ಸೈಯದ್ ಮೋದಿ ಇಂಟರ್ ನ್ಯಾಷನಲ್ ಸೂಪರ್ 300 ಬ್ಯಾಡ್ಮಿಂಟನ್ ಟೂರ್ನಿಯ ಎರಡನೇ ಸುತ್ತು ಪ್ರವೇಶಿಸಿದರು.

₹2.14 ಕೋಟಿ ಬಹುಮಾನದ ಈ ಟೂರ್ನಿಯಲ್ಲಿ ಮಂಗಳವಾರ ನಡೆದ ಮೊದಲ ಸುತ್ತಿನ ಪಂದ್ಯದಲ್ಲಿ, ಹಾಲಿ ಚಾಂಪಿಯನ್ನರಾದ ಟ್ರೀಸಾ– ಗಾಯತ್ರಿ ಜೋಡಿ 19–21, 22–20, 21–9 ರಿಂದ ಮಲೇಷ್ಯಾದ ಚೆಂಗ್ ಸು ಹುಯಿ– ತಾನ್ ಝಿಂಗ್ ಯಿ ಅವರನ್ನು ಸೋಲಿಸಿತು.

ಪ್ರಿಯಾ ಕೊಂಜೆಂಗ್ಬಾಮ್– ಶ್ರುತಿ ಮಿಶ್ರಾ ಜೋಡಿ 21–8, 21–11 ರಿಂದ ಪೀವಾ ಇವಾಂಜಲಿನ್– ಸಮೃದ್ಧಿ ಸಿಂಗ್ ಜೋಡಿಯನ್ನು ಸುಲಭವಾಗಿ ಸೋಲಿಸಿ ಎರಡನೇ ಸುತ್ತು ತಲುಪಿತು.

ಪುರುಷರ ವಿಭಾಗದಲ್ಲಿ ಐದನೇ ಶ್ರೇಯಾಂಕದ ಹರಿಹರನ್ ಅಮ್ಸಕರುಣನ್– ಎಂ.ಆರ್.ಅರ್ಜುನ್ ಜೋಡಿ 21–11, 21–13 ರಿಂದ ಆಯುಷ್ ಮಖಿಜಾ– ಸುಜೆಯ್ ತಂಬೋಲಿ ಜೋಡಿಯನ್ನು ಮಣಿಸಿ ಮುನ್ನಡೆಯಿತು.

ಕೆಎಸ್‌ಸಿಎ ಚುನಾವಣಾ ಪ್ರಕ್ರಿಯೆ ವೆಂಕಟೇಶ್ ಪ್ರಸಾದ್ ನಾಮಪತ್ರ ಸ್ವೀಕೃತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ ಅಧ್ಯಕ್ಷ ಸ್ಥಾನಕ್ಕಾಗಿ ಸ್ಪರ್ಧಿಸಿರುವ ‘ಟೀಮ್ ಗೇಮ್ ಚೇಂಜರ್’ ತಂಡದ ವೆಂಕಟೇಶ್ ಪ್ರಸಾದ್ ಅವರು ಸಲ್ಲಿಸಿದ್ದ ನಾಮಪತ್ರ ಅಂಗೀಕೃತಗೊಂಡಿದೆ. ಆದರೆ ಅವರ ಪ್ರತಿಸ್ಪರ್ಧಿ ‘ಟೀಮ್ ಬ್ರಿಜೇಶ್’ ಬಣದ ಕೆ.ಎನ್. ಶಾಂತಕುಮಾರ್ ಅವರ ನಾಮಪತ್ರವು ತಾಂತ್ರಿಕ ಕಾರಣಗಳಿಂದಾಗಿ ತಿರಸ್ಕೃತಗೊಂಡಿದೆ.

ನಿವೃತ್ತ ನ್ಯಾಯಮೂರ್ತಿ ಸುಭಾಷ್ ಬಿ. ಅಡಿ ಅವರ ಉಸ್ತುವಾರಿಯಲ್ಲಿ ನಾಮಪತ್ರಗಳ ಪರಿಶೀಲನೆ ನಡೆಯಿತು. ಚುನಾವಣಾಧಿಕಾರಿ ಬಿ. ಬಸವರಾಜು ಅವರು ಅಭ್ಯರ್ಥಿಗಳ ಪಟ್ಟಿಯನ್ನು ಪ್ರಕಟಿಸಿದರು.

ಅಧ್ಯಕ್ಷ ಹುದ್ದೆಗೆ ವೆಂಕಟೇಶ್ ಪ್ರಸಾದ್ ಮತ್ತು ಭಾರತ ಮಹಿಳಾ ಕ್ರಿಕೆಟ್ ತಂಡದ ಮಾಜಿ ಆಟಗಾರ್ತಿ ಕಲ್ಪನಾ ವೆಂಕಟಾಚಾರ್ ಕಣದಲ್ಲಿ ಉಳಿದಿದ್ದರು. ಆದರೆ ಕಲ್ಪನಾ ತಮ್ಮ ನಾಮಪತ್ರ ಹಿಂತೆಗೆದುಕೊಂಡಿದ್ದಾರೆ ಎಂದು ಮೂಲಗಳು ತಿಳಿಸಿವೆ. ಇದರಿಂದಾಗಿ ಸದ್ಯ ಅಧ್ಯಕ್ಷ ಸ್ಥಾನದ ಕಣದಲ್ಲಿ ಪ್ರಸಾದ್ ಮಾತ್ರ ಇದ್ದಾರೆ.

ನಾಮಪತ್ರ ತಿರಸ್ಕರಿಸಿರುವ ಕ್ರಮವನ್ನು ಪ್ರಶ್ನಿಸಿ ಕೆ.ಎನ್. ಶಾಂತಕುಮಾರ್ (ದಿ ಪ್ರಿಂಟರ್ಸ್ ಮೈಸೂರು ಪ್ರೈವೇಟ್ ಲಿಮಿಟೆಡ್ ನಿರ್ದೇಶಕರು) ಅವರು ಹೈಕೋರ್ಟ್‌ನಲ್ಲಿ ರಿಟ್ ಅರ್ಜಿ ಸಲ್ಲಿಸಿದ್ದಾರೆ.

ಕಾರ್ಯದರ್ಶಿ ಸ್ಥಾನಕ್ಕೆ ಸ್ಪರ್ಧಿಸಿದ್ದ ವಿನಯ್ ಮೃತ್ಯುಂಜಯ (ಟೀಮ್ ಗೇಮ್ ಚೇಂಜರ್) ಅವರ ನಾಮಪತ್ರ ತಾಂತ್ರಿಕ ಕಾರಣದಿಂದ ತಿರಸ್ಕೃತವಾಗಿದೆ. ಈ ಸ್ಥಾನದ ಸ್ಪರ್ಧೆಯಲ್ಲಿರುವ ಇ.ಎಸ್. ಜೈರಾಮ್, ಸುಜಿತ್ ಸೋಮಸುಂದರ್ ಮತ್ತು ಸಂತೋಷ್ ಮೆನನ್ ಅವರ ನಾಮಪತ್ರಗಳು ಅಂಗೀಕೃತವಾಗಿವೆ.

ನಾಮಪತ್ರಗಳನ್ನು ಹಿಂಪಡೆಯಲು ಬುಧವಾರ (ನ.26) ಕೊನೆಯ ದಿನವಾಗಿದೆ. ಇದರ ನಂತರ ಕಣಕ್ಕಿಳಿಯುವ ಅಭ್ಯರ್ಥಿಗಳ ಅಂತಿಮ ಪಟ್ಟಿ ಪ್ರಕಟವಾಗುವ ನಿರೀಕ್ಷೆ ಇದೆ. ಡಿಸೆಂಬರ್ 7ರಂದು ಚುನಾವಣೆ ನಿಗದಿಯಾಗಿದೆ.

ಮಯಂಕ್ ಪಡೆಗೆ ಉತ್ತರಾಖಂಡ ಸವಾಲು

ಸೈಯದ್ ಮುಷ್ತಾಕ್ ಅಲಿ ಟಿ20 ಕ್ರಿಕೆಟ್ ಟೂರ್ನಿ ಇಂದಿನಿಂದ

ಪ್ರಜಾವಾಣಿ ವಾರ್ತೆ



ಮಯಂಕ್ ಅಗರವಾಲ್

ಅಹಮದಾಬಾದ್: ಮಯಂಕ್ ಅಗರವಾಲ್ ನಾಯಕತ್ವದ ಕರ್ನಾಟಕ ತಂಡವು ಬುಧವಾರ ಆರಂಭವಾಗಲಿರುವ ಸೈಯದ್ ಮುಷ್ತಾಕ್ ಅಲಿ ಟಿ20 ಕ್ರಿಕೆಟ್ ಟೂರ್ನಿಯ ಮೊದಲ ಪಂದ್ಯದಲ್ಲಿ ಉತ್ತರಾಖಂಡ ವಿರುದ್ಧ ಕಣಕ್ಕಿಳಿಯಲಿದೆ.

2018–19 ಮತ್ತು 2019–20ರಲ್ಲಿ ಪ್ರಶಸ್ತಿ ಗೆದ್ದಿದ್ದ ಕರ್ನಾಟಕ ತಂಡವು ಮೂರನೇ ಕಿರೀಟದ ಮೇಲೆ ಕಣ್ಣಿಟ್ಟಿದೆ. 2021–22ರಲ್ಲಿ ಫೈನಲ್‌ನಲ್ಲಿ ತಮಿಳುನಾಡು ವಿರುದ್ಧ ಮನೀಷ್ ಪಾಂಡೆ ನಾಯಕತ್ವದ ತಂಡವು ಸೋತಿತ್ತು. ಇದೀಗ ಮಯಂಕ್ ಬಳಗವು ಉತ್ತಮ ಲಯದಲ್ಲಿದೆ. ಈಚೆಗಷ್ಟೇ ಮುಗಿದ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಮೊದಲ ಹಂತದಲ್ಲಿ ಕರ್ನಾಟಕ ತಂಡವು ಎಲೀಟ್ ಬಿ ಗುಂಪಿನಲ್ಲಿ ಒಟ್ಟು 21 ಅಂಕಗಳೊಂದಿಗೆ ಅಗ್ರಸ್ಥಾನದಲ್ಲಿದೆ. ಆಡಿರುವ ಐದು ಪಂದ್ಯಗಳಲ್ಲಿ ಎರಡರಲ್ಲಿ ಜಯಿಸಿ, ಮೂರರಲ್ಲಿ ಡ್ರಾ ಮಾಡಿಕೊಂಡಿದೆ. ಅದರಿಂದಾಗಿ ಮಯಂಕ್ ಪಡೆ ಆತ್ಮವಿಶ್ವಾಸದಲ್ಲಿದೆ.

ಇಲ್ಲಿ ‘ಡಿ’ ಗುಂಪಿನಲ್ಲಿ ಆಡುತ್ತಿರುವ ಕರ್ನಾಟಕ ತಂಡದಲ್ಲಿ ಉತ್ತಮ ಲಯದಲ್ಲಿರುವ ನಾಯಕ ಮಯಂಕ್, ಅನುಭವಿ ಬ್ಯಾಟರ್ ಕರುಣ್ ನಾಯರ್, ಸ್ಮರಣ್ ರವಿಚಂದ್ರನ್, ಟಿ20 ಪರಿಣತ ಬ್ಯಾಟರ್ ಅಭಿನವ್ ಮನೋಹರ್, ಆಲ್‌ರೌಂಡರ್ ಶ್ರೇಯಸ್ ಗೋಪಾಲ್ ಅವರ ಮೇಲೆ ಭರವಸೆಯ ಕಂಗಳು ನೆಟ್ಟಿವೆ. ವೇಗದ ಜೋಡಿ ವಿದ್ವತ್ ಕಾವೇರಪ್ಪ, ವಿದ್ಯಾಧರ್ ಪಾಟೀಲ ಮತ್ತು ವೈಶಾಖ ವಿಜಯಕುಮಾರ್ ಅವರ ಮೇಲೆ ಬೌಲಿಂಗ್ ವಿಭಾಗದ ಹೊಣೆ ಇದೆ. ಮೆಕ್ನಿಲ್ ಹ್ಯಾಡ್ಲಿ ನರೋನಾ, ಕೆ.ಎಲ್. ಶ್ರೀಜಿತ್ ಅವರು ಬ್ಯಾಟಿಂಗ್ ವಿಭಾಗದ ಬಲ ಹೆಚ್ಚಿಸಬಹುದು.

ಸ್ಪಿನ್ನರ್ ಶಿಖರ್ ಶೆಟ್ಟಿ, ಶುಭಾಂಗ್ ಹೆಗ್ಡೆ ಅವರು ಶ್ರೇಯಸ್ ಗೋಪಾಲ್ ಜೊತೆಗೂಡುವ ಸಾಧ್ಯತೆ ಇದೆ. ಹೊಸ ಹುಡುಗ, 23 ವರ್ಷದ ಶ್ರೀವತ್ಸ ಆಚಾರ್ಯ ಕಣಕ್ಕಿಳಿಯುವ ಅವಕಾಶ ಪಡೆಯುವರೇ ಎಂಬುದು ಪಂದ್ಯದ ದಿನವೇ ತಿಳಿಯಲಿದೆ.

ಆಕಾಶ್ ಮಧ್ವಾಲ್ ನಾಯಕತ್ವದ ಉತ್ತರಾಖಂಡ ತಂಡದಲ್ಲಿ ಕನ್ನಡಿಗ ಜಗದೀಶ್ ಸುಚಿತ್ ಇದ್ದಾರೆ. ಉಳಿದಂತೆ ಪ್ರಶಾಂತ್ ಚೋಪ್ರಾ, ಅಗ್ನಿವೇಶ್ ಅಯಾಚಿ, ರಾಹುಲ್ ರಾಜ್ ಅವರ ಮೇಲೆ ಹೆಚ್ಚಿನ ನಿರೀಕ್ಷೆ ಇದೆ.

ಪಂದ್ಯ ಆರಂಭ: ಬೆಳಿಗ್ಗೆ 9

ಹಾರ್ದಿಕ್ ಕಣಕ್ಕೆ ಮರಳುವ ಸಾಧ್ಯತೆ (ಹೈದರಾಬಾದ್ ವರದಿ): ಭಾರತ ಕ್ರಿಕೆಟ್ ತಂಡದ ಆಲ್‌ರೌಂಡರ್ ಹಾರ್ದಿಕ್ ಪಾಂಡ್ಯ ಅವರು ಗಾಯದಿಂದ ಚೇತರಿಸಿಕೊಂಡ ಬಳಿಕ ಮತ್ತೆ ಕಣಕ್ಕಿಳಿಯಲು ಸಿದ್ಧರಾಗಿದ್ದಾರೆ.

ಅವರು ತಮ್ಮ ಫಿಟ್‌ನೆಸ್ ಸಾಬೀತುಪಡಿಸಲು ಸೈಯದ್ ಮುಷ್ತಾಕ್ ಅಲಿ ಟ್ರೋಫಿ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಬರೋಡಾ ತಂಡದ ಪರ ಆಡುವ ಸಾಧ್ಯತೆ ಇದೆ. ಕೃಣಾಲ್ ಪಾಂಡ್ಯ ನಾಯಕತ್ವದ ಬರೋಡಾ ತಂಡವು ಬುಧವಾರ ನಡೆಯುವ ಪಂದ್ಯದಲ್ಲಿ ಬಂಗಾಳ ಎದುರು ಆಡಲಿದೆ. ಈ ಬಾರಿ ಟೂರ್ನಿಯ ಪಂದ್ಯಗಳು ಹೈದರಾಬಾದ್, ಅಹಮದಾಬಾದ್, ಕೋಲ್ಕತ್ತ ಮತ್ತು ಲಖನೌ ನಗರಗಳಲ್ಲಿ ನಡೆಯಲಿವೆ.

ಈಜು: ಹಿತಶ್ರೀ, ವೈಷ್ಣವಿಗೆ ಪ್ರಶಸ್ತಿ

ಬೆಂಗಳೂರು: ನೆಟ್ಟಕಲ್ಲಪ್ಪ ಈಜು ಕೇಂದ್ರದ (ಎನ್‌ಎಸಿ) ಹಿತಶ್ರೀ ಎನ್. ಹಾಗೂ ವೈಷ್ಣವಿ ಜಿ. ಅವರು ರಾಜ್ಯ ಶಾರ್ಟ್ ಕೋರ್ಸ್ ಈಜು ಚಾಂಪಿಯನ್‌ಷಿಪ್‌ನ 17 ವರ್ಷದೊಳಗಿನ ಬಾಲಕಿಯರ 100 ಮೀ. ಬಟರ್‌ಫ್ಲೈ ಸ್ಪರ್ಧೆಯಲ್ಲಿ ಕ್ರಮವಾಗಿ ಚಿನ್ನ ಹಾಗೂ ಕಂಚು ಗೆದ್ದರು.

ಮೂರನೇ ದಿನವಾದ ಮಂಗಳವಾರ ನಡೆದ ಸ್ಪರ್ಧೆಯಲ್ಲಿ ಹಿತಶ್ರೀ ಅವರು 1ನಿ. 07.78 ಸೆಕೆಂಡುಗಳಲ್ಲಿ ಗುರಿಮುಟ್ಟಿದರು. ಬಸವನಗುಡಿ ಈಜು ಕೇಂದ್ರದ (ಬಿಎಸಿ) ಜನ್ಯಾ ಬಿ.ಎಸ್. (1ನಿ. 10.10ಸೆ.) ಬೆಳ್ಳಿ ಗೆದ್ದರೆ, ವೈಷ್ಣವಿ ಅವರು ಸ್ಪರ್ಧೆ ಮುಗಿಸಲು 1ನಿ., 11.31 ಸೆಕೆಂಡುಗಳನ್ನು ತೆಗೆದುಕೊಂಡರು.

14 ವರ್ಷದೊಳಗಿನ ಬಾಲಕರ 25 ಮೀ. ಫ್ರೀಸ್ಟೈಲ್‌ನಲ್ಲಿ ಬಿಎಸಿ ಈಜುಪಟುಗಳು ಎಲ್ಲ ಮೂರು ಪ್ರಶಸ್ತಿ ಗೆದ್ದರು. ಲಕ್ಷ್ಯ ಜಿ. 12.10ಸೆ.ಗಳಲ್ಲಿ ಗುರಿ ತಲುಪಿ ಸ್ವರ್ಣಕ್ಕೆ ಕೊರಳೊಡ್ಡಿದರು. ಎಸ್. ಕ್ರಿಷ್ (12.20ಸೆ.) ರಜತ ಗೆದ್ದರೆ, 12.56ಸೆ.ಗಳಲ್ಲಿ ಗುರಿ ಮುಟ್ಟಿದ ಸಾಯಿ ರಂಜನ್ ಮಧುಕರ್ ಹಾಗೂ ನಿಖಿಲ್ ತೇಜ್ ರೆಡ್ಡಿ ಅವರು ಕಂಚು ಜಯಿಸಿದರು. 17 ವರ್ಷದೊಳಗಿನ ಬಾಲಕಿಯರ 200 ಮೀ. ಫ್ರೀಸ್ಟೈಲ್ ಸ್ಪರ್ಧೆಯಲ್ಲಿ ಡಾಲ್ಫಿನ್ ಅಕ್ವಾಟಿಕ್ಸ್‌ನ ಮಿಹಿಕಾ ದತ್ತ (2ನಿ.10. 35ಸೆ.) ಚಿನ್ನ ಗೆದ್ದರು.

ಚೆಸ್: ಫೈನಲ್ ಸೆಣಸಾಟ ಟೈಬ್ರೇಕರಿಗೆ

ಆ್ಯಂಡ್ರಿ ಇಸಿಪೆಂಕೊ — ಫಿಡೆ ಚಿತ್ರ

ಪಣಜಿ (ಪಿಟಿಐ): ಫಿಡೆ ಚೆಸ್ ವಿಶ್ವಕಪ್ ಫೈನಲ್ ಆಡುತ್ತಿರುವ ಉಜ್ಬೇಕಿಸ್ತಾನದ ಜಾವೊಖಿರ್ ಸಿಂದರೋವ್ ಮತ್ತು ವೇಯಿ ಯಿ ಅವರು ಎರಡನೇ ಕ್ಲಾಸಿಕಲ್ ಆಟದಲ್ಲೂ ಹೆಚ್ಚಿನ ಸಾಹಸಕ್ಕೆ ಹೋಗಲಿಲ್ಲ. 30 ನಡೆಗಳಲ್ಲಿ ಇಬ್ಬರೂ ಡ್ರಾಕ್ಕೆ ಒಪ್ಪಿಕೊಂಡರು.

ಸ್ಕೋರ್ 1–1 ಸಮಬಲಗೊಂಡಿದ್ದು, ಬುಧವಾರ ನಡೆಯಲಿರುವ ಕಾಲಮಿತಿಯ ರ್‍ಯಾಪಿಡ್ ಮತ್ತು ಬ್ಲಿಟ್ಝ್ ಸೆಟ್ ಮೂಲಕ ವಿಜೇತರನ್ನು ನಿರ್ಧರಿಸಲಾಗುವುದು. ವಿಜೇತ ಆಟಗಾರ, ಹೊಸದಾಗಿ ಸ್ಥಾಪಿಸಿರುವ ವಿಶ್ವನಾಥನ್ ಆನಂದ್ ಟ್ರೋಫಿಯ ಜೊತೆಗೆ ₹1.07 ಕೋಟಿ ನಗದು ಬಹುಮಾನ ಪಡೆಯಲಿದ್ದಾರೆ.

ಬ್ಯಾಡ್ಮಿಂಟನ್ ತಾರೆ ಸೈನಾ ನೆಹ್ವಾಲ್ ಅವರು ‘ಉದ್ಘಾಟನಾ ನಡೆ’ ಇರಿಸುವ ಮೂಲಕ ಎರಡನೇ ಕ್ಲಾಸಿಕಲ್ ಆಟಕ್ಕೆ ಚಾಲನೆ ನೀಡಿದರು.

ಮೂರನೇ ಸ್ಥಾನದ ಪ್ಲೇ ಆಫ್ ಪಂದ್ಯದಲ್ಲಿ, 23 ವರ್ಷ ವಯಸ್ಸಿನ ಆ್ಯಂಡ್ರಿ ಇಸಿಪೆಂಕೊ (ರಷ್ಯಾ) ಅವರು ಎರಡನೇ ಕ್ಲಾಸಿಕಲ್ ಆಟದಲ್ಲೂ ಉಜ್ಬೇಕಿಸ್ತಾನದ ನೊದಿರ್ಬೆಕ್ ಯಾಕುಬೊಯೇವ್ ಅವರನ್ನು ಸೋಲಿಸಿದರು. 2–0 ಯಿಂದ ಗೆದ್ದ ಅವರು ಮೂರನೇ ಸ್ಥಾನದ ಜೊತೆಗೆ ಕ್ಯಾಂಡಿಡೇಟ್ಸ್ ಟೂರ್ನಿಗೂ ಅರ್ಹತೆ ಪಡೆದರು.

206 ಆಟಗಾರರ ಕಣದಲ್ಲಿದ್ದ ಈ ಟೂರ್ನಿಯಲ್ಲಿ ಮೊದಲ ಮೂರು ಸ್ಥಾನ ಪಡೆದವರು 2026ರ ಕ್ಯಾಂಡಿಡೇಟ್ಸ್ ಟೂರ್ನಿಯಲ್ಲಿ ಆಡುವ ಅರ್ಹತೆ ಪಡೆಯುತ್ತಾರೆ.

ಹಾಕಿ: ಡಿಸೆಂಬರ್ 1ಕ್ಕೆ ಆಯ್ಕೆ ಟ್ರಯಲ್ಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಂಬರುವ, ದಕ್ಷಿಣ ವಲಯ ‘ಅಸ್ಮಿತ’ ಸಬ್ ಜೂನಿಯರ್ ಬಾಲಕಿಯರ ಹಾಕಿ ಚಾಂಪಿಯನ್‌ಷಿಪ್‌ಗೆ ರಾಜ್ಯ ತಂಡವನ್ನು ಆಯ್ಕೆ ಮಾಡಲು ಹಾಕಿ ಕರ್ನಾಟಕ ಸಂಸ್ಥೆಯು ಡಿಸೆಂಬರ್ 1ರಂದು ಆಯ್ಕೆ ಟ್ರಯಲ್ಸ್ ಆಯೋಜಿಸಿದೆ.

ಶಾಂತಿನಗರದಲ್ಲಿನ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಹಾಕಿ ಕ್ರೀಡಾಂಗಣದಲ್ಲಿ ಡಿ.1ರ ಬೆಳಿಗ್ಗೆ 9.30ಕ್ಕೆ ಟ್ರಯಲ್ಸ್ ಆರಂಭವಾಗಲಿದೆ ಎಂದು ಹಾಕಿ ಕರ್ನಾಟಕ ಪ್ರಧಾನ ಕಾರ್ಯದರ್ಶಿ ಎ.ಬಿ.ಸುಬ್ಬಯ್ಯ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಈ ಚಾಂಪಿಯನ್‌ಷಿಪ್ ಆಂಧ್ರ ಪ್ರದೇಶದ ಕಡಪದಲ್ಲಿ ಡಿಸೆಂಬರ್ 26ರಿಂದ 30ರ ವರೆಗೆ ನಡೆಯಲಿದೆ.

ವಿವಾಹಪೂರ್ವ ಸಂಭ್ರಮದ ಫೋಟೊ ಅಳಿಸಿಹಾಕಿದ ಸ್ಮೃತಿ ಮಂದಾನ

ನವದೆಹಲಿ (ಪಿಟಿಐ): ಭಾರತ ಮಹಿಳಾ ತಂಡದ ಬ್ಯಾಟಿಂಗ್ ತಾರೆ ಸ್ಮೃತಿ ಮಂದಾನ ಅವರು ಸಂಗೀತ ನಿರ್ದೇಶಕ ಪಲಾಶ್ ಮುಚ್ಛಲ್ ಅವರ ಜೊತೆಗಿನ ವಿವಾಹಪೂರ್ವ ಸಂಭ್ರಮಾಚರಣೆಯ ಚಿತ್ರಗಳನ್ನು ಸಾಮಾಜಿಕ ಜಾಲತಾಣ ಖಾತೆಗಳಿಂದ ಅಳಿಸಿಹಾಕಿದ್ದಾರೆ.

ಮಹಾರಾಷ್ಟ್ರದ ಸಾಂಗ್ಲಿಯಲ್ಲಿರುವ ಸ್ಮೃತಿ ಅವರ ತೋಟದ ಮನೆಯಲ್ಲಿ ಸಮಾರಂಭಗಳು ನಡೆದಿದ್ದವು.

ಸ್ಮೃತಿ ಅವರ ತಂದೆ ಶ್ರೀನಿವಾಸ್ ಅವರಿಗೆ ಎದೆನೋವು ಕಾಣಿಸಿಕೊಂಡ ಕಾರಣ ವಿವಾಹ ಸಮಾರಂಭವನ್ನು ಅನಿರ್ದಿಷ್ಟಾವಧಿಗೆ ಮುಂದೂಡಲಾಗಿತ್ತು.

ಸ್ಮೃತಿ ಅವರ ಆಪ್ತ ಸ್ನೇಹಿತೆ ಹಾಗೂ ಸಹ ಆಟಗಾರ್ತಿ ಜೆಮಿಮಾ ರಾಡ್ರಿಗಸ್ ಅವರೂ ಈ ಚಿತ್ರಗಳನ್ನು ಇನ್‌ಸ್ಟಾಗ್ರಾಮ್ ಖಾತೆಯಿಂದ ತೆಗೆದುಹಾಕಿದ್ದಾರೆ. ಇದಕ್ಕೆ ಲಕ್ಷಾಂತರ ಲೈಕ್‌ಗಳು ಬಂದಿದ್ದವು.

ಸಾಮಾಜಿಕ ಜಾಲತಾಣವೊಂದರ ಪೋಸ್ಟ್ ಹರಿದಾಡಿದ ಬೆನ್ನಲ್ಲೆ ಇವರಿಬ್ಬರ ನಡುವಣ ಸಂಬಂಧ ಹಳಸಿದೆ ಎನ್ನುವ ಮಾತುಗಳು ಕೇಳಿಬಂದಿವೆ.

ಆದರೆ ಮಂದಾನ ಅವರ ಕಡೆಯಿಂದಾಗಲೀ ಅಥವಾ ಪಲಾಶ್ ಕಡೆಯಿಂದಾಗಲೀ, ಈ ಬೆಳವಣಿಗೆಗೆ ಸಂಬಂಧಿಸಿ ಯಾವುದೇ ಪ್ರತಿಕ್ರಿಯೆ ಬಂದಿಲ್ಲ.

ಪ್ಯಾರಾ ಈಜು: ನವೀನ್‌ಗೆ 3 ಪದಕ

ಪ್ರಜಾವಾಣಿ ವಾರ್ತೆ



ನವೀನ್ ವೆಂಕಟೇಶ್

ಬೆಂಗಳೂರು: ಪಿಇಎಸ್ ವಿಶ್ವವಿದ್ಯಾಲಯದ ಎಂಬಿಎ ಎರಡನೇ ವರ್ಷದ ವಿದ್ಯಾರ್ಥಿ ನವೀನ್ ವೆಂಕಟೇಶ್ ಅವರು ಇತ್ತೀಚೆಗೆ ಹೈದರಾಬಾದಿನ ಗಚ್ಚಿಬೌಲಿಯಲ್ಲಿ ನಡೆದ 25ನೇ ರಾಷ್ಟ್ರೀಯ ಪ್ಯಾರಾ ಈಜು ಚಾಂಪಿಯನ್‌ಷಿಪ್‌ನಲ್ಲಿ ತಲಾ ಒಂದು ಚಿನ್ನ, ಬೆಳ್ಳಿ ಹಾಗೂ ಕಂಚಿನ ಪದಕ ಗೆದ್ದುಕೊಂಡಿದ್ದಾರೆ.

200 ಮೀಟರ್ ವೈಯಕ್ತಿಕ ಮೆಡ್ಲೆಯಲ್ಲಿ ಚಿನ್ನ, 100 ಮೀಟರ್ ಬಟರ್‌ಫ್ಲೈ ಸ್ಪರ್ಧೆಯಲ್ಲಿ ಬೆಳ್ಳಿ ಮತ್ತು 50 ಮೀಟರ್ ಬಟರ್‌ಫ್ಲೈ ಸ್ಪರ್ಧೆಯಲ್ಲಿ ಕಂಚಿನ ಪದಕ ಗೆದ್ದುಕೊಂಡಿದ್ದಾರೆ.

ಪಿಇಎಸ್ ವಿಶ್ವವಿದ್ಯಾಲಯದ ಕುಲಾಧಿಪತಿ ಪ್ರೊ. ಜವಾಹರ್ ದೊರೆಸ್ವಾಮಿ ಮತ್ತು ಕುಲಪತಿ ಪ್ರೊ. ಜೆ. ಸೂರ್ಯಪ್ರಸಾದ್ ಅವರು ನವೀನ್ ಅವರನ್ನು ಅಭಿನಂದಿಸಿದರು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

Wanted

ಬೇಕಾಗಿದ್ದಾರೆ: ದೊಡ್ಡ ಅಲದಮರ, ಕೇತೋಹಳ್ಳಿ ಬಳಿಇರುವ ಫಾರ್ಮ್ ಹೌಸ್ ನಲ್ಲಿ ಅಡುಗೆ, ತೋಟದ ಕೆಲಸ ಗೊತ್ತಿರುವ ಕುಟುಂಬಗಳು ಬೇಕಾಗಿದ್ದಾರೆ. ಡಾ||ಎಸ್.ರಾಜು, ವಿಜಯನಗರ ಹಾಸ್ಪಿಟಲ್.
ಸಂಪರ್ಕ ಸಂಖ್ಯೆ: 9448357402

ವೈಯಕ್ತಿಕ

Change of Name

VENKATESH S/O Shivalingegowda born on 12/03/1980 residing at No 912 3rd Stage BEML Layout Near Water Tank Gattigere R R Nagar Bangalore 560098 have changed my name to Krishnegowda video affidavit dated 21/09/2022 at Bangalore

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

'ಕರಾವಳಿ'ಯಲ್ಲಿ ಸುಷ್ಮಿತಾ ಭಟ್

ಗುರುದತ್ ಗಾಣಿಗ ನಿರ್ದೇಶನದ 'ಕರಾವಳಿ' ಸಿನಿಮಾ ಬಿಡುಗಡೆಗೆ ಸಜ್ಜಾಗುತ್ತಿದೆ. ಪ್ರಜ್ವಲ್ ದೇವರಾಜ್ ಮುಖ್ಯಭೂಮಿಕೆಯಲ್ಲಿರುವ ಈ ಸಿನಿಮಾದಲ್ಲಿ ರಾಜ್ ಬಿ.ಶೆಟ್ಟಿ, ರಮೇಶ್ ಇಂದಿರಾ, ಮಿತ್ರ, ಸಂಪದಾ ಸೇರಿದಂತೆ ದೊಡ್ಡ ತಾರಾಬಳಗವೇ ಇದೆ. ಇದಕ್ಕೆ ಹೊಸ ಸೇರ್ಪಡೆ ಸುಷ್ಮಿತಾ ಭಟ್.

ರೀಲ್ಸ್ ಲೋಕದಲ್ಲಿ ಮಿಂಚಿ, ಬಳಿಕ ತಮಿಳಿನ 'ಲವ್ ಮ್ಯಾರೇಜ್' ಹಾಗೂ ಮಮ್ಮುಟ್ಟಿ ನಟನೆಯ 'ಡಾಮಿನಿಕ್' ಸಿನಿಮಾದಲ್ಲಿ ನಟಿಸಿದ್ದ ಸುಷ್ಮಿತಾ ಇದೀಗ 'ಭೂಮಿ' ಎಂಬ ಪಾತ್ರದಲ್ಲಿ 'ಕರಾವಳಿ' ಪ್ರವೇಶಿಸಿದ್ದಾರೆ. ಚಿತ್ರತಂಡ ಅವರ ಪಾತ್ರದ ಪೋಸ್ಟರ್ ರಿಲೀಸ್ ಮಾಡಿದ್ದು, ರಾಜ್ ಬಿ.ಶೆಟ್ಟಿ ಜೊತೆಯಾಗಿ ಸುಷ್ಮಿತಾ ಭಟ್ ಅಭಿನಯ ಮಾಡಲಿದ್ದಾರೆ ಎಂದು ಚಿತ್ರತಂಡ ತಿಳಿಸಿದೆ. ಪಕ್ಕಾ ಮಂಗಳೂರಿನ ಹುಡುಗಿಯಾಗಿ ಸುಷ್ಮಿತಾ ತೆರೆ ಮೇಲೆ ಕಾಣಿಸಿಕೊಳ್ಳಲಿದ್ದಾರೆ.

'ಕರಾವಳಿ ಸಿನಿಮಾದಲ್ಲಿನ ಪಾತ್ರ ಒಪ್ಪಿಕೊಳ್ಳಲು ಮೊದಲ ಕಾರಣ ರಾಜ್ ಬಿ. ಶೆಟ್ಟಿ ಅವರು. ರಾಜ್ ಅವರಿಂದ ನಟನೆಯ ಬಗ್ಗೆ ತುಂಬಾ ಕಲಿಯಬಹುದು ಎನ್ನುವ ಉದ್ದೇಶದಿಂದಲೇ ಈ ಸಿನಿಮಾ ಒಪ್ಪಿಕೊಂಡೆ. ಚಿತ್ರೀಕರಣ ಮಾಡಿದ್ದು ಕಡಿಮೆ ದಿನಗಳಾದರೂ ಸಾಕಷ್ಟು ಕಲಿತಿದ್ದೇನೆ. ರಾಜ್ ಅವರು ಪವರ್ ಹೌಸ್ ಇದ್ದ ಹಾಗೆ. ಸೆಟ್‌ನಲ್ಲಿ ಅವರು ಸದಾ ಚುರುಕಿನಿಂದ ಕೆಲಸ ಮಾಡುತ್ತಿರುತ್ತಾರೆ' ಎಂದಿದ್ದಾರೆ ಸುಷ್ಮಿತಾ.

ನಿರ್ದೇಶಕ ಗುರುದತ್ ಗಾಣಿಗ ನಿರ್ದೇಶನದ ಜೊತೆಗೆ ವಿಕೆ ಫಿಲ್ಮಂ ಸಹಯೋಗದಲ್ಲಿ ಗಾಣಿಗ ಫಿಲ್ಮ್ಸ್ ಮೂಲಕ ಈ ಸಿನಿಮಾ ನಿರ್ಮಾಣ ಮಾಡುತ್ತಿದ್ದಾರೆ. 'ಕರಾವಳಿ'ಯು ಮನುಷ್ಯ ಹಾಗೂ ಪ್ರಾಣಿ ಮಧ್ಯೆ ನಡೆಯುವ ಸಂಘರ್ಷದ ಕಥೆ ಹೊಂದಿದ್ದು, ಹಳ್ಳಿ ಬ್ಯಾಕ್ ಡ್ರಾಪ್‌ನಲ್ಲಿ ಸಿನಿಮಾ ಮೂಡಿಬರಲಿದೆ. ಚಿತ್ರಕ್ಕೆ ಸಚಿನ್ ಬಸ್ರೂರು ಸಂಗೀತ ಸಂಯೋಜನೆ, ಅಭಿಮನ್ಯು ಸದಾನಂದನ್ ಛಾಯಾಚಿತ್ರಗ್ರಹಣವಿದೆ.

ಸುಷ್ಮಿತಾ

'ಚೋಮನದುಡಿ'ಯ ಮುಂದುವರಿದ ಭಾಗ

ಚಿತ್ರತಂಡ

ಕೆ.ಶಿವರಾಮ ಕಾರಂತರ 'ಚೋಮನದುಡಿ' ಕಾದಂಬರಿ ಚಿತ್ರವಾಗಿ ರಾಜ್ಯ ಹಾಗೂ ರಾಷ್ಟ್ರ ಪ್ರಶಸ್ತಿಗಳನ್ನು ಪಡೆದುಕೊಂಡಿತ್ತು. ಆ ಕಥೆಯ ಮುಂದುವರಿಕೆ ಚಿತ್ರವೊಂದು ಇದೀಗ ತೆರೆಗೆ ಬರಲು ಸಿದ್ಧಗೊಂಡಿದೆ. 'ಬಿಚ್ಚುಗತ್ತಿಯ ಬಂಟನ ಬಲ್ಲರೇನ' ಎಂಬ ಈ ಚಿತ್ರದ ಹಾಡುಗಳು ಇತ್ತೀಚೆಗಷ್ಟೇ ಬಿಡುಗಡೆಗೊಂಡಿವೆ.

ಅನಿಲ್ ದೋರಸಮುದ್ರ ನಿರ್ದೇಶಿಸಿ, ನಿರ್ಮಿಸಿರುವ ಚಿತ್ರಕ್ಕೆ 'ದುಡಿಯ ಸದ್ದಿಗೆ ಕ್ರಾಂತಿಯ ಎದ್ದಿದೆ' ಎಂಬ ಅಡಿಬರಹವಿದೆ. 'ನಮ್ಮ ಸಿನಿಮಾವು 'ಚೋಮನದುಡಿ'ಯ ಮುಂದುವರಿದ ಭಾಗ. ಮಂದಗಾಮಿ ಚೋಮ ಹೋರಾಟ ಮಾಡಿದರೂ ಭೂಮಿ ಸಿಗುವುದಿಲ್ಲ. ಆತನ ಮಗ ಕಾಳ ನ್ಯಾಯಕ್ಕಾಗಿ ತೀವ್ರಗಾಮಿಯಾಗಿ ಬಿಚ್ಚುಗತ್ತಿಯನ್ನು ಉಪಯೋಗಿಸಿದಾಗ ಏನಾಗುತ್ತದೆ ಎಂಬುದೇ ಕಥೆ. ಅಂತಿಮವಾಗಿ ಅಪ್ಪನ ಆಸೆಯನ್ನು ಕಾಳ ಮತ್ತು ಬೆಳ್ಳಿ ಈಡೇರಿಸಿಕೊಳ್ಳುತ್ತಾರಾ? ಭೂಮಿಯ ಕಥೆ ಏನಾಗುತ್ತದೆ ಎಂಬುದನ್ನು ಕಮರ್ಷಿಯಲ್ ರೂಪದಲ್ಲಿ ತೋರಿಸುವ ಪ್ರಯತ್ನ ಮಾಡಲಾಗಿದೆ. ಭಾವಗಳ ತೀವ್ರತೆಯನ್ನು ಅಚ್ಚುಕಟ್ಟಾಗಿ ಸೆರೆಹಿಡಿದಿದ್ದೇವೆ. ಚಿತ್ರದಲ್ಲಿ ಚೋಮನ ಪಾತ್ರ ಶೇಕಡ ಇಪ್ಪತ್ತರಷ್ಟು ಬರುತ್ತದೆ' ಎಂದರು ನಿರ್ದೇಶಕ.

ಚೆಲುವರಾಜ್‌ಗೌಡ, ಬಾಸುಮ ಕೊಡಗು, ಸ್ವೀಡಲ್ ಡಿಸೋಜಾ, ಶೈಲೇಶ್ ಕಂಗೇರಿ, ತಾರಾನಾಥ ಬೋಳಾರ್, ಪುಣ್ಯ ಕೊಟ್ಯಾನ್ ಮುಂತಾದವರು ಅಭಿನಯಿಸಿದ್ದಾರೆ. ಪ್ರದ್ಯುಮ್ನ ನರಹಳ್ಳಿ-ದೀಪಕ್ ಕೋಟ್ಯಾನ್ ಸಾಹಿತ್ಯಕ್ಕೆ ಶ್ರೀಶಾಸ್ತ ಸಂಗೀತ ಸಂಯೋಜಿಸಿದ್ದಾರೆ. ಲ್ಯಾಮರಿಂಜ್ ನಿರ್ಮಲ್ ಛಾಯಾಚಿತ್ರಗ್ರಹಣ, ಅನಿಲ್.ಡಿ ಮತ್ತು ಮಾವಿನ್ ಜೋಯಿಲ್ ಪಿಂಟೋ ಸಂಕಲನ ಚಿತ್ರಕ್ಕಿದೆ. ಕಾರ್ಕಳ ಸುತ್ತಮುತ್ತ ಚಿತ್ರೀಕರಣಗೊಂಡಿದೆ.

ವಿರಾಣಿಕ ಶೆಟ್ಟಿ

'ಧರ್ಮಂ' ಟ್ರೇಲರ್ ಬಿಡುಗಡೆ

ಜಾತಿ, ಧರ್ಮದ ಕಥೆ ಹೊಂದಿರುವ 'ಧರ್ಮಂ' ಚಿತ್ರದ ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಚಿತ್ರಕ್ಕೆ ನಾಗಮುಖ ಆ್ಯಕ್ಷನ್ ಕಟ್ ಹೇಳಿದ್ದಾರೆ. ತರುಣ್ ಕಿಶೋರ್ ಸುಧೀರ್ ಟ್ರೇಲರ್ ಬಿಡುಗಡೆಗೊಳಿಸಿ ತಂಡಕ್ಕೆ ಶುಭ ಹಾರೈಸಿದರು.

'ಜಾತಿ ಮತ್ತು ಹಿಂದು ಧರ್ಮದ ಹಿನ್ನೆಲೆ ಇಟ್ಟುಕೊಂಡು ಈ ಚಿತ್ರ ಮಾಡಲಾಗಿದೆ. ಹಿಂದುತ್ವ ಉಳಿಯಬೇಕು ಎನ್ನುವುದು ನಮ್ಮ ಉದ್ದೇಶ. ಹಿಂದೂ ಧರ್ಮವನ್ನು ಎತ್ತಿ ಹಿಡಿಯುವ ಕೆಲಸ ಮಾಡಿದ್ದೇವೆ. ಮೇಲು, ಕೀಳಿನಿಂದ ನಮ್ಮ ಧರ್ಮ ಹೇಗೆ ಸೊರಗುತ್ತಿದೆ ಎಂಬುದೇ ಚಿತ್ರಕಥೆ' ಎಂದರು ನಿರ್ದೇಶಕ.

ಸಾಯಿ ಶಶಿಕುಮಾರ್‌ಗೆ ವಿರಾಣಿಕ ಶೆಟ್ಟಿ ಜೋಡಿಯಾಗಿದ್ದಾರೆ. ಡಿಸೆಂಬರ್ 5ರಂದು ಚಿತ್ರ ತೆರೆಗೆ ಬರಲಿದೆ. 'ಚಿತ್ರದಲ್ಲಿ ನೀಲಾ ಎನ್ನುವ ಪಾತ್ರ ಮಾಡಿದ್ದೇನೆ. ಗಂಡಸರನ್ನು ಕಂಡರೆ ಕತ್ತೆತ್ತಿ ನೋಡದ ಹುಡುಗಿ ಪಾತ್ರವದು. ಅನೇಕರು ನಮ್ಮ ಚಿತ್ರದ ಹಾಡಿಗೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಇದು ಇನ್ನಷ್ಟು ಆತ್ಮವಿಶ್ವಾಸ ಹೆಚ್ಚಿಸಿದೆ' ಎಂದರು ನಾಯಕಿ.

ಅಮೃತಾ ಅಯ್ಯಂಗಾರ್, ಪ್ರಮೋದ್, ಜ್ಯೋತಿ ರೈ

'ಹಲ್ಕಾ ಡಾನ್' ಚಿತ್ರೀಕರಣ ಆರಂಭ

'ರತ್ನನ್‌ಪ್ರಪಂಚ' ಖ್ಯಾತಿಯ ನಟ ಪ್ರಮೋದ್ ನಟನೆಯ ಹೊಸ ಸಿನಿಮಾ 'ಹಲ್ಕಾ ಡಾನ್' ಚಿತ್ರೀಕರಣ ಆರಂಭಗೊಂಡಿದೆ. ಇತ್ತೀಚೆಗಷ್ಟೇ ಈ ಚಿತ್ರಕ್ಕೆ ನಟ ಸುದೀಪ್ ಕ್ಲ್ಯಾಪ್ ಮಾಡಿದ್ದರು.

ಬೆಂಗಳೂರಿನಲ್ಲೇ ಚಿತ್ರೀಕರಣ ನಡೆಯುತ್ತಿದ್ದು, 'ಟಗರು', 'ಸಲಗ' ಹಾಗೂ 'ಯುಐ' ಚಿತ್ರಗಳನ್ನು ನಿರ್ಮಿಸಿರುವ ಕೆ.ಪಿ.ಶ್ರೀಕಾಂತ್ ಈ ಸಿನಿಮಾ ನಿರ್ಮಾಣ ಮಾಡುತ್ತಿದ್ದಾರೆ. ಛಲಾ ಈ ಸಿನಿಮಾಗೆ ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ. ವೀನಸ್ ಎಂಟರ್‌ಟೈನರ್ ಬ್ಯಾನರ್ ಅಡಿಯಲ್ಲಿ ಮೂಡಿಬರುತ್ತಿರುವ ನಾಲ್ಕನೇ ಚಿತ್ರ ಇದಾಗಿದೆ. ಚಿತ್ರಕ್ಕೆ 'ಸಾಯಿ ಕುಮಾರ್ ಫ್ಯಾನ್' ಎಂಬ ಅಡಿಬರಹವಿದ್ದು, ಸಾಯಿಕುಮಾರ್ ಅತಿಥಿ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಪ್ರಮೋದ್‌ಗೆ ಜೋಡಿಯಾಗಿ ಅಮೃತಾ ಅಯ್ಯಂಗಾರ್ ನಟಿಸುತ್ತಿದ್ದಾರೆ. ರಮೇಶ್ ಇಂದಿರಾ, ಜ್ಯೋತಿ ರೈ ಚಿತ್ರದ ತಾರಾಬಳಗದಲ್ಲಿದ್ದಾರೆ. ಕನ್ನಡ ಹಾಗೂ ತೆಲುಗಿನಲ್ಲಿ ಏಕಕಾಲಕ್ಕೆ ಈ ಸಿನಿಮಾ ನಿರ್ಮಾಣವಾಗುತ್ತಿದೆ. ವಿ. ಹರಿಕೃಷ್ಣ ಸಂಗೀತ, ಸತ್ಯ ಹೆಗಡೆ ಛಾಯಾಚಿತ್ರಗ್ರಹಣ ಚಿತ್ರಕ್ಕಿದೆ.

ಕಸ್ಟಡಿ ಸಾವು ಸಮಾಜಕ್ಕೆ ಕಳಂಕ: ಸುಪ್ರೀಂ

ಪೊಲೀಸ್ ಠಾಣೆಗಳಲ್ಲಿ ಸಿ.ಸಿ.ಟಿ.ವಿ ಕ್ಯಾಮೆರಾ ಅಳವಡಿಕೆ: ಕೇಂದ್ರಕ್ಕೆ ಕೋರ್ಟ್ ತರಾಟೆ

ನವದೆಹಲಿ (ಪಿಟಿಐ): 'ಪೊಲೀಸ್ ಕಸ್ಟಡಿಯಲ್ಲಿ ಸಂಭವಿಸುವ ಸಾವು ಮತ್ತು ಹಿಂಸಾಚಾರ ಪ್ರಕರಣವು ಸಮಾಜಕ್ಕೆ ಕಳಂಕ. ಇದನ್ನು ಸಹಿಸಲು ಸಾಧ್ಯವಿಲ್ಲ' ಎಂದು ಸುಪ್ರೀಂ ಕೋರ್ಟ್ ಮಂಗಳವಾರ ಅಭಿಪ್ರಾಯಪಟ್ಟಿದೆ.

ಪೊಲೀಸ್ ಠಾಣೆಗಳಲ್ಲಿ ಸಿ.ಸಿ.ಟಿ.ವಿ ಕ್ಯಾಮೆರಾ ಇಲ್ಲದಿರುವುದರ ಕುರಿತು ಸ್ವಯಂಪ್ರೇರಿತವಾಗಿ ದಾಖಲಿಸಿ ಕೊಂಡಿರುವ ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ವಿಕ್ರಮ್‌ನಾಥ್ ಮತ್ತು ಸಂದೀಪ್ ಮೆಹ್ತಾ ಅವರ ಪೀಠವು, 'ರಾಜಸ್ಥಾನದಲ್ಲಿ ಕಳೆದ 8 ತಿಂಗಳಲ್ಲಿ 11 ಕಸ್ಟಡಿ ಸಾವು ಸಂಭವಿಸಿವೆ. ಇದು ಸಮಾಜಕ್ಕೆ ಕಪ್ಪು ಚುಕ್ಕೆ, ಇದನ್ನು ದೇಶ ಒಪ್ಪುವುದಿಲ್ಲ' ಎಂದು ಹೇಳಿತು.

'ಕಸ್ಟಡಿ ಸಾವಿನ ವಿಚಾರದಲ್ಲಿ ಇದುವರೆಗೆ ಯಾವ ಕ್ರಮ ಕೈಗೊಂಡಿದ್ದೀರಿ ಎನ್ನುವುದರ ಅನುಪಾಲನಾ ಪ್ರಮಾಣ ಪತ್ರವನ್ನು ಯಾಕೆ ಸಲ್ಲಿಸಿಲ್ಲ' ಎಂದು ಕೇಂದ್ರ ಸರ್ಕಾರವನ್ನು ಪ್ರಶ್ನಿಸಿದ ಪೀಠವು, 'ಸುಪ್ರೀಂ ಕೋರ್ಟ್ ಆದೇಶವನ್ನು ಹಗುರವಾಗಿ ಪರಿಗಣಿಸಿದ್ದೀರಾ' ಎಂದು ತರಾಟೆಗೆ ತೆಗೆದುಕೊಂಡಿತು.

'ಈ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಚಾರಣೆಗೆ ನಾನು ಹಾಜರಾಗಿಲ್ಲ, ಆದರೆ, ಯಾರೂ ನ್ಯಾಯಾಲಯವನ್ನು ಹಗುರವಾಗಿ ಪರಿಗಣಿಸಿಲ್ಲ. ಕಸ್ಟಡಿ ಸಾವಿಗೆ ಸಂಬಂಧಿಸಿದಂತೆ ಕೇಂದ್ರವು ಮೂರು ವಾರಗಳಲ್ಲಿಅನುಪಾಲನಾ ಪ್ರಮಾಣಪತ್ರ ಸಲ್ಲಿಸಲಿದೆ' ಎಂದು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಪೀಠಕ್ಕೆ ತಿಳಿಸಿದರು.

ಪ್ರಕರಣವೇನು?: ಎಲ್ಲ ಪೊಲೀಸ್ ಠಾಣೆಗಳಲ್ಲಿ ಸಿ.ಸಿ.ಟಿ.ವಿ ಕ್ಯಾಮೆರಾ ಅಳವಡಿಸುವಂತೆ ಹಾಗೂ ಮಾನವ ಹಕ್ಕುಗಳ ಉಲ್ಲಂಘನೆ ಆಗುತ್ತಿದೆಯೇ ಎನ್ನುವುದರ ಕುರಿತು ಪರಿಶೀಲಿಸುವಂತೆ ಸುಪ್ರೀಂ ಕೋರ್ಟ್ 2018ರಲ್ಲಿ ಆದೇಶ ನೀಡಿದೆ. 2020ರಲ್ಲಿ ಹೊರಡಿಸಿರುವ ಇನ್ನೊಂದು ಆದೇಶದಲ್ಲಿ ಸಿಬಿಐ, ಜಾರಿ ನಿರ್ದೇಶನಾಲಯ, ಎನ್‌ಐಎ ಸೇರಿದಂತೆ ಎಲ್ಲ ತನಿಖಾ ಸಂಸ್ಥೆಗಳಲ್ಲಿ ಕಡ್ಡಾಯವಾಗಿ ಸಿ.ಸಿ.ಟಿ.ವಿ ಕ್ಯಾಮೆರಾ ಅಳವಡಿಕೆ ಮಾಡಿ, ವರದಿ ಸಲ್ಲಿಸುವಂತೆ ಕೇಂದ್ರಕ್ಕೆ ಸೂಚಿಸಿದೆ. ಇದಕ್ಕೆ ಸಂಬಂಧಿಸಿದಂತೆ ಎಲ್ಲ ರಾಜ್ಯಗಳು, ಕೇಂದ್ರಾಡಳಿತ ಪ್ರದೇಶಗಳು ಅನುಪಾಲನಾ ಪ್ರಮಾಣಪತ್ರ ಸಲ್ಲಿಸಬೇಕು. ಆದರೆ, ಇದುವರೆಗೆ 11 ರಾಜ್ಯಗಳು ಮಾತ್ರ ಪ್ರಮಾಣಪತ್ರ ಸಲ್ಲಿಸಿವೆ ಎಂದು ನ್ಯಾಯಪೀಠ ತಿಳಿಸಿತು.

'ರಾಜ್ಯದ ಎಲ್ಲ ಠಾಣೆಗಳಲ್ಲಿ ಸಿ.ಸಿ.ಟಿ.ವಿ ಕ್ಯಾಮೆರಾ ಅಳವಡಿಸಲಾಗಿದ್ದು, ಜಿಲ್ಲಾ ಕೇಂದ್ರದಿಂದ ನಿಗಾ ವಹಿಸಲಾಗುತ್ತಿದೆ' ಎಂದು ಮಧ್ಯಪ್ರದೇಶ ಸರ್ಕಾರ ವರದಿ ಸಲ್ಲಿಸಿದ್ದು, ಇದಕ್ಕೆ ಕೋರ್ಟ್ ಮೆಚ್ಚುಗೆ ವ್ಯಕ್ತಪಡಿಸಿತು.

ಅಮಿಕಸ್ ಕ್ಯೂರಿಯಾಗಿ ನೇಮಕಗೊಂಡಿದ್ದ ವಕೀಲ ಸಿದ್ಧಾರ್ಥ ದವೆ ಅವರು ನೀಡಿದ ವಿವರಣೆಯನ್ನು ನ್ಯಾಯಪೀಠ ಆಲಿಸಿತು. 'ಠಾಣೆಯ ಒಳಗೆ ಸಿಸಿಟಿವಿ ಕ್ಯಾಮೆರಾ ಅಳವಡಿಸುವುದರಿಂದ ತನಿಖೆಗೆ ಅಡ್ಡಿಯಾಗುತ್ತದೆ ಎಂಬ ವಾದ ಸಲ್ಲ. ಈ ಬಗ್ಗೆ ಸುಪ್ರೀಂ ಕೋರ್ಟ್ ಈಗಾಗಲೇ ತೀರ್ಪು ನೀಡಿದೆ' ಎಂದು ನ್ಯಾಯಪೀಠ ಹೇಳಿತು.

ಎಂಟು ತಿಂಗಳಲ್ಲಿ 11 ಸಾವು

ರಾಜಸ್ಥಾನದಲ್ಲಿ 2025ರ ಜನವರಿಯಿಂದ ಆಗಸ್ಟ್‌ವರೆಗೆ ಪೊಲೀಸ್ ಕಸ್ಟಡಿಯಲ್ಲಿ 11 ಸಾವುಗಳು ಸಂಭವಿಸಿವೆ ಎಂಬ ಮಾಧ್ಯಮ ವರದಿ ಆಧರಿಸಿ ಸುಪ್ರೀಂ ಕೋರ್ಟ್ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡಿದೆ. 11ರಲ್ಲಿ 7 ಸಾವುಗಳು ಉದಯಪುರ ವಿಭಾಗದಲ್ಲಿ ವರದಿಯಾಗಿವೆ.

'ದ್ವೇಷ ಭಾಷಣ: ಹೈಕೋರ್ಟ್‌ನಲ್ಲೇ ಇತ್ಯರ್ಥಪಡಿಸಿಕೊಳ್ಳಿ'

'ದ್ವೇಷ ಭಾಷಣದ ಎಲ್ಲ ಪ್ರಕರಣಗಳ ಮೇಲುಸ್ತುವಾರಿ ವಹಿಸಲು, ಅದಕ್ಕೆ ಕಾನೂನು ರೂಪಿಸಲು ಬಯಸುವುದಿಲ್ಲ. ಅದಕ್ಕಾಗಿ ಪೊಲೀಸ್ ಠಾಣೆಗಳು, ಅಧೀನ ನ್ಯಾಯಾಲಯಗಳು, ಹೈಕೋರ್ಟ್‌ಗಳು ಇವೆ' ಎಂದು ಸುಪ್ರೀಂ ಕೋರ್ಟ್ ಮಂಗಳವಾರ ಹೇಳಿದೆ.

ವ್ಯಕ್ತಿಯೊಬ್ಬರು ತಮ್ಮ ಭಾಷಣದಲ್ಲಿ ನಿರ್ದಿಷ್ಟ ಸಮುದಾಯವೊಂದರ ವಿರುದ್ಧ ಆರ್ಥಿಕ ಮತ್ತು ಸಾಮಾಜಿಕ ಬಹಿಷ್ಕಾರಕ್ಕೆ ಕರೆ ನೀಡಿದ್ದ ಆರೋಪಕ್ಕೆ ಸಂಬಂಧಿಸಿದ ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ವಿಕ್ರಮ್‌ನಾಥ್ ಮತ್ತು ಸಂದೀಪ್ ಮೆಹ್ತಾ ಅವರನ್ನೊಳಗೊಂಡ ಪೀಠವು ಈ ಅಭಿಪ್ರಾಯ ವ್ಯಕ್ತಪಡಿಸಿದೆ.

'ನೀವು ನಿಮ್ಮ ರಾಜ್ಯದಲ್ಲೇ ದ್ವೇಷ ಭಾಷಣದ ದೂರುಗಳನ್ನು ಇತ್ಯರ್ಥಪಡಿಸಿಕೊಳ್ಳಿ. ಅಲ್ಲಿನ ಹೈಕೋರ್ಟ್ ಸಂಪರ್ಕಿಸಿ' ಎಂದು ನ್ಯಾಯಪೀಠ ಅರ್ಜಿದಾರರಿಗೆ ಸೂಚಿಸಿತು.

'ಎಲ್ಲ ಧರ್ಮಗಳಲ್ಲೂ ದ್ವೇಷ ಭಾಷಣದ ಪ್ರವೃತ್ತಿ ಗಣನೀಯವಾಗಿ ಹೆಚ್ಚಿದೆ. ಹಾಗಾಗಿ, ಈ ವಿಚಾರದಲ್ಲಿ 'ಸಾರ್ವಜನಿಕ ಹಿತಾಸಕ್ತಿ ಎಂಬುದು ಒಂದು ನಿರ್ದಿಷ್ಟ ಧರ್ಮಕ್ಕೆ ಮಾತ್ರ ಸೀಮಿತವಾಗಿರಬಾರದು' ಎಂದು ಕೇಂದ್ರದ ಪರವಾಗಿ ಹಾಜರಾದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಪೀಠಕ್ಕೆ ತಿಳಿಸಿದರು. ವಾದ ಆಲಿಸಿದ ಪೀಠವು ದ್ವೇಷ ಭಾಷಣ ಪ್ರಕರಣಗಳ ಮುಂದಿನ ವಿಚಾರಣೆಯನ್ನು ಡಿ.9ಕ್ಕೆ ನಿಗದಿಪಡಿಸಿತು.

'ಇಸ್ಕಾನ್ ವಿರುದ್ಧ ಮಕ್ಕಳ ಆಯೋಗಕ್ಕೆ ದೂರು ನೀಡಿ'

ಇಸ್ಕಾನ್ ನಡೆಸುತ್ತಿರುವ ಶಾಲೆಗಳಲ್ಲಿ ನಡೆಯುತ್ತಿದೆ ಎನ್ನಲಾದ ಲೈಂಗಿಕ ದೌರ್ಜನ್ಯ ಪ್ರಕರಣಗಳ ತನಿಖೆ ಕೋರಿರುವ ಅರ್ಜಿದಾರರು ತಮ್ಮ ದೂರುಗಳನ್ನು ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗಕ್ಕೆ ಸಲ್ಲಿಸುವಂತೆ ಸುಪ್ರೀಂಕೋರ್ಟ್ ಮಂಗಳವಾರ ತಿಳಿಸಿದೆ.

'ಇಸ್ಕಾನ್ ನಡೆಸುತ್ತಿರುವ ಶಾಲೆಗಳಲ್ಲಿ ಗಂಭೀರ ಸ್ವರೂಪದ ಲೈಂಗಿಕ ದೌರ್ಜನ್ಯ ಪ್ರಕರಣಗಳು ನಡೆಯುತ್ತಿವೆ. ಆದರೆ, ಅಧಿಕಾರಿಗಳಿಗೆ ದೂರು ನೀಡಿದರೆ ಯಾವುದೇ ಪ್ರತಿಕ್ರಿಯೆ ನೀಡುತ್ತಿಲ್ಲ. ಈ ಪ್ರಕರಣಗಳ ತನಿಖೆ ನಡೆಸಬೇಕು' ಎಂದು ಕೋರಿ ರಜನೀಶ್ ಕಪೂರ್ ಮತ್ತು ಇತರರು ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳಾದ ಬಿ.ವಿ. ನಾಗರತ್ನ ಮತ್ತು ಆರ್. ಮಹಾದೇವನ್ ಅವರ ಪೀಠ ವಿಚಾರಣೆ ನಡೆಸಿತು.

ಅಧಿಕಾರಿ ಸಂಗಾತಿಗೆ ಹುದ್ದೆ: ತರಾಟೆ

'ಸಹಕಾರ ಸಂಘಗಳು ಮತ್ತು ಇತರ ಸಂಘ-ಸಂಸ್ಥೆಗಳ ಆಡಳಿತದಲ್ಲಿ 'ವಸಹಾತುಶಾಹಿ ಮನಸ್ಥಿತಿ' ಮುಂದುವರಿದಿದೆ. ಜಿಲ್ಲಾಧಿಕಾರಿಗಳಂತಹ ಅಧಿಕಾರಿಗಳ ಸಂಗಾತಿಗಳನ್ನು ಅಧಿಕಾರೇತರ ಪಧಾದಿಕಾರಿಗಳನ್ನಾಗಿ ನೇಮಿಸಲಾಗುತ್ತಿದೆ' ಎಂದು ಉತ್ತರ ಪ್ರದೇಶ ಸರ್ಕಾರವನ್ನು ಸುಪ್ರೀಂ ಕೋರ್ಟ್ ಮಂಗಳವಾರ ತರಾಟೆಗೆ ತೆಗೆದುಕೊಂಡಿತು.

ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್ ಮತ್ತು ನ್ಯಾಯಮೂರ್ತಿ ಜಾಯ್‌ಮಾಲ್ಯ ಬಾಗ್ಚಿ ಅವರನ್ನು ಒಳಗೊಂಡ ನ್ಯಾಯಪೀಠವು, ಎರಡು ತಿಂಗಳ ಒಳಗಾಗಿ ಇದಕ್ಕೆ ಸಂಬಂಧಿಸಿದ ನಿಬಂಧನೆಗಳಿಗೆ ತಿದ್ದುಪಡಿ ತರಲು ಕ್ರಮ ಕೈಗೊಳ್ಳುವಂತೆ ಸರ್ಕಾರಕ್ಕೆ ಸೂಚಿಸಿತು. 'ಉತ್ತರ ಪ್ರದೇಶದ ಹಲವು ಸಹಕಾರ ಸಂಘಗಳ ಪ್ರಮುಖ ಹುದ್ದೆಗಳನ್ನು ಜಿಲ್ಲಾಧಿಕಾರಿ ಮತ್ತು ಮುಖ್ಯ ಕಾರ್ಯದರ್ಶಿಗಳ ಪತ್ನಿಯರಿಗೆ ನೀಡಲಾಗಿದೆ. ಇದು ಪ್ರಜಾಪ್ರಭುತ್ವ ಮೌಲ್ಯಗಳಿಗೆ ವಿರುದ್ಧವಾದ ನಡೆ' ಎಂದು ಕೋರ್ಟ್ ಹೇಳಿತು.

ಬುಲಂದ್‌ಶಹರ್ ಜಿಲ್ಲೆಯ ಸಿಎಂ ಜಿಲ್ಲಾ ಮಹಿಳಾ ಸಮಿತಿ ಎಂಬ ಮಹಿಳಾ ಸ್ವಸಹಾಯ ಸಂಘಗಳ ಸಮಿತಿಯ ಅಧ್ಯಕ್ಷ ಹುದ್ದೆಗೆ ಜಿಲ್ಲಾಧಿಕಾರಿಯ ಪತ್ನಿಯನ್ನು ನೇಮಿಸಿದ್ದನ್ನು ಸಮಿತಿ ಪ್ರಶ್ನಿಸಿದೆ.

ಚುನಾವಣೆ: 'ಪಕ್ಷಪಾತಿ' ಪೊಲೀಸರ ನಿಯೋಜಿಸದಿರಿ– ಸುವೇಂದು ಪತ್ರ

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳ ವಿಧಾನಸಭೆಗೆ ಮುಂದಿನ ವರ್ಷ ನಡೆಯಲಿರುವ ಚುನಾವಣೆಯ ಸಮಯದಲ್ಲಿ 'ಪಕ್ಷಪಾತಿ' ಪೊಲೀಸ್ ಅಧಿಕಾರಿಗಳನ್ನು ಚುನಾವಣಾ ಕರ್ತವ್ಯಕ್ಕೆ ನಿಯೋಜಿಸಬಾರದು ಎಂದು ಒತ್ತಾಯಿಸಿ ಬಿಜೆಪಿ ನಾಯಕ ಸುವೇಂದು ಅಧಿಕಾರಿ ಅವರು ಮುಖ್ಯ ಚುನಾವಣಾ ಆಯುಕ್ತ (ಸಿಇಸಿ) ಜ್ಞಾನೇಶ್ ಕುಮಾರ್ ಅವರಿಗೆ ಪತ್ರ ಬರೆದಿದ್ದಾರೆ.

ಇತ್ತೀಚೆಗೆ ದಿಘಾದಲ್ಲಿ ಪೊಲೀಸ್ ಅಧಿಕಾರಿಗಳ ಸಮಾವೇಶ ನಡೆದಿದ್ದು, ತೃಣಮೂಲ ಕಾಂಗ್ರೆಸ್ ನಾಯಕಿ ಮಮತಾ ಬ್ಯಾನರ್ಜಿ ಅವರನ್ನು ನಾಲ್ಕನೇ ಅವಧಿಗೆ ಮುಖ್ಯಮಂತ್ರಿಯಾಗಿ ನೋಡುವ ಬಯಕೆಯನ್ನು ಅಲ್ಲಿ ಭಾಗವಹಿಸಿದ್ದ ಹಲವರು ವ್ಯಕ್ತಪಡಿಸಿದ್ದಾರೆ ಎಂದು ಪಶ್ಚಿಮ ಬಂಗಾಳ ವಿಧಾನಸಭೆಯ ವಿರೋಧ ಪಕ್ಷದ ನಾಯಕರೂ ಆಗಿರುವ ಸುವೇಂದು ಹೇಳಿಕೊಂಡಿದ್ದಾರೆ.

'ಈ ಪೊಲೀಸ್ ಅಧಿಕಾರಿಗಳು ತಾವು ತಟಸ್ಥವಾಗಿರಬೇಕು ಎಂಬ ನೀತಿಯನ್ನು ಕಾಯ್ದುಕೊಳ್ಳುವುದನ್ನು ಬಿಟ್ಟು ಪಕ್ಷಪಾತಿಗಳಾಗಿದ್ದಾರೆ. ವಿಧಾನಸಭಾ ಚುನಾವಣೆಯ ನೀತಿ ಸಂಹಿತೆ ಜಾರಿಗೆ ಬಂದಾಗ ಇಂತಹ ಅಧಿಕಾರಿಗಳನ್ನು ಚುನಾವಣಾ ಕರ್ತವ್ಯಕ್ಕೆ ನಿಯೋಜಿಸಬಾರದು' ಎಂದು ಮಂಗಳವಾರ ಪತ್ರಿಕಾ ಗೋಷ್ಠಿಯಲ್ಲಿ ಹೇಳಿದರು.

'ಪಕ್ಷಪಾತಿ ಪೊಲೀಸ್ ಸಿಬ್ಬಂದಿ, ಅಧಿಕಾರಿಗಳನ್ನು ಚುನಾವಣಾ ಕರ್ತವ್ಯದಿಂದ ತೆಗೆದುಹಾಕುವಂತೆ ಕೋರಿ ನಾನು ಸಿಇಸಿಗೆ ಪತ್ರ ಕಳುಹಿಸಿದ್ದೇನೆ' ಎಂದರು.

28ರಂದು ಟಿಎಂಸಿ–ಆಯೋಗ ಸಭೆ

ನವದೆಹಲಿ: ತೃಣಮೂಲ ಕಾಂಗ್ರೆಸ್ (ಟಿಎಂಸಿ) ಪಕ್ಷದ ನಿಯೋಗವು ನ.28ರಂದು ಚುನಾವಣಾ ಆಯೋಗದ ಅಧಿಕಾರಿಗಳನ್ನು ಭೇಟಿಯಾಗಲಿದ್ದಾರೆ. ಬಂಗಾಳ ಸೇರಿದಂತೆ ವಿವಿಧ ರಾಜ್ಯಗಳಲ್ಲಿ ಎಸ್‌ಐಆರ್ ಪ್ರಕ್ರಿಯೆ ನಡೆಯುತ್ತಿರುವ ಮಧ್ಯೆಯೇ ಈ ಭೇಟಿ ನಡೆಯಲಿದೆ.

ಟಿಎಂಸಿ ನಾಯಕ ಡೆರೆಕ್ ಒಬ್ರಯಾನ್ ಅವರು ಪಕ್ಷದ ಸಂಸದರ ನಿಯೋಗದ ಭೇಟಿಗೆ ಅವಕಾಶ ನೀಡಬೇಕೆಂದು ಕೋರಿದ್ದರು ಎಂದು ಚುನಾವಣಾ ಆಯೋಗ ಹೇಳಿದೆ.

'ರಾಜಕೀಯ ಪಕ್ಷಗಳ ಜತೆ ರಚನಾತ್ಮಕ ಸಂವಾದ ನಡೆಯುವುದನ್ನು ಯಾವಾಗಲೂ ಸ್ವಾಗತಿಸುತ್ತೇವೆ. ಟಿಎಂಸಿಯ ಕೋರಿಕೆಯನ್ನು ಪರಿಗಣಿಸಿದ್ದೇವೆ. ಶುಕ್ರವಾರ ಬೆಳಿಗ್ಗೆ 11ಕ್ಕೆ ಪಕ್ಷದ ಅಧಿಕೃತ ಪ್ರತಿನಿಧಿಗಳು ಮತ್ತು ಇತರ ನಾಲ್ವರು ಸದಸ್ಯರನ್ನು ಒಳಗೊಂಡ ನಿಯೋಗದ ಭೇಟಿಗೆ ಅವಕಾಶ ಕಲ್ಪಿಸಲಾಗಿದೆ' ಎಂದು ಆಯೋಗವು ತಿಳಿಸಿದೆ.

ಜಾಥಾದಲ್ಲಿ ಮಮತಾ ಭಾಗಿ (ಕೋಲ್ಕತ್ತ ವರದಿ): ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆಯನ್ನು ವಿರೋಧಿಸಿ ಉತ್ತರ 24 ಪರಗಣ ಜಿಲ್ಲೆಯಲ್ಲಿ ಟಿಎಂಸಿ ಮಂಗಳವಾರ ಆಯೋಜಿಸಿದ್ದ ಪ್ರತಿಭಟನಾ ಜಾಥಾದಲ್ಲಿ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಪಾಲ್ಗೊಂಡರು. ಚಾಂದ್‌ಪಾಢದಿಂದ ಠಾಕೂರ್‌ನಗರದವರೆಗೆ ಮೂರು ಕಿ.ಮೀ ದೂರ ಜಾಥಾ ನಡೆಯಿತು.

ಚಿಟಿಕೆ ಸುದ್ದಿ

ಬಾಗಿಲು ಮುಚ್ಚಿದ ಬದರೀನಾಥ ದೇಗುಲ

ಗೋಪೇಶ್ವರ(ಪಿಟಿಐ): ಚಳಿಗಾಲ ಆರಂಭವಾದ ಕಾರಣ, ಉತ್ತರಾಖಂಡದ ಗಡ್ವಾಲ್ ಪ್ರದೇಶದಲ್ಲಿರುವ ಬದರೀನಾಥ ಧಾಮದ ಬಾಗಿಲನ್ನು ಮುಚ್ಚುವ ಮೂಲಕ ಚಾರ್‌ಧಾಮ್ ಯಾತ್ರೆಯನ್ನು ಮಂಗಳವಾರ ಮುಕ್ತಾಗೊಳಿಸಲಾಯಿತು.

ವಿಶೇಷ ಪೂಜೆಗಳ ನಂತರ ಮಂಗಳವಾರ ಮಧ್ಯಾಹ್ನ 2.56 ಕ್ಕೆ ಬದರಿನಾಥ ಧಾಮದ ಬಾಗಿಲುಗಳನ್ನು ಮುಚ್ಚಲಾಯಿತು ಎಂದು ಬದರಿನಾಥ ಕೇದಾರನಾಥ ದೇವಾಲಯ ಸಮಿತಿಯ ಅಧಿಕಾರಿಗಳು ತಿಳಿಸಿದ್ದಾರೆ. ತೀವ್ರ ಚಳಿಯ ನಡುವೆಯೂ ಭಾರತ ಮತ್ತು ವಿದೇಶಗಳಿಂದ ಹೆಚ್ಚಿನ ಸಂಖ್ಯೆಯ ಭಕ್ತರು ಬದರೀನಾಥನ ದರ್ಶನ ಪಡೆಯಲು ಹಾಜರಿದ್ದರು.

ಛತ್ತೀಸಗಢ: 28 ನಕ್ಸಲರ ಶರಣಾಗತಿ

ನಾರಾಯಣಪುರ(ಛತ್ತೀಸಗಢ) (ಪಿಟಿಐ): ಜಿಲ್ಲೆಯಲ್ಲಿ 28 ನಕ್ಸಲರು ಮಂಗಳವಾರ ಶರಣಾಗಿದ್ದಾರೆ. ಈ ಪೈಕಿ 22 ಮಂದಿ ಬಗ್ಗೆ ಮಾಹಿತಿ ಕೊಟ್ಟವರಿಗೆ ₹89 ಲಕ್ಷ ಬಹುಮಾನ ಘೋಷಿಸಲಾಗಿತ್ತು.

'ರಾಜ್ಯ ಸರ್ಕಾರ ಜಾರಿಗೊಳಿಸಿರುವ 'ನಿಯಾದ್ ನೆಲ್ಲನಾರ್'(ನಿಮ್ಮ ಒಳ್ಳೆಯ ಗ್ರಾಮ) ಯೋಜನೆಯಿಂದ ಪ್ರಭಾವಿತರಾಗಿ ಶರಣಾಗುತ್ತಿದ್ದೇವೆ ಎಂದು ಹೇಳಿರುವ ನಕ್ಸಲರು, ಹಿರಿಯ ಪೊಲೀಸ್ ಅಧಿಕಾರಿಗಳ ಸಮ್ಮುಖದಲ್ಲಿ ಶರಣಾದರು. ಇವರಲ್ಲಿ 19 ಮಹಿಳೆಯರೂ ಸೇರಿದ್ದಾರೆ' ಎಂದು ಐಜಿಪಿ(ಬಸ್ತರ್ ವಲಯ) ಸುಂದರರಾಜ್ ಪಟ್ಟಿಲಿಂಗಮ್ ಹೇಳಿದ್ದಾರೆ.

ನಾರಾಯಣಪುರ ಸೇರಿ ಏಳು ಜಿಲ್ಲೆಗಳಲ್ಲಿ ಕಳೆದ 50 ದಿನಗಳಲ್ಲಿ 512 ನಕ್ಸಲರು ಹಿಂಸೆಯ ಮಾರ್ಗವನ್ನು ತೊರೆದು, ಸಮಾಜದ ಮುಖ್ಯವಾಹಿನಿಗೆ ಬಂದಿದ್ದಾರೆ.

ಸಿಪಿಎಂ ಅಭ್ಯರ್ಥಿಗೆ 10 ವರ್ಷ ಸಜೆ

ಕಣ್ಣೂರು (ಕೇರಳ)(ಪಿಟಿಐ): ಪ್ರತಿಭಟನೆ ವೇಳೆ ಬಾಂಬ್ ಎಸೆದು ಪೊಲೀಸ್ ಅಧಿಕಾರಿಗಳ ಹತ್ಯೆಗೆ ಯತ್ನಿಸಿದ್ದ ಪ್ರಕರಣದಲ್ಲಿ ಸ್ಥಳೀಯ ಚುನಾವಣೆಗಳಿಗೆ ಸ್ಪರ್ಧಿಸಿದ್ದ ಸಿಪಿಎಂ ಅಭ್ಯರ್ಥಿ ಸೇರಿ ಇಬ್ಬರಿಗೆ ಕೇರಳದ ನ್ಯಾಯಾಲಯವು 10 ವರ್ಷ ಕಾರಾಗೃಹ ಶಿಕ್ಷೆ ವಿಧಿಸಿದೆ.

ತಳಿಪರಂಬ ಹೆಚ್ಚುವರಿ ಸೆಷನ್ಸ್ ನ್ಯಾಯಾಲಯವು, ಸಿಪಿಎಂ ಅಭ್ಯರ್ಥಿ ವಿ.ಕೆ.ನಿಶಾದ್ (35) ಮತ್ತು ಟಿ.ಸಿ.ವಿ ನಂದಕುಮಾರ್ (35) ಅವರಿಗೆ ಈ ಶಿಕ್ಷೆಯ ಜೊತೆಗೆ ₹2.5 ಲಕ್ಷ ದಂಡವನ್ನೂ ವಿಧಿಸಿದೆ. ಪ್ರಕರಣದ ಇನ್ನಿಬ್ಬರು ಆರೋಪಿಗಳನ್ನು ಖುಲಾಸೆಗೊಳಿಸಿದೆ.

ಸಿಪಿಎಂ ನಾಯಕ ಪಿ.ಜಯರಾಜನ್ ಅವರ ಬಂಧನದ ವಿರುದ್ಧ 2012 ಆಗಸ್ಟ್ 1ರಂದು ನಡೆದ ಪ್ರತಿಭಟನೆಯಲ್ಲಿ ಪೊಲೀಸ್ ಅಧಿಕಾರಿಗಳ ಮೇಲೆ ನಾಡ ಬಾಂಬ್ ಎಸೆಯಲಾಗಿತ್ತು.

ನಿಶಾದ್ ಅವರು ನಾಮಪತ್ರ ಸಲ್ಲಿಸುವಾಗ ನ್ಯಾಯಾಲಯದ ತೀರ್ಪು ಪ್ರಕಟವಾಗಿರಲಿಲ್ಲ. ಹೀಗಾಗಿ ಅವರು ಚುನಾವಣೆಯಲ್ಲಿ ಸ್ಪರ್ಧಿಸಲು ಕಾನೂನಿನ ಯಾವುದೇ ಅಡ್ಡಿ ಇಲ್ಲ.

ರಾಮಧ್ವಜ ಆರೋಹಣ ನೆರವೇರಿಸಿದ ಪ್ರಧಾನಿ

ಎರಡನೇ ಮುಖಪುಟದಿಂದ...

ಇದೇ ವೇಳೆ ಮಂದಿರದ ಸಂಕೀರ್ಣದಲ್ಲಿರುವ ಎಲ್ಲ 7 ದೇವಸ್ಥಾನಗಳಲ್ಲಿಯೂ ಧ್ವಜಾರೋಹಣ ಮಾಡಲಾಯಿತು.

ನಾಲ್ಕು ದಿನಗಳಿಂದ ರಾಮ ಮಂದಿರದಲ್ಲಿ ವಿಶೇಷ ಪೂಜೆಗಳು, ಯಜ್ಞಗಳು ನಡೆದಿದ್ದವು. ಇಡೀ ಅಯೋಧ್ಯೆ ನಗರವೇ ಸಿಂಗಾರಗೊಂಡಿತ್ತು. ಮಂಗಳವಾರ ಅಂಗಡಿಗಳು ಮುಚ್ಚಿದ್ದವು. ಶೆಟರ್‌ಗಳ ಮೇಲೆ ಜೈ ಶ್ರೀರಾಮ್ ಘೋಷಣೆಗಳನ್ನು ಬರೆಯಲಾಗಿತ್ತು. ಹನುಮಂತನ ಚಿತ್ರಗಳೂ ಇದ್ದವು. ಬಸ್ ಹಾಗೂ ರೈಲು ನಿಲ್ದಾಣಗಳು ಜನರಿಂದ ತುಂಬಿದ್ದವು.

'ಇದು 500 ವರ್ಷಗಳ ಬಳಿಕ ಬಂದ ಸಾರ್ಥಕ ಕ್ಷಣ. ನಮ್ಮ ಪೂರ್ವಜರು ಈ ದಿನಕ್ಕಾಗಿಯೇ ತ್ಯಾಗ ಮಾಡಿದ್ದರು. ಈ ಕ್ಷಣವನ್ನು ಕಣ್ತುಂಬಿಕೊಳ್ಳುತ್ತಿರುವುದು ನಮ್ಮ ಭಾಗ್ಯ' ಎಂದು ಭಕ್ತರೊಬ್ಬರು ಹೇಳಿದರು. ಛತ್ತೀಸಗಢ, ಒಡಿಶಾ, ಅಸ್ಸಾಂ, ಮಧ್ಯಪ್ರದೇಶ, ಮಹಾರಾಷ್ಟ್ರದಿಂದ ವಿದ್ವಾಂಸರು ಬಂದಿದ್ದರು. ಉತ್ತರ ಪ್ರದೇಶದ ವೇದ ಪಂಡಿತರೂ ಉಪಸ್ಥಿತರಿದ್ದರು.

'ಧ್ವಜಾರೋಹಣ ಕಾರ್ಯದ ಎಲ್ಲ ಪೂಜಾ, ವಿಧಿ ವಿಧಾನಗಳು ಪೂರ್ಣಗೊಂಡ ಬಳಿಕ ರಾಮ ದೇವರ ದರ್ಶನವನ್ನು ಪುನಃ ಆರಂಭಿಸಲಾಗುವುದು' ಎಂದು ರಾಮಜನ್ಮಭೂಮಿ ಟ್ರಸ್ಟ್ ಹೇಳಿದೆ. ಸೋಮವಾರ ಮತ್ತು ಮಂಗಳವಾರ ಮಂದಿರದಲ್ಲಿ ಸುಮಾರು 500 ಕಲಾವಿದರಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು.

ಆರ್‌ಎಸ್‌ಎಸ್ ಸರಸಂಘಚಾಲಕ ಮೋಹನ್ ಭಾಗವತ್, ಉತ್ತರ ಪ್ರದೇಶ ರಾಜ್ಯಪಾಲೆ ಆನಂದಿಬೆನ್ ಪಟೇಲ್ ಮತ್ತು ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಭಾಗವಹಿಸಿದ್ದರು.

> **ಅಯೋಧ್ಯೆಯಲ್ಲಿ ರಾಮ ಮಂದಿರ ನಿರ್ಮಾಣವಾಗಬೇಕು ಎಂದು ತಮ್ಮ ಜೀವ ತ್ಯಾಗ ಮಾಡಿದವರ ಆತ್ಮಕ್ಕೆ ಈಗ ಶಾಂತಿ ದೊರೆತಿರಬಹುದು**
> **ಮೋಹನ್ ಭಾಗವತ್,** ಆರ್‌ಎಸ್‌ಎಸ್ ಮುಖ್ಯಸ್ಥ

> **ಇದು ರಾಷ್ಟ್ರ ಮಂದಿರ. ಈ ಧ್ವಜವು ನಂಬಿಕೆಯ ಅನಂತತೆಯನ್ನು, ಸಂಸ್ಕೃತಿಯ ಪುನರುತ್ಥಾನವನ್ನು ಪ್ರತಿನಿಧಿಸುತ್ತದೆ**
> **ಯೋಗಿ ಆದಿತ್ಯನಾಥ** ಉತ್ತರ ಪ್ರದೇಶದ ಮುಖ್ಯಮಂತ್ರಿ

ದಲಿತ ಎಂದು ಆಹ್ವಾನಿಸಲಿಲ್ಲ: ಸಂಸದ

'ನಾನು ದಲಿತ ಎನ್ನುವ ಕಾರಣಕ್ಕೆ ನನ್ನನ್ನು ಧ್ವಜಾರೋಹಣ ಕಾರ್ಯಕ್ರಮಕ್ಕೆ ಆಹ್ವಾನಿಸಲಿಲ್ಲ' ಎಂದು ಫೈಜಾಬಾದ್ ಲೋಕಸಭಾ ಕ್ಷೇತ್ರದ ಸಂಸದ, ಸಮಾಜವಾದಿ ಪಕ್ಷದ ಅವಧೇಶ್ ಪ್ರಸಾದ್ ಮಂಗಳವಾರ ಆರೋಪಿಸಿದ್ದಾರೆ. 'ಇದೊಂದು ರಾಜಕೀಯ ಪ್ರೇರಿತ ಆರೋಪ' ಎಂದು ಬಿಜೆಪಿ ಪ್ರತಿಕ್ರಿಯಿಸಿದೆ.

'ಅವರಿಗೆ (ಅವಧೇಶ್ ಪ್ರಸಾದ್) ರಾಮನ ಮೇಲೆ ನಿಜ ಭಕ್ತಿ ಇದ್ದಿದ್ದರೆ, ಅವರು ಭಕ್ತರೊಂದಿಗೆ ಸೇರಿಕೊಳ್ಳಬಹುದಿತ್ತು. ರಾಮ ಮಂದಿರದ ಕುರಿತು ಸಮಾಜವಾದಿ ಪಕ್ಷಕ್ಕೆ ಯಾವ ಅಭಿಪ್ರಾಯ ಇತ್ತು ಎಂದು ಎಲ್ಲರಿಗೂ ತಿಳಿದಿದೆ' ಎಂದು ಬಿಜೆಪಿ ಹೇಳಿದೆ.

'ಶತಮಾನಗಳ ಹಿಂದಿನ ಗಾಯ ಮಾಸುತ್ತಿದೆ'

'ಶತಮಾನಗಳಷ್ಟು ಹಳೆಯ ಗಾಯವು ಇಂದು ಮಾಸುತ್ತಿದೆ. ಇಷ್ಟು ಶತಮಾನಗಳ ನೋವು ಇಂದು ಮರೆಯಾಗುತ್ತಿದೆ. 500 ವರ್ಷಗಳ ಹಂಬಲ ಕೊನೆಗೂ ಪೂರ್ಣಗೊಂಡಿದೆ. ಇಂದು ಇಡೀ ದೇಶ ಮತ್ತು ಜಗತ್ತೇ ರಾಮನಾಮನಲ್ಲಿ ಸೇರಿಹೋಗಿದೆ' ಎಂದು ಪ್ರಧಾನಿ ಮೋದಿ ಬಣ್ಣಿಸಿದರು. 'ನಾವು 2047ರ ಹೊತ್ತಿಗೆ ಅಭಿವೃದ್ಧಿ ಹೊಂದಿದ ದೇಶವಾಗಲಿದ್ದೇವೆ. ಇದನ್ನು ಸಾಧಿಸಲು ನಿಮ್ಮೊಳಗಿರುವ ರಾಮನನ್ನು ಜಾಗೃತ ಮಾಡಿಕೊಳ್ಳಿ. ರಾಮ ಒಬ್ಬ ಮನುಷ್ಯ ಮಾತ್ರನಲ್ಲ. ಅವನೊಂದು ಮೌಲ್ಯ, ಶಿಸ್ತು ಮತ್ತು ದಿಕ್ಕು-ದೆಸೆ. ಗುಲಾಮಗಿರಿಯ ಮನಃಸ್ಥಿತಿಯಿಂದ ಮುಕ್ತರಾಗಬೇಕು. ನಮ್ಮ ನಾಗರಿಕತೆಯ ಅಸ್ಮಿತೆಯ ಬಗ್ಗೆ ಹೆಮ್ಮೆ ಪಡಬೇಕು' ಎಂದು ನಾಗರಿಕರಿಗೆ ಕರೆ ನೀಡಿದರು.

ರೋಡ್ ಶೋ: ಪ್ರಧಾನಿ ಮೋದಿ ಅವರು ರಾಮ ಮಂದಿರದವರೆಗೆ ರೋಡ್ ಶೋ ಕೈಗೊಂಡರು. ಈ ವೇಳೆ ರಸ್ತೆಯ ಇಕ್ಕೆಲಗಳಲ್ಲಿ ಭಾರಿ ಸಂಖ್ಯೆಯಲ್ಲಿ ಭಕ್ತರು ಸೇರಿದ್ದರು. ಪ್ರಧಾನಿ ಮೋದಿ ಅವರ ಮೇಲೆ ಹೂವಿನ ಮಳೆಗರೆದರು.

ಪೂಜೆಗೆ ಹಾಜರಾಗದ ಅಧಿಕಾರಿ ವಜಾ ಮಧ್ಯಪ್ರವೇಶಕ್ಕೆ 'ಸುಪ್ರೀಂ' ನಿರಾಕರಣೆ

ನವದೆಹಲಿ: ರೆಜಿಮೆಂಟಲ್ ಪರೇಡ್‌ನ ಭಾಗವಾಗಿ ನಡೆದ ಪೂಜೆಗೆ ಹಾಜರಾಗದ ಭಾರತೀಯ ಸೇನೆಯ ಕ್ರೈಸ್ತ ಸಮುದಾಯದ ಅಧಿಕಾರಿಯನ್ನು ಹುದ್ದೆಯಿಂದ ವಜಾಗೊಳಿಸಿದ್ದ ಆದೇಶ ರದ್ದುಗೊಳಿಸಲು ನಿರಾಕರಿಸಿದ ದೆಹಲಿ ಹೈಕೋರ್ಟ್‌ನ ಆದೇಶವನ್ನು ಪ್ರಶ್ನಿಸಿ ಸಲ್ಲಿಸಿರುವ ಮೇಲ್ಮನವಿಯನ್ನು ಪುರಸ್ಕರಿಸಲು ಸುಪ್ರೀಂ ಕೋರ್ಟ್ ಮಂಗಳವಾರ ನಿರಾಕರಿಸಿದೆ.

'ಸಂವಿಧಾನದ 25ನೇ ವಿಧಿ (ಧಾರ್ಮಿಕ ಸ್ವಾತಂತ್ರ್ಯ) ಉಲ್ಲಂಘನೆಯ ವಿಷಯ ಬಂದಾಗ ಧಾರ್ಮಿಕತೆಯ ಅಗತ್ಯ ಅಂಶಗಳನ್ನು ಪರಿಗಣಿಸಬೇಕು, ಕೇವಲ ಧಾರ್ಮಿಕ ಭಾವನೆ ಕುರಿತ ಅಂಶವನ್ನಲ್ಲ' ಎಂದು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್ ಮತ್ತು ನ್ಯಾಯಮೂರ್ತಿ ಜಾಯ್‌ಮಾಲ್ಯ ಬಾಗ್ಚಿ ಅವರ ಪೀಠ ಹೇಳಿದೆ.

'ಈ ಅಧಿಕಾರಿಯು ತಾನು ಮುನ್ನಡೆಸಿದ್ದ ಬಹುಸಂಖ್ಯಾತರ ನಂಬಿಕೆಗಳನ್ನು ಗೌರವಿಸಬೇಕಿತ್ತು' ಎಂದೂ ಹೇಳಿದೆ.

'ತಮ್ಮ ಪಡೆಗಳು ಪೂಜೆ ಸಲ್ಲಿಸುತ್ತಿದ್ದ ಗರ್ಭಗುಡಿಗೆ ಪ್ರವೇಶಿಸದ ಒಂದು ಉಲ್ಲಂಘನೆಗಾಗಿ ಅಧಿಕಾರಿಯನ್ನು ವಜಾಗೊಳಿಸಲಾಗಿದೆ' ಎಂದು ಅರ್ಜಿದಾರ ಸ್ಯಾಮುಯೆಲ್ ಕಮಲೇಶನ್ ಅವರ ಪರ ವಕೀಲ ಗೋಪಾಲ್ ಶಂಕರನಾರಾಯಣನ್ ವಾದಿಸಿದರು.

'ರೆಜಿಮೆಂಟ್‌ಗಳ ಪ್ರಕಾರ, ಸರ್ವ ಧರ್ಮಗಳ ಸ್ಥಳವೆಂದು ಕರೆಯುವ ಒಂದು ಸಭಾಂಗಣವಿದೆ. ಅಲ್ಲಿ ವಿವಿಧ ಧಾರ್ಮಿಕ ನಂಬಿಕೆಗಳ ಚಿಹ್ನೆಗಳನ್ನು ಇಡಲಾಗುತ್ತದೆ. ಅವರು ಆ ಸ್ಥಳಗಳಿಗೆ ಪ್ರವೇಶಿಸಿದ್ದಾರೆ. ಪಂಜಾಬ್‌ನ ಮಾಮುನ್‌ನಲ್ಲಿರುವ ಈ ಒಂದು ಸ್ಥಳದಲ್ಲಿ ರೆಜಿಮೆಂಟ್‌ಅನ್ನು ನಿಯೋಜಿಸಲಾಗಿತ್ತು. ಅಲ್ಲಿ ಸರ್ವ ಧರ್ಮಗಳ ಸ್ಥಳ ಇರಲಿಲ್ಲ. ಅವರಿಗೆ ಗುರುದ್ವಾರ ಮತ್ತು ದೇವಾಲಯವಿತ್ತು. ಬೇರೇನೂ ಇರಲಿಲ್ಲ. ಗರ್ಭಗುಡಿಯ ಹೊರಗೆ ಅವರು ನಿಂತಿರುವ ಛಾಯಾಚಿತ್ರಗಳಿವೆ' ಎಂದು ವಾದಿಸಿದರು.

'ಅರ್ಜಿದಾರರು ಗರ್ಭಗುಡಿ ಪ್ರವೇಶಿಸುವುದು ಅವರ ಸ್ವಂತ ನಂಬಿಕೆಯ ಉಲ್ಲಂಘನೆಯಾಗಿದ್ದು, ಅವರ ತಂಡದ ಯಾವುದೇ ಸೈನಿಕರಿಗೆ ಸಮಸ್ಯೆ ಇರಲಿಲ್ಲ. ಆದರೆ, ಅವರ ಮೇಲಧಿಕಾರಿಗೆ ಇದರಲ್ಲಿ ಸಮಸ್ಯೆ ಇತ್ತು' ಎಂದು ವಕೀಲರು ಹೇಳಿದರು.

'ಇದು ಸೇನಾ ಅಧಿಕಾರಿಯ ಅತ್ಯಂತ ಘೋರವಾದ ಅಶಿಸ್ತನ್ನು ಪ್ರದರ್ಶಿಸುತ್ತದೆ' ಎಂದು ಪೀಠ ಹೇಳಿದೆ.

ಜುಬಿನ್ ಗರ್ಗ್ ಕೊಲೆಯಾಗಿರುವುದು ಖಚಿತ: ಅಸ್ಸಾಂ ಸಿಎಂ

ಗುವಾಹಟಿ (ಪಿಟಿಐ): ಸಿಂಗಪುರದಲ್ಲಿ ಸಮುದ್ರದಲ್ಲಿ ಈಜುತ್ತಿದ್ದಾಗ ಸಂಭವಿಸಿದ ಗಾಯಕ ಜುಬಿನ್ ಗರ್ಗ್ ಅವರ ಸಾವು 'ಸ್ಪಷ್ಟವಾಗಿ ಒಂದು ಕೊಲೆ' ಎಂದು ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಮಂಗಳವಾರ ವಿಧಾನ ಸಭೆಯಲ್ಲಿ ಹೇಳಿದರು.



ಜುಬಿನ್

ಗರ್ಗ್ ಅಸಹಜ ಸಾವಿನ ಪ್ರಕರಣವನ್ನು ಕೊಲೆ ಪ್ರಕರಣವಾಗಿ ಪರಿಗಣಿಸಿ ವಿಶೇಷ ತನಿಖಾ ತಂಡ (ಎಸ್‌ಐಟಿ) ತನಿಖೆ ನಡೆಸುತ್ತಿದೆ. ಅಸ್ಸಾಂ ಪೊಲೀಸರ ಪ್ರಾಥಮಿಕ ತನಿಖೆ ಪ್ರಕಾರ, ಇದೊಂದು ಕೊಲೆ. ಹಾಗಾಗಿಯೇ ಬಿಎನ್‌ಎಸ್ ಸೆಕ್ಷನ್ 103 ಅನ್ನು ಈ ಪ್ರಕರಣಕ್ಕೆ ಸೇರಿಸಲಾಗಿದೆ' ಎಂದು ಅವರು ಹೇಳಿದರು.

ಇದಕ್ಕೂ ಮುನ್ನ ಗರ್ಗ್ ಸಾವಿನ ಬಗ್ಗೆ ಚರ್ಚಿಸಲು ಅವಕಾಶ ಕೋರಿ ಅಸ್ಸಾಂ ವಿಧಾನಸಭೆಯಲ್ಲಿ ವಿರೋಧ ಪಕ್ಷಗಳು ಮಂಡಿಸಿದ ನಿಲುವಳಿ ಸೂಚನೆಯನ್ನು ಮಾನ್ಯ ಮಾಡಲಾಯಿತು.

ಸೆಪ್ಟೆಂಬರ್ 19ರಂದು ಜುಬಿನ್ ಸಾವು ಸಂಭವಿಸಿತ್ತು. ಪ್ರಕರಣಕ್ಕೆ ಸಂಬಂಧಿಸಿ ಎಸ್‌ಐಟಿ ಅಧಿಕಾರಿಗಳು ಇದುವರೆಗೆ 7 ಜನರನ್ನು ಬಂಧಿಸಿದ್ದಾರೆ.

ಭಾರತಕ್ಕೆ ಮುಖಭಂಗ ತಪ್ಪಿಸುವ ಸವಾಲು

ಎರಡನೇ ಟೆಸ್ಟ್: ಪಂತ್ ಪಡೆಗೆ 549 ರನ್‌ಗಳ ಗುರಿ • ಆರಂಭಿಕ ಆಟಗಾರರ ನಿರ್ಗಮನ

• ಮಧು ಜವಳಿ

ಗುವಾಹಟಿ: ಈ ಭಾಗದಲ್ಲಿ ಸೂರ್ಯ ಬೇಗನೇ ಅಸ್ತಮಿಸುವಂತೆ, ಎರಡನೇ ಹಾಗೂ ಅಂತಿಮ ಟೆಸ್ಟ್ ಪಂದ್ಯವನ್ನು ಉಳಿಸಿಕೊಳ್ಳುವ ಭಾರತ ಆಸೆಯೂ ಬೇಗನೇ ಕಮರುವಂತೆ ಕಾಣುತ್ತಿದೆ. ಪಂದ್ಯ ಗೆಲ್ಲುವುದು ದೂರದ ಮಾತಾಗಿದ್ದು, ಸೋಲು ತಪ್ಪಿಸಿಕೊಳ್ಳಲು ಬುಧವಾರ ದಿನವಿಡೀ ಆಡಬೇಕಾಗಿದೆ.

ನಾಲ್ಕನೇ ದಿನವಾದ ಮಂಗಳವಾರ ದಕ್ಷಿಣ ಆಫ್ರಿಕಾ 5 ವಿಕೆಟ್‌ಗೆ 260 ರನ್ ಗಳಿಸಿ ಎರಡನೇ ಇನಿಂಗ್ಸ್ ಡಿಕ್ಲೇರ್ ಮಾಡಿಕೊಂಡು, ಆತಿಥೇಯರಿಗೆ 549 ರನ್‌ಗಳ ಅಸಾಧ್ಯ ಸವಾಲೆಸೆಯಿತು. ದಿನದ ಕೊನೆಗೆ ರಿಷಭ್ ಪಂತ್ ಪಡೆ 15.5 ಓವರುಗಳಲ್ಲಿ 2 ವಿಕೆಟ್‌ಗೆ 27 ರನ್ ಗಳಿಸಿ ಆತಂಕಕ್ಕೆ ಸಿಲುಕಿದೆ.

ಎಸಿಎ ಕ್ರೀಡಾಂಗಣದಲ್ಲಿ ಹತ್ತು ಓವರುಗಳಾಗುವಷ್ಟರಲ್ಲಿ ಇಬ್ಬರೂ ಆರಂಭಿಕರು ಪೆವಿಲಿಯನ್ ಸೇರಿಕೊಂಡರು. ಸಾಯಿ ಸುದರ್ಶನ್ (ಬ್ಯಾಟಿಂಗ್ 2, 25ಎ) ಜೊತೆ ನೈಟ್ ವಾಚ್‌ಮನ್ ಕುಲದೀಪ್ ಯಾದವ್ (ಬ್ಯಾಟಿಂಗ್ 4, 22ಎ) ಅಂತಿಮ ದಿನದಾಟ ಮುಂದುವರಿಸಲಿದ್ದಾರೆ. ಭಾರತ ಇನ್ನೂ 522 ರನ್ ಹಿಂದೆ ಇದೆ.

ಭಾರತದ ಗಾಯಕ್ಕೆ ಉಪ್ಪು ಸವರುವಂತೆ, ದಕ್ಷಿಣ ಆಫ್ರಿಕಾ ಕೋಚ್ ಶುಕ್ರಿ ಕೊನ್ರಾಡ್ ಅವರು ಮಾಧ್ಯಮ ಗೋಷ್ಠಿಯಲ್ಲಿ 'ನಾವು ಅವರನ್ನು (ಭಾರತವನ್ನು) ಅಡ್ಡಬೀಳುವಂತೆ ಮಾಡ-ಬಯಸಿದ್ದೇವೆ' ಎಂದು ಮಾತನಾಡಿದರು. ಅವರ ಮಾತು, ಇಂಗ್ಲೆಂಡ್‌ನ ಟೋನಿ ಗ್ರೆಗ್ 1976ರಲ್ಲಿ ಕ್ಲೈವ್ ಲಾಯ್ಡ್ ನೇತೃತ್ವದ ವೆಸ್ಟ್ ಇಂಡೀಸ್ ತಂಡವನ್ನು ಉದ್ದೇಶಿಸಿ ನೀಡಿದ ಕುಪ್ರಸಿದ್ಧ ಹೇಳಿಕೆಯನ್ನು ನೆನಪಿಸಿತು.

ವೆಸ್ಟ್ ಇಂಡೀಸ್ ಅಂದು ಕೆಚ್ಚಿನಿಂದ ಆಡಿ ಪಂದ್ಯ ಡ್ರಾ ಮಾಡಿ ಗ್ರೆಗ್ ಅವರಿಗೆ ಸರಿಯಾಗಿಯೇ ತಿರುಗೇಟು ನೀಡಿತ್ತು. ಭಾರತ ಅದೇ ರೀತಿ ಹೋರಾಡಿ ಡ್ರಾ ಮಾಡುವುದೇ? ಡ್ರಾ ಆದರೂ ತವರಿನಲ್ಲಿ ಮತ್ತೊಂದು ಸರಣಿ ಸೋಲು ತಪ್ಪುವುದಿಲ್ಲ. ಆದರೆ ಕ್ಲೀನ್‌ಸ್ವೀಪ್ ತಪ್ಪಿಸಿಕೊಳ್ಳಬಹುದು.

ಎಡಗೈ ಬ್ಯಾಟರ್ ಯಶಸ್ವಿ ಜೈಸ್ವಾಲ್ ಎರಡನೇ ಇನಿಂಗ್ಸ್‌ನಲ್ಲೂ ಧೈರ್ಯದಿಂದ ಆಡಲು ಹೋದರು. ಯಾನ್ಸನ್ ಬೌಲಿಂಗ್‌ನಲ್ಲಿ ರಿಸ್ಕ್ ತೆಗೆದುಕೊಂಡು 'ಕಟ್' ಹೊಡೆತಕ್ಕೆ ಹೋದ ಅವರು ವಿಕೆಟ್ ಕೀಪರ್ ಕೈಲ್ ವೆರೆಯನ್ ಅವರಿಗೆ ಕ್ಯಾಚ್ ನೀಡಬೇಕಾಯಿತು. ಆದರೆ ಕೆ.ಎಲ್. ರಾಹುಲ್ ನಿರ್ಗಮಿಸಿದ್ದು, ಡ್ರಾ ಮಾಡುವ ಯತ್ನಕ್ಕೆ ದೊಡ್ಡ ಹಿನ್ನಡೆ ಎನಿಸಿತು. ವಾಷಿಂಗ್ಟನ್ ಸುಂದರ್, ರವೀಂದ್ರ ಜಡೇಜ ರೀತಿ ಬೇರೂರಿ ಆಡಬಲ್ಲ ಇನ್ನೊಬ್ಬ ಬ್ಯಾಟರ್ ಅವರಾಗಿದ್ದರು. ಹಾರ್ಮರ್ ಅವರ ಅಮೋಘ ಎಸೆತವನ್ನು ಆಡುವ ಯತ್ನದಲ್ಲಿ ಅವರು ಎಡವಿದರು. 'ಟಾಸ್' ಆಗಿ ಸ್ವಲ್ಪ ನಿಧಾನಗತಿ ಪಡೆದು ತಿರುಗಿದ ಚೆಂಡು ಬೇಲ್ಸ್ ಉರುಳಿಸಿತು; ದಕ್ಷಿಣ ಆಫ್ರಿಕಾ ಸಂಭ್ರಮ ಇಮ್ಮಡಿಸಿತು.

ಟ್ರಿಸ್ಟನ್ ಸ್ಟಬ್ಸ್ ಬ್ಯಾಟಿಂಗ್ ವೈಖರಿ — ಪಿಟಿಐ ಚಿತ್ರ

ಇದಕ್ಕೆ ಮೊದಲು ವಿಕೆಟ್ ನಷ್ಟವಿಲ್ಲದೇ 26 ರನ್‌ಗಳೊಡನೆ (ಜೊತೆಗೆ 314 ರನ್‌ಗಳ ಮುನ್ನಡೆ) ದಿನದಾಟ ಮುಂದುವರಿಸಿದ ಹರಿಣಗಳ ಪಡೆ ಅವಸರದಲ್ಲಿರಲಿಲ್ಲ. ಅನುಭವಿ ಜಡೇಜ (62ಕ್ಕೆ4) ಮತ್ತು ಸುಂದರ್ (67ಕ್ಕೆ1) ಅವರು ಚೆಂಡಿಗೆ ಸಾಕಷ್ಟು ತಿರುವು ಪಡೆ-ದುಕೊಳ್ಳುವಲ್ಲಿ ಸಫಲರಾದರು. ರಿಯಾನ್ ರಿಕೆಲ್ಟನ್ ಮತ್ತು ಏಡನ್ ಮರ್ಕರಂ (29) ಅವರು 59 ರನ್ ಸೇರಿಸಿದರು. ಜಡೇಜ ಬೌಲಿಂಗ್‌ನಲ್ಲಿ ರಿಕೆಲ್ಟನ್ ಕವರ್ಸ್‌ನಲ್ಲಿ ಸಿರಾಜ್‌ಗೆ ಕ್ಯಾಚಿತ್ತರು. ನಂತರ ಈ ಅನುಭವಿ ಎಡಗೈ ಸ್ಪಿನ್ನರ್ ಅತ್ಯುತ್ತಮ ಎಸೆತವೊಂದರಲ್ಲಿ ಮರ್ಕರಂ ಅವರ ರಕ್ಷಣೆಯನ್ನು ಭೇದಿಸಿ ಬೌಲ್ಡ್ ಮಾಡಿದರು.

ಎಂಟು ವಿಕೆಟ್‌ಗಳು ಕೈಯಲ್ಲಿದ್ದು 362 ರನ್‌ಗಳ ಲೀಡ್ ಪಡೆದ ದಕ್ಷಿಣ ಆಫ್ರಿಕಾ ಅಪಾಯದಲ್ಲೇನೂ ಇರಲಿಲ್ಲ. ಪಂದ್ಯ ಭಾರತದ ಕೈಗೆಟುಕದಂತೆ ನೋಡಿಕೊಳ್ಳುವುದು ಅವರ ಮೊದಲ ಗುರಿಯಾಗಿತ್ತು. ಟ್ರಿಸ್ಟನ್ ಸ್ಟಬ್ಸ್ (94, 180ಎ, 4x9, 6x1) ಮತ್ತು ಟೋನಿ ಡಿ ಝೋರ್ಜಿ (49, 68ಎ, 4x4, 6x1) ಅವರು ನಾಲ್ಕನೇ ವಿಕೆಟ್‌ಗೆ 101 ರನ್ ಸೇರಿಸಿದರು. ಸ್ಟಬ್ಸ್ ಮತ್ತು ವಿಯಾನ್ ಮಲ್ಡರ್ (ಔಟಾಗದೇ 35, 69ಎ, 4x5) ಅವರು ಐದನೇ ವಿಕೆಟ್‌ಗೆ 82 ರನ್ ಸೇರಿದ್ದರಿಂದ ಲೀಡ್ 500ರ ಗಡಿ ದಾಟಿತು.

ಅಂತಿಮ ಅವಧಿಯಲ್ಲಿ ಸ್ಟಬ್ಸ್ ಅವರು ಟೆಸ್ಟ್‌ನಲ್ಲಿ ಮೂರನೇ ಶತಕ ಬಾರಿಸಬಹುದೇ ಎಂಬ ಕುತೂಹಲವಷ್ಟೇ ಉಳಿದಿತ್ತು. ಆದರೆ ರನ್ ವೇಗ ಹೆಚ್ಚಿಸುವ ಯತ್ನದಲ್ಲಿ ಅವರು ಜಡೇಜ ಬೌಲಿಂಗ್‌ನಲ್ಲಿ ಭರ್ಜರಿ ಹೊಡೆತಕ್ಕೆ ಮುಂದಾಗಿ ಬೌಲ್ಡ್ ಆದರು. ಭಾರತಕ್ಕೆ 18 ಓವರುಗಳನ್ನು ಆಡಬೇಕಿತ್ತು. 16 ಓವರುಗಳಷ್ಟೇ ಸಾಧ್ಯವಾಯಿತು. ಪ್ರವಾಸಿ ತಂಡಕ್ಕೆ ಅಗತ್ಯವಿದ್ದ ಯಶಸ್ಸು ಅಷ್ಟರೊಳಗೆ ಲಭಿಸಿತ್ತು.

ಸಂಕ್ಷಿಪ್ತ ಸ್ಕೋರು: ದಕ್ಷಿಣ ಆಫ್ರಿಕಾ: 489 ಮತ್ತು ದಕ್ಷಿಣ ಆಫ್ರಿಕಾ: 5 ವಿಕೆಟ್‌ಗೆ 260 ಡಿಕ್ಲೇರ್ಡ್ (78.3 ಓವರುಗಳಲ್ಲಿ) (ರಿಯಾನ್ ರಿಕೆಲ್ಟನ್ 35, ಏಡನ್ ಮರ್ಕರಂ 29, ಟ್ರಿಸ್ಟನ್ ಸ್ಟಬ್ಸ್ 94, ಟೋನಿ ಡಿ ಝೋರ್ಜಿ 49, ವಿಯಾನ್ ಮಲ್ಡರ್ ಔಟಾಗದೇ 35; ರವೀಂದ್ರ ಜಡೇಜ 62ಕ್ಕೆ4, ವಾಷಿಂಗ್ಟನ್ ಸುಂದರ್ 67ಕ್ಕೆ1); ಭಾರತ: 201 ಮತ್ತು 15.5 ಓವರುಗಳಲ್ಲಿ 2 ವಿಕೆಟ್‌ಗೆ 27 (ಯಶಸ್ವಿ ಜೈಸ್ವಾಲ್ 13; ಮಾರ್ಕೊ ಯಾನ್ಸೆನ್ 14ಕ್ಕೆ1, ಹಾರ್ಮರ್ 1ಕ್ಕೆ1).

ಕೂಚ್ ಬಿಹಾರ್: ಗೆಲುವಿನತ್ತ ಕರ್ನಾಟಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿಮಾಚಲ ಪ್ರದೇಶ ತಂಡವನ್ನು ಎರಡನೇ ಇನಿಂಗ್ಸ್‌ನಲ್ಲಿ 182 ರನ್‌ಗಳಿಗೆ ಆಲೌಟ್ ಮಾಡಿದ ಕರ್ನಾಟಕ ತಂಡವು, ಕೂಚ್ ಬಿಹಾರ್ ಟ್ರೋಫಿ ಎಲೈಟ್ ಸಿ ಗುಂಪಿನ ಪಂದ್ಯದಲ್ಲಿ ಗೆಲುವಿನತ್ತ ಮುನ್ನಡೆದಿದೆ. ರಾಜ್ಯ ತಂಡವು ಅಂತಿಮ ದಿನವಾದ ಬುಧವಾರ ಗೆಲುವಿಗೆ 50 ರನ್ ಗಳಿಸಬೇಕಿದ್ದು, 8 ವಿಕೆಟ್‌ಗಳು ಬತ್ತಳಿಕೆಯಲ್ಲಿವೆ.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಪಂದ್ಯದಲ್ಲಿ ಸೋಮವಾರ 27 ಓವರುಗಳಲ್ಲಿ 2 ವಿಕೆಟ್ ನಷ್ಟಕ್ಕೆ 69 ರನ್ ಗಳಿಸಿದ್ದ ಪ್ರವಾಸಿ ತಂಡವು, ಮಂಗಳವಾರ 78 ಓವರ್‌ಗಳಲ್ಲಿ 182 ರನ್‌ಗಳಿಗೆ ತನ್ನೆಲ್ಲ ವಿಕೆಟ್ ಕಳೆದುಕೊಂಡಿತು. ಎಡಗೈ ಸ್ಪಿನ್ನರ್ ರತನ್ ಬಿ.ಆರ್. (43ಕ್ಕೆ4) ಪರಿಣಾಮಕಾರಿ ಎನಿಸಿದರು.

ಗೆಲುವಿಗೆ 148 ರನ್ ಗುರಿ ಪಡೆದ ರಾಜ್ಯ ತಂಡವು 30 ಓವರ್‌ಗಳಲ್ಲಿ 3 ವಿಕೆಟ್‌ಗೆ 98 ರನ್ ಗಳಿಸಿದೆ. ಸಿದ್ಧಾರ್ಥ್ ಅಖಿಲ್ (ಔಟಾಗದೇ 12) ಹಾಗೂ ನಾಯಕ ಮಣಿಕಂಠ ಶಿವಾನಂದ (ಔಟಾಗದೇ 4) ಕ್ರೀಸ್‌ನಲ್ಲಿದ್ದಾರೆ.

ಸಂಕ್ಷಿಪ್ತ ಸ್ಕೋರು: ಹಿಮಾಚಲ ಪ್ರದೇಶ: 162 ಮತ್ತು 78 ಓವರ್‌ಗಳಲ್ಲಿ 182 (ನೌನಿಹಾಲ್ ಆರ್. 41; ರತನ್ ಬಿ.ಆರ್. 43ಕ್ಕೆ4, ಈಶಾ ಪುತ್ತಿಗೆ 52ಕ್ಕೆ2); ಕರ್ನಾಟಕ: 197 ಮತ್ತು 30 ಓವರ್‌ಗಳಲ್ಲಿ 3 ವಿಕೆಟ್‌ಗೆ 98 (ಆದೇಶ್ ಡಿ. ಅರಸ್ 40,; ಲಕ್ಷ್ಯ ಠಾಕೂರ್ 41ಕ್ಕೆ2).



ಭಾರತದ ಕ್ಷೀರ ಪಿತಾಮಹ ಡಾ. ವರ್ಗೀಸ್ ಕುರಿಯನ್‌ರವರಿಗೆ 104 ನೇ ಜನ್ಮ ಶತಮಾನೋತ್ಸವದ ನಮನಗಳು!

ಹಾಕಿ: ಬೆಲ್ಜಿಯಮ್‌ಗೆ ಮಣಿದ ಭಾರತ

ಇಫೊ (ಮಲೇಷ್ಯಾ), (ಪಿಟಿಐ): ಭಾರತ ತಂಡ, ಸುಲ್ತಾನ್ ಅಜ್ಲಾನ್ ಷಾ ಕಪ್ ಹಾಕಿ ಪಂದ್ಯದಲ್ಲಿ ಮಂಗಳವಾರ ಕೆಚ್ಚಿನಿಂದ ಹೋರಾಟ ತೋರಿದರೂ ಅಂತಿಮವಾಗಿ 2–3 ಗೋಲುಗಳಿಂದ ಪ್ರಬಲ ಬೆಲ್ಜಿಯಂ ತಂಡಕ್ಕೆ ಮಣಿಯಬೇಕಾಯಿತು.

ಅಭಿಷೇಕ್ (33ನೇ ನಿ.), ಶಿಲಾನಂದ ಲಾಕ್ರಾ (57ನೇ ನಿ.) ಅವರು ಭಾರತ ತಂಡದ ಪರ ಗೋಲು ಗಳಿಸಿದರು. ಬೆಲ್ಜಿಯಮ್ ಪರ ರೋಮನ್ ದುವೆಕೋಟ್ (17 ಮತ್ತು 57ನೇ ನಿ.) ಮತ್ತು ನಿಕೋಲಸ್ ಡಿ ಕೆರ್ಪೆಲ್ (45ನೇ ನಿ.) ಚೆಂಡನ್ನು ಗುರಿ ಮುಟ್ಟಿಸಿದರು.

ಆರು ತಂಡಗಳ ಈ ಟೂರ್ನಿಯಲ್ಲಿ, ಸಂಜಯ್ ನೇತೃತ್ವದ ಭಾರತ ತಂಡವು ತನ್ನ ಮೊದಲ ಪಂದ್ಯದಲ್ಲಿ ಭಾನುವಾರ ದಕ್ಷಿಣ ಕೊರಿಯಾ ತಂಡವನ್ನು 1–0 ಗೋಲಿನಿಂದ ಸೋಲಿಸಿತ್ತು.

ಭಾರತ ತಂಡವು ಬುಧವಾರ ನಡೆಯಲಿರುವ ತನ್ನ ಮುಂದಿನ ಪಂದ್ಯದಲ್ಲಿ ಆತಿಥೇಯ ಮಲೇಷ್ಯಾ ತಂಡವನ್ನು ಎದುರಿಸಲಿದೆ.

ಕೊಲಂಬೊದಲ್ಲಿ ಭಾರತ–ಪಾಕ್ ಮುಖಾಮುಖಿ

ಫೆ. 7ರಿಂದ ಟಿ20 ಕ್ರಿಕೆಟ್ ವಿಶ್ವಕಪ್: ಕಣದಲ್ಲಿ 20 ತಂಡ • ಇಟಲಿ ಪದಾರ್ಪಣೆ

ಮುಂಬೈ (ಪಿಟಿಐ): ಬದ್ಧ ಪ್ರತಿಸ್ಪರ್ಧಿಗಳಾದ ಭಾರತ ಮತ್ತು ಪಾಕಿಸ್ತಾನ ತಂಡಗಳು ಮುಂದಿನ ವರ್ಷ ನಡೆಯಲಿರುವ ಪುರುಷರ ಟಿ20 ಕ್ರಿಕೆಟ್ ವಿಶ್ವಕಪ್ ಟೂರ್ನಿಯಲ್ಲಿ ಎ ಗುಂಪಿನಲ್ಲಿ ಕಣಕ್ಕಿಳಿಯಲಿವೆ. ಉಭಯ ತಂಡಗಳು ಫೆಬ್ರುವರಿ 15ರಂದು ಕೊಲಂಬೊದಲ್ಲಿ ನಡೆಯುವ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ.

ಹೋದ ಏಪ್ರಿಲ್‌ನಲ್ಲಿ ಕಾಶ್ಮೀರದ ಪಹಲ್ಗಾಮ್‌ನಲ್ಲಿ ಭಯೋತ್ಪಾದನಾ ದಾಳಿ ನಡೆದಿತ್ತು. ಅದರಿಂದಾಗಿ ಪಾಕಿಸ್ತಾನ ತಂಡದೊಂದಿಗಿನ ದ್ವಿಪಕ್ಷೀಯ ಕ್ರೀಡಾ ಸಂಬಂಧಗಳನ್ನು ಕಡಿತಗೊಳಿಸಿತ್ತು. ಬಹುರಾಷ್ಟ್ರಗಳ ಟೂರ್ನಿಗಳಲ್ಲಿ ಮಾತ್ರ ಉಭಯ ತಂಡಗಳು ಮುಖಾಮುಖಿಯಾಗಲು (ಅದೂ ತಟಸ್ಥ ಸ್ಥಳದಲ್ಲಿ) ಅನುಮತಿ ಇದೆ.

ಈ ವಿಶ್ವಕಪ್ ಟೂರ್ನಿಯಲ್ಲಿ ಪಾಕ್ ತನ್ನ ಎಲ್ಲ ಪಂದ್ಯಗಳನ್ನು ಶ್ರೀಲಂಕಾದಲ್ಲಿ ಆಡಲಿದೆ. ಈಚೆಗೆ ಟಿ20 ಏಷ್ಯಾ ಕಪ್ ಟೂರ್ನಿಯ ಫೈನಲ್‌ನಲ್ಲಿ ಭಾರತ, ಪಾಕ್ ಮುಖಾಮುಖಿಯಾಗಿದ್ದವು.

ಎಂಟು ತಾಣ-55 ಪಂದ್ಯ: ಭಾರತ ಮತ್ತು ಶ್ರೀಲಂಕಾದ ಜಂಟಿ ಆತಿಥ್ಯದಲ್ಲಿ ನಡೆಯುತ್ತಿರುವ ಟೂರ್ನಿಯಲ್ಲಿ ಒಟ್ಟು ಎಂಟು ತಾಣಗಳಲ್ಲಿ 55 ಪಂದ್ಯಗಳು ನಡೆಯಲಿವೆ. ಒಟ್ಟು 20 ತಂಡಗಳು ಕಣದಲ್ಲಿವೆ. ಇದೇ ಮೊದಲ ಬಾರಿಗೆ ಇಟಲಿ ತಂಡವು ಆಡಲಿದೆ.

ಐಸಿಸಿ ಟಿ20 ವಿಶ್ವಕಪ್ –2026 ಎ ಗುಂಪಿನ ವೇಳಾಪಟ್ಟಿ

ದಿನಾಂಕ	ಪಂದ್ಯ	ಸ್ಥಳ	ಸಮಯ
ಫೆ 7	ಪಾಕಿಸ್ತಾನ-ನೆದರ್ಲೆಂಡ್ಸ್	ಕೊಲಂಬೊ	ಬೆಳಿಗ್ಗೆ 11
ಫೆ 7	ಭಾರತ-ಅಮೆರಿಕ	ಮುಂಬೈ	ರಾತ್ರಿ 7
ಫೆ 10	ನೆದರ್ಲೆಂಡ್ಸ್-ನಮಿಬಿಯಾ	ದೆಹಲಿ	ಬೆಳಿಗ್ಗೆ 11
ಫೆ 10	ಪಾಕಿಸ್ತಾನ-ಅಮೆರಿಕ	ಕೊಲಂಬೊ	ರಾತ್ರಿ 7
ಫೆ 12	ಭಾರತ-ನಮಿಬಿಯಾ	ದೆಹಲಿ	ರಾತ್ರಿ 7
ಫೆ 13	ಅಮೆರಿಕ-ನೆದರ್ಲೆಂಡ್ಸ್	ಚೆನ್ನೈ	ರಾತ್ರಿ 7
ಫೆ 15	ಭಾರತ-ಪಾಕಿಸ್ತಾನ	ಕೊಲಂಬೊ	ರಾತ್ರಿ 7
ಫೆ 18	ಪಾಕಿಸ್ತಾನ-ನಮಿಬಿಯಾ	ಕೊಲಂಬೊ	ಮಧ್ಯಾಹ್ನ 3
ಫೆ 18	ಭಾರತ-ನೆದರ್ಲೆಂಡ್ಸ್	ಅಹಮದಾಬಾದ್	ರಾತ್ರಿ 7

ಮೂಲ: ಐಸಿಸಿ ವೆಬ್‌ಸೈಟ್

ಒಟ್ಟು ನಾಲ್ಕು ಗುಂಪುಗಳಲ್ಲಿ ತಂಡಗಳನ್ನು ವಿಂಗಡಿಸಲಾಗಿದೆ. ಪ್ರತಿ ಗುಂಪಿನಲ್ಲಿಯೂ ಐದು ತಂಡಗಳಿವೆ. ಒಟ್ಟು ಎಂಟು ತಂಡಗಳು ಸೂಪರ್ ಏಯ್ಟ್ ಹಂತ ಪ್ರವೇಶಿಸಲಿವೆ. ಈ ಹಂತದಲ್ಲಿ ಅಗ್ರ ನಾಲ್ಕು ಸ್ಥಾನ ಪಡೆಯುವ ತಂಡಗಳು ಸೆಮಿಫೈನಲ್ ಆಡಲಿವೆ. ನಾಲ್ಕರ ಘಟ್ಟದ ಪಂದ್ಯಗಳು ಕೋಲ್ಕತ್ತ ಅಥವಾ ಕೊಲಂಬೊ ಮತ್ತು ಮುಂಬೈನಲ್ಲಿ ನಡೆಯಲಿವೆ.

ಒಂದೊಮ್ಮೆ ಪಾಕಿಸ್ತಾನ ತಂಡವು ಫೈನಲ್ ಪ್ರವೇಶಿಸಿದರೆ ಆ ಪಂದ್ಯಕ್ಕೆ ಕೊಲಂಬೊ ಆತಿಥ್ಯ ವಹಿಸಲಿದೆ. ಇಲ್ಲದಿದ್ದರೆ ಅಹಮದಾಬಾದಿನಲ್ಲಿ ಫೈನಲ್ ನಡೆಯಲಿದೆ. ಹಾಲಿ ಚಾಂಪಿಯನ್ ಭಾರತ ತಂಡವು ಮುಂಬೈನಲ್ಲಿ ಫೆ 7ರಂದು ತನ್ನ ಮೊದಲ ಪಂದ್ಯ ಆಡಲಿದ್ದು, ಅಮೆರಿಕ ತಂಡವನ್ನು ಎದುರಿಸಲಿದೆ. ಎರಡನೇ ಪಂದ್ಯವನ್ನು ನಮಿಬಿಯಾ ವಿರುದ್ಧ (ಫೆ.12) ಆಡಲಿದೆ.

'ಎ ಗುಂಪು ಉತ್ತಮವಾಗಿ ಕಾಣುತ್ತಿದೆ. ಟಿ20 ಮಾದರಿಯ ಕ್ರಿಕೆಟ್‌ನಲ್ಲಿ ಯಾವುದೇ ತಂಡವನ್ನೂ ಹಗುರವಾಗಿ ಪರಿಗಣಿಸುವಂತಿಲ್ಲ' ಎಂದು ಭಾರತ ತಂಡದ ನಾಯಕ ಸೂರ್ಯಕುಮಾರ್ ಯಾದವ್ ಹೇಳಿದ್ದಾರೆ.

ರೋಹಿತ್ ರಾಯಭಾರಿ: 2024ರ ಟಿ20 ವಿಶ್ವಕಪ್ ವಿಜೇತ ಭಾರತ ತಂಡದ ನಾಯಕ ರೋಹಿತ್ ಶರ್ಮಾ ಅವರನ್ನು ಈ ಬಾರಿಯ ಟೂರ್ನಿಯ ಪ್ರಚಾರ ರಾಯಭಾರಿಯನ್ನಾಗಿ ನೇಮಕ ಮಾಡಲಾಗಿದೆ.

ಗುಂಪುಗಳು: ಎ: ಭಾರತ, ಅಮೆರಿಕ, ನಮಿಬಿಯಾ, ನೆದರ್ಲೆಂಡ್ಸ್, ಪಾಕಿಸ್ತಾನ
ಬಿ: ಆಸ್ಟ್ರೇಲಿಯಾ, ಶ್ರೀಲಂಕಾ, ಜಿಂಬಾಬ್ವೆ, ಐರ್ಲೆಂಡ್, ಒಮನ್
ಸಿ: ಇಂಗ್ಲೆಂಡ್, ವೆಸ್ಟ್ ಇಂಡೀಸ್, ಬಾಂಗ್ಲಾದೇಶ, ಇಟಲಿ, ನೇಪಾಳ
ಡಿ: ದಕ್ಷಿಣ ಆಫ್ರಿಕಾ, ನ್ಯೂಜಿಲೆಂಡ್, ಅಫ್ಗಾನಿಸ್ತಾನ, ಕೆನಡಾ, ಯುಎಇ.

ವಿಶ್ವಕಪ್ ವಿಜೇತ ಭಾರತ ಅಂಧ ಮಹಿಳಾ ಕ್ರಿಕೆಟ್ ತಂಡದ ಆಟಗಾರ್ತಿಯರಾದ ಶಿವಮೊಗ್ಗದ ಕಾವ್ಯಾ ವಿ. ಮತ್ತು ತುಮಕೂರಿನ ಕಾವ್ಯಾ ಎನ್‌.ಆರ್‌. ಅವರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಮಂಗಳವಾರ ಸನ್ಮಾನಿಸಿದರು

ಅಂಧರ ಮಹಿಳಾ ವಿಶ್ವಕಪ್: ವಿಜೇತರಿಗೆ ತಲಾ ₹10 ಲಕ್ಷ, ಸರ್ಕಾರಿ ಉದ್ಯೋಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಶ್ವಕಪ್ ವಿಜೇತ ಅಂಧ ಮಹಿಳಾ ಕ್ರಿಕೆಟ್ ತಂಡದಲ್ಲಿರುವ ಕರ್ನಾಟಕದ ಆಟಗಾರ್ತಿಯರಿಗೆ ತಲಾ ₹10 ಲಕ್ಷ ನಗದು ಹಾಗೂ ಸರ್ಕಾರಿ ಉದ್ಯೋಗ ನೀಡುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಆಟಗಾರ್ತಿಯರನ್ನು ಸನ್ಮಾನಿಸಿದ ಬಳಿಕ ಮಾತನಾಡಿದ ಅವರು, ತಂಡದಲ್ಲಿದ್ದ ಇತರೆ ರಾಜ್ಯಗಳ 13 ಆಟಗಾರ್ತಿಯರಿಗೂ ತಲಾ ₹2 ಲಕ್ಷ ನಗದು ಬಹುಮಾನ ನೀಡಲಾಗುವುದು. ನಾಯಕಿ, ತುಮಕೂರಿನ ಶಿರಾ ಮೂಲದ ದೀಪಿಕಾ ಅವರ ನಾಯಕತ್ವ ಮತ್ತು ಆಟ ಅನನ್ಯವಾಗಿತ್ತು ಎಂದು ಶ್ಲಾಘಿಸಿದರು.